ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚಾಂಪಿಯನ್...

ಪುಣೆಯಲ್ಲಿ ಬುಧವಾರ ಮುಕ್ತಾಯಗೊಂಡ ಫಿಡೆ ಮಹಿಳಾ ಗ್ರ್ಯಾನ್‌ಪ್ರಿ ಚೆಸ್ (ಪುಣೆ ಲೆಗ್) ಟೂರ್ನಿಯಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ಚಾಂಪಿಯನ್ ಆದರು. ಹಂಪಿ ಮತ್ತು ಚೀನಾದ ಝು ಜಿನೆರ್ ತಲಾ ಏಳು ಪಾಯಿಂಟ್ಸ್ ಪಡೆದಿದ್ದರು. ಆದರೆ ಉತ್ತಮ ಪ್ರೊಗ್ರೆಸಿವ್ ಅಂಕಗಳ ಆಧಾರದಲ್ಲಿ ಹಂಪಿಗೆ ಪ್ರಶಸ್ತಿ ಒಲಿಯಿತು.

ಆಳ-ಅಗಲ ಕಾಶ್ಮೀರ: ನಿಲ್ಲದ ನೆತ್ತರು
ಮುಂಗಾರು ಪೂರ್ವವೇ ಡೆಂಗಿ ಭೀತಿ 6
ಚೀನಾದ ಉತ್ಪನ್ನಗಳಿಗೆ ಸುಂಕ ಕಡಿತ? 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,116 ▲	24,328 ▲	₹1.01 ಲಕ್ಷ (ಬೆಂಗಳೂರು) ▲	₹1.01 ಲಕ್ಷ (ಬೆಂಗಳೂರು)	85.45 ▼

ಪಹಲ್ಗಾಮ್ ದಾಳಿ ವಿರುದ್ಧ ಪ್ರಧಾನಿ ನೇತೃತ್ವದ ಭದ್ರತೆ ಕುರಿತ ಸಂಪುಟ ಸಭೆಯಲ್ಲಿ ಮಹತ್ವದ ನಿರ್ಧಾರ

ಪಾಕ್ ಜತೆಗಿನ ಸಂಬಂಧ ಕಡಿತ

5 ಕ್ರಮ ಏನೇನು?

1. ಸಿಂಧೂ ಜಲ ಒಪ್ಪಂದಕ್ಕೆ ತಡೆ **2.** ಪಾಕ್ ಜತೆಗಿನ ಅಟ್ಟಾರಿ ಗಡಿ ಬಂದ್ **3.** ಪಾಕಿಸ್ತಾನದ ಪ್ರಜೆಗಳಿಗೆ ಸಾರ್ಕ್ ವೀಸಾ ಸೌಲಭ್ಯ ರದ್ದು **4.** ಪಾಕಿಸ್ತಾನದ ಭಾರತೀಯ ರಾಯಭಾರಿ ಕಚೇರಿಯಿಂದ ಸಿಬ್ಬಂದಿ ವಾಪಸ್– ಪಾಕ್‌ನ ಮಿಲಿಟರಿ ರಾಜತಾಂತ್ರಿಕರಿಗೆ ಭಾರತದಿಂದ ಹೊರನಡೆಯಲು ಸೂಚನೆ **5.** ಸಾರ್ಕ್ ವೀಸಾ ವಿನಾಯಿತಿ ಸೌಲಭ್ಯದ ಮೇಲೆ ಭಾರತದಲ್ಲಿರುವ ಪಾಕ್ ಪ್ರಜೆಗಳಿಗೆ ದೇಶ ತೊರೆಯಲು ಗಡುವು

ನವದೆಹಲಿ (ಪಿಟಿಐ): ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಗೆ ಪ್ರತ್ಯುತ್ತರವಾಗಿ ಭಾರತವು ಪಾಕಿಸ್ತಾನದ ಜೊತೆಗಿನ ಸಿಂಧೂ ಜಲ ಒಪ್ಪಂದವನ್ನು ತಕ್ಷಣದಿಂದಲೇ ಅಮಾನತುಗೊಳಿಸಲು ತೀರ್ಮಾನಿಸಿದೆ.

ಪಾಕಿಸ್ತಾನದ ಜೊತೆಗಿನ ರಾಜತಾಂತ್ರಿಕ ಸಂಬಂಧವನ್ನು ಕಡಿಮೆ ಮಾಡಲು ತೀರ್ಮಾನಿಸಿರುವ ಕೇಂದ್ರ ಸರ್ಕಾರವು, ಭಾರತದಲ್ಲಿ ಇರುವ ಪಾಕಿಸ್ತಾನದ ದೂತಾವಾಸ ಕಚೇರಿಗಳಲ್ಲಿನ ಮಿಲಿಟರಿ ರಾಜತಾಂತ್ರಿಕರನ್ನು ದೇಶದಿಂದ ಹೊರಗೆ ಕಳುಹಿಸಲು ತೀರ್ಮಾನಿಸಿದೆ.

ಪ್ರಧಾನಿ ಮೋದಿ ನೇತೃತ್ವದಲ್ಲಿ ನವದೆಹಲಿಯಲ್ಲಿ ಬುಧವಾರ ಸಂಜೆ ನಡೆದ 'ಭದ್ರತೆ ಕುರಿತ ಸಚಿವ ಸಂಪುಟ' ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಪಹಲ್ಗಾಮ್‌ನಲ್ಲಿ ನಡೆದ ದಾಳಿಗೆ ಗಡಿಯಾಚೆಗಿನ ನಂಟು ಇದೆ ಎಂಬುದು ಈ ತೀರ್ಮಾನಕ್ಕೆ ಕಾರಣ. ಸಭೆಯು ಎರಡು ತಾಸಿಗೂ ಹೆಚ್ಚು ಅವಧಿಗೆ ನಡೆಯಿತು.

1960ರಲ್ಲಿ ಮಾಡಿಕೊಂಡ ಸಿಂಧೂ ಜಲ ಒಪ್ಪಂದವನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಅಮಾನತಿನಲ್ಲಿ ಇರಿಸಲಾಗಿದೆ. ಪಾಕಿಸ್ತಾನವು ಗಡಿಯಾಚೆಗಿನ ಭಯೋತ್ಪಾದನೆಗೆ ಬೆಂಬಲ ನೀಡುವುದನ್ನು ವಿಶ್ವಾಸ ಮೂಡಿಸುವ ಬಗೆಯಲ್ಲಿ ಹಾಗೂ ಶಾಶ್ವತವಾಗಿ ನಿಲ್ಲಿಸುವವರೆಗೆ ಈ ತೀರ್ಮಾನ ಜಾರಿಯಲ್ಲಿ ಇರುತ್ತದೆ ಎಂದು ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಸುದ್ದಿಗಾರರಿಗೆ ಮಾಹಿತಿ ನೀಡಿದರು.

7ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 7,10

ಮುಗ್ಧ ನಾಗರಿಕರನ್ನು ಹತ್ಯೆ ಮಾಡಿದ ಉಗ್ರರಿಗೆ ಕ್ಷಿಪ್ರ ಹಾಗೂ ತಕ್ಕ ಪ್ರತ್ಯುತ್ತರ ನೀಡಲಾಗುವುದು.ಈ ದಾಳಿ ನಡೆಸಿದವರಿಗೆ ಮಾತ್ರವಲ್ಲ. ಇಲ್ಲಿಯೇ ಇದ್ದುಕೊಂಡು ತೆರೆಮರೆಯಲ್ಲಿಯೇ ಈ ದಾಳಿ ಯೋಜಿಸಿದವರಿಗೂ ಉತ್ತರ ನೀಡುತ್ತೇವೆ

ರಾಜನಾಥ್ ಸಿಂಗ್, ರಕ್ಷಣಾ ಸಚಿವ



ಶಂಕಿತರ ರೇಖಾಚಿತ್ರ ಬಿಡುಗಡೆ

ಶ್ರೀನಗರ (ಪಿಟಿಐ): ಕಾಶ್ಮೀರದ ದಕ್ಷಿಣ ಭಾಗದ ಪಹಲ್ಗಾಮ್‌ನಲ್ಲಿ ನಡೆದ ದಾಳಿಯಲ್ಲಿ ಭಾಗಿಯಾಗಿದ್ದಾರೆ ಎಂದು ಶಂಕಿಸಲಾದ ಮೂವರು ಉಗ್ರರ ರೇಖಾಚಿತ್ರಗಳನ್ನು ಭದ್ರತಾ ಪಡೆಗಳು ಬುಧವಾರ ಬಿಡುಗಡೆ ಮಾಡಿವೆ.

ಆಸಿಫ್ ಫೌಜಿ, ಸುಲೇಮಾನ್ ಶಾಹ ಹಾಗೂ ಅಬು ತಲ್ಹಾ ಅವರ ರೇಖಾಚಿತ್ರಗಳನ್ನು ಬಿಡುಗಡೆ ಮಾಡಲಾಗಿದೆ. ಎಲ್ಲರೂ ಪಾಕಿಸ್ತಾನದವರು. ಮೂಸಾ, ಯೂನುಸ್ ಹಾಗೂ ಆಸಿಫ್ ಎಂಬ ಗುಪ್ತನಾಮದಿಂದ ಇವರನ್ನು ಕರೆಯಲಾಗುತ್ತಿದೆ. ಪೂಂಛ್‌ನಲ್ಲಿ ನಡೆದಿದ್ದ ಭಯೋತ್ಪಾದಕ ಕೃತ್ಯಗಳಲ್ಲಿ ಇವರು ಭಾಗಿಯಾಗಿದ್ದರು ಎಂದು ಸೇನೆಯ ಅಧಿಕಾರಿಗಳು ಹೇಳಿದ್ದಾರೆ.

ಉಗ್ರರ ದಾಳಿಯಲ್ಲಿ ಬದುಕುಳಿದವರ ನೆರವು ಪಡೆದು ಈ ರೇಖಾಚಿತ್ರಗಳನ್ನು ಸಿದ್ಧಪಡಿಸಲಾಗಿದೆ ಎಂದೂ ಅಧಿಕಾರಿಗಳು ಹೇಳಿದ್ದಾರೆ. ಪೆನ್ಸಿಲ್‌ನಿಂದ ಬರೆದಿರುವ ಚಿತ್ರಗಳು ಕಪ್ಪು-ಬಿಳಿ ವರ್ಣಗಳಲ್ಲಿವೆ.

ಗೃಹ ಸಚಿವ ಅಮಿತ್ ಶಾ ಅವರು ಬುಧವಾರ ಅಂತಿಮ ನಮನ ಸಲ್ಲಿಸಿದರು – ಪಿಟಿಐ ಚಿತ್ರ

'ಅಪಾರ ಶಸ್ತ್ರಾಸ್ತ್ರ ಹೊಂದಿದ್ದರು'

ಶ್ರೀನಗರ: ಪಹಲ್ಗಾಮ್‌ನ ಬೈಸರನ್ ಕಣಿವೆಯಲ್ಲಿ ನಡೆದ ದಾಳಿಯ ಹಿಂದೆ, ಇಬ್ಬರು ಸ್ಥಳೀಯರು ಸೇರಿದಂತೆ 5–6 ಮಂದಿ ಉಗ್ರರ ಕೈವಾಡ ಇದೆ. ಇವರು ಅಪಾರ ಶಸ್ತ್ರಾಸ್ತ್ರಗಳನ್ನು ಹೊಂದಿದ್ದರು ಎಂದು ಹೇಳಲಾಗಿದೆ.

ಉಗ್ರರು ಹತ್ಯೆ ಮಾಡುವುದಕ್ಕೆ ಅನುಸರಿಸಿದ ವಿಧಾನಗಳು ಭೀಕರವಾಗಿದ್ದವು ಎಂಬ ಮಾತನ್ನು ಈ ದಾಳಿಯನ್ನು ಪ್ರತ್ಯಕ್ಷ ಕಂಡ ಕೆಲವರು ಹೇಳುತ್ತಾರೆ.

'ಉಗ್ರರು ಸೇನೆಯ ಯೋಧರಂತೆ ಸಮವಸ್ತ್ರಗಳನ್ನು ಧರಿಸಿದ್ದರು. ಪ್ರವಾಸಿಗರ ಬಳಿ ತೆರಳಿ, ಅವರ ಗುರುತಿನ ಚೀಟಿ ಕೇಳಿದ್ದಾರೆ. ನಂತರ ಎಕೆ–47 ರೈಫಲ್‌ಗಳಿಂದ ಗುಂಡು ಹಾರಿಸಿದ್ದಾರೆ' ಎಂದು ಅವರು ವಿವರಿಸುತ್ತಾರೆ.

'ಯಾವುದೇ ವಿವೇಚನೆಯಿಲ್ಲದೆಯೇ, ನಾಗರಿಕರನ್ನು ಗುರಿಯಾಗಿಸಿ ಉಗ್ರರು ಗುಂಡು ಹಾರಿಸಿದರು. ಕೆಲವೇ ಕ್ಷಣಗಳಲ್ಲಿ ಘಟನಾ ಸ್ಥಳದಲ್ಲಿ ಆತಂಕ, ಗೊಂದಲ ಮನೆ ಮಾಡಿತ್ತು' ಎಂದೂ ಕೆಲವರು ಭೀಕರ ಕ್ಷಣಗಳನ್ನು ವಿವರಿಸುತ್ತಾರೆ.

'ಪ್ರವಾಸಿಗರನ್ನು ಗುರಿಯಾಗಿಸಿ ದಾಳಿ ಮಾಡುವುದಕ್ಕೂ ಮುನ್ನ ಒಂದು ಗಂಟೆಗೂ ಹೆಚ್ಚು ಸಮಯದಿಂದ ಉಗ್ರರು ಸ್ಥಳದಲ್ಲಿ ಇದ್ದರು. ತಾವು ರೂಪಿಸಿದ್ದ ಯೋಜನೆಯಂತೆಯೇ ದಾಳಿ ಮಾಡಿದರು ಹಾಗೂ ಇದು ಅಧಿಕ ಸಾವು–ನೋವಿಗೆ ಕಾರಣವಾಯಿತು' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

ದಾಳಿಯಲ್ಲಿ ಪಾತ್ರವಿಲ್ಲ: ಪಾಕ್ ಹೇಳಿಕೆ

ನವದೆಹಲಿ: ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದಿರುವ ಭಯೋತ್ಪಾದಕ ದಾಳಿಯಲ್ಲಿ ತನ್ನ ಪಾತ್ರ ಇಲ್ಲ ಎಂದು ಹೇಳಿರುವ ಪಾಕಿಸ್ತಾನ, 'ಹಿಂದುತ್ವ ಶಕ್ತಿಗಳಿಂದ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದಬ್ಬಾಳಿಕೆ ವಿರುದ್ಧ ಭಾರತದಲ್ಲಿ ನಡೆಯುತ್ತಿರುವ ದಂಗೆಗಳ ಪೈಕಿ ಈ ದಾಳಿಯೂ ಒಂದು' ಎಂದು ಬುಧವಾರ ಹೇಳಿದೆ.

ಪಾಕಿಸ್ತಾನದ ಬಲೂಚಿಸ್ತಾನದಲ್ಲಿ ಭಯೋತ್ಪಾದನೆ ಕೃತ್ಯಗಳನ್ನು ನಡೆಸುವುದಕ್ಕೆ ಭಾರತವು ಅಫ್ಗಾನಿಸ್ತಾನದ ನೆಲವನ್ನು ಬಳಸಿಕೊಳ್ಳುತ್ತಿದೆ ಎಂದು ತನ್ನ ಆರೋಪವನ್ನು ಪಾಕಿಸ್ತಾನ ಪುನರುಚ್ಚರಿಸಿದೆ.

'ಭಾರತದ ಅನೇಕ ರಾಜ್ಯಗಳಲ್ಲಿ ಹತ್ತು ಹಲವು ದಂಗೆಗಳು ನಡೆಯುತ್ತಿವೆ. ನಾಗಾಲ್ಯಾಂಡ್‌ನಿಂದ ಹಿಡಿದು ಕಾಶ್ಮೀರದವರೆಗೆ, ಛತ್ತೀಸಗಢ, ಮಣಿಪುರ ಹಾಗೂ ದಕ್ಷಿಣದ ರಾಜ್ಯಗಳಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಜನರು ದಂಗೆ ಏಳುತ್ತಿದ್ದಾರೆ' ಎಂದು ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಹೇಳಿದ್ದಾರೆ.

ಇಬ್ಬರ ಮೃತ ಶರೀರ ರಾಜ್ಯದತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಶ್ರೀನಗರ: ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರ ದಾಳಿಯಲ್ಲಿ ಮೃತರಾದ ಶಿವಮೊಗ್ಗ ಮಂಜುನಾಥ ರಾವ್ ಮತ್ತು ಬೆಂಗಳೂರಿನ ಭರತ್ ಭೂಷಣ್ ಅವರ ಪಾರ್ಥಿವ ಶರೀರಗಳನ್ನು ಹೊತ್ತ ವಿಮಾನವು ಶ್ರೀನಗರದಿಂದ ದೆಹಲಿ ತಲುಪಿದೆ. ಬೆಂಗಳೂರಿನತ್ತ ವಿಮಾನ ಹೊರಡಲು ರಾತ್ರಿ 1.10ಕ್ಕೆ ಸಮಯ ನಿಗದಿಪಡಿಸಲಾಗಿದೆ.

'ಮೃತ ಶರೀರ ಮತ್ತು ಕುಟುಂಬದ ಸದಸ್ಯರನ್ನು ಶ್ರೀನಗರದಿಂದ ಬೆಂಗಳೂರಿಗೆ ಕರೆತರುವ ವ್ಯವಸ್ಥೆಯನ್ನು ಕೇಂದ್ರ ಸರ್ಕಾರವೇ ಮಾಡಿದೆ. ಎರಡೂ ಕುಟುಂಬಗಳ ಒಟ್ಟು 13 ಮಂದಿ ಸದಸ್ಯರು ಇಂಡಿಗೊ ವಿಮಾನದಲ್ಲಿ ಬೆಂಗಳೂರಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬರಲಿದ್ದಾರೆ' ಎಂದು ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಮಾಹಿತಿ ನೀಡಿದರು.

'ಬೆಂಗಳೂರು ವಿಮಾನ ನಿಲ್ದಾಣದಿಂದ ನಗರದ ಮತ್ತಿಕೆರೆಗೆ ಭರತ್ ಅವರ ಶರೀರವನ್ನು ಆಂಬುಲೆನ್ಸ್ ಮೂಲಕ ಕಳುಹಿಸಲಾಗುತ್ತದೆ. ಮಂಜುನಾಥ ಅವರ ಶರೀರವನ್ನು ಆಂಬುಲೆನ್ಸ್ ಮೂಲಕ ಶಿವಮೊಗ್ಗಕ್ಕೆ ಕಳುಹಿಸಲಾಗುತ್ತದೆ. ವಿಮಾನ 3.45ಕ್ಕೇ ಬಂದಿಳಿದರೂ, ಹಸ್ತಾಂತರ ಪ್ರಕ್ರಿಯೆ ಪೂರೈಸಿ ಅಲ್ಲಿಂದ ಹೊರಡುವುದು 5 ಗಂಟೆಯಾಗಬಹುದು' ಎಂದು ಅವರು ತಿಳಿಸಿದರು.

'ಬೆಂಗಳೂರಿನಿಂದ ಒಂದು ತಂಡವಾಗಿ ಅಲ್ಲಿಗೆ ಹೋಗಿದ್ದೆವು. ಜಮ್ಮು-ಕಾಶ್ಮೀರ ಸರ್ಕಾರದ ಅಧಿಕಾರಿಗಳು ಮತ್ತು ಕರ್ನಾಟಕ ಸರ್ಕಾರದ ಕಾರ್ಮಿಕ ಸಚಿವ ಸಂತೋಷ್ ಲಾಡ್ ನೇತೃತ್ವದ ತಂಡದ ಸಮನ್ವಯದಲ್ಲಿ ತೆರವು ಕಾರ್ಯಾಚರಣೆ ನಡೆಸಲಾಗಿದೆ. ರಾಜ್ಯ ತಂಡವು ಇನ್ನೂ ಅಲ್ಲೇ ಇದ್ದು, ಪ್ರವಾಸಿಗರ ಯೋಗಕ್ಷೇಮ ನೋಡಿಕೊಳ್ಳುತ್ತಿದೆ' ಎಂದು ತಿಳಿಸಿದರು.

ಕಾರ್ಮಿಕ ಸಚಿವ ಸಂತೋಷ್ ಲಾಡ್ ನೇತೃತ್ವದಲ್ಲಿ ರಾಜ್ಯದ ಅಧಿಕಾರಿಗಳ ತಂಡವು ಮಂಗಳವಾರ ಸಂಜೆಯೇ ಶ್ರೀನಗರ ತಲುಪಿದ್ದು, ಮೃತರ ಕುಟುಂಬಗಳನ್ನು ಭೇಟಿ ಮಾಡಿ ಸಾಂತ್ವನ ಹೇಳಿತ್ತು.

'ಮೃತರ ಶರೀರಗಳನ್ನು ಬೆಂಗಳೂರಿಗೆ ತರಲು ಎಲ್ಲ ರೀತಿಯ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು. ಆದರೆ ಕೇಂದ್ರ ಸರ್ಕಾರವೇ ಶರೀರಗಳನ್ನು ರವಾನಿಸುತ್ತೇವೆ ಎಂದು ತಿಳಿಸಿತು' ಎಂದು ರಾಜ್ಯ ಸರ್ಕಾರದ ಹಿರಿಯ ಅಧಿಕಾರಿ ಮಾಹಿತಿ ನೀಡಿದರು.

'167 ಮಂದಿ ಸುರಕ್ಷಿತ'

'ರಾಜ್ಯದಿಂದ ಇಲ್ಲಿಗೆ ಪ್ರವಾಸಕ್ಕೆ ಬಂದಿರುವವರಲ್ಲಿ ಸುಮಾರು 180 ಜನರಿದ್ದು, ಅವರಲ್ಲಿ 167 ಮಂದಿ ನಮ್ಮ ಸಂಪರ್ಕದಲ್ಲಿ ಇದ್ದಾರೆ. ಅವರೆಲ್ಲರೂ ಸುರಕ್ಷಿತವಾಗಿದ್ದು, ಅವರ ಕುಟುಂಬದವರು ಗಾಬರಿ ಪಡುವ ಅಗತ್ಯವಿಲ್ಲ' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ತಿಳಿಸಿದರು.

'ಎಲ್ಲ ವಿಮಾನಯಾನ ಕಂಪನಿಗಳು ಟಿಕೆಟ್ ದರವನ್ನು ವಿಪರೀತ ಏರಿಕೆ ಮಾಡಿವೆ. ಈ ಬಗ್ಗೆ ಪ್ರವಾಸಿಗರು ಕಳವಳ ವ್ಯಕ್ತಪಡಿಸಿದ್ದರು. ಯಾರೂ ಈ ಬಗ್ಗೆ ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. ರಾಜ್ಯ ಸರ್ಕಾರವೇ ಪೂರ್ಣ ವೆಚ್ಚ ಭರಿಸಿ, ಎಲ್ಲರನ್ನೂ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ಕರೆತರಲಿದೆ. ರಾಜ್ಯದ ಸುಮಾರು 160 ಪ್ರವಾಸಿಗರು 14 ಹೋಟೆಲ್‌ಗಳಲ್ಲಿ ಇದ್ದು, ಖುದ್ದು ಭೇಟಿ ಮಾಡಿದ್ದೇನೆ' ಎಂದರು.

ನವದೆಹಲಿ ವರದಿ (ಪಿಟಿಐ): ಶ್ರೀನಗರದಿಂದ ಬುಧವಾರ ಏಳು ಹೆಚ್ಚುವರಿ ಸೇವೆ ಸೇರಿ ಒಟ್ಟು 59 ವಿಮಾನಗಳು ಸಂಚಾರ ನಡೆಸಿದವು. ದಾಳಿಯಲ್ಲಿ ಮೃತಪಟ್ಟ 25 ಜನರ ಶವಗಳು ಮತ್ತು ಮೃತರ ಕುಟುಂಬಗಳ 123 ಸದಸ್ಯರನ್ನು ಅವರವರ ಊರುಗಳಿಗೆ ಕರೆದೊಯ್ಯಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

₹10 ಲಕ್ಷ ಪರಿಹಾರ– ಸಿ.ಎಂ

ಉಗ್ರರ ದಾಳಿಯಲ್ಲಿ ಮೃತಪಟ್ಟ ಕರ್ನಾಟಕದ ವ್ಯಕ್ತಿಗಳ ಕುಟುಂಬಕ್ಕೆ ರಾಜ್ಯ ಸರ್ಕಾರ ತಲಾ ₹ 10 ಲಕ್ಷ ಪರಿಹಾರ ನೀಡಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

'ನಮ್ಮನ್ನು ರಕ್ಷಿಸಿದ್ದು ಮುಸ್ಲಿಮರು'

ಬಾಲಕನನ್ನು ಸುರಕ್ಷಿತ ಜಾಗಕ್ಕೆ ಹೊತ್ತು ಕರೆತಂದ ಸ್ಥಳೀಯ ಯುವಕ

ಭಯೋತ್ಪಾದಕರ ಗುಂಡಿಗೆ ನನ್ನ ಪತಿ ಹತರಾದ ನಂತರ, ದಾಳಿ ಸ್ಥಳದಿಂದ ನಮ್ಮನ್ನು ಸುರಕ್ಷಿತ ಸ್ಥಳಕ್ಕೆ ಕರೆದುಕೊಂಡು ಬಂದವರು ಸ್ಥಳೀಯ ಮುಸ್ಲಿಮರು. ಅವರನ್ನು ನಾನು ನನ್ನ ಅಣ್ಣಂದಿರು ಎಂದೇ ಕರೆಯುತ್ತೇನೆ. ನಾವಿದ್ದ ಜಾಗದಲ್ಲಿ ಸುಮಾರು 500 ಪ್ರವಾಸಿಗರು ಇದ್ದರು. ಪ್ರವಾಸಿ ಸ್ಥಳದಲ್ಲಿ ಅಷ್ಟೆಲ್ಲಾ ಜನ ಇದ್ದರೂ, ಒಬ್ಬ ಸೈನಿಕನೂ ಅಲ್ಲಿರಲಿಲ್ಲ. ದಾಳಿ ನಡೆದಾಗ ಮೂವರು ಮುಸ್ಲಿಂ ಸೋದರರು ನಮ್ಮನ್ನು ಸುತ್ತುವರಿದರು. 'ಬಿಸ್ಮಿಲ್ಲಾ, ಬಿಸ್ಮಿಲ್ಲಾ' ಎಂದು ಹೇಳುತ್ತಾ, ನಮ್ಮನ್ನು ಸುರಕ್ಷಿತ ಪ್ರದೇಶಕ್ಕೆ ಕರೆದು ತಂದರು. ಒಬ್ಬರಂತೂ ನನ್ನ ಮಗನನ್ನು ಹೆಗಲ ಮೇಲೆ ಹೊತ್ತು ಕರೆದುಕೊಂಡು ಬಂದರು. ದುರ್ಗಮ ಹಾದಿಯಲ್ಲಿ ನಾನು ಬೀಳದಂತೆ ಎಚ್ಚರವಹಿಸಿದರು. ನಮ್ಮ ವಾಹನದ ಚಾಲಕ ಸಹ ನಮ್ಮೊಂದಿಗೇ ಇದ್ದು, ಎಲ್ಲ ರೀತಿಯ ನೆರವು ನೀಡಿದರು.

ಪಲ್ಲವಿ, ಭಯೋತ್ಪಾದಕರ ದಾಳಿಯಲ್ಲಿ ಮೃತರಾದ ಶಿವಮೊಗ್ಗದ ಉದ್ಯಮಿ ಮಂಜುನಾಥ ರಾವ್ ಅವರ ಪತ್ನಿ

₹275.51 ಕೋಟಿಯಲ್ಲಿ ಅರ್ಧದಷ್ಟು ಅಕ್ರಮ

• ರಾಜೇಶ್ ರೈ ಚಟ್ಲ

ಕೋವಿಡ್ ನಿರ್ವಹಣೆ

ಬೆಂಗಳೂರು: ಕೋವಿಡ್ ನಿರ್ವಹಣೆಗಾಗಿ ಬಿಬಿಎಂಪಿ ವ್ಯಾಪ್ತಿಯ ಬೊಮ್ಮನಹಳ್ಳಿ, ದಕ್ಷಿಣ, ಪಶ್ಚಿಮ, ಯಲಹಂಕ ವಲಯಗಳು ಮತ್ತು ಬೆಂಗಳೂರು ಗ್ರಾಮಾಂತರ, ಗದಗ, ಕೊಪ್ಪಳ ಈ ಮೂರು ಜಿಲ್ಲೆಗಳಲ್ಲಿ ಒಟ್ಟು ₹275.51 ಕೋಟಿ ವೆಚ್ಚ ಮಾಡಲಾಗಿದ್ದು, ಅದರಲ್ಲಿ ₹128.04 ಕೋಟಿ ಅಕ್ರಮವಾಗಿದೆ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಡಿಕುನ್ಹ ನೇತೃತ್ವದ ವಿಚಾರಣಾ ಆಯೋಗ ಪತ್ತೆ ಮಾಡಿದೆ.

ಡಿಕುನ್ಹ ಆಯೋಗವು ರಾಜ್ಯ ಸರ್ಕಾರಕ್ಕೆ ಏಳು ಸಂಪುಟಗಳಲ್ಲಿ 1,800 ಪುಟಗಳ ಎರಡನೇ ಮಧ್ಯಂತರ ವರದಿ ಸಲ್ಲಿಸಿದೆ.

6ನೇ ಪುಟ ನೋಡಿ

₹275.51 ಕೋಟಿ 3 ಜಿಲ್ಲೆಗಳು, ಬಿಬಿಎಂಪಿ 3 ವಲಯಗಳ ಒಟ್ಟು ವೆಚ್ಚ

₹ 128.04 ಕೋಟಿ ವಸೂಲಿ ಮಾಡಬೇಕಾದ ಮೊತ್ತ

176 ಶಿಸ್ತುಕ್ರಮಕ್ಕೆ ಶಿಫಾರಸು ಪ್ರಕರಣಗಳು

'ಈ ನ್ಯಾಯಾಧೀಶರ ಮೇಲೆ ನಮಗೆ ನಂಬಿಕೆ ಇಲ್ಲ...'

ಪ್ರಜಾವಾಣಿ ವಾರ್ತೆ

ಪ್ರಜ್ವಲ್ ರೇವಣ್ಣ

ಬೆಂಗಳೂರು: 'ಈ ಕೋರ್ಟ್‌ನಿಂದ ನ್ಯಾಯ ದೊರೆಯುತ್ತದೆ ಎಂಬ ನಂಬಿಕೆ ಇಲ್ಲ. ಯಾಕೆಂದರೆ, ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು ಈ ಪ್ರಕರಣದಲ್ಲಿ ಆರೋಪಿ ವಿರುದ್ಧ ಪೂರ್ವಗ್ರಹ ಪೀಡಿತ ಭಾವನೆ ಹೊಂದಿದ್ದು ನ್ಯಾಯಸಮ್ಮತ ವಿಚಾರಣೆ ನಡೆಸುವ ಬಗ್ಗೆ ವಿಶ್ವಾಸ ಇಲ್ಲದಂತಾಗಿದೆ' ಎಂದು ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಪರ ವಕೀಲರು ಆರೋಪ ಮಾಡಿದ್ದಾರೆ.

ಮನೆಗೆಲಸದಾಕೆ ಮೇಲಿನ ಅತ್ಯಾಚಾರ ಆರೋಪ ಹೊತ್ತ ಪ್ರಜ್ವಲ್ ಪರ, ಹೈಕೋರ್ಟ್ ವಕೀಲ ಜಿ.ಅರುಣ್, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರಿಗೇ ಬುಧವಾರ ಮೆಮೊ ಸಲ್ಲಿಸಿದರು.

10ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಮಾಳವಿಯಾ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ ಜೈಪುರ
ಜವಾಹರ ಲಾಲ್ ನೆಹರು ಮಾರ್ಗ, ಜೈಪುರ – 302107
2025-26ನೇ ಸಾಲಿನ ಪಿಹೆಚ್.ಡಿ. ಮತ್ತು ಮಾಸ್ಟರ್ ಡಿಗ್ರಿ ಕಾರ್ಯಕ್ರಮಗಳಿಗೆ ಪ್ರವೇಶಾತಿ

ಎಫ್.4/ಎ–1–1/2025–26/ಅಕಾಡೆ/ಪಿಹೆಚ್.ಡಿ./01

2025–26ನೇ ಸಾಲಿನ (ಜುಲೈ 2025) ಆಡ್ ಸೆಮಿಸ್ಟರ್‌ಗಳಿಗೆ ಎಲ್ಲಾ ವಿಭಾಗಗಳಲ್ಲಿ/ಕೇಂದ್ರಗಳಲ್ಲಿ **ಪಿಹೆಚ್.ಡಿ. ಮತ್ತು ಎಂ.ಟೆಕ್./ಎಂ.ಪ್ಲಾನ್.** (ಸ್ಪಾನ್ಸರ್ಡ್ ಪೂರ್ಣಾವಧಿ/ಅರೆಕಾಲಿಕ) ಪ್ರವೇಶಾತಿಗಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಭೇಟಿ ಕೊಡಿ **www.mnit.ac.in.** ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 15ನೇ ಮೇ 2025 ಆಗಿರುತ್ತದೆ.

CBC 21312/12/0002/2526 — ರಿಜಿಸ್ಟ್ರಾರ್

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀ.ಚನ್ನಿಗರಾಯಪ್ಪ ಬಿನ್: ನಂಜುಂಡಪ್ಪ ವಯಸ್ಸು ಸುಮಾರು 42 ವರ್ಷ ವಾಸ: ಕಲ್ಲುಗೋಪಹಳ್ಳಿ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ 562109 ಇವರು ಶ್ರೀ. ಕೆ.ಹೆಚ್. ಅನಿಲ್ ಕುಮಾರ್‌ರವರ ಮಕ್ಕಳಾದ (1) ಶ್ರೀ. ವಿಜಯದತ್ತ ಪಾವಗಡ ಅನಿಲ್ ಮತ್ತು(2) ಶ್ರೀ. ನವೀನ್ ಪಳವಳ್ಳಿ ಅನಿಲ್ ಇವರಿಂದ ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಆಸ್ತಿಯನ್ನು ಖರೀದಿಸಲು ಉದ್ದೇಶಿಸಿದ್ದಾರೆ. ಮಾರಾಟಗಾರರೇ ಷೆಡ್ಯೂಲ್ ಆಸ್ತಿಯ ಮಾಲೀಕರು ಎಂದು ಸಾಭೀತು ಪಡಿಸಲು ದಿನಾಂಕ: 27/03/2025 ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ದಿಂದ ಪಡೆದಿರುವಖಾತೆ ಸಂಖ್ಯೆ. 3320051269 ರಲ್ಲಿ ಇವರುಗಳ ಹೆಸರು ದಾಖಲಾಗಿರುತ್ತದೆ. ಈ ಷೆಡ್ಯೂಲ್ ಆಸ್ತಿಯ ಮೇಲೆ ಯಾವುದೇ ವ್ಯಕ್ತಿಗೆ/ಗಳಿಗೆ ಕಾನೂನು ಬದ್ದ ಉತ್ತರಾಧಿಕಾರಿಗಳಿಗೆ, ಸಂಘ ಸಂಸ್ಥೆ, ಘಟಕ, ಕಂಪನಿ ಫರ್ಮ್, (ಕಾರ್ಪೋರೇಟ್ ಅಥವಾ ಇನ್ನಿತರೆ) ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಬಾಕಿ ವ್ಯಾಜ್ಯ, ಮಾಲೀಕತ್ವ, ಪಾಲುದಾರಿಕೆ, ಒಪ್ಪಂದಗಳು/ ಒಳ ಒಪ್ಪಂದಗಳು, ಕರಾರು ಪತ್ರಗಳು, ಇನ್ನಿತರೆ ಯಾವುದೇ ಹಕ್ಕುಗಳು ಏನಿದ್ದರು ತಮ್ಮ ಕ್ಲೇಮುಗಳನ್ನು, (ಹಕ್ಕುಗಳನ್ನು) ಈ ಪ್ರಕಟಣೆಯನ್ನು ಪ್ರಕಟಿಸಿದ ದಿನಾಂಕದಿಂದ 15 ದಿನಗಳೊಳಗೆ ಮೂಲ ದಾಖಲೆ ಪುರಾವೆಗಳೊಂದಿಗೆ ಕೆಳಗೆ ಸಹಿ ಮಾಡಿದವರ ಮುಂದೆ ಸಲ್ಲಿಸತಕ್ಕದ್ದು. ವಿಫಲವಾದಲ್ಲಿ, ಸದರಿ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಗಳು ಹಕ್ಕುಗಳು ಅಥವಾ ಕ್ಲೇಮುಗಳಿಲ್ಲವೆಂದು ನಮ್ಮ ಕಕ್ಷಿದಾರರು ಪರಿಗಣಿಸುತ್ತಾರೆ. ಅನಂತರ ಸಲ್ಲಿಸುವ ಯಾವುದೇ ಕ್ಲೇಮುಗಳನ್ನು, (ಹಕ್ಕುಗಳನ್ನು) ಪರಿಗಣಿಸಲಾಗುವುದಿಲ್ಲ ಮತ್ತು ನಮ್ಮ ಕಕ್ಷಿದಾರರು ಮಾರಾಟ ವಹಿವಾಟನ್ನು ಮುಂದುವರಿಸುತ್ತಾರೆ.

ಶೆಡ್ಯೂಲ್ ಆಸ್ತಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿರ್ಮಿಸಿರುವ ಬನಶಂಕರಿ 6ನೇ ಹಂತ ಬಡಾವಣೆ 5ನೇ ಬ್ಲಾಕ್‌ನಲ್ಲಿ 3320051269ನೇ ನಂಬರಾಗಿ ಖಾತೆಯಾಗಿರು 612ನೇ ಸಂಖ್ಯೆಯ ನಿವೇಶನ ಪೂರ್ವ–ಪಶ್ಚಿಮ: 15.00 ಮೀಟರ್‌ಗಳು ಉತ್ತರ–ದಕ್ಷಿಣ: 24.00 ಮೀಟರ್‌ಗಳು ಒಟ್ಟು 360.00 ಚದರ ಮೀಟರ್‌ಗಳು ವಿಸ್ತೀರ್ಣವುಳ್ಳ ಖಾಲೀ ನಿವೇಶನ ಮತ್ತು ಭೂಮೇಲ್ಪೈನ ಕೆಳಭಾಗಕ್ಕೆ ಅಥವಾ ಮೇಲ್ಭಾಗಕ್ಕೆ ಸಂಬಂಧಿಸಿದ ಯಾವುದೇ ರೀತಿಯ ಸಕಲ ಹಕ್ಕುಗಳನ್ನು, ಉಪಹಕ್ಕುಗಳನ್ನು ಒಳಗೊಂಡ ನಿವೇಶನಕ್ಕೆ ಚಕ್ಕುಬಂಧಿ:

ಪೂರ್ವಕ್ಕೆ : ನಿವೇಶನ ಸಂಖ್ಯೆ: 613 ಪಶ್ಚಿಮಕ್ಕೆ : ನಿವೇಶನ ಸಂಖ್ಯೆ: 611
ಉತ್ತರಕ್ಕೆ : ನಿವೇಶನ ಸಂಖ್ಯೆ: 567 ಮತ್ತು 568 ದಕ್ಷಿಣಕ್ಕೆ : ರಸ್ತೆ

ಶ್ರೀಮತಿ. ಮೈತ್ರಿ ಐ.ಇ., ವಕೀಲರು
ನಂ.14, 4ನೇ ಮಹಡಿ, # 409, ಹೆಚ್.ಎಮ್. ಜಿನೇವಾ ಹೌಸ್, ಕನ್ನಿಂಗ್‌ಹ್ಯಾಮ್‌ರಸ್ತೆ, ಬೆಂಗಳೂರು 560052 ಮೋ: 8880004403 / 9900577088

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ: ಅಇಂ(ವಿ)/ಪ್ರ(ಕಾ)/ಬೆಂಮಕ್ಷೇವ(ದ)/ಕಾನಿಇಂ(ಕ)/ಸಕಾನಿಇಂ–1/ಕ–180(12)/25–26/183–85 ದಿ: 22.04.2025

ಟೆಂಡರ್ ಪ್ರಕಟಣೆ (KPP ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಬಿಡ್ ವಿಚಾರಣೆ ಸಂಖ್ಯೆ:ಕವಿಪ್ರನಿನಿ/ಅ.ಇಂ/ಟಿಆರ್(ಎಂ)/ಬಿಎಂಎಆರ್‌ಝಡ್(ಎಸ್)/ಇಇ(ಓ)/ಎಇಇ–1/24–25/ಇ.ಪಿ.ಆರ್–15, ಕರೆ–8, ದಿನಾಂಕ: 01.10.2024 ಬೆಂ.ಮ.ಕ್ಷೇ.ವ. ದಕ್ಷಿಣ ವೃತ್ತದ ಅಡಿಯಲ್ಲಿ ಬರುವ ಟಿ.ಎಲ್.ಎಂ. ಉಪ–ವಿಭಾಗ ಹೂಡಿ ವ್ಯಾಪ್ತಿಯ 66ಕೆವಿ ಐಟಿಐ–ಹೆಬ್ಬಾಳ–1 & 2 (ಹೆಬ್ಬಾಳ–ಎಲ್.ಆರ್. ಬಂಡೆ & ಹೆಬ್ಬಾಳ–ಬಾಣಸವಾಡಿ ಟ್ಯಾಪ್ ಮಾಡಲಾಗಿರುವ ಪಾಟರಿ ರಸ್ತೆ) ವಿರೂಪಗೊಳ್ಳುವಿಕೆ ಇರುವ 66ಕೆವಿ ಡಬಲ್ ಸರ್ಕ್ಯೂಟ್ ಲೈನ್‌ನ ಉನ್ನತ ಲಂಭ ಕ್ಲಿಯರೆನ್ಸ್‌ನ ಹೆಚ್ಚಳವನ್ನು ಮಾಡುವುದು, ಹೆಚ್‌ಎಂಟಿ ಲೇಔಟ್‌ನ ಟವರ್ ನಂ. 06 & 07 ಅಂತರದಲ್ಲಿ 66ಕೆವಿ ಡಿಸಿ ಮತ್ತು 6 ಎನ್‌ಬಿಟಿ ಕವಿಪ್ರನಿನಿ 02 ಸಂಖ್ಯೆಯ ವಿನ್ಯಾಸದ ಗೋಪುರಗಳನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವ ಕಾಮಗಾರಿ ನಿರ್ವಹಿಸಲು ಬಿಡ್‌ಗಳನ್ನು ಆಹ್ವಾನಿಸಿದೆ. ಟೆಂಡರ್‌ಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in** ಗೆ ಹೈಪರ್‌ಲಿಂಕ್ E Procurement KPTCL ನಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ: 25.04.2025** ರಂದು ಅಥವಾ ತದನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ(ಕಾರ್ಯಾಚರಣೆ)
ವೃತ್ತ–ದಕ್ಷಿಣ, ನೆಲಮಹಡಿ, ಕವಿಪ್ರನಿನಿ ಕಚೇರಿ ಸಂಕೀರ್ಣ,
ಆನಂದರಾವ್ ವೃತ್ತ, ಬೆಂಗಳೂರು–560 009. ದೂ: 080–22386686/85.

ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: 01/2025–26 ದಿನಾಂಕ: 09.04.2025

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–I ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ–ಪ್ರಕ್ಯೂರ್‌ಮೆಂಟ್ ಏಕ–ಲಕೋಟೆ ಪದ್ಧತಿಯಲ್ಲಿ ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **https://eproc.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ.

(1) E-procurement ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ: 09.05.2025ರ 16.30 ರವರೆಗೆ.** (2) ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 10.05.2025 ರಂದು 4.35 ನಂತರ.** (3) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): ಹಿಂದಿರುಗಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:24/ಕೆಎಸ್‌ಎಂಸಿಎ/2025–26

ನಗರಸಭಾ ಕಾರ್ಯಾಲಯ, ಹೊಸಕೋಟೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ–562114,
ದೂರವಾಣಿ:–27931221, ಸಹಾಯವಾಣಿ: 27931759
Email:-itstaff.ulb.hosakote@yahoo.com Website.www.hosakotecity.mrc.gov.in

ನಂ.ನಸಹೊ/ತಾಂತ್ರಿಕ ಶಾಖೆ/ಟೆಂಡರ್/ಸಿಆರ್/01/2025–26 ದಿನಾಂಕ: 23.04.2025

"ಟೆಂಡರ್ ಪ್ರಕಟಣೆ" (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಪೌರಾಯುಕ್ತರು ನಗರಸಭೆ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 15ನೇ ಹಣಕಾಸು ಯೋಜನೆಯ ಉಳಿತಾಯ ಮೊತ್ತ, ನಗರಸಭಾ ನಿಧಿ ಹಾಗೂ ಎಸ್.ಎಫ್.ಸಿ ಕುಡಿಯುವ ನೀರು ಯೋಜನೆಯ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ 01 ಮತ್ತು 02ರ ಪ್ರಕಾರ ಟೆಂಡರ್‌ನ್ನು ಏಕ/ದ್ವಿ–ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿರುತ್ತದೆ.

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
	ಪರಿಶಿಷ್ಟ ಜಾತಿ ವರ್ಗದವರಿಗೆ ಕಾಯ್ದಿರಿಸಲಾದ ಕಾಮಗಾರಿ	
01	DMA/2025-26/WS/WORK_INDENT38930	7.07
	ಪರಿಶಿಷ್ಟ ಪಂಗಡ ವರ್ಗದವರಿಗೆ ಕಾಯ್ದಿರಿಸಲಾದ ಕಾಮಗಾರಿ	
02	DMA/2025-26/WS/WORK_INDENT38828	20.00
	CAT-I ರ ವರ್ಗದವರಿಗೆ ಕಾಯ್ದಿರಿಸಲಾದ ಕಾಮಗಾರಿ	
03	DMA/2025-26/WT/WORK_INDENT39076	15.62
	CAT-II(A) ರ ವರ್ಗದವರಿಗೆ ಕಾಯ್ದಿರಿಸಲಾದ ಕಾಮಗಾರಿ	
04	DMA/2025-26/OW/WORK_INDENT39073	3.25
	ಸಾಮಾನ್ಯ ವರ್ಗದವರಿಗೆ ಕಾಯ್ದಿರಿಸಲಾದ ಕಾಮಗಾರಿಗಳು	
05	DMA/2025-26/WS/WORK_INDENT39075	21.54
06	DMA/2025-26/WS/WORK_INDENT37708	19.19
07	DMA/2025-26/WS/WORK_INDENT37703	16.56
08	DMA/2025-26/BD/WORK_INDENT39042	12.66
09	DMA/2025-26/SE5220	15.00
10	DMA/2025-26/SE5219	10.00

(1) ಕ್ರ.ಸಂ: 01, 02, 03, 05, 06, 07, 09 ಮತ್ತು 10 ರ ಕಾಮಗಾರಿಗಳಿಗೆ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **30.04.2025 ರ ಸಂಜೆ 5:30 ಗಂಟೆಯವರೆಗೆ** ಮತ್ತು ಕ್ರ.ಸಂ: 04 ಮತ್ತು 08ರ ಕಾಮಗಾರಿಗಳಿಗೆ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **08.05.2025 ರ ಸಂಜೆ 5:30 ಗಂಟೆಯವರೆಗೆ** ನಿಗದಿಪಡಿಸಲಾಗಿರುತ್ತದೆ.

(2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in/#/portal/portal-home** ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು.

ಸಹಿ/– ಪೌರಾಯುಕ್ತರು ನಗರಸಭೆ, ಹೊಸಕೋಟೆ.

ವಾಸಾಸಂಇ/ವಾ.ಪ್ರ/342/ಶಿರಡಿ ಸಾಯಿ/2025–26

ಸುಧಾ, ಮಯೂರ ಓದಿರಿ

ನೈರುತ್ಯ ರೈಲ್ವೆ

ಟೆಂಡರ್ ಪ್ರಕಟಣೆ ... ದಿನಾಂಕ: 17/04/2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು, ಈ ಕೆಳಗಿನ ಕೆಲಸಕ್ಕಾಗಿ ಇ–ಟೆಂಡರ್ (ಐಆರ್‌ಇಪಿಎಸ್) ಅನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ	ಕೆಲಸದ ಹೆಸರು	ಅಂದಾಜು ಮೌಲ್ಯ
1	...	ರೂ. 21275558.00/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09–05–2025 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವಿದ್ಯುತ್ ಅಭಿಯಂತರರು/ಟ್ರಾಕ್ಷನ್ ಮತ್ತು ಡಿಸ್ಟ್ರಿಬ್ಯೂಷನ್/ಹುಬ್ಬಳ್ಳಿ

ಪಿಯುಬಿ/59/ಎಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2025–26

South Western Railway - SWR SWRRLY SWRRLY

ಕರ್ತವ್ಯಲೋಪ: ಅಬಕಾರಿ ಸಿಬ್ಬಂದಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 'ಲೋಕ' ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಎಚ್ಚರಿಕೆ
- ಈ ಹಿಂದೆ ದಾಳಿ ಮಾಡಿದ್ದ ಲೋಕಾಯುಕ್ತ ತಂಡ
- ಅಬಕಾರಿ ಕಚೇರಿಗಳ ಶೋಧ ನಡೆದಿತ್ತು

ಬೆಂಗಳೂರು: ಅಬಕಾರಿ ಇಲಾಖೆಯ ಮೂರು ಜಿಲ್ಲಾ ಕಚೇರಿಗಳ ಸಿಬ್ಬಂದಿಯನ್ನು ಬುಧವಾರ ವಿಚಾರಣೆ ನಡೆಸಿದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು, ಕರ್ತವ್ಯಲೋಪ ಎಸಗದಂತೆ ಎಚ್ಚರಿಕೆ ನೀಡಿದರು.

ಮದ್ಯ ಮಾರಾಟ ಪರವಾನಗಿ ನೀಡುವಲ್ಲಿ ಲಂಚಕ್ಕೆ ಬೇಡಿಕೆ ಮತ್ತು ವಿಳಂಬ ಸಂಬಂಧ ಬಂದಿದ್ದ ದೂರುಗಳ ಆಧಾರದಲ್ಲಿ ಲೋಕಾಯುಕ್ತರು, ಉಪ ಲೋಕಾಯುಕ್ತ ನ್ಯಾಯಮೂರ್ತಿಗಳಾದ ಕೆ.ಎನ್.ಫಣೀಂದ್ರ, ಬಿ.ವೀರಪ್ಪ ಮತ್ತು ಲೋಕಾಯುಕ್ತ ಪೊಲೀಸರು 2024ರ ಸೆಪ್ಟೆಂಬರ್ 24ರಂದು ಅಬಕಾರಿ ಕಚೇರಿಗಳ ಮೇಲೆ ದಾಳಿ ನಡೆಸಿದ್ದರು.

ದಾಳಿ ನಡೆದ ಸಂದರ್ಭದಲ್ಲಿ ಅಬಕಾರಿ ಸಿಬ್ಬಂದಿ ಮತ್ತು ಅಧಿಕಾರಿಗಳು ಮಾಹಿತಿ ನಮೂದಿಸದೆ ಕಚೇರಿಯಿಂದ ಹೊರಹೋಗಿದ್ದು, ಹಾಜರಾತಿ ಮತ್ತು ನಗದು ವಹಿ ನಿರ್ವಹಣೆ ಮಾಡದೇ ಇದ್ದದ್ದು ಹಾಗೂ ಕಚೇರಿಯಲ್ಲಿ ಮದ್ಯ ಕುಡಿದಿದ್ದು ಪತ್ತೆಯಾಗಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಲೋಕಾಯುಕ್ತರು 2025ರ ಮಾರ್ಚ್ 29ರಂದು ವಿಚಾರಣೆ ನಡೆಸಿದ್ದರು.

ವಿಚಾರಣೆಗೆ ಹಾಜರಾಗಿದ್ದ ಅಬಕಾರಿ ಅಧಿಕಾರಿಗಳು

ಬುಧವಾರ ಎರಡನೇ ಹಂತದಲ್ಲಿ ಬೆಂಗಳೂರು ಅಬಕಾರಿ ಜಿಲ್ಲೆ 5, 6 ಮತ್ತು 8ರ ಪ್ರಕರಣಗಳ ವಿಚಾರಣೆ ನಡೆಸಿದರು. 'ದಾಳಿ ವೇಳೆ ಪತ್ತೆಯಾಗಿದ್ದ ನ್ಯೂನತೆಗಳನ್ನು ಸರಿಪಡಿಸಿದ್ದೇವೆ' ಎಂದು ಅಬಕಾರಿ ಇಲಾಖೆ ಅಧಿಕಾರಿಗಳು ಲೋಕಾಯುಕ್ತರಿಗೆ ವರದಿ ಸಲ್ಲಿಸಿದರು. ವರದಿ ಪರಿಶೀಲಿಸಿ, ಅವುಗಳಲ್ಲಿ ಸಮಂಜಸ ಎನಿಸಿದ ವಿವರಣೆ ನೀಡಿದ್ದ ಅಧಿಕಾರಿಗಳ ವಿರುದ್ಧದ ಪ್ರಕರಣ ಮುಕ್ತಾಯಗೊಳಿಸಲಾಯಿತು ಎಂದು ಲೋಕಾಯುಕ್ತ ಪ್ರಕಟಣೆ ತಿಳಿಸಿದೆ.

2024–25ನೇ ಸಾಲಿನಲ್ಲಿ ನೂತನ ಸನ್ನದು, ಸನ್ನದು ನವೀಕರಣ, ಹೆಸರು ಬದಲಾವಣೆ ಸಂಬಂಧ ಸಲ್ಲಿಕೆ ಯಾಗಿರುವ ಅರ್ಜಿಗಳು ಹಾಗೂ ಅವುಗಳ ಸ್ಥಿತಿಗತಿ ಮಾಹಿತಿ ಇರುವ ವರದಿಯನ್ನು ಜೂನ್ 24ರಂದು ಸಲ್ಲಿಸಿ ಎಂದು ಅಬಕಾರಿ ಅಧಿಕಾರಿಗಳಿಗೆ ಸೂಚಿಸಿದರು ಎಂದು ಪ್ರಕಟಣೆ ತಿಳಿಸಿದೆ.

भारत सरकार
कारपोरेट कार्य मंत्रालय
त्वरित कॉर्पोरेट समापन प्रसंस्करण केंद्र (सी-पेस),
आई.आई.सी.ए. बिल्डिंग, 7वी मंज़िल,
प्लाट P-6,7,8, से.-5, आई.एम्.टी. मानेसर, गुडगाँव,
हरियाणा - 122050.
Email: roc.cpace@mca.gov.in

सत्यमेव जयते

ಭಾರತ ಸರ್ಕಾರ
ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ
ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಅಕ್ಸಲೇಟೆಡ್ ಕಾರ್ಪೋರೇಟ್ ಎಕ್ಸಿಟ್ (ಸಿ–ಪೇಸ್)
ಐಐಸಿಎ ಬಿಲ್ಡಿಂಗ್, 7ನೇ ಮಹಡಿ,
ಪ್ಲಾಟ್ ಪಿ–6, 7, 8 ಸೆಕ್ಟರ್–5, ಐಎಂಟಿ
ಮಾನೇಸರ್, ಗುರಗಾಂವ್, ಹರಿಯಾಣ–12250
Email: roc.cpace@mca.gov.in

ಫಾರಂ ನಂ. ಎಸ್‌ಟಿಕೆ–6

ಸಾರ್ವಜನಿಕ ಪ್ರಕಟಣೆ

[ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248ರ ಸಬ್ ಸೆಕ್ಷನ್ (2) ಮತ್ತು ಸಬ್ ಸೆಕ್ಷನ್ (4) ಮತ್ತು ಕಂಪನಿಗಳ (ಕಂಪನಿಗಳ ರಿಜಿಸ್ಟರ್‌ನಿಂದ ಕಂಪನಿಗಳ ಹೆಸರುಗಳನ್ನು ತೆಗೆದುಹಾಕುವ) ನಿಯಮಗಳು, 2016ರ ನಿಯಮ 7ರ ಪ್ರಕಾರ]

ಪಬ್ಲಿಕ್ ನೋಟಿಸ್ ನಂ. ಆರ್‌ಒಸಿ ಸಿ–ಪೇಸ್/ಎಸ್‌ಟಿಕೆ–2/248(2)/2024–25/64 ದಿನಾಂಕ: 07/4/2025

ಉಲ್ಲೇಖ:

(1) ಕರ್ನಾಟಕ ರಾಜ್ಯದ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248 ಅಡಿಯಲ್ಲಿ, ಕೆಳಕಂಡ (18) ಕಂಪನಿಗಳ ಹೆಸರುಗಳನ್ನು ಅಳಿಸಿ ಹಾಕುವ ಅಥವಾ ತೆಗೆದು ಹಾಕುವ ವಿಷಯದಲ್ಲಿ

ಕ್ರ. ಸಂ.	ವರ್ಕ್ ಐಟಂ	ಸಿಐಎನ್	ಕಂಪನಿ ಹೆಸರು
1	AB2633400	U74200KA2019PTC127252	ಸ್ಮೆಪ್ಕೊ ಇಂಜಿನಿಯರಿಂಗ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
2	AB2755629	U18101KA2007PTC044035	ಜೆಎಲ್ ಏಟ್‌ಲಿಯರ್ ಕೌಟ್ಯೂರ್ ಡಿಸೈನ್ ಪ್ರೈವೇಟ್ ಲಿಮಿಟೆಡ್
3	AB2783183	U72900KA2022PTC164974	ಗಾಂರ್ಝೊ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್
4	AB2787572	U50400KA2020PTC142403	ವಿಯಾ ಆಯಿಲ್ ಅಂಡ್ ಗ್ಯಾಸ್ ಪ್ರೈವೇಟ್ ಲಿಮಿಟೆಡ್
5	AB2789731	U21099KA2019OPC128086	ಮಾಹಿ ಸೆಲೆಬ್ರೇಶನ್ಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
6	AB2793727	U22219KA2022PTC165540	ಲಿಖಾಮಿ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್
7	AB2801645	U80301KA2000PTC026387	ಸಾಫ್ಟ್-ಎಡ್ ಸೊಲ್ಯೂಷನ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
8	AB2805593	U74999KA2018PTC110691	ವಾಲ್ಟ್‌ಕೀಪರ್ಸ್ ಇನ್ವೆಸ್ಟ್‌ಮೆಂಟ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
9	AB2820206	U72200KA2010PTC053401	ಮೈಂಡ್‌ಸ್ಟ್ರೆಚ್ ಲರ್ನಿಂಗ್ ಲ್ಯಾಬ್ ಪ್ರೈವೇಟ್ ಲಿಮಿಟೆಡ್
10	AB2823008	U52609KA2021PTC145818	ಐಕ್ಯುಬಿಕ್ಸ್ ಗ್ಲೋಬಲ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
11	AB2828289	U85222KA2023PTC176300	ಅಕಿರಾ ಫ್ಲ್ಯೂಯೆನ್ಸಿ ಅಕಾಡೆಮಿ ಪ್ರೈವೇಟ್ ಲಿಮಿಟೆಡ್
12	AB2828856	U72900KA2021PTC153581	ಝಿಯನ್‌ಸ್ಟಾರ್ ಸ್ಟ್ರಾಟೆಜಿಕ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
13	AB2843299	U82990KA2023PTC170947	ಸಿಎನ್‌ಎಸ್‌ಜಿ ಕಾರ್ಪೋರೇಟ್ ಅಡ್ವಾಯಸರ್ಸ್ ಪ್ರೈವೇಟ್ ಲಿಮಿಟೆಡ್
14	AB2844339	U72200KA1989PTC010543	ನುಮಾಗ್ ಡೇಟಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್
15	AB2849475	U65992KA1994PTC016843	ಶ್ರೀ ಗುರು ಚಿಟ್ಸ್ ಪ್ರೈವೇಟ್ ಲಿಮಿಟೆಡ್
16	AB2865244	U80301KA2019PTC121282	ಈಗ್ಲೂ ಫುಲ್‌ಡೋಮ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
17	AB2867208	U45205KA2016PTC085554	ರಾನ್‌ಸ್ಕೀಲ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್
18	AB2877173	U70101KA2020PTC136959	ಗಿಲ್ಡಾಲ್ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
19	AB2882052	U74999KA2000PTC027785	ಐಫೊನಿಕ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
20	AB2883281	U72200KA2013PTC070174	ವಿಂಡ್‌ಮೈವಿಂಗ್ಸ್ ರಿಟೇಲ್ ಪ್ರೈವೇಟ್ ಲಿಮಿಟೆಡ್
21	AB2884133	U80303KA2016PTC093251	ಲರ್ನಿಂಗ್ ಲ್ಯಾಬ್ ಬೆಂಗಳೂರು ಪ್ರೈವೇಟ್ ಲಿಮಿಟೆಡ್
22	AB2896439	U74900KA2015PTC078685	ಎಸ್‌ಕ್ಯುಎಸ್ ಹಾಸ್ಪಿಟಾಲಿಟಿ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
23	AB2899835	U65992KA2015PTC083306	ಶಿವಭವಾನಿ ಚಿಟ್ಸ್ ಪ್ರೈವೇಟ್ ಲಿಮಿಟೆಡ್
24	AB2900732	U51909KA2011FTC059022	ಅವಾರಾಮೆಟಲ್ ರಿಸೋರ್ಸ್‌ಸ್ ಪ್ರೊಸೆಸ್ಸಿಂಗ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
25	AB2905474	U72100KA2019PTC120216	0.5ಬಿಎನ್ ಫಿನ್‌ಹೆಲ್ತ್ ಪ್ರೈವೇಟ್ ಲಿಮಿಟೆಡ್
26	AB2913792	U72900KA2021PTC151594	ಏರೊನಾಟ್ಸ್ ಲಾಯಲ್ಟಿ ಪ್ರೈವೇಟ್ ಲಿಮಿಟೆಡ್
27	AB2917124	U01100KA2020PTC137277	ಸಿಲ್ವೆಬ್ರಿಜ್ ಪ್ರೈವೇಟ್ ಲಿಮಿಟೆಡ್
28	AB2920086	U72900KA2021PTC148995	ಕಲ್ಚರ್‌ಕೊ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
29	AB2924680	U43302KA2023PTC180252	ಲೆವೆಲ್ಲಿ ಇಂಟೀರಿಯರ್ಸ್ ಅಂಡ್ ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್
30	AB2924981	U52322KA1982PTC004661	ಎಚ್ ಟಿ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್
31	AB2927594	U63121KA2024PTC189175	ಜಿಲಾಕ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
32	AB2928105	U46593KA2023OPC174362	ಅರ್ಸೆಮ್ ಇಲೆಕ್ಟ್ರಾನಿಕ್ಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
33	AB2934093	U72200KA2022PTC157042	ಆಕ್ವಾವಿಯಾನಾ ಬಿಜನೆಸ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
34	AB2937345	U13136KA2023FTC175120	ಕ್ವೆನ್‌ಬೈ ಬ್ರಾಂಡಿಂಗ್ ಸೊಲ್ಯೂಷನ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
35	AB2941945	U40300KA2011PTC057519	ಶ್ರೀ ವೆಂಚರ್ಸ್ ಇಕೊ ಎನರ್ಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್
36	AB2942236	U62099KA2023PTC172999	ಬ್ರೆಕ್ಸ್ ಪೇಮೆಂಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
37	AB2943975	U72900KA2019PTC130658	ಜಿಆರ್‌ಟಿಎಸ್‌ಎ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
38	AB2946512	U14102KA2004PTC035111	ಎಎನ್‌ಎ ಹಾಸ್ಪಿಟಾಲಿಟಿ ಪ್ರೈವೇಟ್ ಲಿಮಿಟೆಡ್
39	AB2950407	U62020KA2023PTC173000	ಏವ್‌ಸ್ಟ್ಯಾಕ್ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್
40	AB2951034	U72200KA2022PTC161919	ಪ್ರಾಕ್ಸಿಮ್ಯಾಕ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
41	AB2964218	U51504KA2007PTC044373	ಟೆಕ್ಟಿ ಟೆಕ್ನಾಲಜೀಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
42	AB2967802	U72900KA2019PTC126676	ಎಜುಸಾಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
43	AB2968081	U31200KA2013PTC069447	ಎಲ್ಮನ್ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್
44	AB2968735	U72900KA2019PTC121032	ನಿಯತಾ ಎಂಟರ್‌ಪ್ರೈಸ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
45	AB2979850	U74110KA1989PTC010352	ಗೊದೀರಾ ಮೆಟಲ್ಸ್ ಪ್ರೈವೇಟ್ ಲಿಮಿಟೆಡ್
46	AB2990220	U51909KA2022PTC162398	ಅಂಶ ಅಗ್ರೊ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್
47	AB2993801	U78300KA2024FTC191370	ಶಾಂಗ್ ಚಿನ್ ರೆಸೊಲ್ಯೂಷನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
48	AB2998368	U15490KA2018PTC117030	ಗ್ರೀನ್‌ಹಬ್ಜ್ ನ್ಯೂಟ್ರಿಷನಲ್ ಫುಡ್ಸ್ ಅಂಡ್ ಬೆವರೇಜಸ್ ಪ್ರೈವೇಟ್ ಲಿಮಿಟೆಡ್
49	AB3000210	U72900KA2022FTC160291	ಅಬಿಟಮ್ ಸಾಫ್ಟ್‌ವೇರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
50	AB3011700	U60300KA2018PTC110814	ಸಮರ್ಪಣ ಶಾರದ ಟ್ರಾನ್ಸ್‌ಪೋರ್ಟ್ ಸಿಸ್ಟಮ್ ಪ್ರೈವೇಟ್ ಲಿಮಿಟೆಡ್
51	AB3028072	U72900KA2021PTC152060	ಡಿಆರ್ ವಿಎಲ್‌ಎಸ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
52	AB3030870	U90009KA2023PTC173487	ಫಿರ್ಕಿ ಸ್ಪೋರ್ಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
53	AB3037630	U74999KA2019PTC124305	ವಾಲ್ಯೂಸರ್ಜ್ ಪ್ರೈವೇಟ್ ಲಿಮಿಟೆಡ್
54	AB3040221	U74999KA2018PTC112888	ಸಮತ್ವಂ ಆಯುರ್ಯೋಗ ಪ್ರೈವೇಟ್ ಲಿಮಿಟೆಡ್
55	AB3051133	U74999KA2017PTC107233	ಸಿಡಬ್ಲ್ಯುಎಕ್ಸ್ ಕ್ರಾಫ್ಟ್‌ವರ್ಕ್ಸ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
56	AB3057053	U65999KA2021PTC147031	ಫಿಡೆಂಟ್ ವೆಲ್ತ್ ಪ್ರೈವೇಟ್ ಲಿಮಿಟೆಡ್
57	AB3059250	U15400KA2020PTC138206	ಫಾರಂ2ಬಾಕ್ಸ್ ನ್ಯಾಚುರಲ್ಸ್ ಪ್ರೈವೇಟ್ ಲಿಮಿಟೆಡ್
58	AB3059820	U74999KA2018PTC110567	ಲೀಡ್‌ಲೀನ್ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್
59	AB3061977	U24246KA2020PTC132955	ಗ್ಲೊಪಿಂಕ್ ಪ್ರೈವೇಟ್ ಲಿಮಿಟೆಡ್
60	AB3063117	U52609KA2022OPC167787	ಗ್ಲಿಂಗ್ ಅಪಾರೆಲ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
61	AB3065669	U74999KA2018PTC115438	ಫಸ್ಟ್‌ನಾಚ್ ಬಿಜನೆಸ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
62	AB3078369	U52339KA2021PTC153895	ಅಗತ್ಯ ಏಜೆನ್ಸೀಸ್ ಪ್ರೈವೇಟ್ ಲಿಮಿಟೆಡ್
63	AB3078964	U74999KA2016PTC094907	ಬ್ಲ್ಯೂಗಿಲ್ಡ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
64	AB3081905	U72200KA2011PTC061621	ಟ್ರಾಡೊನೊಮಿಕ್ಸ್ ವೆಬ್‌ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
65	AB3084402	U74999KA2021PTC149108	ಅಗ್ನಾಟೆಕ್ ಇನ್ನೋವೇಶನ್ಸ್ ಪ್ರೈವೇಟ್ ಲಿಮಿಟೆಡ್
66	AB3085854	U93290KA2023PTC172833	ಪ್ರೊವರ್ಕ್ಸ್ ಸ್ಪೋರ್ಟ್ಸ್ & ಎಂಟರ್‌ಟೈನ್‌ಮೆಂಟ್ ಪ್ರೈವೇಟ್ ಲಿಮಿಟೆಡ್
67	AB3090789	U74999KA2022PTC166739	ಮಾರೇಲ್ ಎಚ್‌ಆರ್ ಸರ್ವೀಸಸ್ ಅಂಡ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
68	AB3097322	U24290KA2022PTC166997	ವನ್ಯ ಲೈಫ್‌ಸೈನ್ಸ್‌ಸ್ ಪ್ರೈವೇಟ್ ಲಿಮಿಟೆಡ್
69	AB3098170	U29299KA2006PTC039012	ಎಲೆಯೊರಾ ಇಲೆಕ್ಟ್ರಿಕಲ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
70	AB3099624	U80900KA2018PTC112531	ನರ್ಚರಿಂಗ್ ಯಂಗ್ ಮೈಂಡ್ಸ್ ಅಕಾಡೆಮಿ ಪ್ರೈವೇಟ್ ಲಿಮಿಟೆಡ್
71	AB3099757	U72200KA2009PTC048785	ಡಾವಿನ್ಸಿ ನ್ಯಾನೊಟೆಕ್ ಪ್ರೈವೇಟ್ ಲಿಮಿಟೆಡ್
72	AB3099995	U52599KA2015PTC081543	ಫಿಜಿ ಶಾಪಿ ಇಂಡಿಯಾ ಪ್ರೈವೇಟ್ ಲಿಮಿಟೆಡ್
73	AB3100406	U70102KA1992PTC037583	ಎಸ್ ಐ ಇನ್ಫ್ರಾ-ಬಿಲ್ಡ್ ಪ್ರೈವೇಟ್ ಲಿಮಿಟೆಡ್
74	AB3103411	U55101KA2023PTC175516	ವಿಸಿವಿ ರಾಮ್ ಹಾಸ್ಪಿಟಾಲಿಟಿ ಪ್ರೈವೇಟ್ ಲಿಮಿಟೆಡ್
75	AB3108102	U74999KA2018PTC114455	ಸರ್ಕಲ್ ಇಂಟರ್‌ನೆಟ್ ಟೆಕ್ ಪ್ರೈವೇಟ್ ಲಿಮಿಟೆಡ್
76	AB3108425	U70100KA2015PTC082771	ನಂದಜ್ಯೋತಿ ಬಿಲ್ಡರ್ಸ್ ಪ್ರೈವೇಟ್ ಲಿಮಿಟೆಡ್
77	AB3111703	U51101KA2012PTC064308	ಆವಿಕ್ ಇಲೆಕ್ಟ್ರಾನಿಕ್ ಮಾರ್ಕೆಟಿಂಗ್ ಅಂಡ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
78	AB3114315	U74999KA2020PTC134790	ಕ್ವೆರಿ ಡೇಟಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್
79	AB3114582	U52335KA2009PTC049446	ಇವಾಲ್ವಿ ಎಲೆಕ್ಟ್ರಾನಿಕ್ಸ್ ಪ್ರೈವೇಟ್ ಲಿಮಿಟೆಡ್
80	AB3117934	U32109KA2006PTC038221	ಸ್ಟಾರ್ ವೆಲ್ಡ್ ಮಷೀನ್ ಪ್ರೈವೇಟ್ ಲಿಮಿಟೆಡ್
81	AB3121633	U10200KA2014PTC077377	ಕಾಂಪೋಸಿಟ್ ಮೈನ್ ಸೇಫ್ಟೀ ಅಂಡ್ ಆಪರೇಶನಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
82	AB3123151	U74999KA2019PTC129878	ಗ್ರೊವಿಸ್ ಅಡ್ವಾಯ್ಸರಿ ಪ್ರೈವೇಟ್ ಲಿಮಿಟೆಡ್

(2) ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಇಲ್ಲಿ ಮೇಲೆ ಉಲ್ಲೇಖಿಸಲಾಗಿರುವ ಕಂಪನಿಗಳು ತಮ್ಮ ಸ್ಥಾಪನೆ ಆದಾಗಿನಿಂದ ಒಂದು ವರ್ಷದೊಳಗೆ ವ್ಯವಹಾರವನ್ನು ಆರಂಭಿಸಲು ವಿಫಲವಾಗಿರುವ ಹಿನ್ನಲೆಯಲ್ಲಿ ಅಥವಾ ಸದರಿ ಕಂಪನಿಗಳು ಹಿಂದಿನ ತಕ್ಷಣದ ಎರಡು ಹಣಕಾಸು ವರ್ಷಗಳ ಅವಧಿಯಲ್ಲಿ ಯಾವುದೇ ವ್ಯಾಪಾರ ಅಥವಾ ಚಟುವಟಿಕೆ ಮಾಡದಿರುವ ಹಿನ್ನಲೆಯಲ್ಲಿ ಮತ್ತು ಅಂತಹ ಅವಧಿಯಲ್ಲಿ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 455ರ ಅಡಿಯಲ್ಲಿ ಡೊರ್ಮಂಟ್ ಕಂಪನಿ ಸ್ಟೇಟಸ್ ಪಡೆಯಲು ಯಾವುದೇ ಅರ್ಜಿ ಸಲ್ಲಿಸದೆ ಇರುವ ಹಿನ್ನಲೆಯಲ್ಲಿ ಅಥವಾ ಕಂಪನಿಗಳು ಡೊರ್ಮಂಟ್ ಕಂಪನಿ ಸ್ಟೇಟಸ್ ಪಡೆದುಕೊಂಡಿದ್ದು । ಮೆಮೊರಾಂಡಮ್ ಚಂದಾದಾರರು ಕಂಪನಿಯ ಸ್ಥಾಪನಾ ಸಮಯದಲ್ಲಿಯೇ ಪಾವತಿಸಲು ಒಪ್ಪಿಕೊಂಡಿದ್ದ ಚಂದಾದಾರಿಕೆಯನ್ನು ಪಾವತಿಸದೆ ಇರುವ ಹಿನ್ನಲೆಯಲ್ಲಿ ಮತ್ತು ಸ್ಥಾಪನೆಯಾದಾಗಿನಿಂದ ಯಾವುದೇ ವ್ಯವಹಾರ ಮಾಡುತ್ತಿಲ್ಲ ಅಥವಾ ಚಟುವಟಿಕೆ ನಡೆಸುತ್ತಿಲ್ಲ ಎಂಬುದನ್ನು ನೂರಾ ಎಂಬತ್ತು ದಿನಗಳೊಳಗೆ ಸೆಕ್ಷನ್ 10ಎ ಸಬ್ ಸೆಕ್ಷನ್ (1)ರ ಅಡಿಯಲ್ಲಿ ಡಿಕ್ಲರೇಶನ್ ಸಲ್ಲಿಕೆ ಮಾಡಿರದೆ ಇರುವುದು, ಸೆಕ್ಷನ್ 12ರ ಸಬ್ ಸೆಕ್ಷನ್ (9) ಅಡಿಯಲ್ಲಿ ಭೌತಿಕ ಪರಿಶೀಲನೆ ಕೈಗೊಂಡ ನಂತರ ಇದು ಬೆಳಕಿಗೆ ಬಂದಿರುವ ಹಿನ್ನಲೆಯಲ್ಲಿ ಮತ್ತು ಬಹುತೇಕರು ತಮ್ಮ ಕಂಪನಿಗಳ ನೋಂದಣಿಯನ್ನು ಮುಂದುವರಿಸಲು ಇಚ್ಛಿಸದಿರುವ ಹಿನ್ನಲೆಯಲ್ಲಿ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248(2)ರ ಅಡಿಯಲ್ಲಿ, ತಮ್ಮ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಬೇಕು / ಅಳಿಸಿ ಹಾಕಬೇಕೆಂದು ಕೋರಿ ಅರ್ಜಿಗಳನ್ನು ಸಲ್ಲಿಸಿರುತ್ತವೆ.

(3) ಅಂತೆಯೇ, ಕಂಪನಿಗಳ ರಜಿಸ್ಟ್ರಾರ್ ಇವರು ಮೇಲ್ಕಂಡ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಲು / ಅಳಿಸಿ ಹಾಕಲು ಉದ್ದೇಶಿಸಿರುತ್ತಾರೆ.

(4) ಹೀಗೆ, ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಲು/ಅಳಿಸಿ ಹಾಕಲು ಉದ್ದೇಶಿಸಲಾಗಿರುವ ಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಆಕ್ಷೇಪಣೆಗಳಿದ್ದಲ್ಲಿ, ಅಂತಹವರು ಈ ನೋಟಿಸ್ ಪ್ರಕಟಗೊಂಡ ದಿನಾಂಕದಿಂದ ಮೂವತ್ತು ದಿನಗಳೊಳಗೆ ಈ ಮೇಲೆ ತಿಳಿಸಲಾಗಿರುವ ಕಚೇರಿ ವಿಳಾಸಕ್ಕೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದು.

ಇರ್ಕಾನ್ ಟರ್ಕಿ
ಅಸಿಸ್ಟೆಂಟ್ ರಿಜಿಸ್ಟ್ರಾರ್
ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಅಕ್ಸಲೇಟೆಡ್ ಕಾರ್ಪೋರೇಟ್ ಎಕ್ಸಿಟ್

CBC 07123/11/0067/2526

'ವೈದ್ಯಕೀಯ ಸೀಟುಗಳನ್ನು ಹೆಚ್ಚಿಸಬೇಕಿದೆ'

ಪ್ರಜಾವಾಣಿ ವಾರ್ತೆ

ಸಮಾರಂಭದಲ್ಲಿ ಶರಣಪ್ರಕಾಶ ಪಾಟೀಲ ಅವರು ಪದವಿ ಪ್ರದಾನ ಮಾಡಿದರು. ರಿಜ್ವಾನ್ ಅರ್ಷದ್ ಡಾ.ಬಿ.ಎನ್ ಗಂಗಾಧರ್ ಉಪಸ್ಥಿತರಿದ್ದರು.

ಬೆಂಗಳೂರು: 'ವೈದ್ಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್) ಆಕಾಂಕ್ಷಿಗಳ ಸಂಖ್ಯೆ ಮತ್ತು ಲಭ್ಯವಿರುವ ಸೀಟುಗಳ ನಡುವೆ ಅಂತರ ಹೆಚ್ಚುತ್ತಿದೆ. ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಂಸಿ) ದೇಶದಾದ್ಯಂತ ಪದವಿಪೂರ್ವ ವೈದ್ಯಕೀಯ ಸೀಟುಗಳನ್ನು ಗಣನೀಯವಾಗಿ ಹೆಚ್ಚಿಸಬೇಕು' ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಇಲ್ಲಿ ಆಗ್ರಹಿಸಿದರು.

ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಎಬಿವಿಎಂಸಿಆರ್‌ಐ) ಬುಧವಾರ ಹಮ್ಮಿಕೊಂಡಿದ್ದ 2019ನೇ ಬ್ಯಾಚ್‌ನ ವಿದ್ಯಾರ್ಥಿಗಳ ಪದವಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

'ಪ್ರತಿ ವರ್ಷ ಐದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ನೀಟ್ ಪರೀಕ್ಷೆಗೆ ಹಾಜರಾಗುತ್ತಾರೆ. ಆದರೆ, ಒಂದು ಲಕ್ಷ ವೈದ್ಯಕೀಯ ಸೀಟುಗಳು ಮಾತ್ರ ಲಭ್ಯವಿವೆ. ಈ ಅಸಮಾನತೆಯನ್ನು ತಕ್ಷಣ ನಿವಾರಿಸಬೇಕು. ದೇಶದಲ್ಲಿ ತರಬೇತಿ ಪಡೆಯುವ ವೈದ್ಯರು ವಿದೇಶದಲ್ಲಿಯೂ ಹೆಚ್ಚಿನ ಮನ್ನಣೆ ಪಡೆಯುತ್ತಿದ್ದಾರೆ. ನಮ್ಮ ವೈದ್ಯರು ಜಗತ್ತಿನ ಎಲ್ಲೆಡೆ ಚಿಕಿತ್ಸೆ ಒದಗಿಸುತ್ತಿದ್ದಾರೆ' ಎಂದು ಶ್ಲಾಘಿಸಿದರು.

'ವೈದ್ಯಕೀಯ ಸೀಟುಗಳ ಬೇಡಿಕೆ ಮತ್ತು ಲಭ್ಯತೆಯ ಅಂತರ ಕಡಿಮೆ ಮಾಡಲು ಎನ್‌ಎಂಸಿ ಮಧ್ಯ ಪ್ರವೇಶಿಸಬೇಕು' ಎಂದು ಸಮಾರಂಭದಲ್ಲಿ ಉಪಸ್ಥಿತರಿದ್ದ ಎನ್‌ಎಂಸಿ ಅಧ್ಯಕ್ಷ ಡಾ.ಬಿ.ಎನ್. ಗಂಗಾಧರ ಅವರನ್ನು ಉದ್ದೇಶಿಸಿ ಹೇಳಿದರು.

'ಈ ಶೈಕ್ಷಣಿಕ ವರ್ಷದಿಂದ ರಾಜ್ಯದಲ್ಲಿ ಹೆಚ್ಚುವರಿಯಾಗಿ 800 ಪದವಿ ಮತ್ತು 600 ಸ್ನಾತಕೋತ್ತರ ಪದವಿ ವೈದ್ಯಕೀಯ ಸೀಟುಗಳಿಗೆ ಅನುಮೋದನೆ ಕೋರಿ ಎನ್‌ಎಂಸಿಗೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ತಿಳಿಸಿದರು.

ಡಾ.ಬಿ.ಎನ್. ಗಂಗಾಧರ, 'ಜಾಗತಿಕ ಮಟ್ಟದಲ್ಲಿ ಸುಮಾರು 3 ಕೋಟಿ ವೈದ್ಯರ ಕೊರತೆಯಿದೆ. ಯುವ ಪೀಳಿಗೆಯು ವೈದ್ಯಕೀಯ ವೃತ್ತಿಯನ್ನು ಕೈಗೆತ್ತಿಕೊಳ್ಳಬೇಕು. ಭಾರತೀಯ ವೈದ್ಯರಿಗೆ ವಿಶ್ವದಾದ್ಯಂತ ಹೆಚ್ಚಿನ ಬೇಡಿಕೆಯಿದೆ. ವೈದ್ಯಕೀಯ ವೃತ್ತಿಪರರ ಸಂಖ್ಯೆ ಹೆಚ್ಚಳ ಮಾಡುವುದು ಎನ್‌ಎಂಸಿಯ ಪ್ರಮುಖ ಗುರಿಗಳಲ್ಲಿ ಒಂದಾಗಿದೆ' ಎಂದರು.

ಶಿವಾಜಿನಗರ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್, ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್, ನಿರ್ದೇಶಕ ಡಾ. ಸುಜಾತಾ ರಾಥೋಡ್ ಮತ್ತು ಎಬಿವಿಎಂಸಿಆರ್‌ಐ ನಿರ್ದೇಶಕ ಡಾ. ಮನೋಜ್ ಕುಮಾರ್ ಎಚ್.ವಿ. ಉಪಸ್ಥಿತರಿದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು (ಕ್ಯುಎ/ಕ್ಯುಸಿ) ವಿಭಾಗ ರವರ ಕಛೇರಿ, ಪಶ್ಚಿಮ, ಕೊಠಡಿ ಸಂ.101, ಅನೆಕ್ಸ್–3 ಕಟ್ಟಡ, ನರಸಿಂಹರಾಜ ಚೌಕ, ಬೆಂಗಳೂರು – 02

ಸಂ. ಕಾಅ(ಕ್ಯುಎ/ಕ್ಯುಸಿ)/ಪಶ್ಚಿಮ/ಟೆಂಡರ್/03/25–26 ದಿನಾಂಕ : 23–04–2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿಲಕೋಟೆ ಪದ್ಧತಿ) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು ಕ್ಯುಎ/ಕ್ಯುಸಿ, ಪಶ್ಚಿಮ ವಲಯ, ಬೃಬೆಂಮಪಾ ಇವರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬೃಬೆಂಮಪಾ) ಗುಣಮಟ್ಟ ಭರವಸೆ / ಗುಣಮಟ್ಟ ನಿಯಂತ್ರಣ ವಿಭಾಗವು ಕೆಳಕಂಡ ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ **ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಒಳಗೊಂಡಂತೆ ಯೋಜನಾ ನಿರ್ವಹಣೆ ಸಮಾಲೋಚನಾ ಸೇವೆಗಳಿಗಾಗಿ ಇದೇ ರೀತಿಯ ಕಾಮಗಾರಿಯನ್ನು ಮಾಡಿರುವ** ಆಸಕ್ತಿಯುಳ್ಳ ವ್ಯಕ್ತಿಗಳು / ಸಂಸ್ಥೆಗಳಿಂದ ಪ್ರಸ್ತಾವನೆಗಾಗಿ ಕೋರಿಕೆಯನ್ನು ಆಹ್ವಾನಿಸಿದೆ.

ಕ್ರ.	ಕಾಮಗಾರಿಯ ಹೆಸರು
1	ಟೌನ್‌ಹಾಲ್‌ನಿಂದ ಸಿರ್ಸಿ ವೃತ್ತದವರೆಗೆ ಬಿಜಿಎಸ್ ಫ್ಲೈಓವರ್‌ನ ನಿರ್ವಹಣೆಗಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣವನ್ನು ಒಳಗೊಂಡಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **ಕಾಮಗಾರಿಯ ವೆಚ್ಚ** : ರೂ.320.00 ಲಕ್ಷಗಳು. **ಇಎಂಡಿ ಮೊತ್ತ** : ರೂ.12,500/–

(1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ **https://kppp.karnataka.gov.in** ನಿಂದ ಗುತ್ತಿಗೆದಾರರಿಗೆ ಲಾಗ್‌ಇನ್ ಅಡಿಯಲ್ಲಿ ಡೌನ್‌ಲೋಡ್ ಮಾಡಬಹುದು. (2) ಟೆಂಡರ್ ದಾಖಲೆಯನ್ನು ಕೆಪಿಪಿ ಪೋರ್ಟಲ್ ನಿಂದ ಡೌನ್‌ಲೋಡ್ ಮಾಡಬಹುದಾದ ದಿನಾಂಕ : **25–04–2025** ರಿಂದ (3) ಬಿಡ್–ಪೂರ್ವ ಸಭೆಯ ದಿನಾಂಕ : **02–05–2025 ರಂದು ಬೆಳಿಗ್ಗೆ 11.30 ಗಂಟೆಗೆ.** ಸ್ಥಳ : ಕಾರ್ಯಪಾಲಕ ಅಭಿಯಂತರರು (ಕ್ಯುಎ/ಕ್ಯುಸಿ) ರವರ ಕಛೇರಿ, ಕೊ.ಸಂ.101, ಅನೆಕ್ಸ್–3 ಕಟ್ಟಡ, ಬೃಬೆಂಮಪಾ ನರಸಿಂಹರಾಜ ಚೌಕ, ಬೆಂಗಳೂರು – 560002 (4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : **06–05–2025 ರಂದು ಸಂಜೆ 4:00 ಗಂಟೆಯವರೆಗೆ** (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **07–05–2025 ರಂದು ಸಂಜೆ 4:30 ಗಂಟೆಗೆ** (6) ಟೆಂಡರ್‌ನ ಮಾನ್ಯತೆ : ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕದಿಂದ 90 ದಿನಗಳು

ಸಹಿ/– ಕಾರ್ಯಪಾಲಕ ಅಭಿಯಂತರರು, ಕ್ಯುಎ/ಕ್ಯುಸಿ ವಿಭಾಗ, ಪಶ್ಚಿಮ ವಲಯ

ರಾಜ್ಯ ಟೆಂಡರ್ ಬುಲೆಟಿನ್ ಅಧಿಕಾರಿಯವರ ಕಛೇರಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವಾಲಯ, 1ನೇ ಮಹಡಿ, 3ನೇ ಗೇಟ್, ಬಹುಮಹಡಿಗಳ ಕಟ್ಟಡ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು.

ಸಂಖ್ಯೆ: ಬಾಭಸೊ/ಹೊಗುನೇ/2025–26/36 ದಿನಾಂಕ: 23.04.2025

E-PROCUREMENT TENDER NOTIFICATION FOR MANPOWER ON OUTSOURCING
ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯುವ ಬಗ್ಗೆ.

ಮರು–ಟೆಂಡರ್ ಅಧಿಸೂಚನೆ.

ಬಾಲಭವನ ಸೊಸೈಟಿ, ಕಬ್ಬನ್ ಪಾರ್ಕ್, ಬೆಂಗಳೂರು ಇಲ್ಲಿಗೆ ಹೊರ ಸಂಪನ್ಮೂಲ ಏಜೆನ್ಸಿಯಿಂದ ಒಂದು ವರ್ಷದ ಅವಧಿಗೆ ಅನುಬಂಧ–1ರಲ್ಲಿ ಲಗತ್ತಿಸಿರುವ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KPPP) 1999 ನಿಯಮಗಳು 2000 ಪ್ರಕಾರ e-Procurement ಅಲ್ಪಾವಧಿ ಟೆಂಡರ್ ಮೂಲಕ ಪಡೆಯುವ ಬಗ್ಗೆ. [Website: www.kppp.karnataka.gov.in]

1) ಟೆಂಡರ್‌ದಾರರು e-Portal ಮೂಲಕ ಟೆಂಡರ್ ಸಲ್ಲಿಸುವುದು. ಈ ಬಗ್ಗೆ ಟೆಂಡರ್‌ದಾರರಿಗೆ ನಿಗಧಿಪಡಿಸಿರುವ ಅರ್ಹತೆ ಮತ್ತು ಅನುಭವಗಳು ಇರತಕ್ಕದ್ದು. 2) ಟೆಂಡರ್ ಅರ್ಜಿ ಶುಲ್ಕ ಇ.ಎಂ.ಡಿ. ಮೊತ್ತವನ್ನು ತಪ್ಪದೇ e-Portal ಮುಖಾಂತರ ಸಲ್ಲಿಸುವುದು. 3) ಟೆಂಡರ್ ಪ್ರಕಟಣೆ ದಿನಾಂಕ: **23.04.2025.** 4) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸಬೇಕಾದ ದಿನಾಂಕ: **23.04.2025.** 5) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **02.06.2025 ಮಧ್ಯಾಹ್ನ 3.00 ಗಂಟೆಯವರೆಗೆ.** 6) ತಾಂತ್ರಿಕ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ: **ಬಾಲಭವನ ಸೊಸೈಟಿ, ಕಬ್ಬನ್ ಪಾರ್ಕ್, ಬೆಂಗಳೂರು. ದಿನಾಂಕ: 05.06.2025ರಂದು ಸಂಜೆ 4.00 ಗಂಟೆಗೆ.** 7) ಹಣಕಾಸಿನ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ: **ಬಾಲಭವನ ಸೊಸೈಟಿ, ಕಬ್ಬನ್ ಪಾರ್ಕ್, ಬೆಂಗಳೂರು. ದಿನಾಂಕ: 11.06.2025ರಂದು ಸಂಜೆ 4.30 ಗಂಟೆಗೆ.** 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ: **ರೂ. 2,00,000–00 (ರೂಪಾಯಿ ಎರಡು ಲಕ್ಷಗಳು ಮಾತ್ರ)**

ಹೆಚ್ಚಿನ ವಿವರಗಳು ಟೆಂಡರ್ ದಸ್ತಾವೇಜುಗಳಲ್ಲಿ ಲಭ್ಯವಿದ್ದು, www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆದು ಪರಿಶೀಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಕಾರ್ಯದರ್ಶಿಗಳು, ಬಾಲಭವನ ಸೊಸೈಟಿ, ಕಬ್ಬನ್ ಪಾರ್ಕ್, ಬೆಂಗಳೂರು ಇಲ್ಲಿ ಕಛೇರಿ ವೇಳೆಯಲ್ಲಿ ಅಥವಾ ದೂರವಾಣಿ ಸಂ: 080–22864189 ಸಂಪರ್ಕಿಸುವುದು.

ಸಹಿ/–
ರಾಜ್ಯ ಟೆಂಡರ್ ಬುಲೆಟಿನ್ ಅಧಿಕಾರಿಗಳು ಹಾಗೂ ಸರ್ಕಾರದ ಉಪ ಕಾರ್ಯದರ್ಶಿಗಳು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವಾಲಯ, ಬೆಂಗಳೂರು

ವಾಸಾಸಂಇ/ವಾ.ಪ್ರ/333/ಐಎಎ/2025–26

ಸಂಕ್ಷಿಪ್ತ ಸುದ್ದಿ

'ಮೆಟ್ರೊ'ದಲ್ಲಿ ತಂಬಾಕು ತಿಂದರೆ ದಂಡ: ಎಚ್ಚರಿಕೆ

ಬೆಂಗಳೂರು: 'ನಮ್ಮ ಮೆಟ್ರೊ' ರೈಲಿನಲ್ಲಿ ಪ್ರಯಾಣಿಕರೊಬ್ಬರು ಪಾನ್‌ಮಸಾಲ ಸೇವಿಸಿದ ವಿಡಿಯೊ ಹರಿದಾಡಿದ ನಂತರ ಬಿಎಂಆರ್‌ಸಿಎಲ್ ಎಚ್ಚೆತ್ತುಕೊಂಡಿದೆ. ಮೆಟ್ರೊ ನಿಲ್ದಾಣ ಹಾಗೂ ರೈಲುಗಳ ಒಳಗೆ ತಂಬಾಕು ಉತ್ಪನ್ನಗಳನ್ನು ಸೇವಿಸುವ ಪ್ರಯಾಣಿಕರಿಗೆ ದಂಡ ವಿಧಿಸಲು ನಿರ್ಧರಿಸಿದೆ.

ಗುಟ್ಕಾ, ಪಾನ್ ಮಸಾಲದಂತಹ ತಂಬಾಕು ಉತ್ಪನ್ನ ಅಗಿದು ಉಗುಳುವ ಬಗ್ಗೆ ದೂರು ಹೆಚ್ಚಾಗುತ್ತಿವೆ. ಮೆಟ್ರೊ ಆವರಣದಲ್ಲಿ ಉಗುಳುವುದು, ಕಸ ಹಾಕುವುದು ಮತ್ತು ತ್ಯಾಜ್ಯ ಬಿಸಾಡುವುದು ಸ್ವಚ್ಛತೆಗೆ ಧಕ್ಕೆ ತರುವುದಲ್ಲದೇ, ಪ್ರಯಾಣಿಕರಿಗೆ ಅನನುಕೂಲ ಉಂಟುಮಾಡುತ್ತದೆ. ಇಂತಹ ಪ್ರಯಾಣಿಕರಿಗೆ ಮೆಟ್ರೊ ನಿಯಮಗಳ ಪ್ರಕಾರ ದಂಡ ವಿಧಿಸಲಾಗುವುದು. ಅಂತಹ ವಸ್ತುಗಳನ್ನು ಬ್ಯಾಗ್ ಶೋಧಿಸುವಾಗ ಪತ್ತೆ ಹಚ್ಚಲಾಗುವುದು. ಅನುಮಾನಾಸ್ಪದ ಚಟುವಟಿಕೆ ಕಂಡರೆ ಸಂವೇದನಾಶೀಲ ಜಾಗೃತಿ ಶಿಬಿರ ನಡೆಸುವಂತೆ ಭದ್ರತಾ ಸಿಬ್ಬಂದಿಗೆ ತರಬೇತಿ ನೀಡಲಾಗುವುದು. ಉಲ್ಲಂಘನೆ ಕಂಡು ಕೂಡಲೇ ಭದ್ರತಾ ಸಿಬ್ಬಂದಿಗೆ ಎಚ್ಚರಿಕೆ ನೀಡಲು, ಕೇಂದ್ರ ಭದ್ರತಾ ಕಣ್ಗಾವಲು ಕೊಠಡಿಗೆ ಸೂಚನೆ ನೀಡಲಾಗಿದೆ. ತಂಬಾಕು ಉತ್ಪನ್ನ ಬಳಸದಂತೆ ಜಾಗೃತಿ ಮೂಡಿಸಲು ಅಭಿಯಾನ ನಡೆಸಲಾಗುವುದು ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಆರ್.ಟಿ. ನಗರದಲ್ಲಿ ಸಂಗೀತ ಉತ್ಸವ

ಬೆಂಗಳೂರು: ಆರ್.ಟಿ. ನಗರ ಕಲ್ಚರಲ್ ಅಸೋಸಿಯೇಷನ್ ಮತ್ತು ವಿನಾಯಕ ದೇವಸ್ಥಾನ ಸಮಿತಿ ಜಂಟಿ ಸಹಯೋಗದಲ್ಲಿ ಏ.26-27ರಂದು ವಾರ್ಷಿಕ ಸಂಗೀತ ಉತ್ಸವ ನಡೆಯಲಿದೆ.

ಎಂಇಎಸ್ ಬ್ಲಾಕ್‌ನಲ್ಲಿರುವ ಅಂಚೆ ಕಚೇರಿ ಬಳಿಯ ವಿನಾಯಕ ದೇವಸ್ಥಾನ ಸಭಾಂಗಣದಲ್ಲಿ ಏ.26ರಂದು ಸಂಜೆ 5 ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಸಂಗೀತೋತ್ಸವ ಉದ್ಘಾಟಿಸಲಿದ್ದಾರೆ.

ನಾದರಂಜನಿ ಸಂಸ್ಥೆಯ ಜೆ. ಬಾಬು, ಶ್ರೀರಾಮ ಪ್ರಾರ್ಥನಾ ಮಂದಿರ ಟ್ರಸ್ಟ್‌ನ ನಿರ್ದೇಶಕ ಎಂ. ಮುರಳಿ, ಆರ್.ಟಿ. ನಗರ ಕಲ್ಚರಲ್ ಅಸೋಸಿಯೇಷನ್ ಕಾರ್ಯದರ್ಶಿ ಕಣ್ಣನ್ ಉಪಸ್ಥಿತರಿರುವರು. ತರುವಾಯ, ಪ್ರಖ್ಯಾತ ಕಲಾವಿದೆ ಕನ್ಯಾಕುಮಾರಿ ಅವರಿಂದ ಪಿಟೀಲು ವಾದನ ಕಾರ್ಯಕ್ರಮ ನಡೆಯಲಿದೆ. ಏ.27ರಂದು ಬೆಳಿಗ್ಗೆ 10.30 ಕ್ಕೆ ಕೆ.ಎಸ್. ಸತ್ಯವತಿ ಮತ್ತು ಶಿಷ್ಯರಿಂದ ಪಂಚರತ್ನ ಗೋಷ್ಠಿ ಗಾಯನ ನಡೆಯಲಿದೆ. ಸಂಜೆ 6 ಗಂಟೆಗೆ ಗಾಯಕ ವಿದ್ಯಾಭೂಷಣ ಅವರ ಸಂಗೀತ ಕಚೇರಿ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಚಿನ್ನ ಕಳ್ಳಸಾಗಣೆ ಪ್ರಕರಣ: ರನ್ಯಾ, ತರುಣ್ ಕುರಿತು ಹೈಕೋರ್ಟ್‌ಗೆ ಮಾಹಿತಿ

25 ಬಾರಿ ಒಟ್ಟಿಗೆ ದುಬೈಗೆ ಪ್ರಯಾಣ

ಪ್ರಜಾವಾಣಿ ವಾರ್ತೆ

ರನ್ಯಾ ರಾವ್

ಬೆಂಗಳೂರು: ಚಿನ್ನ ಕಳ್ಳಸಾಗಣೆ ಮಾಡುವ ಉದ್ದೇಶದಿಂದಲೇ ನಟಿ ರನ್ಯಾ ರಾವ್ ಮತ್ತು ತರುಣ್ ರಾಜು ಅವರು 31 ಬಾರಿ ದುಬೈಗೆ ಪ್ರಯಾಣ ಮಾಡಿದ್ದರು ಎಂದು ರೆವೆನ್ಯೂ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಹೇಳಿದೆ.

ಇಬ್ಬರು ಆರೋಪಿಗಳ ಜಾಮೀನು ಅರ್ಜಿ ವಿಚಾರಣೆ ವೇಳೆ ಹೈಕೋರ್ಟ್‌ಗೆ ಡಿಆರ್‌ಐ ಸಲ್ಲಿಸಿರುವ ದಾಖಲೆಗಳಲ್ಲಿ ಈ ಮಾಹಿತಿ ಇದೆ.

'ರನ್ಯಾ ಮತ್ತು ತರುಣ್ ಅವರು ಅತ್ಯಂತ ವ್ಯವಸ್ಥಿತವಾಗಿ ಚಿನ್ನ ಕಳ್ಳಸಾಗಣೆ ನಡೆಸಿದ್ದಾರೆ. ಇಬ್ಬರೂ 25 ಬಾರಿ ಒಂದೇ ವಿಮಾನದಲ್ಲಿ ಬೇರೆ-ಬೇರೆ ಸೀಟುಗಳಲ್ಲಿ ದುಬೈಗೆ ಹೋಗಿದ್ದಾರೆ. ಅದೇ ದಿನ ಬೆಂಗಳೂರಿಗೆ ವಾಪಸಾಗಿದ್ದಾರೆ. ತರುಣ್ ಚಿನ್ನವನ್ನು ವಿಮಾನ ನಿಲ್ದಾಣದೊಳಕ್ಕೆ ತಂದು, ರನ್ಯಾಗೆ ಹಸ್ತಾಂತರಿಸಿದ್ದಾರೆ. ರನ್ಯಾ ಅದನ್ನು ಬೆಂಗಳೂರಿಗೆ ತಂದು ಸಾಹಿಲ್ ಸಖಾರಿಯಾ ಜೈನ್‌ಗೆ ಹಸ್ತಾಂತರಿಸಿದ್ದಾರೆ' ಎಂದು ಡಿಆರ್‌ಐ ಹೇಳಿದೆ.

'ಆರಂಭದಲ್ಲಿ ರನ್ಯಾ ಅವರು ಕ್ರೆಡಿಟ್ ಕಾರ್ಡ್‌ಗಳ ಮೂಲಕವೇ ವಿಮಾನಯಾನ ಟಿಕೆಟ್ ಖರೀದಿಸಿದ್ದಾರೆ. ತಮ್ಮ ಮದುವೆಯ ನಂತರ ಕ್ರೆಡಿಟ್ ಕಾರ್ಡ್ ಬಳಕೆ ನಿಲ್ಲಿಸಿದ್ದಾರೆ. ಕಳ್ಳಸಾಗಣೆಯ ಚಿನ್ನವನ್ನು ಮಾರಾಟ ಮಾಡಿ ಸಾಹಿಲ್ ತಂದುಕೊಟ್ಟ ಹಣದಲ್ಲಿ, ಸ್ವಲ್ಪ ಭಾಗವನ್ನು ತರುಣ್ ಅವರ ಬ್ಯಾಂಕ್ ಖಾತೆಗೆ ಜಮೆ ಮಾಡುತ್ತಿದ್ದರು. ಆ ಖಾತೆ ಮೂಲಕ ಟಿಕೆಟ್ ಖರೀದಿಸಲಾಗುತ್ತಿತ್ತು' ಎಂದು ಡಿಆರ್‌ಐ ಹೇಳಿದೆ.

ಲ್ಯಾಪ್‌ಟಾಪ್-ಮೊಬೈಲ್ ಪರಿಶೀಲನೆ: 'ಚಿನ್ನ ಕಳ್ಳಸಾಗಣೆಗೆ ಸಂಬಂಧಿಸಿದಂತೆ ರನ್ಯಾ ಮತ್ತು ತರುಣ್ ರಾಜು ಅವರ ಲ್ಯಾಪ್‌ಟಾಪ್ ಹಾಗೂ ಮೊಬೈಲ್‌ನಲ್ಲಿ ಹಲವು ಮಾಹಿತಿ ದೊರೆತಿವೆ. ಆದರೆ ಕೆಲವು ಮಾಹಿತಿಗಳನ್ನು ಇಬ್ಬರೂ ಆಗಿಂದಾಗ್ಗೆ ಅಳಿಸಿಹಾಕಿದ್ದಾರೆ. ಅವುಗಳನ್ನು ಮರು ಪಡೆಯಲು ಲ್ಯಾಪ್‌ಟಾಪ್ ಮತ್ತು ಮೊಬೈಲ್‌ಗಳನ್ನು ವಿಧಿ-ವಿಜ್ಞಾನ ಪರೀಕ್ಷೆಗೆ ಕಳುಹಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

100 ಕೆ.ಜಿ ಕಳ್ಳಸಾಗಣೆ?

'ರನ್ಯಾ ರಾವ್ ಮತ್ತು ತರುಣ್ ರಾಜು ಇಬ್ಬರೂ ಸೇರಿ ಒಟ್ಟು 100 ಕೆ.ಜಿ.ಯಷ್ಟು ಚಿನ್ನವನ್ನು ಕಳ್ಳಸಾಗಣೆ ಮಾಡಿದ್ದಾರೆ. ಅದರಲ್ಲಿ 80 ಕೆ.ಜಿ. ಚಿನ್ನದ ಮಾಹಿತಿ ದೊರೆತಿದೆ. ಆದರೆ, 20 ಕೆ.ಜಿ. ಚಿನ್ನಕ್ಕೆ ಸಂಬಂಧಿಸಿದಂತೆ ಇಬ್ಬರ ಲ್ಯಾಪ್‌ಟಾಪ್ ಮತ್ತು ಮೊಬೈಲ್‌ಗಳಲ್ಲಿ ಇರುವ ಮಾಹಿತಿಗಳು ಪರಸ್ಪರ ತಾಳೆಯಾಗುತ್ತಿಲ್ಲ' ಎಂದು ಡಿಆರ್‌ಐ ಮೂಲಗಳು ಹೇಳಿವೆ.

'ರನ್ಯಾ ದುಬೈನಿಂದ ಬೆಂಗಳೂರಿಗೆ ತಂದಿದ್ದ ಸುಮಾರು 49.6 ಕೆ.ಜಿಯಷ್ಟು ಚಿನ್ನಕ್ಕೆ ಸಂಬಂಧಿಸಿದಂತೆ ನಡೆದಿದ್ದ ₹40 ಕೋಟಿ ವಹಿವಾಟುಗಳ ಪೂರ್ಣ ದಾಖಲೆ ದೊರೆತಿದೆ. ಸರಿಸುಮಾರು ಅಷ್ಟೇ ಹಣ ವರ್ಗಾವಣೆ ನಡೆದಿರುವ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಐಎಎಸ್ ಅಧಿಕಾರಿಗೆ ವಂಚನೆ: ದೂರು ದಾಖಲು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಆನ್‌ಲೈನ್‌ನಲ್ಲಿ ಬಂದ ಜಾಹೀರಾತು ಗಮನಿಸಿ ಸೀರೆ ಬುಕ್ ಮಾಡಿದ್ದ ಐಎಎಸ್ ಅಧಿಕಾರಿಯೊಬ್ಬರು ವಂಚನೆಗೆ ಒಳಗಾಗಿದ್ದಾರೆ.

ಪಲ್ಲವಿ ಅಕುರಾತಿ ವಂಚನೆಗೆ ಒಳಗಾದವರು. ಪಲ್ಲವಿ ನೀಡಿರುವ ದೂರು ಆಧರಿಸಿ ಪೂರ್ವ ವಿಭಾಗದ ಸೆನ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ತಮಿಳುನಾಡಿನ ಮದುರೈ ಕಾಟನ್ ಸೀರೆ ಮಾರಾಟದ ಬಗ್ಗೆ ಪೂರ್ಣಿಮಾ ಕಲೆಕ್ಷನ್ ವತಿಯಿಂದ ಮಾಡಲಾಗಿದ್ದ ವಿಡಿಯೊವನ್ನು ಪಲ್ಲವಿ ವೀಕ್ಷಿಸಿದ್ದರು. ಬಳಿಕ ಸೀರೆಯೊಂದನ್ನು ಆಯ್ಕೆ ಮಾಡಿ, ಅದರ ಸ್ಕ್ರೀನ್ ಶಾಟ್ ಜೊತೆಗೆ ಆನ್‌ಲೈನ್ ಮೂಲಕ ಮಾರ್ಚ್ 10ರಂದು ಗೂಗಲ್ ಪೇ ಮೂಲಕ ₹850 ಪಾವತಿಸಿದ್ದರು. ಪಲ್ಲವಿ ನೀಡಿದ್ದ ವಿಳಾಸಕ್ಕೆ ಮಾರಾಟಗಾರರು ಸೀರೆಯನ್ನು ಕಳುಹಿಸಿರಲಿಲ್ಲ. ಹಣವನ್ನೂ ವಾಪಸ್ ಮಾಡಿರಲಿಲ್ಲ. ಕರೆ ಮಾಡಿದರೂ ಸ್ವೀಕರಿಸಿರಲಿಲ್ಲ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ಇದೇ ಹಲವು ಮಹಿಳೆಯರಿಗೆ ವಂಚನೆ ಆಗಿರುವ ಮಾಹಿತಿ ಸಿಕ್ಕಿದೆ. ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ತಾಯಿ ಮನೆಯಲ್ಲಿ ಚಿನ್ನ ಕದ್ದ ಮಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಯಿ ಕಾಶಿ ಯಾತ್ರೆಗೆ ತೆರಳಿದ್ದ ವೇಳೆ ಚಿನ್ನಾಭರಣವನ್ನು ಕಳ್ಳತನ ಮಾಡಿದ್ದ ಆರೋಪದ ಅಡಿ ಪುತ್ರಿಯನ್ನು ಮಾರತ್ತಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಶೋಭಾ ಬಂಧಿತ ಆರೋಪಿ. ₹21 ಲಕ್ಷ ಮೌಲ್ಯದ 258 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಯಮಲೂರಿನಲ್ಲಿ ವಾಸವಿರುವ ಆರೋಪಿಯ ತಾಯಿ ದೂರು ನೀಡಿದ್ದರು. ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದರು.

'ಶೋಭಾ ಅವರ ಪತಿ ಕ್ಯಾಬ್ ಚಾಲಕರಾಗಿ ಕೆಲಸ ಮಾಡುತ್ತಿದ್ದಾರೆ. ಕಗ್ಗದಾಸಪುರದಲ್ಲಿ ಹೊಸ ಮನೆ ನಿರ್ಮಿಸಿದ್ದರು. ಮನೆ ನಿರ್ಮಾಣಕ್ಕೆ ಸಾಲ ಮಾಡಿದ್ದರು. ಸಾಲ ತೀರಿಸಲು ಸಾಧ್ಯವಾಗದೇ ತಾಯಿಯ ಮನೆಯಲ್ಲಿ ಕಳ್ಳತನಕ್ಕೆ ಸಂಚು ರೂಪಿಸಿದ್ದರು. ದೂರುದಾರರು ಮಾರ್ಚ್ 20ರಂದು ಕಾಶಿ ಯಾತ್ರೆಗೆ ಹೋಗಿದ್ದರು. ಆ ಸಂದರ್ಭದಲ್ಲಿ ಆರೋಪಿ ಕಳ್ಳತನ ಮಾಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಈ ಬಗ್ಗೆ ಮಾರತ್ತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ತನಿಖೆ ಕೈಗೊಂಡ ಪೊಲೀಸರು ದೂರುದಾರರ ಮಗಳನ್ನು ಠಾಣೆಗೆ ಕರೆಸಿ, ಕಳ್ಳತನದ ಬಗ್ಗೆ ಹೆಚ್ಚಿನ ವಿಚಾರಣೆ ನಡೆಸಿದರು. ಆಗ ಮಗಳೇ ಕಳ್ಳತನ ನಡೆಸಿರುವುದು ಬಯಲಾಯಿತು.

ಸಂಗೀತ ಕಛೇರಿ ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 87ನೇ ಶ್ರೀ ರಾಮನವಮಿ ಸಂಗೀತೋತ್ಸವದಲ್ಲಿ ಗಾಯಕ ವಿದ್ಯಾಭೂಷಣ ಅವರು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಬುಧವಾರ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

ಅದ್ದಿಗಾನಹಳ್ಳಿ-ಪಟಾಲಮ್ಮ ದೇವಿ ಜಾತ್ರಾ ಮಹೋತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: ಅದ್ದಿಗಾನ ಹಳ್ಳಿಯಲ್ಲಿರುವ ಪಟಾಲಮ್ಮ ದೇವಿಯ ಜಾತ್ರಾಮಹೋತ್ಸವ ಬುಧವಾರ ವಿಜೃಂಭಣೆಯಿಂದ ನೆರವೇರಿತು.

ಅದ್ದಿಗಾನಹಳ್ಳಿ ಗ್ರಾಮದಲ್ಲಿ ಪಟಾಲಮ್ಮ ದೇವಿಯ ಉತ್ಸವ ಮೂರ್ತಿಗೆ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದ ಬಳಿಕ, ಅಲ್ಲಿಂದ ರಥೋತ್ಸವ ಮತ್ತು ಆರತಿಗಳ ಸಮೇತ ಹೊರಟ ಉತ್ಸವದೇವಿಯ ಮೆರವಣಿಗೆಯು ದೇವಸ್ಥಾನದ ಬಳಿಗೆ ಆಗಮಿಸಿತು.

ಇದೇ ವೇಳೆಗೆ ಅದ್ದಿಗಾನ-ಹಳ್ಳಿ, ಸಾದೇನಹಳ್ಳಿ ಹಾಗೂ ತರಹುಣಿಸೆ ಗ್ರಾಮಗಳಿಂದ ವಿಶೇಷ ರೀತಿಯಲ್ಲಿ ಅಲಂಕರಿಸಿದ್ದ ರಥಗಳನ್ನು ಮೆರವಣಿಗೆಯ ಮೂಲಕ ದೇವಸ್ಥಾನದ ಬಳಿಗೆ ತರಲಾಯಿತು.

ಅದ್ದಿಗಾನಹಳ್ಳಿ, ಸಾದೇನಹಳ್ಳಿ, ಮಾರಗೊಂಡನಹಳ್ಳಿ, ತರಹುಣಿಸೆ, ಅಗ್ರಹಾರ, ತಿಮ್ಮಸಂದ್ರ, ನಾಗದಾಸನಹಳ್ಳಿ, ರಾಜಾನುಕುಂಟೆ, ಚೊಕ್ಕನಹಳ್ಳಿ, ಅದ್ದೆವಿಶ್ವನಾಥಪುರ ಹಾಗೂ ಬೆಟ್ಟಹಳ್ಳಿ ಗ್ರಾಮಗಳಿಂದ ಮಹಿಳೆಯರು, ಆರತಿಗಳನ್ನು ಹೊತ್ತು ಮೆರವಣಿಗೆಯಲ್ಲಿ ಸಾಗಿದರು. ಉತ್ಸವದೇವಿ ಮೂರ್ತಿಯೊಂದಿಗೆ ಆರತಿಗಳನ್ನು ಹೊತ್ತ ಮಹಿಳೆಯರು, ದೇವಸ್ಥಾನದ ಸುತ್ತ ಪ್ರದಕ್ಷಿಣೆ ಹಾಕಿದ ನಂತರ ದೇವಿಗೆ ಪೂಜೆ ನೆರವೇರಿಸಿ, ಆರತಿ ಬೆಳಗಲಾಯಿತು.

ಅದ್ದಿಗಾನಹಳ್ಳಿಯಲ್ಲಿರುವ ಪಟಾಲಮ್ಮ ದೇವಿಯ ಜಾತ್ರಾಮಹೋತ್ಸವ ಬುಧವಾರ ವಿಜೃಂಭಣೆಯಿಂದ ನೆರವೇರಿತು.

ಮಾಹಿತಿ ನೀಡಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದಿಂದ ಜಮ್ಮು ಮತ್ತು ಕಾಶ್ಮೀರಕ್ಕೆ ಪ್ರವಾಸ ಪ್ಯಾಕೇಜ್‌ಗಳಲ್ಲಿ ಹೋಗಿರುವವರ ವಿವರ ನೀಡಿ' ಎಂದು ಟೂರ್ ಆಪರೇಟರ್‌ಗಳು ಮತ್ತು ಟ್ರಾವೆಲ್ ಏಜೆಂಟ್‌ಗಳಿಗೆ ಪ್ರವಾಸೋದ್ಯಮ ಇಲಾಖೆಯು ಮನವಿ ಮಾಡಿದೆ.

ಕಾಶ್ಮೀರದಲ್ಲಿ ಸಿಲುಕಿರುವವರನ್ನು ಕರೆತರಲು ಎಲ್ಲ ರೀತಿಯ ವ್ಯವಸ್ಥೆ ಮಾಡಲಾಗಿದೆ. ರಾಜ್ಯದ ಅಧಿಕಾರಿಗಳ ಸಂಪರ್ಕಕ್ಕೆ ಸಿಗದೇ ಇರುವ ಹಲವು ಪ್ರವಾಸಿಗರು ಅಲ್ಲಿರಬಹುದು. ರಾಜ್ಯದಿಂದ ಅಲ್ಲಿಗೆ ಹೋಗಿರುವ ಎಲ್ಲರನ್ನೂ ಸಂಪರ್ಕಿಸಬೇಕಿದ್ದು, ಅವರ ಮೊಬೈಲ್ ಸಂಖ್ಯೆಗಳ ವಿವರ ನೀಡಿ ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ. ಕಾಶ್ಮೀರಕ್ಕೆ ಪ್ರವಾಸಕ್ಕೆ ತೆರಳಿರುವ ರಾಜ್ಯದ ಕುಟುಂಬಗಳ ಸದಸ್ಯರು ಮತ್ತು ಸಂಬಂಧಿಗಳು ಸಹ ಇಲಾಖೆ ಆರಂಭಿಸಿರುವ ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿ ಎಂದು ಕೋರಿದೆ.

ಸಹಾಯವಾಣಿ
080-43344334
080-43344335
080-43344336
080-43344337

ಮರಕ್ಕೆ ದ್ವಿಚಕ್ರ ವಾಹನ ಡಿಕ್ಕಿ: ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾಜಿನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಕೂಲಿನಗರದಲ್ಲಿ ಬೈಕ್‌ವೊಂದು ನಿಯಂತ್ರಣ ತಪ್ಪಿ ಪಾದಚಾರಿ ಮಾರ್ಗದಲ್ಲಿರುವ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಿಂಬದಿ ಸವಾರ ಗಂಭೀರವಾಗಿ ಗಾಯಗೊಂಡಿದ್ದಾರೆ.

ಲಗ್ಗೆರೆ ಚೌಡೇಶ್ವರಿನಗರ ನಿವಾಸಿ ನಿತಿನ್(24) ಮೃತ ಸವಾರ. ಹಿಂಬದಿ ಸವಾರ ಹೃದಯ್(24) ಗಾಯಗೊಂಡಿದ್ದಾರೆ. ಹೃದಯ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು. ಬುಧವಾರ ಮುಂಜಾನೆ ಹೊರವರ್ತುಲ ರಸ್ತೆಯ ಕೂಲಿನಗರದ ಸೇತುವೆ ಬಳಿ ಈ ಘಟನೆ ನಡೆದಿದೆ.

ಸವಾರ ನಿತಿನ್ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಸ್ನೇಹಿತ ಹೃದಯ್ ಹೂವಿನ ಅಲಂಕಾರದ ಕೆಲಸ ಮಾಡುತ್ತಿದ್ದಾರೆ. ಇಬ್ಬರೂ ಹೊರವರ್ತುಲ ರಸ್ತೆಯ ಕೂಲಿನಗರ ಸೇತುವೆ ಬಳಿ ಬರುತ್ತಿದ್ದರು. ಈ ವೇಳೆ ನಿಯಂತ್ರಣ ತಪ್ಪಿದ ದ್ವಿಚಕ್ರ ವಾಹನ ರಸ್ತೆಯ ಎಡಭಾಗದ ಪಾದಾಚಾರಿ ಮಾರ್ಗಕ್ಕೆ ಡಿಕ್ಕಿ ಹೊಡೆದು ಬಳಿಕ ಮರಕ್ಕೆ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಇಬ್ಬರು ಸವಾರರು ದ್ವಿಚಕ್ರ ವಾಹನ ಸಹಿತ ರಸ್ತೆಗೆ ಬಿದ್ದಿದ್ದಾರೆ. ಈ ವೇಳೆ ಸವಾರ ನಿತಿನ್ ತಲೆಗೆ ಗಂಭೀರ ಪೆಟ್ಟು ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಿಂಬದಿ ಸವಾರ ಹೃದಯ್‌ನನ್ನು ಸ್ಥಳೀಯರು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದು ಪೊಲೀಸರು ಹೇಳಿದರು.

ದ್ವಿಚಕ್ರ ವಾಹನವನ್ನು ಅತಿವೇಗವಾಗಿ ಚಲಾಯಿಸಿದ ಪರಿಣಾಮ ನಿಯಂತ್ರಣ ತಪ್ಪಿ ಅಪಘಾತವಾಗಿರುವ ಸಾಧ್ಯತೆಯಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು. ರಾಜಾಜಿನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಲ್ವರಿಗೆ ಕಸಾಪ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಕೃಷ್ಣಪ್ಪ

ಶಿವರುದ್ರಪ್ಪ

ಪೂರ್ಣಚಂದ್ರ

ರವಿಕುಮಾರ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) 'ಡಾ.ಕೂ.ಗಿ.ಗಿರಿಯಪ್ಪ ಮತ್ತು ಶ್ರೀಮತಿ ಲಕ್ಷ್ಮೀದೇವಮ್ಮ ದತ್ತಿ ಪ್ರಶಸ್ತಿ'ಗೆ ಶಿವರುದ್ರಪ್ಪ, ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ, ಕೆ.ವಿ.ರವಿಕುಮಾರ ಹಾಗೂ ಪೂರ್ಣಚಂದ್ರ ಆಯ್ಕೆಯಾಗಿದ್ದಾರೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿಯು 2024 ಮತ್ತು 2025ನೇ ಸಾಲಿಗೆ ಈ ಆಯ್ಕೆ ಮಾಡಿದೆ. ರಾಮನಗರದ ಕೂನಮುದ್ದನ ಹಳ್ಳಿಯ ಕೂ.ಗಿ.ಗಿರಿಯಪ್ಪ ಅವರು ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸಿ, ನಿವೃತ್ತರಾಗಿದ್ದಾರೆ. ಅವರು ಸಾಹಿತ್ಯ ಪರಿಷತ್ತಿನಲ್ಲಿ ಈ ದತ್ತಿ ಪ್ರಶಸ್ತಿ ಸ್ಥಾಪಿಸಿದ್ದಾರೆ.

2024ನೇ ಸಾಲಿಗೆ ಆಯ್ಕೆಯಾಗಿರುವ ಕೂನಮುದ್ದನಹಳ್ಳಿಯ ಶಿವರುದ್ರಪ್ಪ ಅವರು ವೀರಗಾಸೆ ಕಲಾವಿದರಾಗಿದ್ದು, 70 ವರ್ಷಗಳಿಂದ ಪ್ರದರ್ಶನ ನೀಡುತ್ತಾ ಬಂದಿದ್ದಾರೆ. ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರು ಸಿವಿಲ್ ಗುತ್ತಿಗೆದಾರರಾಗಿದ್ದು, ಕೃಷಿ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರು 20ಕ್ಕೂ ಅಧಿಕ ಕೃತಿಗಳನ್ನು ರಚಿಸಿದ್ದಾರೆ.

2025ನೇ ಸಾಲಿಗೆ ಆಯ್ಕೆಯಾಗಿರುವ ಕೆ.ವಿ.ರವಿಕುಮಾರ ಅವರು ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಂಡಿದ್ದು, ಸ್ವಂತ ಪ್ರಕಾಶನ ಸಂಸ್ಥೆಯನ್ನು ನಡೆಸುವುದರೊಂದಿಗೆ ಕೃಷಿಯಲ್ಲಿ ವಿಶೇಷ ಪ್ರಯೋಗಗಳನ್ನು ಮಾಡಿ ಯಶಸ್ಸು ಕಂಡಿದ್ದಾರೆ. ಪೂರ್ಣಚಂದ್ರ ಅವರು ಭೂಗೋಳ ವಿಜ್ಞಾನ ಉಪನ್ಯಾಸಕರಾಗಿ 32 ವರ್ಷಗಳು ಕಾರ್ಯನಿರ್ವಹಿಸಿದ್ದು, ಬರಹಗಾರರಾಗಿ ಮತ್ತು ಗಾಯಕರಾಗಿ ಗುರುತಿಸಿಕೊಂಡಿದ್ದಾರೆ ಎಂದು ಕಸಾಪ ಪ್ರಕಟಣೆ ತಿಳಿಸಿದೆ.

'3 ವರ್ಷದಲ್ಲಿ ಅಂಬೇಡ್ಕರ್ ಪ್ರತಿಮೆ ನಿರ್ಮಾಣ'

ಕೆ.ಆರ್.ಪುರ: ಡಾ.ಬಿ.ಆರ್.ಅಂಬೇಡ್ಕರ್ ಅವರ 200 ಮೀಟರ್ ಎತ್ತರದ ಕಂಚಿನ ಪ್ರತಿಮೆ ನಿರ್ಮಾಣಕ್ಕೆ ಒತ್ತಾಯಿಸಿ ಪ್ರಜಾ ಭೀಮ್ ಸಂಘದ ಅಧ್ಯಕ್ಷ ಅಧ್ಯಕ್ಷ ವೈಟ್‌ಫೀಲ್ಡ್ ಮುರುಗೇಶ್ ನೇತೃತ್ವದಲ್ಲಿ ಬೀದರ್‌ನಿಂದ ಬೆಂಗಳೂರಿನವರೆಗೆ ನಡೆದ ಪಾದಯಾತ್ರೆ ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಮಾರ್ಚ್ 6ರಂದು ಬೀದರ್‌ನಿಂದ ಪಾದಯಾತ್ರೆ ಆರಂಭಗೊಂಡಿತ್ತು. ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಹೊಸಪೇಟೆ, ಚಿತ್ರದುರ್ಗ, ತುಮಕೂರು ಗಡಿ ಜಿಲ್ಲೆಗಳ ಮೂಲಕ ಬೆಂಗಳೂರಿನವರೆಗೆ ಸುಮಾರು 1035 ಕಿ.ಮೀ. ದೂರವನ್ನು 45 ದಿನದಲ್ಲಿ ಕ್ರಮಿಸಿ, ಪೂರ್ಣಗೊಂಡಿತು. ಪಾದಯಾತ್ರೆಯಲ್ಲಿ ಪಾಲ್ಗೊಂಡವರು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಅವರಿಗೆ ಮನವಿ ಸಲ್ಲಿಸಿದರು.

ಸ್ಪರ್ಧಾ ವಾಣಿ

ಗಮನಿಸಿ ಈ ಹಿಮನದಿ ನೀರಿನ ವಿದ್ಯಮಾನ



ಹಿಮನದಿಗಳ ಸಂರಕ್ಷಣಾ ವರ್ಷ

- ವಿಶ್ವಸಂಸ್ಥೆಯು 2025ಅನ್ನು ಅಂತರರಾಷ್ಟ್ರೀಯ ಹಿಮನದಿಗಳ ಸಂರಕ್ಷಣಾ ವರ್ಷವೆಂದು ಘೋಷಿಸಿದೆ.
- ಪರಿಸರ ವ್ಯವಸ್ಥೆಯಲ್ಲಿ ಹಿಮನದಿಗಳು ವಹಿಸುವ ಪ್ರಮುಖ ಪಾತ್ರ ಮತ್ತು ಹವಾಮಾನ ಕ್ರಮದ ಬಗ್ಗೆ ಜಾಗೃತಿ ಮೂಡಿಸುವ ಗುರಿ ಇದೆ.
- ವಿಶ್ವದ ಸುಮಾರು ಶೇ 70ರಷ್ಟು ಸಿಹಿನೀರನ್ನು ಸಂಗ್ರಹಿಸುವ ಹಿಮನದಿಗಳು ಹವಾಮಾನ ಬದಲಾವಣೆ ಹಾಗೂ ಜಾಗತಿಕ ಉಷ್ಣತೆ ಏರಿಕೆಯಿಂದ ತ್ವರಿತ ಕರಗುವಿಕೆಗೆ ಈಡಾಗುತ್ತಿದ್ದು, ಅವುಗಳಲ್ಲಿನ ನೀರಿನ ಮಟ್ಟ ಕರಗಿ ಸಮುದ್ರ ಮಟ್ಟ ಏರಿಕೆಗೆ ಕಾರಣವಾಗುತ್ತಿದೆ. ಇದರಿಂದ ಕರಾವಳಿ ಜನಸಂಖ್ಯೆಗೂ ಅಪಾಯಕ್ಕೆ ಕಾರಣವಾಗಿದೆ.
- ಹಿಮನದಿಗಳು ಹಿಮದಿಂದ ರೂಪುಗೊಂಡ ದೊಡ್ಡ ಮಂಜುಗಡ್ಡೆಯ ದ್ರವ್ಯರಾಶಿಗಳಾಗಿವೆ. ಅವುಗಳ ಅಡಿಯಲ್ಲಿ ನೀರು ಹರಿಯುತ್ತಿರುತ್ತದೆ ಗುರುತ್ವ ಬಲದಿಂದ ಸೂಕ್ಷ್ಮ ಚಲನೆಗೆ ಈಡಾಗುತ್ತವೆ.
- 'ರಾಂಡೋಲ್ಫ್ ಗ್ಲೇಸಿಯರ್ ಇನ್ವೆಂಟರಿ' ಅಂದಾಜಿನ ಪ್ರಕಾರ ವಿಶ್ವಾದ್ಯಂತ ಸುಮಾರು 2,75,000 ಹಿಮನದಿಗಳಿವೆ. ಈ ಹಿಮನದಿಗಳು ಜಾಗತಿಕ ಜಲಚಕ್ರದ ರಕ್ಷಣೆಗೆ, ನಿರಂತರ ಚಲನೆಗೆ ಮತ್ತು ವಿವಿಧ ಪರಿಸರ ವ್ಯವಸ್ಥೆ ಮತ್ತು ಮಾನವ ಸಮುದಾಯಗಳನ್ನು ಬೆಂಬಲಿಸಲು ಅಗತ್ಯವಾಗಿವೆ.
- ಜಾಗತಿಕ ತಾಪಮಾನ ಹೆಚ್ಚಿದಂತೆ ಹಿಮನದಿಗಳು ಕರಗುವುದರಿಂದ ಹಿಮನದಿ ಸರೋವರಗಳು ರಚನೆಯಾಗಿ ಅವುಗಳ ಸ್ಫೋಟಕ ಪ್ರವಾಹಗಳಿಗೆ (GLOF) ಕಾರಣವಾಗಬಹುದು.
- GLOF ಗಳು ವಿಧ್ವಂಸಕವಾಗಿದ್ದು, ಅಪಾರ ಪ್ರಮಾಣದ ಜೀವ ಹಾನಿ ಹಾಗೂ ಆಸ್ತಿ ಹಾನಿಗೆ ಕಾರಣವಾಗಬಹುದು.
- ಭೂಮಿಯ 'ಮೂರನೇ ಧ್ರುವ' ಎಂದು ಕರೆಯಲ್ಪಡುವ 'ಹಿಂದೂ ಕುಶ್ ಹಿಮಾಲಯ ಪ್ರದೇಶ' ಧ್ರುವ ಪ್ರದೇಶಗಳನ್ನು ಹೊರತುಪಡಿಸಿ ಅತಿ ಹೆಚ್ಚು ಹಿಮನದಿಗಳನ್ನು ಹೊಂದಿರುವ ಖ್ಯಾತಿ ಹೊಂದಿದೆ.
- ಈ ಪ್ರದೇಶವು ಸಿಂಧೂ ಮತ್ತು ಗಂಗಾ ಸೇರಿ ಪ್ರಮುಖವಾದ ಹತ್ತು ನದಿಗಳ ನೀರಿನ ಮೂಲವಾಗಿದೆ. 1.3 ಶತಕೋಟಿಗೂ ಹೆಚ್ಚು ಜನರು ಈ ನದಿಗಳನ್ನು ಕುಡಿಯುವ ನೀರು, ಕೃಷಿ ಮತ್ತು ಶಕ್ತಿಗಾಗಿ ಅವಲಂಬಿಸಿದ್ದಾರೆ.
- ಭಾರತೀಯ ಹಿಮಾಲಯ ಪ್ರದೇಶದಲ್ಲಿ ಸುಮಾರು 9,575 ಹಿಮನದಿಗಳು ಇವೆ. ಆದರೆ ಹೆಚ್ಚುತ್ತಿರುವ ತಾಪಮಾನ ಮತ್ತು ಹಿಮಪಾತ ಕುಸಿತದಿಂದ ಅವುಗಳ ಅಸ್ತಿತ್ವಕ್ಕೆ ಕುತ್ತೊದಗಿ ಬಂದಿದೆ.
- ಪಶ್ಚಿಮ ಹಿಮಾಲಯದ ಹಿಮನದಿಗಳು ವೇಗವಾಗಿ ಕರಗುತ್ತಿದ್ದರೆ,ಕಾರಕೋರಂ ಪ್ರದೇಶದಲ್ಲಿನ ಹಿಮನದಿಗಳು 1970 ರ ದಶಕದಿಂದ ಸ್ಥಿರವಾಗಿವೆ. ಈ ವಿದ್ಯಮಾನವನ್ನು 'ಕಾರಕೋರಂ ಅಸಂಗತತೆ' (Karakoram Anomaly) ಎಂದು ಕರೆಯಲಾಗುತ್ತದೆ.
- 'ಕಾರಕೋರಂ ಅಸಂಗತತೆ'ಯನ್ನು ಪರಿಗಣಿಸಿದಾಗ ಹಿಮನದಿಗಳು ಹವಾಮಾನ ಬದಲಾವಣೆಯ ಹೊರತಾಗಿಯೂ ಅವು ಇರುವ ಎತ್ತರ, ಸ್ಥಳಾಕೃತಿ ಮತ್ತು ಶಿಲಾಖಂಡರಾಶಿಗಳ ಹೊದಿಕೆಯಂಥ ಹವಾಮಾನೇತರ ಅಂಶಗಳ ಪ್ರಭಾವಕ್ಕೆ ಒಳಗಾಗುತ್ತವೆ ಎಂಬ ನಿರ್ಣಯಕ್ಕೆ ಬರಲಾಗಿದೆ.
- ಹಿಮನದಿಗಳು, ಹಿಮನದಿ ಸರೋವರಗಳಾಗಿ ಬದಲಾಗುವ ಪ್ರಕ್ರಿಯೆ GLOF ಅಪಾಯವನ್ನು ಹೆಚ್ಚಿಸುತ್ತದೆ. ಇದರಿಂದ ಜಲವಿದ್ಯುತ್ ಯೋಜನೆಗಳು ಸೇರಿದಂತೆ ಮೂಲಸೌಕರ್ಯಗಳು ಹಾಗೂ ಜನ ಮತ್ತು ಜಾನುವಾರು ಸಮುದಾಯಗಳು ಅಪಾಯಕ್ಕೆ ಸಿಲುಕುತ್ತವೆ.
- ಈ ರೀತಿಯ ಸವಾಲುಗಳನ್ನು ಎದುರಿಸಲು ವಿಶ್ವಸಂಸ್ಥೆಯು 2025 ರಿಂದ 2034 ರವರೆಗೆ 'ಕ್ರಯೋಸ್ಫಿಯರಿಕ್ ವಿಜ್ಞಾನಕ್ಕಾಗಿ ದಶಕದ ಕ್ರಿಯೆ' ಎಂಬ ಜಾಗತಿಕ ಮೇಲ್ವಿಚಾರಣೆ ಹಾಗೂ ಸಂಶೋಧನೆ ಆಯೋಜಿಸುವ ಗುರಿಯನ್ನು ಹೊಂದಿದೆ.
- ಭಾರತ ಕೂಡ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಪರಿಹರಿಸಲು ಹಾಗೂ ಹಿಮಾಲಯ ಪರಿಸರ ವ್ಯವಸ್ಥೆಯನ್ನು ಉಳಿಸಿಕೊಳ್ಳಲು 'ರಾಷ್ಟ್ರೀಯ ಯೋಜನೆ' ಪ್ರಾರಂಭಿಸಿದೆ.

ವಿಶ್ವ ತೇವಭೂಮಿ ದಿನ 2025

- ಪ್ರತಿ ವರ್ಷ ಫೆಬ್ರವರಿ 2 ರಂದು ವಿಶ್ವ ತೇವಭೂಮಿ ದಿನವನ್ನು ಆಚರಿಸಲಾಗುತ್ತದೆ. ಈ ದಿನವು ಜೌಗು ಪ್ರದೇಶಗಳ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿದೆ.
- ಈ ವರ್ಷದ 'ನಮ್ಮ ಸಾಮಾನ್ಯ ಭವಿಷ್ಯಕ್ಕಾಗಿ ತೇವಭೂಮಿಗಳನ್ನು ರಕ್ಷಿಸೋಣ' ಎಂಬ ಧ್ಯೇಯವಾಕ್ಯದಡಿ ಆಚರಿಸಲಾಯಿತು.
- ಭಾರತ ಈಚೆಗೆ ನಾಲ್ಕು ಹೊಸ ರಾಮ್‌ಸರ್ ತಾಣಗಳನ್ನು ತೇವ ಭೂಮಿಗಳ ಪಟ್ಟಿಗೆ ಸೇರಿಸಿದೆ. ಈ ತಾಣಗಳೆಂದರೆ; ಜಾರ್ಖಂಡ್‌ನ ಉಧ್ವಾ ಸರೋವರ, ತಮಿಳುನಾಡಿನ ತೀರ್ಥಂಗಲ್ ಮತ್ತು ಸಕ್ಕರಕೊಟ್ಟೈ ಮತ್ತು ಸಿಕ್ಕಿಂನ ಖೇಚಿಯೋಪಲ್ರಿ ಜೌಗು ಪ್ರದೇಶಗಳು.
- ಜೌಗು ಪ್ರದೇಶಗಳು ನೀರು ಶಾಶ್ವತವಾಗಿ ಅಥವಾ ಕಾಲೋಚಿತವಾಗಿ ಮಣ್ಣನ್ನು ಆವರಿಸುವ ಪ್ರದೇಶಗಳಾಗಿದ್ದು, ಅವುಗಳಲ್ಲಿ ಜೌಗು ಪ್ರದೇಶಗಳು ಮತ್ತು ಸರೋವರಗಳು ಸೇರಿವೆ. ಜೀವವೈವಿಧ್ಯಗಳ ಸಂರಕ್ಷಣೆ, ಪ್ರವರ್ಧಮಾನಕ್ಕೆ ಜೌಗು ಪ್ರದೇಶಗಳು ನಿರ್ಣಾಯಕ.
- ಜೌಗು ಪ್ರದೇಶಗಳು ವಲಸೆ ಹಕ್ಕಿಗಳು ಮತ್ತು ಜಲಚರಗಳು ಸೇರಿ ಹಲವು ಜಾತಿಗಳಿಗೆ ಆವಾಸಸ್ಥಾನಗಳನ್ನು ಒದಗಿಸುತ್ತವೆ. ನೀರಿನ ಸಂರಕ್ಷಣೆಗೂ ಸಹಾಯ ಮಾಡುತ್ತವೆ. ಅವು ಅಂತರ್ಜಲವನ್ನು ಮರುಪೂರಣಗೊಳಿಸುತ್ತವೆ ಮತ್ತು ಪ್ರವಾಹವನ್ನು ನಿಯಂತ್ರಿಸುತ್ತವೆ.
- ಹೆಚ್ಚುವರಿಯಾಗಿ, ಸ್ಥಳೀಯ ಮೀನುಗಾರಿಕೆ ಬೆಂಬಲಿಸುತ್ತವೆ. ಇಂಗಾಲದ ಸಿಂಕ್‌ಗಳಾಗಿ ಕಾರ್ಯನಿರ್ವಹಿಸುತ್ತವೆ, ತಾವು ಬಿಡುಗಡೆ ಮಾಡುವುದಕ್ಕಿಂತ ಹೆಚ್ಚಿನ ಇಂಗಾಲವನ್ನು ಹೀರಿಕೊಳ್ಳುತ್ತವೆ.
- 'ರಾಮ್ಸರ್ ಸಮಾವೇಶ' 1971 ರಲ್ಲಿ ಇರಾನ್‌ನ ರಾಮ್ಸರ್‌ನಲ್ಲಿ ಸ್ಥಾಪಿಸಲಾಯಿತು. ಇದು ಜೌಗು ಪ್ರದೇಶಗಳನ್ನು ಸಂರಕ್ಷಿಸುವತ್ತ ಗಮನಹರಿಸಿದ ಅಂತರರಾಷ್ಟ್ರೀಯ ಒಪ್ಪಂದವಾಗಿದೆ.
- ಈ ಸಮಾವೇಶವು ನೈಸರ್ಗಿಕ ಮತ್ತು ಕೃತಕ ಜೌಗು ಪ್ರದೇಶಗಳನ್ನು ಗುರುತಿಸುತ್ತದೆ. ರಾಮ್ಸರ್ ತಾಣಗಳು ಪರಿಸರ ಮಹತ್ವಕ್ಕಾಗಿ ಅಂತರರಾಷ್ಟ್ರೀಯ ಮನ್ನಣೆ ಪಡೆಯುತ್ತವೆ. ಜೀವವೈವಿಧ್ಯತೆ ಮತ್ತು ಪರಿಸರ ವ್ಯವಸ್ಥೆಯ ಆರೋಗ್ಯವನ್ನು ಖಚಿತಪಡಿಸಿಕೊಳ್ಳಲು ರಕ್ಷಿಸಲಾಗುತ್ತದೆ.
- ಭಾರತ 89 ರಾಮ್‌ಸರ್ ತಾಣಗಳನ್ನು ಹೊಂದಿದೆ. ತಮಿಳುನಾಡಿನಲ್ಲಿ ಅತಿ ಹೆಚ್ಚು, 20 ರಾಮ್‌ಸರ್ ತಾಣಗಳಿವೆ. ಪಂಜಾಬ್ 6 ಪ್ರಮುಖ ಜೌಗು ಪ್ರದೇಶಗಳಿಗೆ ನೆಲೆಯಾಗಿದೆ, ಇದರಲ್ಲಿ ಉತ್ತರ ಭಾರತದಲ್ಲಿ ಅತಿ ದೊಡ್ಡದಾದ 'ಹರಿಕೆ ಪಟ್ಟನ್' ಸೇರಿದೆ. ಇತರ ಪ್ರಮುಖ ಜೌಗು ಪ್ರದೇಶಗಳಲ್ಲಿ ಕಾಂಜ್ಲಿ, ರೋಪರ್ ಮತ್ತು ನಂಗಲ್ ಸೇರಿವೆ. ಈ ಜೌಗು ಪ್ರದೇಶಗಳು ಮೀನು, ಆಮೆ ಮತ್ತು ಪಕ್ಷಿಗಳು ಸೇರಿ ವಿವಿಧ ವನ್ಯಜೀವಿಗಳ ಜೀವನ ಬೆಂಬಲಿಸುತ್ತವೆ.
- ಜೌಗು ಪ್ರದೇಶಗಳು ಮಾನವ ಚಟುವಟಿಕೆಗಳಿಂದ, ಅಕ್ರಮ ಮರಳು ಗಣಿಗಾರಿಕೆಯಿಂದ, ಕಾರ್ಖಾನೆಗಳಿಂದ ಬರುವ ಕೈಗಾರಿಕಾ ತ್ಯಾಜ್ಯ ಗಳಿಂದ, ಕೀಟನಾಶಕಗಳ ಬಳಕೆಯಿಂದ, ಹವಾಮಾನ ಬದಲಾವಣೆಗಳಿಂದ, ತಾಪಮಾನ ಏರಿಕೆಯಿಂದ ಬೆದರಿಕೆಗಳನ್ನು ಎದುರಿಸುತ್ತಿವೆ.

ಜಾಗತಿಕ ನೀರಿನ ಅಂತರ ವರದಿ

- ಇತ್ತೀಚಿನ ಅಧ್ಯಯನಗಳು ಜಾಗತಿಕ ನೀರಿನ ಅಂತರದ ಬಗ್ಗೆ ಆತಂಕಕಾರಿ ಮುನ್ಸೂಚನೆಗಳನ್ನು ಬಹಿರಂಗಪಡಿಸಿವೆ. 2025ರ ಹೊತ್ತಿಗೆ, ವಾರ್ಷಿಕವಾಗಿ ಅಂದಾಜು 458 ಶತಕೋಟಿ ಘನ ಮೀಟರ್ ನೀರಿನ ಅಂತರ ಪತ್ತೆಯಾಗಿದೆ.
- ಈ ಅಂತರ ನವೀಕರಿಸಬಹುದಾದ ನೀರಿನ ಲಭ್ಯತೆ ಮತ್ತು ನೀರಿನ ಬಳಕೆಯ ನಡುವಿನ ವ್ಯತ್ಯಾಸ ಉಲ್ಲೇಖಿಸುತ್ತವೆ, ಇದು ಆರೋಗ್ಯಕರ ಜಲಚರ ಪರಿಸರವನ್ನು ಕಾಪಾಡಿಕೊಳ್ಳಲು ಅವಶ್ಯಕವಾಗಿದೆ.
- ಹವಾಮಾನ ಬದಲಾವಣೆ ತೀವ್ರಗೊಳ್ಳುತ್ತಿದ್ದಂತೆ, ನೀರಿನ ಅಂತರ ಹೆಚ್ಚಾಗುವ ನಿರೀಕ್ಷೆ ಇದೆ. 1.5 ಡಿಗ್ರಿ ಸೆಲ್ಸಿಯಸ್ ತಾಪಮಾನ ಏರಿಕೆ ಸನ್ನಿವೇಶದಲ್ಲಿ, ಈ ಅಂತರಗಳು ಶೇ 6ರಷ್ಟು ಹೆಚ್ಚಬಹುದು. 3 ಡಿಗ್ರಿ ಸೆಲ್ಸಿಯಸ್‌ನಲ್ಲಿ ಈ ಅಂಕಿ–ಅಂಶ ಶೇ 15 ರಷ್ಟು ತಲುಪಲಿವೆ.
- ನೀರಿನ ಅಂತರಗಳು ನೀರಿನ ಕೊರತೆಯ ನಿರ್ಣಾಯಕ ಸೂಚಕ ಗಳಾಗಿವೆ. ನವೀಕರಿಸಬಹುದಾದ ನೀರಿನ ಮೂಲಗಳು ಮತ್ತು ಬಳಕೆಯ ಅಗತ್ಯಗಳನ್ನು ಆಧರಿಸಿ ಅವುಗಳನ್ನು ಲೆಕ್ಕಹಾಕಲಾಗುತ್ತದೆ.
- ನೀರಿನ ಅಂತರಗಳು ಜಾಗತಿಕವಾಗಿ ಏಕರೂಪವಾಗಿಲ್ಲ ಮತ್ತು ಪ್ರದೇಶಗಳಲ್ಲಿ ಬದಲಾಗುತ್ತವೆ. ಭವಿಷ್ಯದಲ್ಲಿ ಪ್ರತಿ ಖಂಡವು ನೀರಿನ ಲಭ್ಯತೆಗೆ ಸಂಬಂಧಿಸಿದ ಸವಾಲುಗಳನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಇವು ಬಹಿರಂಗಪಡಿಸಿವೆ.
- ಭಾರತ ಮತ್ತು ಚೀನಾದಂತಹ ದೇಶಗಳು ನೀರಿನ ಅಂತರದಲ್ಲಿ ಅತಿದೊಡ್ಡ ಹೆಚ್ಚಳವನ್ನು ಕಾಣುವ ನಿರೀಕ್ಷೆಯಿದೆ. ಉದಾಹರಣೆಗೆ, 1.5 ಡಿಗ್ರಿ ಸೆಲ್ಸಿಯಸ್ ತಾಪಮಾನ ಏರಿಕೆಯಿಂದ ಭಾರತ ವರ್ಷಕ್ಕೆ ಹೆಚ್ಚುವರಿಯಾಗಿ 11.1 ಘನ ಕಿ.ಮೀ. ಎದುರಿಸಬೇಕಾಗುತ್ತದೆ.
- ಸೌದಿ ಅರೇಬಿಯಾದಂಥ ಕೆಲವು ಪ್ರದೇಶಗಳು ಆರಂಭದಲ್ಲಿ ನೀರಿನ ಕೊರತೆ ಕಡಿಮೆ ಮಾಡಬಹುದು, ಆದರೆ, ಹೆಚ್ಚಿನ ತಾಪಮಾನ ಸನ್ನಿವೇಶಗಳಲ್ಲಿ ತೀವ್ರ ಏರಿಕೆಯ ನಿರೀಕ್ಷೆ ಇದೆ.
- ನೀರಿನ ಅಂತರದಿಂದ ಗಂಗಾ–ಬ್ರಹ್ಮಪುತ್ರ ಜಲಾನಯನ ಪ್ರದೇಶಗಳಲ್ಲಿ ಹೆಚ್ಚು ಪರಿಣಾಮ ಬೀರುತ್ತದೆ. ಇದೇ ರೀತಿಯ ಸ್ಥಿತಿ ಸಿಂಧೂ ಮತ್ತು ಮಿಸ್ಸಿಸ್ಸಿಪ್ಪಿ–ಮಿಸೌರಿ ನದಿ ವ್ಯವಸ್ಥೆಗಳಲ್ಲೂ ಇದೆ.
- ನೀರಿನ ಅಂತರವನ್ನು ನಿವಾರಿಸಲು ನೀರಿನ ಸಂಗ್ರಹಣೆಯನ್ನು ಹೆಚ್ಚಿಸುವುದು ಮತ್ತು ಉಪ್ಪುನೀರಿನ ನಿರ್ಮೂಲನ ತಂತ್ರಗಳನ್ನು ಬಳಸುವುದು, ಸಂಸ್ಕರಿಸಿದ ತ್ಯಾಜ್ಯ ನೀರನ್ನು ಮರುಬಳಕೆ ಮಾಡುವುದು, ಕೊರತೆ ಇರುವ ಪ್ರದೇಶಗಳಿಗೆ ಹೆಚ್ಚುವರಿ ನೀರು ಇರುವ ಪ್ರದೇಶಗಳಿಂದ ನೀರನ್ನು ವರ್ಗಾಯಿಸುವುದು ಈ ರೀತಿಯ ಕ್ರಮಗಳನ್ನು ಅನುಸರಿಸಬೇಕಿದೆ. ❖

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಭಾರತದ ಕೆಳಗಿನ ಯಾವ ರಾಜ್ಯದಲ್ಲಿ ಕೋಲ್ಮಿಂಚಿನ ಘಟನೆಗಳು ಹೆಚ್ಚಾಗಿ ಕಂಡುಬರುತ್ತದೆ?
ಎ. ಒಡಿಶಾ.
ಬಿ. ನಾಗಾಲ್ಯಾಂಡ್.
ಸಿ. ಉತ್ತರ ಪ್ರದೇಶ.
ಡಿ. ಮಧ್ಯಪ್ರದೇಶ.
ಉತ್ತರ : ಎ

2. ಕೆನಡಾದ ಯಾವ ಪ್ರದೇಶಗಳಲ್ಲಿ ಕಾಡ್ಗಿಚ್ಚುಗಳ ಘಟನೆಗಳು ಹೆಚ್ಚಾಗಿ ಕಂಡುಬಂದಿದೆ?
1. ಬ್ರಿಟಿಷ್ ಕೊಲಂಬಿಯಾ.
2. ಆಲ್ಬರ್ಟಾ.
3. ಒಂಟಾರಿಯೋ.
4. ನೋವಾ ಸ್ಕಾಟಿಯಾ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 1, 2, 3 ಮತ್ತು 4
ಸಿ. 2 ಮತ್ತು 3 ಡಿ. 3 ಮತ್ತು 4.
ಉತ್ತರ : ಬಿ

3. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಸಂವಿಧಾನದ ಅನುಚ್ಛೇದ 32 ಅಡಿಯಲ್ಲಿ ಸುಪ್ರೀಂಕೋರ್ಟ್‌ಗೆ ಯಾವುದೇ ಸಂಬಂಧಪಟ್ಟ ವ್ಯಕ್ತಿ ಅಥವಾ ಬೇರೆಯವರು ಸಹ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಬಹುದು.
ಬಿ. ಸಂವಿಧಾನದ ಅನುಚ್ಛೇದ 226 ಅಡಿಯಲ್ಲಿ ಹೈಕೋರ್ಟ್‌ಗೆ ಯಾವುದೇ ಸಂಬಂಧಪಟ್ಟ ವ್ಯಕ್ತಿ ಅಥವಾ ಬೇರೆಯವರು ಸಹ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಬಹುದು.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ : ಡಿ

4. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಸಾರ್ವಜನಿಕ ಹಿತಾಸಕ್ತಿ ಅರ್ಜಿ ಎಂದರೆ ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ ವಿಷಯಗಳಲ್ಲಿ ಜನರ ಹಿತರಕ್ಷಣೆಗಾಗಿ ಹೂಡಲಾದ ಅರ್ಜಿಗಳಾಗಿವೆ.
ಬಿ. ಸಂವಿಧಾನದ ವಿಧಿ 32 ರನ್ವಯ ಸಾರ್ವಜನಿಕ ಹಿತಾಸಕ್ತಿ ಅರ್ಜಿಯು ಸರ್ವೋಚ್ಛ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ವಿಸ್ತರಣೆಯಾಗಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ : ಡಿ

5. ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ದುರ್ಬಲ ವರ್ಗಗಳ ಮೂಲಭೂತ ಹಕ್ಕುಗಳ ಅತಿಕ್ರಮಣಗಳ ವಿರುದ್ಧ ಇದನ್ನು ಸಲ್ಲಿಸಬಹುದು.
ಬಿ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿರುದ್ಧದ ದೌರ್ಜನ್ಯಗಳ ವಿರುದ್ಧ ಇದನ್ನು ಸಲ್ಲಿಸಲು ಬರುವುದಿಲ್ಲ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ : ಎ

6. ಕಾರ್ಯತಂತ್ರದ ಸಹಭಾಗಿತ್ವ ಮಂಡಳಿಯ ಮಾತುಕತೆಯ ವಿವಿಧ ಹಂತಗಳನ್ನು ಗುರುತಿಸಿ?
1. ಶೃಂಗಸಭೆಯ ಮಟ್ಟದಲ್ಲಿ ಎರಡು ರಾಷ್ಟ್ರಗಳ ಮುಖ್ಯಸ್ಥರು ಮಾತುಕತೆಯಲ್ಲಿ ಭಾಗವಹಿಸುತ್ತಾರೆ.
2. ಶೃಂಗಸಭೆಯ ಮಟ್ಟದ ನಂತರ ಸಚಿವರ ಹಂತದ ಮಾತುಕತೆಗೆ ವೇದಿಕೆಯನ್ನು ಕಲ್ಪಿಸಲಾಗಿದೆ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.
ಉತ್ತರ : ಸಿ

7. ಸೌದಿ ಅರೇಬಿಯಾ ಕೆಳಗಿನ ಯಾವ ರಾಷ್ಟ್ರಗಳೊಂದಿಗೆ ಕಾರ್ಯತಂತ್ರದ ಸಹಭಾಗಿತ್ವ ಒಪ್ಪಂದವನ್ನು ಸಹಿ ಹಾಕಿದೆ?
1. ಅಮೇರಿಕಾ.
2. ಯುನೈಟೆಡ್ ಕಿಂಗ್ಡಮ್.
3. ಫ್ರಾನ್ಸ್.
4. ಚೀನಾ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 2, 3 ಮತ್ತು 4 ಬಿ. 1, 2 ಮತ್ತು 3
ಸಿ. 1, 2, 3 ಮತ್ತು 4 ಡಿ. 3 ಮತ್ತು 4
ಉತ್ತರ : ಎ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

Unit-1 Prose : A Hero

Know about the Author

R.K.Narayan is widely considered to be one of India's greatest English language novelists known for simple and unpretentious writing style. He is best known for his works set in the fictional South Indian town of Malgudi. One of his works include Swami and his Friends, The Bachelor of Arts, The English Teacher and The Financial Expert. His novel, The Guide was adapted for film, it won Sahitya Academy Award. He highlights, social content and provides a feel for his characters through everyday life. He was nominated to the Rajya Sabha, the upper house of India's parliament.

Question and Answer

1) Swami's father drew his attention to a report in the newspaper. What was the report about?

Ans:- The report was about the bravery of a village lad who came face to face with a tiger while returning home by jungle path and fought the tiger to climb the tree where he stayed half a day till some people came that way and killed the tiger.

2) The report said that the boy (who fought with the tiger) stayed on the tree for half a day. Why did he do so?

a) He wanted to watch the tiger from the top of tree
b) He wanted someone to kill the tiger
c) He wanted to take rest for some time

Ans:- (b) He wanted someone to kill the tiger

3) Swami said that a very strong and grown up person might have fought with a tiger. Do you think he made this remark out of his

(a) Experience, (b) Wisdom, (c) Belief?
(Choose the most appropriate word)

Ans:- (c) Belief

4) "Can you prove you have courage?" Swami's father said. (Answer the following questions)

a) Was he joking? Or, serious?
b) Was it a challenge? Or, a command

Ans:- (a) Swami's father was serious.
(b) It started as a challenge, but soon became a command when Swami tried to escape from it.

5) The place where Swami usually slept was …………………. (Fill in the blank)

Ans:- Beside his granny in the passage.

6) What is disgraceful, according to Swami's father?

Ans:- According to Swami's father it is disgraceful for a boy in second form (aged 12 years and 8th year of study in school as per classification of students according to their age in England) to sleep beside granny or mother like a baby.

7) What do you think was the practice of granny before she went to bed?

Ans: Granny used to tell stories to Swami before she went to bed.

8) Was Swami really sleeping? Or was he pretending?

Ans: Swami Was not really sleeping, he was pretending to sleep by covering his face with the blanket and snored under it.

9) To Swami, his father looked like an ……………. (Fill in the blank)

Ans: To Swami, his father looked like an apparition in the semi darkness of the passage.

10) Why do you think Swami looked at his granny and his mother while following his father to the room?

Ans: Swami looked at his granny and mother with an appeal to save him from his father's challenge to make him sleep alone in the office room.

11) "There might be scorpions before your law books", said Swami.

a) Had he seen them earlier? Or were there scorpions really?
b) Was it a trick to escape from his father?
(Answer all the questions)

Ans: a) Swami had not seen any scorpions earlier. There may not be any scorpions really.
b) Yes, absolutely It was a trick to escape from his father.

12) Swami wished that the tiger had not spared the boy, which means………
(Choose the right answer)
(1) He did not want the boy to be alive.
(2) He did not want the tiger to be alive.

Ans: He did not want the boy to be alive.

13) As silence deepened in the room, what was Swami reminded of?

Ans: Swami remembered all the stories of devils and ghosts he had heard in his life. Swami remembered his close friend seeing devil in banyan tree, devil making Muniswami's father spit blood by slapping and many other such stories.

14) Which place in the room did Swami think was safe, compact and reassuring?

Ans: Swami felt that the place under the bench is compact, safe and re-assuring.

15) Swami touched…………..in the room instead of granny. (Fill in the blank appropriately)

Ans: the wooden leg of the bench

Expl: Swami saw frightening dream of tiger chasing him and he is unable to escape. Swami put his hand out to touch reassuring granny's presence at his side, as was his habit; instead he touched the wooden leg of the bench as he was alone in office room.

16) Swami saw a moving creature in the room. Was it……………. (Fill in the blank)

(a) his shadow , (b) a scorpion ,
(c) a man. ?

Answer: (c) A man?

17) Who cried, "Aiyo! Something has bitten me?"

Ans: The burglar bitten by Swami cried in agony with a thundering cry, "Aiyo! Something has bitten me".

18) Who did father, cook and a servant stumble upon?

Ans: The father of Swami, their servant and cook stumbled on the burglar who lay with a bleeding ankle amidst the furniture in the office room.

19) Why were congratulations showered on Swami?

Ans: Swami was showered with congratulations as he helped the police to arrest one of the most notorious house breakers of the district by biting into his flesh. *(Contd…..)*

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕೆ ಇಲ್ಲಿ ಸ್ಕ್ಯಾನ್ ಮಾಡಿ

II PUC- BIOLOGY

REPRODUCTION

Reproduction in flowering plants

1. Draw a neat diagram of a flower and label its parts.

Ans:- *Diagram of a flower with its parts labelled*



2. Draw a neat diagram of a stamen and carpel of a flower and label its parts.

Ans:- *Diagram of stamen and carpel of a flower with its parts labelled*

Stamen



3. What is a stamen?

Ans:- The little stalks with swollen tops just indside the ring of the petal in a flower are stamens. They produce pollen grains. Its two parts are filament and anther.

4. What is a carpel?

Ans:- Carpel is the male reproductive organ of the plant. It is flask like structure present in the centre of the flower. Its three parts are stigma, style and ovary.

5. What is pollination?

Ans:- The transfer of the pollen grains from the anther of a stamen to the stigma of a carpel is called pollination.

6. What is Self - pollination?

Ans:- The transfer of the pollen grains from the anther of a stamen of a flower to the stigma of a carpel of the same flower is called self - pollination.



The above figure shows the process of self -pollination.

7. What is Cross – pollination?

Ans:- The transfer of the pollen grains from the anther of a stamen of a flower to the stigma of a carpel of another flower is cross - pollination.



8. What will become to the ovules and the ovary in a flower after fertilization?

Ans:- Ovules become the seeds and the ovary forms the fruit after fertilization.

9. Write a difference between the pollination and fertilization.

Ans:- Pollination is the transfer of the pollen grains from anther to the stigma of a flower and fertilization is the fusion of male and female gametes.

10. Differentiate between the pollen grain and the ovule.

Ans:- Pollen grains are produced by the anthers and they contain male germ cells and ovules are produced by the ovary and they contain female germ cells.

11. State the difference between unisexual and bisexual flowers.

Ans:- Unisexual flowers possess either male or female reproductive organs.

Bisexual flowers possess both male and female reproductive organs.

12. What is receptacle?

Ans:- The base of a flower to which all the parts of a flower are attached is called a receptacle.

13. What are sepals?

Ans:- The green, leaf like parts in the outermost circle of a flower are sepals. All the sepals taken together are called calyx. The function of sepals (or calyx) is to protect the flower in its initial stages when it is in the form of a bud.

Extra informative question:

1. Vegetative propagation is the term given to any asexual means of starting new plants. New plants are obtained from the parts of old

plants like stems, roots and leaves, without the help of any reproductive organ. Some plants growers have developed artificial methods of vegetative propagation like cutting, layering and grafting which are used in agriculture and horticulture.

Q: i) Name the method of vegetative propagation in Rose and Jasmine plant.

ii) "Vegetative propagation produces better plants with higher yield in ornamental crops." To justify the statement give four reasons.

Ans:- i) Grafting in Rose and Layering in Jasmine.
ii) a) It is cheaper, easier and more rapid method of propagation.
b) Better quality of plants can be maintained.
c) Produce seeds with prolonged period of dormancy.
d) Traits or characters of the parent plant are preserved.

2. Give the step by step description of the sexual reproduction taking place in plants.

Ans:- The sexual reproduction in plants takes place in the following steps –

(a) The male organ of the flower called 'stamen' makes the male gametes (male sex cells) of the plant. These male gametes are present in pollen grains. *(Contd……)*

‘ವೈಟ್‌ಬೋರ್ಡ್’ ವಾಣಿಜ್ಯ ಸಂಚಾರ ದೂರು ಕೊಟ್ಟರೂ ಇಲ್ಲ ಕಡಿವಾಣ

ಕ್ರಮ ಕೈಗೊಳ್ಳದ ಇಲಾಖೆ: ಆರೋಪ • ಕೋರ್ಟ್ ಮೆಟ್ಟಿಲೇರುವ ಎಚ್ಚರಿಕೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಖಾಸಗಿ ಬಳಕೆಯ ವಾಹನಗಳನ್ನು ವಾಣಿಜ್ಯ ಬಳಕೆಗೆ ಬಳಸುವುದಕ್ಕೆ ಯಾವುದೇ ನಿಯಂತ್ರಣ ಬಿದ್ದಿಲ್ಲ. ಸಾರಿಗೆ ಇಲಾಖೆಗೆ ದೂರು ನೀಡಿದರೂ ಇಲಾಖೆ ಕ್ರಮ ಕೈಗೊಂಡಿಲ್ಲ. ಇದರಿಂದ ಸರ್ಕಾರದ ಬೊಕ್ಕಸಕ್ಕೂ ನಷ್ಟವಾಗುತ್ತಿದೆ, ವಾಣಿಜ್ಯ ವಾಹನಗಳಿಗೂ ನಷ್ಟವಾಗುತ್ತಿದೆ.

‘ಚಲನಚಿತ್ರ ವಾಹನ ಚಾಲಕರ ಸಂಘ, ಕರ್ನಾಟಕ ಟೆಲಿವಿಷನ್ ಅಸೋಸಿಯೇಷನ್ ಮತ್ತು ಕ್ಯಾಂಪರ್ ವ್ಯಾನ್ ಸಂಸ್ಥೆಗಳು ರಾಜಾರೋಷವಾಗಿಯೇ ಖಾಸಗಿ ಬಳಕೆಯ ವಾಹನಗಳನ್ನು ವಾಣಿಜ್ಯ ಬಳಕೆ ಮಾಡುತ್ತಿವೆ. ಆರ್‌ಟಿಒ ಅಧಿಕಾರಿಗಳಿಗೆ ವಾಹನಗಳ ಮಾಹಿತಿಯನ್ನು ನೀಡಿ ಕಾನೂನು ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿದರೂ, ದೂರು ನೀಡಿದರೂ ಕ್ರಮ ಕೈಗೊಂಡಿಲ್ಲ’ ಎಂದು ಕರ್ನಾಟಕ ಟ್ಯಾಕ್ಸಿ ಡ್ರೈವರ್ಸ್ ಟ್ರೇಡ್ ಯೂನಿಯನ್ (ಕೆಟಿಡಿಟಿಯು) ಅಧ್ಯಕ್ಷ ಸಾರಿಗೆ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ನ್ಯಾಯಯುತವಾಗಿ ತೆರಿಗೆ ಪಾವತಿಸಿ ಬಾಡಿಗೆ ನಡೆಸುವ ಮಾಲೀಕರು ಮತ್ತು ಚಾಲಕರ ಬದುಕು ಬೀದಿಗೆ ಬೀಳುವಂತಾಗಿದೆ. ವಾಣಿಜ್ಯ ಸಂಚಾರಕ್ಕೆ ಬಳಸುವ ಖಾಸಗಿ ಬಳಕೆಯ ವಾಹನಗಳ ಮಾಲೀಕರ ಮೇಲೆ ಕ್ರಮ ಕೈಗೊಳ್ಳದೇ ಹೋದರೆ ಇಲಾಖೆಯ ವಿರುದ್ಧ ಪ್ರತಿಭಟನೆ ನಡೆಸಲಾಗುವುದು.

ಬಿಳಿ ನಂಬರ್‌ಪ್ಲೇಟ್ ಹೊಂದಿರುವ ವಾಹನ

ನ್ಯಾಯಾಲಯದ ಮೆಟ್ಟಿಲು ಏರಲಾಗುವುದು ಎಂದು ಆ ಪತ್ರದಲ್ಲಿ ಎಚ್ಚರಿಸಿದ್ದಾರೆ.

‘ಕದ್ದುಮುಚ್ಚಿ ಕೆಲವು ವಾಹನಗಳ ಮಾಲೀಕರು ವಾಣಿಜ್ಯ ಸಂಚಾರ ನಡೆಸುತ್ತಿದ್ದಾರೆ. ಚಲನಚಿತ್ರ ವಾಹನ ಚಾಲಕರ ಸಂಘದಲ್ಲಿ ಇರುವ 80ಕ್ಕೂ ಅಧಿಕ ವಾಹನಗಳಲ್ಲಿ ಐದಾರು ವಾಹನಗಳಷ್ಟೇ ಹಳದಿ ನಂಬರ್ ಪ್ಲೇಟ್ ಹೊಂದಿವೆ. ಉಳಿದೆಲ್ಲವೂ ಖಾಸಗಿ ವಾಹನಗಳು. ನಾವು ದೂರು ಕೊಟ್ಟಾಗ ಒಮ್ಮೆ ಒಂದೆರಡು ವಾಹನಗಳಿಗೆ ದಂಡ ವಿಧಿಸುತ್ತಾರೆ. ಆನಂತರ ಸಂಚಾರ ಹಾಗೇ ಮುಂದುವರಿಯುತ್ತಿದೆ. ಅವುಗಳ ಪರ್ಮಿಟ್ ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಕರ್ನಾಟಕ ಟ್ಯಾಕ್ಸಿ ಡ್ರೈವರ್ಸ್ ಆರ್ಗನೈಸೇಶನ್ ಸದಸ್ಯ ರಮೇಶ್ ಸಿ. ಒತ್ತಾಯಿಸಿದ್ದಾರೆ.

ಲಾಂಗ್ ಡ್ರೈವ್, ಝೂಮ್ ಕಾರ್, ಆನ್‌ರೋಡ್ ಕಾರ್ ರೆಂಟಲ್, ಫಿಲಿಯೊ ಕಾರ್ಸ್, ಗುಜರಾಲ್ ಕಾರ್ ರೆಂಟಲ್ಸ್ ಮುಂತಾದ ಕಂಪನಿಗಳ ವೈಟ್‌ಬೋರ್ಡ್ ವಾಹನಗಳು ವಾಣಿಜ್ಯ ಸಂಚಾರ ನಡೆಸುತ್ತಿದ್ದಾಗ, ಅವುಗಳನ್ನು ಹಿಡಿದು ಆರ್‌ಟಿಒ ಅಧಿಕಾರಿಗಳಿಗೆ ಒಪ್ಪಿಸಿದರೂ ಕ್ರಮ ಕೈಗೊಂಡಿಲ್ಲ. ಆ್ಯಪ್ ಆಧಾರಿತವಾಗಿ ಖಾಸಗಿ ಬಳಕೆ ವಾಹನಗಳಲ್ಲಿ ಬಾಡಿಗೆ ಮಾಡುವುದನ್ನೂ ನಿಷೇಧಿಸಬೇಕು ಎಂದು ಕೆಟಿಡಿಟಿಯು ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

ವಾಣಿಜ್ಯ ಉದ್ದೇಶದ ವಾಹನಗಳು ಹಳದಿ ನಂಬರ್ ಪ್ಲೇಟ್ ಹೊಂದಿರುತ್ತವೆ. ಈ ವಾಹನಗಳಿಗೆ ತೆರಿಗೆಯೂ ಅಧಿಕ ಇರುತ್ತದೆ. ಸ್ವಂತಕ್ಕೆ ಬಳಸುವ ವಾಹನಗಳು ಬಿಳಿ ನಂಬರ್ ಪ್ಲೇಟ್ ಹೊಂದಿರುತ್ತವೆ ಮತ್ತು ತೆರಿಗೆ ಕೂಡ ಕಡಿಮೆ ಇರುತ್ತದೆ. ಅಧಿಕ ತೆರಿಗೆ ತಪ್ಪಿಸಲು ಸ್ವಂತ ಬಳಕೆಯ ವಾಹನಗಳನ್ನೇ ವಾಣಿಜ್ಯ ವಾಹನಗಳಂತೆ ಬಳಸುತ್ತಿರುವುದು ಸಮಸ್ಯೆಯ ಮೂಲವಾಗಿದೆ. ವಾಣಿಜ್ಯ ಸಂಚಾರದ ವಾಹನಗಳನ್ನೇ ನಂಬಿದವರ ಹೊಟ್ಟೆ ಮೇಲೆ ಹೊಡೆಯುವ ಇಂಥ ವಾಹನಗಳ ಮೇಲೆ ಸಾರಿಗೆ ಸಚಿವರು, ಇಲಾಖೆಯ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

‘ಸಮಯ ಕೇಳಿದ್ದೇವೆ’

ಚಲನಚಿತ್ರ ವಾಹನ ಚಾಲಕರ ಸಂಘವು ಹಲವು ದಶಕಗಳಿಂದ ಇದೆ. ಸಿನಿಮಾ ನಟ, ನಟಿಯರನ್ನು, ಸಹಕಲಾವಿದರನ್ನು, ಸಿನಿಮಾಕ್ಕೆ ಸಂಬಂಧಪಟ್ಟವರನ್ನು ಕರೆದೊಯ್ಯುವ ಕೆಲಸ ಮಾಡುತ್ತಿದೆ. ಹೊರಗೆ ಯಾವುದೇ ವಾಣಿಜ್ಯ ಸಂಚಾರ ಮಾಡುತ್ತಿಲ್ಲ. 60 ವರ್ಷಗಳಿಂದ ಇಲ್ಲದ ಸಮಸ್ಯೆಯನ್ನು ಕೆಲವರು ಒಂದು ವರ್ಷದಿಂದ ಹುಟ್ಟುಹಾಕಿದ್ದಾರೆ ಎಂದು ಕರ್ನಾಟಕ ಚಲನಚಿತ್ರ ಕಾರ್ಮಿಕರ ಒಕ್ಕೂಟದ ಅಧ್ಯಕ್ಷ ಕೆ. ಮಹಾಬಲ ತಿಳಿಸಿದ್ದಾರೆ.

‘ಸರ್ಕಾರಕ್ಕೆ ನಷ್ಟ ಉಂಟುಮಾಡುವ ಉದ್ದೇಶ ನಮಗಿಲ್ಲ. ಸಾರಿಗೆ ಸಚಿವರನ್ನು, ಅಧಿಕಾರಿಗಳನ್ನು ಭೇಟಿ ಮಾಡಿದ್ದೇವೆ. 6 ತಿಂಗಳ ಕಾಲಾವಕಾಶವನ್ನು ಕೇಳಿದ್ದೇವೆ. ದೊಡ್ಡ ಕಲಾವಿದರು ಹಳದಿ ಫಲಕಗಳ ವಾಹನಗಳಲ್ಲಿ ಬರಲು ಹಿಂಜರಿಯುತ್ತಿದ್ದಾರೆ. ಕಲಾವಿದರನ್ನು, ಚಲನಚಿತ್ರ ಮಂಡಳಿಯವರನ್ನು ಒಪ್ಪಿಸುತ್ತೇವೆ’ ಎಂದು ಹೇಳಿದ್ದಾರೆ.

ವೈಟ್‌ಬೋರ್ಡ್ ವಾಹನಗಳನ್ನು ವಾಣಿಜ್ಯ ಸಂಚಾರಕ್ಕೆ ಬಳಸುವಂತಿಲ್ಲ. ಅಂಥ ವಾಹನಗ ಳ ಮಾಲೀಕರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ಸಂಕ್ಷಿಪ್ತ ಸುದ್ದಿ

ಹಿಮಾಲಯನ್ ಎಕ್ಸ್‌ಪೆಡಿಶನ್‌ಗೆ ಚಾಲನೆ 26ಕ್ಕೆ

ಬೆಂಗಳೂರು: ಹಿಮಾಲಯನ್ ಎಕ್ಸ್‌ಪೆಡಿಶನ್–2025ರಲ್ಲಿ ಪಾಲ್ಗೊಳ್ಳುವ ಕ್ರೈಸ್ಟ್ ವಿಶ್ವವಿದ್ಯಾಲಯದ ಎನ್‌ಸಿಸಿ ಕೆಡೆಟ್ಸ್‌ಗಳ ತಂಡಕ್ಕೆ ಏಪ್ರಿಲ್ 26ರಂದು ಕರ್ನಾಟಕ ಮತ್ತು ಗೋವಾ ಬೆಟಾಲಿಯನ್ ಉಪ ಮಹಾನಿರ್ದೇಶಕ ಏರ್ ಕಮಾಂಡರ್ ಬಿ.ಎಸ್. ಅರುಣ್ ಕುಮಾರ್, ವಿಶ್ವವಿದ್ಯಾಲಯದ ಕುಲಪತಿ ಫಾದರ್ ಜೋಸೆಫ್ ಸಿ.ಸಿ. ಚಾಲನೆ ನೀಡಲಿದ್ದಾರೆ.

ಹಿಮಾಚಲ ಪ್ರದೇಶದ 20,300 ಅಡಿ ಎತ್ತರದಲ್ಲಿರುವ ಮೌಂಟ್ ಯುನಮ್ ಶಿಖರವನ್ನು ಎನ್‌ಸಿಸಿ ಕೆಡೆಟ್‌ಗಳು ಹತ್ತಲಿದ್ದಾರೆ. ಮನಾಲಿಯಲ್ಲಿರುವ ಅಟಲ್ ಬಿಹಾರಿ ವಾಜಪೇಯಿ ಇನ್‌ಸ್ಟಿಟ್ಯೂಟ್ ಆಫ್ ಮೌಂಟೇನಿಯರಿಂಗ್ ಆ್ಯಂಡ್ ಅಲೈಡ್ ಸ್ಪೋರ್ಟ್ಸ್ ಆಶ್ರಯದಲ್ಲಿ ಈ ಪರ್ವತಾರೋಹಣ ನಡೆಯಲಿದೆ. 39 ಎನ್‌ಸಿಸಿ ಕೆಡೆಟ್‌ಗಳ ತಂಡದ ನೇತೃತ್ವವನ್ನು ಎಎನ್‌ಒನ ಕ್ಯಾಪ್ಟನ್ ಸಜಿನಾ ಬೇಗಂ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಬಿಡಿಎ: ಬನಶಂಕರಿಯಲ್ಲಿ ಒತ್ತುವರಿ ತೆರವು

ಬೆಂಗಳೂರು: ಬನಶಂಕರಿ 3ನೇ ಹಂತ ಬಡಾವಣೆಯಲ್ಲಿ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಿರುವ ಬಿಡಿಎ, ₹6.15 ಕೋಟಿ ಆಸ್ತಿಯನ್ನು ಬುಧವಾರ ವಶಪಡಿಸಿಕೊಂಡಿದೆ.

ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಕತ್ರಿಗುಪ್ಪೆ ಗ್ರಾಮದ ಸರ್ವೆ ನಂ. 77/1 ಮತ್ತು 77/2ರ 3079.50 ಚದರ ಅಡಿಯಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿದ್ದ ಶೆಡ್ ಮತ್ತು ಕಾಂಪೌಂಡ್ ತೆರವುಗೊಳಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪಿಂಚಣಿ ಪ್ರಸ್ತಾವ ಸಲ್ಲಿಸದ ಶಿಕ್ಷಣ ಇಲಾಖೆ

ಬೆಂಗಳೂರು: ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮುಖ್ಯಶಿಕ್ಷಕರು ಸೇರಿದಂತೆ ವರ್ಷದ ಹಿಂದೆ ನಿವೃತ್ತರಾದ ಶಾಲಾ ಶಿಕ್ಷಣ ಇಲಾಖೆಯ 117 ಗೆಜೆಟೆಡ್ ಅಧಿಕಾರಿಗಳ ಪಿಂಚಣಿ ಇದುವರೆಗೂ ಇತ್ಯರ್ಥವಾಗಿಲ್ಲ.

ನಿಯಮದಂತೆ ಸರ್ಕಾರಿ ನೌಕರರು ಸೇವೆಯಿಂದ ನಿವೃತ್ತಿ ಹೊಂದುವ ಮೂರು ತಿಂಗಳ ಮೊದಲು ಪಿಂಚಣಿ ಪ್ರಸ್ತಾವವನ್ನು ಮಹಾಲೇಖಪಾಲರಿಗೆ ಸಲ್ಲಿಸ ಬೇಕು. ಆದರೆ, ಶಾಲಾ ಶಿಕ್ಷಣ ಇಲಾಖೆ ಯಲ್ಲಿ ಕೆಲಸ ಮಾಡಿ ಏಪ್ರಿಲ್ 2024ಕ್ಕೂ ಮೊದಲು ನಿವೃತ್ತರಾಗಿದ್ದ ಗ್ರೂಪ್ ‘ಎ’ ಮತ್ತು ಗ್ರೂಪ್ ‘ಬಿ’ ವೃಂದದ ಅಧಿಕಾರಿಗಳ ಪಿಂಚಣಿ ಪ್ರಸ್ತಾವವನ್ನು ವರ್ಷ ಕಳೆದರೂ ಸಲ್ಲಿಸಿಲ್ಲ.

ಈ ಕುರಿತು ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಅವರಿಗೆ ಪತ್ರ ಬರೆದಿರುವ ಮಹಾಲೇಖಪಾಲರು, ನಿವೃತ್ತ ಅಧಿಕಾರಿಗಳ ಪಿಂಚಣಿ ಪ್ರಸ್ತಾವವನ್ನು ಸಲ್ಲಿಸುವಂತೆ ಸೂಚಿಸಿದೆ. ಮಹಾಲೇಖಪಾಲರ ಸೂಚನೆಯಂತೆ ತಕ್ಷಣ ಕ್ರಮ ಕೈಗೊಳ್ಳುವಂತೆ ರಾಜ್ಯ ಯೋಜನಾ ನಿರ್ದೇಶಕರು, ಹೆಚ್ಚುವರಿ ಆಯುಕ್ತರು ಹಾಗೂ ಇತರೆ ವಿಭಾಗಗಳ ನಿರ್ದೇಶಕರಿಗೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತರು ಜ್ಞಾಪನಾ ಪತ್ರ ಬರೆದಿದ್ದಾರೆ.

ಬ್ರಹ್ಮರಥೋತ್ಸವ

ಬೆಂಗಳೂರು ನಗರದ ಜರಗನಹಳ್ಳಿಯಲ್ಲಿ ಇರುವ ಸೀತಾರಾಮ ಲಕ್ಷ್ಮಣ ಹನುಮಂತ ದೇವರ ದೇವಸ್ಥಾನದ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ನಡೆಯಿತು

ಚಿತ್ರ: ಕಿಶೋರ್ ಕುಮಾರ್ ಬೋಳಾರ್

ರೈಲ್ವೆ ಕೆಳಸೇತುವೆ ಬಳಕೆಗೆ ಮುಕ್ತ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಚಿಕ್ಕಬಾಣಾವರದ ಇತಿಹಾಸ ಪ್ರಸಿದ್ಧ ಕೋಟೆ ಮಾರಮ್ಮ ಜಾತ್ರೆಯ ಪ್ರಯುಕ್ತ 25 ವರ್ಷಗಳ ಹಿಂದೆ ಮುಚ್ಚಿದ್ದ ರೈಲ್ವೆ ಕೆಳಸೇತುವೆಯನ್ನು ಸಾರ್ವಜನಿಕರ ಅನುಕೂಲಕ್ಕಾಗಿ ತೆರವುಗೊಳಿಸಲಾಯಿತು.

ಈ ಕೆಳಸೇತುವೆ ಮುಚ್ಚಿದ್ದರಿಂದ, ಅಕ್ಕಪಕ್ಕದ ಗ್ರಾಮಗಳವರು ನೇರವಾಗಿ ಚಿಕ್ಕಬಾಣಾವರವನ್ನು ತಲುಪಲು ತುಂಬಾ ತೊಂದರೆಯಾಗಿತ್ತು. ಇದನ್ನು ತೆರವುಗೊಳಿಸಿ ಸಂಚಾರಕ್ಕೆ ಅನುಕೂಲ ಮಾಡಿ ಕೊಡುವಂತೆ ಗ್ರಾಮಸ್ಥರು ಶಾಸಕ ಎಸ್. ಮುನಿರಾಜುಗೆ ಮನವಿ ಮಾಡಿದ್ದರು.

‘ಗ್ರಾಮಸ್ಥರ ಮನವಿ ಮೇರಗೆ, ರೈಲ್ವೆ ಖಾತೆ ಸಚಿವ ವಿ.ಸೋಮಣ್ಣ ಅವರ ಗಮನಕ್ಕೆ ತಂದು, ರೈಲ್ವೆ ಕೆಳಸೇತುವೆಯನ್ನು ಸಾರ್ವಜನಿಕರ ಓಡಾಟಕ್ಕೆ ಅನುವು ಮಾಡಿ ಕೊಡಲಾಗಿದೆ. ಈ ರೈಲ್ವೆ ಅಂಡರ್ ಪಾಸ್ ಹಾಗೂ ಇದಕ್ಕೆ ಸಂಪರ್ಕಿಸುವ ರಸ್ತೆಗಳನ್ನು ಅಭಿವೃದ್ಧಿಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಸ್ಥಳೀಯ ಗ್ರಾಮಸ್ಥ ಬಿ.ಎಂ. ಚಿಕ್ಕಣ್ಣ ಮಾತನಾಡಿ, ‘ಬಹಳ ವರ್ಷಗಳ ಹಿಂದೆ ಜನರು ಎತ್ತಿನ ಗಾಡಿ ಬೈಸಿಕಲ್, ಆಟೊಗಳಲ್ಲಿ ಇದೇ ಅಂಡರ್‌ಪಾಸ್ ಮೂಲಕ ಓಡಾಡುತ್ತಿದ್ದರು. ಗಣಪತಿನಗರ, ವೀರಶೆಟ್ಟಿಹಳ್ಳಿ ಶಾಂತಿನಗರ, ರಾಘವೇಂದ್ರ ಬಡಾವಣೆ ಮತ್ತಿತರ ಗ್ರಾಮಗಳಿಂದ ಜನರು ನೇರವಾಗಿ ಚಿಕ್ಕಬಾಣಾವರಕ್ಕೆ ಇದೇ ಮಾರ್ಗದಲ್ಲಿ ಬರುತ್ತಿದ್ದರು. ಗ್ರಾಮ ಅಭಿವೃದ್ಧಿಯಾದಂತೆ ಅಂಡರ್ ಪಾಸ್ ಮುಚ್ಚಲಾಗಿತ್ತು. ಈಗ ಮತ್ತೆ ತೆರವುಗೊಳಿಸಿರುವುದು,ಅಕ್ಕಪಕ್ಕದ ಗ್ರಾಮಸ್ಥರಿಗೆ ಅನುಕೂಲವಾಗಿದೆ’ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಚಿಕ್ಕಬಾಣಾವರ ಪುರಸಭೆಯ ಮುಖ್ಯ ಅಧಿಕಾರಿ ಸಂದೀಪ್, ಗ್ರಾಮಸ್ಥರಾದ ವೆಂಕಟೇಶ್, ಕಬೀರ್, ಚಿಕ್ಕಣ್ಣ, ನವೀನ್, ಬಿ. ಎಲ್. ಎನ್. ಸಿಂಹ, ದಿಲೀಪ್ ಸಿಂಹ, ಸುರೇಶ್ ಕಾಡೆ ಮುಂತಾದವರಿದ್ದರು.

ಚಿಕ್ಕಬಾಣಾವರದಲ್ಲಿ ರೈಲ್ವೆ ಕೆಳಸೇತುವೆಯನ್ನು ತೆರವುಗೊಳಿಸಲಾಯಿತು. ಶಾಸಕ ಎಸ್. ಮುನಿರಾಜು, ಪುರಸಭೆ ಅಧಿಕಾರಿಗಳು ಹಾಜರಿದ್ದರು

‘ಶಿವಕುಮಾರ ಸ್ವಾಮೀಜಿ ವಿಶ್ವರತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ ಅವರಿಗೆ ಭಾರತ ರತ್ನ ಕೊಡಬೇಕೆಂಬ ಆಗ್ರಹ ಎಲ್ಲೆಡೆ ಇದೆ. ಅವರಿಗೆ ಭಾರತರತ್ನ ಕೊಟ್ಟಿದ್ದರೆ ಆ ಪ್ರಶಸ್ತಿ ಮೌಲ್ಯ ಹೆಚ್ಚಾಗುತ್ತಿತ್ತು. ಆದರೆ ಅವರು ಕರ್ನಾಟಕ ರತ್ನ, ಭಾರತರತ್ನವಷ್ಟೇ ಅಲ್ಲ, ವಿಶ್ವರತ್ನ’ ಎಂದು ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

‘ಶಿವಕುಮಾರ ಸ್ವಾಮೀಜಿಯವರ ಜಯಂತ್ಯುತ್ಸವ ಹಾಗೂ ನ್ಯಾಯಮೂರ್ತಿ ನಾಡೋಜ ಶಿವರಾಜ ಪಾಟೀಲರ ಅಭಿನಂದನಾ ಸಮಿತಿ’ ವತಿಯಿಂದ ಬುಧವಾರ ಆಯೋಜಿಸಿದ್ದ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಶಿವಕುಮಾರ ಸ್ವಾಮೀಜಿಯವರು ಅನ್ನ, ಅಕ್ಷರ, ಆಶ್ರಯ, ಜ್ಞಾನದಾನ ದಾಸೋಹದಿಂದ ಅವರು ಚತುರ್ವಿಧ ದಾಸೋಹಿ’ ಎಂದು ಬಣ್ಣಿಸಿದರು.

‘ಮಠಮಾನ್ಯ, ನ್ಯಾಯಾಂಗ ಕ್ಷೇತ್ರವೂ ಸೇರಿದಂತೆ ರಾಜಕೀಯ, ಆಡಳಿತ ಕ್ಷೇತ್ರದಲ್ಲಿ ದೊಡ್ಡ ಮಟ್ಟದ ಅನಾಹುತಕಾರಿ ಅಪರಾಧಗಳಾಗುತ್ತಿವೆ. ಇಂತಹ ಕುಕೃತ್ಯ ಮಾಡುವವರಿಗೆ ಶೀಘ್ರ ಶಿಕ್ಷೆಯಾಗುವ ನ್ಯಾಯ ವ್ಯವಸ್ಥೆ ಜಾರಿಯಾಗಬೇಕಿದೆ. ಇದಕ್ಕೆ ಶಿವರಾಜ ಪಾಟೀಲರಂತಹ ನ್ಯಾಯಾಂಗ ಕ್ಷೇತ್ರದ ಅಗ್ರಗಣ್ಯರು ಸಲಹೆ ನೀಡಬೇಕು’ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ ಹೇಳಿದರು.

‘ಇಂತಹ ವ್ಯವಸ್ಥೆ ಜಾರಿ ಮಾಡುವುದಕ್ಕೆ ಜೇನುಗೂಡಿಗೆ ಕೈಹಾಕಬೇಕೋ ಬೇಡವೋ ಎಂಬ ಜಿಜ್ಞಾಸೆ ಇದೆ. ಆದರೆ, ಇದನ್ನು ಹೀಗೇ ಬಿಟ್ಟರೆ, ದೊಡ್ಡವರ ಮಟ್ಟದಲ್ಲಿರುವ ಅನಾಹುತಕಾರಿ ಅಪರಾಧ ಪ್ರಕರಣಗಳು ಎಲ್ಲ ಹಂತಗಳನ್ನೂ ತಲುಪಬಹುದು’ ಎಂದರು.

‘ನಾಡೋಜ ಪ್ರಶಸ್ತಿ ಸಂದಿರುವುಕ್ಕೆ ಅಭಿನಂದಿಸಿದ್ದೀರಿ. ಈ ಪ್ರಶಸ್ತಿಗೆ ಗೌರವ ತರುವಂತೆ ನಡೆದುಕೊಳ್ಳಬೇಕು ಎಂಬ ಪ್ರಜ್ಞೆ ನನಗಿದೆ’ ಎಂದು ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ ಅವರು ತಿಳಿಸಿದರು.

‘ಜಾತಿ ತಾರತಮ್ಯವಿಲ್ಲದೆ ಎಲ್ಲ ಮಕ್ಕಳಿಗೂ ಅಕ್ಷರ, ಅನ್ನ, ಆಶ್ರಯ ನೀಡಿ ಮಾನವನ ಸೇವೆ ಮಾಡಿದ ಶಿವಕುಮಾರ ಸ್ವಾಮೀಜಿ ನಡೆದಾಡುವ ದೇವರಾದರು’ ಎಂದು ಬಣ್ಣಿಸಿದರು.

ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ ಅವರನ್ನು ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ ಸನ್ಮಾನಿಸಿದರು. ಆರ್. ಆರ್. ಹಿರೇಮಠ್, ನಿವೃತ್ತ ನ್ಯಾಯಮೂರ್ತಿ ಅಶೋಕ ಹಿಂಚಗೇರಿ, ಸಚಿವ ಎಚ್. ಕೆ. ಪಾಟೀಲ, ವಕೀಲರಾದ ಎನ್. ದೇವದಾಸ್, ಉದಯ ಹೊಳ್ಳ, ಎಸ್. ಎಸ್. ಮಿತ್ತಲಕೋಡ ಉಪಸ್ಥಿತರಿದ್ದರು

ಪ್ರಜಾವಾಣಿ ಚಿತ್ರ

ಎನ್‌.ಆರ್‌. ರಮೇಶ್ ದೂರು ಆಧರಿಸಿ ಸಿಬ್ಬಂದಿಯ ವಿಚಾರಣೆ

ಬಿಲ್ ಪಾವತಿ: ಇಬ್ಬರ ಅಮಾನತು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ರಕ್ತಸಂಬಂಧಿಗಳ ಹೆಸರಲ್ಲಿ ಕಾರ್ಯಾದೇಶ
- ಘನತ್ಯಾಜ್ಯ ಸಂಗ್ರಹ–ಸಾಗಣೆಯಲ್ಲಿ ಕರ್ತವ್ಯಲೋಪ
- ಸೇವಾ ನಿಯಮದ ಉಲ್ಲಂಘನೆ

ಬೆಂಗಳೂರು: ಬಿಬಿಎಂಪಿಯ ಗಾಂಧಿನಗರ ವಿಭಾಗದಲ್ಲಿ ಘನತ್ಯಾಜ್ಯ ಸಂಗ್ರಹ–ಸಾಗಣೆಯ ಬಿಲ್ ಪಾವತಿಯಲ್ಲಿ ಗಂಭೀರ ಕರ್ತವ್ಯಲೋಪ ಎಸಗಿರುವ ಪ್ರಥಮ ದರ್ಜೆ ಸಹಾಯಕಿ ಲೋಕೇಶ್ವರಿ, ಪೌರಕಾರ್ಮಿಕ ಕೃಷ್ಣ ಅವರನ್ನು ಅಮಾನತು ಮಾಡಲಾಗಿದೆ.

ಗೋವಿಂದರಾಜನಗರ ವಿಭಾಗದ ಆರೋಗ್ಯ ಮತ್ತು ನೈರ್ಮಲ್ಯ ಘಟಕದಲ್ಲಿ ಪ್ರಥಮ ದರ್ಜೆ ಸಹಾಯಕರಾಗಿರುವ ಲೋಕೇಶ್ವರಿ, ಗಾಂಧಿನಗರ ವಿಭಾಗದಲ್ಲಿ ಪ್ರಭಾರ ಕಿರಿಯ ಆರೋಗ್ಯ ಪರಿವೀಕ್ಷಕರಾಗಿರುವ ಪೌರಕಾರ್ಮಿಕ ಕೃಷ್ಣ ಅವರ ವಿಚಾರಣೆ ನಡೆಸಿ, ಆರೋಗ್ಯ ಮತ್ತು ನೈರ್ಮಲ್ಯ ವಿಭಾಗದ ವಿಶೇಷ ಆಯುಕ್ತರು ವರದಿ ಸಲ್ಲಿಸಿದ್ದಾರೆ. ಅದರಂತೆ ಕ್ರಮ ಕೈಗೊಳ್ಳಲಾಗಿದೆ.

ಗಾಂಧಿನಗರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ಮೂರು ಪಾಳಿಗಳಲ್ಲಿ ತ್ಯಾಜ್ಯ ವಿಲೇವಾರಿ ಕಾರ್ಯ ನಡೆಸುತ್ತಿದ್ದು, ಬಿಬಿಎಂಪಿ ನೌಕರರು ತಮ್ಮ ರಕ್ತ ಸಂಬಂಧಿಗಳ ಹೆಸರಿನಲ್ಲಿ ಕಾರ್ಯಾದೇಶ ಪಡೆದು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಬಗ್ಗೆ ತನಿಖೆ ನಡೆಸಿ ಕಾನೂನು ರೀತಿ ಕ್ರಮ ಕೈಗೊಳ್ಳಬೇಕು ಎಂದು ಬಿಬಿಎಂಪಿಯ ಮಾಜಿ ಆಡಳಿತ ಪಕ್ಷದ ನಾಯಕ ಎನ್‌. ಆರ್‌. ರಮೇಶ್ ದೂರು ನೀಡಿದ್ದರು. ಇದರಂತೆ ಸಿಬ್ಬಂದಿಯ ವಿಚಾರಣೆ ನಡೆಸಲಾಗಿದೆ.

ಗಾಂಧಿನಗರ ವಿಭಾಗದಲ್ಲಿ 2024ರ ಜನವರಿ 1ರಿಂದ ಡಿಸೆಂಬರ್ 31ರವರೆಗೆ ಮೂರು ಪಾಳಿಗಳಲ್ಲಿ ಘನತ್ಯಾಜ್ಯ ಸಂಗ್ರಹ ಮತ್ತು ಸಾಗಣೆ ಕಾರ್ಯಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದಿಲ್ಲ. ಈ ಅವಧಿಯಲ್ಲಿ ಪ್ರತಿ ತಿಂಗಳು ಹೆಚ್ಚುವರಿಯಾಗಿ ₹41.09 ಲಕ್ಷ ವೆಚ್ಚವಾಗಿದ್ದು, ಒಟ್ಟು ₹4.93 ಕೋಟಿ ವೆಚ್ಚಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದಿಲ್ಲ. ಕೃಷ್ಣ ಅವರು ವಾರ್ಡ್ 77 ಮತ್ತು 120ರಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಅದೇ ವಾರ್ಡ್‌ನಲ್ಲಿ ಪತ್ನಿ ಸುನಿತಾ ಹೆಸರಿನಲ್ಲಿರುವ ವಿಹಾರಿ ಎಂಟರ್‌ಪ್ರೈಸಸ್‌ಗೆ ಹೆಚ್ಚುವರಿ ಪಾಳಿಗಳನ್ನು ನೀಡಲು ಕಿರಿಯ ಆರೋಗ್ಯ ಪರಿವೀಕ್ಷಕರಾಗಿ ಕೃಷ್ಣ ಅವರೇ ಕಡತ ವ್ಯವಹಾರ ಮಾಡಿದ್ದಾರೆ. ಇದು ನಾಗರಿಕ ಸೇವಾ (ನಡತೆ) ನಿಯಮಗಳು 1966– ನಿಯಮ 4(3) ಅಡಿಯಲ್ಲಿ ಸೇವಾ ನಡವಳಿಕೆಯ ಉಲ್ಲಂಘನೆಯಾಗಿದೆ.

2021ರ ಆಗಸ್ಟ್ 16ರಂದು 48 ಗಂಟೆಗಳಿಗಿಂತ ಹೆಚ್ಚಿನ ಅವಧಿಯಲ್ಲಿ ಭ್ರಷ್ಟಾಚಾರ ನಿಗ್ರಹ ದಳದಿಂದ ಬಂಧನದಲ್ಲಿದ್ದ ಕೃಷ್ಣ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿತ್ತು. ಅಮಾನತು ತೆರವುಗೊಳಿಸಿದ ನಂತರವೂ ಯಾವ ಹುದ್ದೆಯಿಂದ ಅಮಾನತು ಮಾಡಲಾಗಿತ್ತೋ ಅದೇ ಹುದ್ದೆಗೆ ನಿಯೋಜನೆಗೊಂಡು ಕಾರ್ಯನಿರ್ವಹಿಸಿರುವುದು ಸೇವಾ ನಿಯಮದ ಉಲ್ಲಂಘನೆಯಾಗಿದೆ.

ಗಾಂಧಿನಗರ ವಿಭಾಗದಲ್ಲಿದ್ದ ಲೋಕೇಶ್ವರಿಯವರು, ತಮ್ಮ ಮಾವ ವಿ. ಮುನಿಯಪ್ಪ, ಪತಿ ರಾಮಚಂದ್ರ ಮತ್ತು ಅತ್ತಿಗೆ ವರಲಕ್ಷ್ಮಿ ಅವರಿಗೆ ಪ್ರಥಮ ದರ್ಜೆ ಸಹಾಯಕ ಹುದ್ದೆಯಲ್ಲಿದ್ದಾಗ ದೈನಂದಿನ ಬಿಲ್ಲುಗಳ ಪಾವತಿಗೆ ಸಂಬಂಧಿಸಿದಂತೆ ಕಡತಗಳನ್ನು ನಿರ್ವಹಿಸಿದ್ದಾರೆ. ಇದು ಸೇವಾ ನಡವಳಿಕೆಯ ಉಲ್ಲಂಘನೆಯಾಗಿದೆ. ಕೃಷ್ಣ ಹಾಗೂ ಲೋಕೇಶ್ವರಿಯವರು ಕಾನೂನುಬಾಹಿರವಾಗಿ ಕರ್ತವ್ಯ ನಿರ್ವಹಿಸಿರುವುದು ಕಂಡುಬಂದಿದೆ ಎಂದು ವಿಶೇಷ ಆಯುಕ್ತರು ವರದಿ ಸಲ್ಲಿಸಿದ್ದರು. ಮುಖ್ಯ ಆಯುಕ್ತರ ಆದೇಶದಂತೆ ಆಡಳಿತ ವಿಭಾಗದ ಉಪ ಆಯುಕ್ತರು ಇಬ್ಬರನ್ನೂ ಅಮಾನತುಗೊಳಿಸಿ ಆದೇಶಿಸಿದ್ದಾರೆ.

ಹೈಕೋರ್ಟ್ ವಕೀಲರ ಪ್ರತಿಭಟನೆ

ಬುಧವಾರದ ಕೋರ್ಟ್ ಕಲಾಪಗಳಿಂದ ಹೊರಗುಳಿದ ಹೈಕೋರ್ಟ್ ವಕೀಲರು ಗೋಲ್ಡನ್ ಗೇಟ್ ಮುಂಭಾಗ ಪ್ರತಿಭಟನೆ ನಡೆಸಿದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳಾದ ಹೇಮಂತ ಚಂದನಗೌಡರ, ಕೆ.ನಟರಾಜನ್, ಎನ್‌.ಎಸ್‌. ಸಂಜಯಗೌಡ ಮತ್ತು ಕೃಷ್ಣ ಎಸ್‌. ದೀಕ್ಷಿತ್ ಅವರನ್ನು ವರ್ಗಾವಣೆ ಮಾಡಲು ಸುಪ್ರೀಂ ಕೋರ್ಟ್ ಕೊಲಿಜಿಯಂ ಮಾಡಿರುವ ಶಿಫಾರಸು ಹಿಂಪಡೆಯುವಂತೆ ಆಗ್ರಹಿಸಿ ಹೈಕೋರ್ಟ್ ವಕೀಲರು ಬುಧವಾರ ದೈನಂದಿನ ಕೋರ್ಟ್ ಕಲಾಪಗಳಿಂದ ಹೊರಗುಳಿದರು.

ಬೆಳಿಗ್ಗೆ 10.30ಕ್ಕೆ ಹೈಕೋರ್ಟ್‌ನ ಗೋಲ್ಡನ್ ಗೇಟ್ ಮುಂಭಾಗದಲ್ಲಿ ಕುಳಿತು ಶಾಂತಿಯುತ ಪ್ರತಿಭಟನೆ ಆರಂಭಿಸಿದರು.

ಬೆಂಗಳೂರು ವಕೀಲರ ಸಂಘ (ಎಎಬಿ) ಹಾಗೂ ರಾಜ್ಯ ವಕೀಲರ ಪರಿಷತ್‌ನ ಸದಸ್ಯರು ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಕಲಾಪಗಳಿಗೆ ಹಾಜರಾಗದಂತೆ ವಕೀಲರಿಗೆ ಮನವಿ ಮಾಡಿದರು. ಇದರಿಂದಾಗಿ ದಿನದ ಕೋರ್ಟ್ ಕಲಾಪಗಳು ಬಹುತೇಕ ಸ್ಥಗಿತಗೊಂಡಿದ್ದವು.

ಇದೇ ವೇಳೆ ರಾಜ್ಯ ವಕೀಲರ ಪರಿಷತ್ ಅಧ್ಯಕ್ಷ ಎಸ್‌.ಎಸ್‌. ಮಿಟ್ಟಲಕೋಡ್, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ಪತ್ರವೊಂದನ್ನು ಬರೆದಿದ್ದು ವರ್ಗಾವಣೆ ಶಿಫಾರಸನ್ನು ಪುನರ್ ಪರಿಶೀಲಿಸುವಂತೆ ಮನವಿ ಮಾಡಿದ್ದಾರೆ.

‘ಜೌಗು ಭೂಮಿ ಉಳಿದರೆ ಮನುಕುಲ ಉಳಿದೀತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವದಲ್ಲಿ ವರ್ಷದಿಂದ ವರ್ಷಕ್ಕೆ ಭೂಮಿ ಬರಡಾಗುತ್ತಾ ಹೋಗುತ್ತಿದೆ. ಅಂತರ್ಜಲ ಕಾಪಾಡುವ ಜೌಗು ಭೂಮಿಯನ್ನು ಕಸ ತುಂಬುವ ಪ್ರದೇಶವನ್ನಾಗಿಸದೆ ಸಂರಕ್ಷಿಸಿದರೆ ಮನುಕುಲ ಉಳಿದೀತು ಎಂದು ರಾಮ್ಸರ್ ಜೌಗು ಪ್ರದೇಶಗಳ ಸಮಾವೇಶದ ಪ್ರಧಾನ ಕಾರ್ಯದರ್ಶಿ, ಪರಿಸರ ತಜ್ಞೆ ಮುಸೊಂಡ ಮುಂಬಾ ಹೇಳಿದರು.

ಸಿನ್ಹಾಸಿ ಸಂಸ್ಥೆ ಭಾನುವಾರ ಹಮ್ಮಿಕೊಂಡಿದ್ದ ‘ಭವಿಷ್ಯದಲ್ಲಿ ಹವಾಮಾನದ ವೈಪರೀತ್ಯ’ ಕುರಿತ ಸಮ್ಮೇಳನದಲ್ಲಿ ‘ಜೌಗುಭೂಮಿ ಸಂರಕ್ಷಣೆ ಮತ್ತು ಹವಾಮಾನ ಬದಲಾವಣೆ’ ಕುರಿತು ಅವರು ಮಾತನಾಡಿದರು.

ವಿಶ್ವದಲ್ಲಿ 257 ದಶಲಕ್ಷ ಹೆಕ್ಟೇರ್ ಜೌಗು ಪ್ರದೇಶವಿದೆ, ಭಾರತದಲ್ಲಿ ಈ ಪ್ರಮಾಣ ಹೆಚ್ಚು. ಜೌಗು ಪ್ರದೇಶವನ್ನು ಸಂರಕ್ಷಿಸುವುದರಿಂದ ಸರೋವರ, ಕೊಳಗಳಲ್ಲಿ ನೀರು ಉಳಿಯುತ್ತದೆ. ಅಂತರ್ಜಲ ತುಂಬುತ್ತದೆ. ಜೊತೆಗೆ, ಜೌಗು ಪ್ರದೇಶಗಳು ಗಾಳಿಗೆ ತೇವಾಂಶ ಒದಗಿಸಿ, ಮಳೆ ಪ್ರಮಾಣ ಹೆಚ್ಚಿಸಲಿವೆ. ಸ್ಪಂಜುಗಳಂತೆ ಕಾರ್ಯನಿರ್ವಹಿಸಿ, ಪ್ರವಾಹ ಆಗುವುದನ್ನು ತಡೆಯಲಿವೆ ಎಂದು ವಿವರಿಸಿದರು.

ಈಗಾಗಲೇ ಶೇಕಡ 57ರಷ್ಟು ಜೌಗು ಪ್ರದೇಶಗಳನ್ನು ಕಳೆದುಕೊಂಡಿದ್ದೇವೆ. ಇನ್ನಷ್ಟು ಕಳೆದುಕೊಳ್ಳುವ ಮೊದಲು ಕೆರೆ–ಕಟ್ಟೆಗಳನ್ನು, ಹಳ್ಳ, ತೊರೆ, ನದಿಗಳನ್ನು ಅದಕ್ಕೆ ಪೂರಕವಾಗಿ ಅರಣ್ಯವನ್ನು ಸಂರಕ್ಷಿಸಬೇಕು ಎಂದು ಹೇಳಿದರು.

ಮುಸೊಂಡ ಮುಂಬಾ

ಪರಿಸರವಾದಿ ರೇವತಿ ಕಾಮತ್ ಮಾತನಾಡಿ, ‘ಗಿಡಗಳನ್ನು ನೆಟ್ಟರೆ ಸಾಲದು, ಮೂರ್ನಾಲ್ಕು ವರ್ಷ ಪೋಷಿಸುವ ಜವಾಬ್ದಾರಿ ತೆಗೆದುಕೊಳ್ಳಬೇಕು. ಕೆರೆಗಳ ಒತ್ತುವರಿಯ ಹಿಂದೆ ರಾಜಕಾರಣಿಗಳದ್ದೇ ದೊಡ್ಡ ಪಾತ್ರ ಇದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಕೆರೆ, ಕಾಲುವೆಗಳ ಸುತ್ತ ಕಟ್ಟಡಗಳನ್ನು ನಿರ್ಮಿಸಿದರೆ ನೀರು ಇಂಗುವುದು ಕಡಿಮೆಯಾಗುತ್ತದೆ. ಕೆರೆಗಳು ಬತ್ತಿದರೆ ಅತಿಕ್ರಮಣ ಸುಲಭವಾಗುತ್ತದೆ. ಬೆಂಗಳೂರಿನಲ್ಲಿ ಅನೇಕ ಕೆರೆಗಳು ಈ ರೀತಿಯಾಗಿವೆ. ಇಲ್ಲಿನ ನದಿಗಳು ಕೊಳಚೆಯನ್ನು ಸಾಗಿಸಲಷ್ಟೇ ಉಳಿದಿವೆ. ನಮ್ಮ ವಾತಾವರಣಕ್ಕೆ ಪೂರಕವಾದ ಮರಗಳನ್ನು ನೆಡುವ ಬದಲು, ಇನ್ಯಾವುದೋ ದೇಶದ ಗಿಡ ನೆಡಲಾಗುತ್ತಿದೆ’ ಎಂದು ವಿಷಾದಿಸಿದರು.

ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕುಮಾರ್ ಪುಷ್ಕರ್, ಅರಣ್ಯ ಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ, ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ವಿಜ್ಞಾನ ಅಧ್ಯಯನ ಕೇಂದ್ರದ ಗೌರವ ಪ್ರಾಧ್ಯಾಪಕ ರಮಣ್ ಸುಕುಮಾರ್, ಭಾರತೀಯ ವನ್ಯಜೀವಿ ಟ್ರಸ್ಟ್‌ನ ಜಲ ಯೋಜನೆಗಳ ಕಾರ್ಯ ನಿರ್ವಾಹಕ ಟ್ರಸ್ಟಿ ಬಿ.ಸಿ. ಚೌಧರಿ ಸೇರಿ ವಿವಿಧ ತಜ್ಞರು ವಿಷಯ ಮಂಡಿಸಿದರು. ಸಿನ್ಹಾಸಿ ಸಂಸ್ಥೆ ಸಂಸ್ಥಾಪಕಿ ಮಿಮಿ ಪಾರ್ಥಸಾರಥಿ ಸಂವಾದ ನಡೆಸಿಕೊಟ್ಟರು.

ಚಿತ್ರಾವಳಿ

ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯನ್ನು ಖಂಡಿಸಿ ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ನಿಗಮ್ ಭಂಡಾರಿ ಮತ್ತು ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ ಗೌಡ ನೇತೃತ್ವದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಪಂಜಿನ ಮೆರವಣಿಗೆ ಬುಧವಾರ ನಡೆಯಿತು

ಪ್ರವಾಸಿಗರ ಮೇಲೆ ನಡೆದ ಭಯೋತ್ಪಾದಕರ ದಾಳಿ ಖಂಡಿಸಿ ಬೆಂಗಳೂರಿನಲ್ಲಿರುವ ಬಿಜೆಪಿಯ ರಾಜ್ಯ ಕಚೇರಿ ಜಗನ್ನಾಥ ಭವನದ ಎದುರು ಬಿಜೆಪಿ ಮುಖಂಡರು ಮೋಂಬತ್ತಿ ಹಿಡಿದು ಪ್ರತಿಭಟನೆ ನಡೆಸಿದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌. ಅಶೋಕ್, ಸಂಸದ ಪಿ.ಸಿ.ಮೋಹನ್, ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಶಾಸಕ ವೇದವ್ಯಾಸ ಕಾಮತ್, ಬೆಂಗಳೂರು ಉತ್ತರ ಜಿಲ್ಲಾ ಅಧ್ಯಕ್ಷ ಎಸ್ ಹರೀಶ್, ಕೇಂದ್ರ ಜಿಲ್ಲಾ ಅಧ್ಯಕ್ಷ ಸಪ್ತಗಿರಿ ಗೌಡ ಸೇರಿದಂತೆ ಹಲವರು ಪಾಲ್ಗೊಂಡಿದ್ದರು

ಉಗ್ರರ ದಾಳಿಯನ್ನು ಖಂಡಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು

‘ಅಂಬೇಡ್ಕರ್ ಆರ್ಥಿಕ ಚಿಂತನೆ ಇಂದಿಗೂ ಪ್ರಸ್ತುತ’

ಬೆಂಗಳೂರು: ‘ಅಂಬೇಡ್ಕರ್ ಅವರ ಆರ್ಥಿಕ ಚಿಂತನೆಗಳು ಇಂದಿಗೂ ಪ್ರಸ್ತುತ. ಅಂಬೇಡ್ಕರ್ ಹೇಳಿದಂತೆ ಎಲ್ಲರನ್ನೂ ಒಳಗೊಂಡ ಅಭಿವೃದ್ಧಿ ಪಥದೆಡೆಗೆ ಸಾಗುವ ಆರ್ಥಿಕ ನೀತಿಗಳು ಅನುಷ್ಠಾನವಾಗಬೇಕು’ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಎಸ್‌.ಆರ್‌.ಕೇಶವ ಅಭಿಪ್ರಾಯ ವ್ಯಕ್ತಪಡಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕಾಲೇಜು ಮತ್ತು ಕಾನೂನು ಅಧ್ಯಯನ ವಿಭಾಗದ ಸಹಯೋಗದಲ್ಲಿ ಆಯೋಜಿಸಿದ್ದ ಡಾ.ಬಿ.ಆರ್‌. ಅಂಬೇಡ್ಕರ್ ಜಯಂತಿಯಲ್ಲಿ ಅವರು ಮಾತನಾಡಿದರು.

ಬೆಂಗಳೂರು ವಿಶ್ವವಿದ್ಯಾಲಯದ ಡೀನ್ ಪ್ರೊ. ಸೋಮಶೇಖರ್ ಅವರು ಮಾತನಾಡಿ, ‘ಅಂಬೇಡ್ಕರ್ ಚಿಂತನೆಗಳು, ಸಂಶೋಧನೆಗಳು, ವಿಚಾರಗಳು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪುವಂತೆ ಆಗಬೇಕು. ಆಗ ಅಂಬೇಡ್ಕರ್ ಜಯಂತಿ ಮತ್ತಷ್ಟು ಅರ್ಥಪೂರ್ಣವಾಗಿ ಇರುತ್ತದೆ’ ಎಂದರು.

ನ್ಯಾ. ಅಶೋಕ್ ಜಿ. ನಿಜಗಣ್ಣವರ್ ಅಭಿಮತ

ಡಿಜಿಟಲ್ ತಂತ್ರಜ್ಞಾನ: ಅಪಾಯದ ಬಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಿಜಿಟಲ್ ಜಗತ್ತು ಬೆಳವಣಿಗೆಯ ಸಾಧನವಾಗಬೇಕು. ಆದರೆ ಇದು ಗೊಂದಲ ಮತ್ತು ಅಪಾಯದ ಬಲೆಯಾಗುತ್ತಿದೆ’ ಎಂದು ನ್ಯಾಯಮೂರ್ತಿ ಅಶೋಕ್ ಜಿ. ನಿಜಗಣ್ಣವರ್ ಕಳವಳ ವ್ಯಕ್ತಪಡಿಸಿದರು.

ನಗರದ ಸೌಂದರ್ಯ ಕಾನೂನು ಕಾಲೇಜಿನಲ್ಲಿ ನಡೆದ ‘ಡಿಜಿಟಲ್ ಜಗತ್ತಿನಲ್ಲಿ ಮಕ್ಕಳ ರಕ್ಷಣೆ’ ರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಮಕ್ಕಳ ಸಮಗ್ರ ಯೋಗಕ್ಷೇಮವನ್ನು ದೈಹಿಕ, ಭಾವನಾತ್ಮಕ ಮತ್ತು ಶೈಕ್ಷಣಿಕವಾಗಿ ಖಚಿತಪಡಿಸಿಕೊಳ್ಳುವುದು ಕೇವಲ ನೈತಿಕ ಬಾಧ್ಯತೆಯಲ್ಲ. ಕಾನೂನು ಮತ್ತು ಸಾಂವಿಧಾನಿಕ ಕರ್ತವ್ಯವಾಗಿದೆ. ಮಕ್ಕಳ ಸ್ಕ್ರೀನ್ ಸಮಯವನ್ನು ನಿಯಂತ್ರಿಸಬೇಕು. ಡಿಜಿಟಲ್ ಸಾಧನಗಳೊಂದಿಗೆ ತಮ್ಮ ಸಂವಹನದಲ್ಲಿ ಸ್ವಯಂ ಮಿತಿಗಳನ್ನು ಅಳವಡಿಸಬೇಕು. ಶಿಕ್ಷಣದ ಮೂಲಕ ಮಕ್ಕಳನ್ನು ಸಬಲೀಕರಣಗೊಳಿಸಿ, ಅರಿವಿನಿಂದ ಸಜ್ಜುಗೊಳಿಸಬೇಕು. ಬುದ್ಧಿವಂತ ಡಿಜಿಟಲ್ ನಡವಳಿಕೆಯನ್ನು ಪ್ರೋತ್ಸಾಹಿಸಬೇಕು ಎಂದು ಹೇಳಿದರು.

ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣೆ ಸಂಸ್ಥೆಯ ನಿರ್ದೇಶಕ ಸಿ.ಎಸ್‌. ಪಾಟೀಲ ಮಾತನಾಡಿ, ‘ಜಗತ್ತು ಕೃತಕ ಬುದ್ಧಿಮತ್ತೆಯತ್ತ ಸಾಗುತ್ತಿದೆ. ಡಿಜಿಟಲ್ ತಂತ್ರಜ್ಞಾನ ವ್ಯಾಪಕವಾಗಿ ಬದಲಾಗುತ್ತಿದ್ದು, ನಾವು ತಂತ್ರಜ್ಞಾನದ ಮೇಲೆ ಸವಾರಿ ಮಾಡಬೇಕು. ಅದರ ದಾಸರಾಗಬಾರದು. ಡಿಜಿಟಲ್ ವಿಕಾಸದ ಜೊತೆಯಲ್ಲಿ ನಾವು ಸುಗಮವಾಗಿ ಮುನ್ನಡೆಯುವಂತಾಗಬೇಕು’ ಎಂದರು.

ಸೌಂದರ್ಯ ಸಮೂಹ ಸಂಸ್ಥೆಗಳ ಸಿಇಒ ಕೀರ್ತನ್ ಕುಮಾರ್ ಎಂ. ಮಾತನಾಡಿ, ‘ಡಿಜಿಟಲ್ ಗೀಳು ಶೈಕ್ಷಣಿಕ ಸಮಸ್ಯೆಯಷ್ಟೇ ಅಲ್ಲ. ಸಾಮಾಜಿಕ ಸಮಸ್ಯೆಯೂ ಆಗಿದೆ. ಶಿಕ್ಷಣ ತಜ್ಞರು,

‘ಡಿಜಿಟಲ್ ಜಗತ್ತಿನಲ್ಲಿ ಮಕ್ಕಳ ರಕ್ಷಣೆ’ ರಾಷ್ಟ್ರೀಯ ಸಮ್ಮೇಳನದಲ್ಲಿ ನ್ಯಾಯಮೂರ್ತಿ ಅಶೋಕ್ ಜಿ. ನಿಜಗಣ್ಣವರ್ ಅವರನ್ನು ಗೌರವಿಸಲಾಯಿತು

ಪೋಷಕರು ಮತ್ತು ನೀತಿ ನಿರೂಪಕರು ಈ ಸಮಸ್ಯೆಯನ್ನು ತುರ್ತಾಗಿ ಪರಿಹರಿಸುವ ಅಗತ್ಯವಿದೆ. ಆಸ್ಟ್ರೇಲಿಯಾ 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಮಾಧ್ಯಮ ಪ್ರವೇಶವನ್ನು ನಿಷೇಧಿಸಿದ್ದು, ಭಾರತದಲ್ಲೂ ಇಂತಹ ಕಾನೂನು ತರಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಸೌಂದರ್ಯ ಕಾನೂನು ಕಾಲೇಜಿನ ಪ್ರಾಚಾರ್ಯೆ ರಾಜಶ್ರೀ ಕೆ., ಉಪ ಪ್ರಾಚಾರ್ಯ ವಿಶ್ವಾಸ್ ಪುಟ್ಟಸ್ವಾಮಿ ಉಪಸ್ಥಿತರಿದ್ದರು.

ಯುಪಿಎಸ್‌ಸಿ: ಕನ್ನಡಿಗರ ಸಾಧನೆ

ಮೇಘನಾಗೆ ಅಬ್ದುಲ್ ಕಲಾಂ ಪ್ರೇರಣೆ

421 ರ‍್ಯಾಂಕ್

ಹೆಸರು: ಬಿ.ಎಂ.ಮೇಘನಾ **ಊರು:** ಶಿವಮೊಗ್ಗ **ವಿದ್ಯಾರ್ಹತೆ:** ಬಿ.ಎ

ಹಿನ್ನೆಲೆ: ಮೇಘನಾ ಶಿವಮೊಗ್ಗದ ಡಿವಿಎಸ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕಿ ಎ.ಎಸ್. ವತ್ಸಲಾ ಮತ್ತು ವಕೀಲ ಬಿ.ವಿ.ಮೋಹನ್ ಅವರ ಪುತ್ರಿ. ಶಿವಮೊಗ್ಗದ ಮಂದಾರ ಜ್ಞಾನದೀಪ ಶಾಲೆಯಲ್ಲಿ 1ರಿಂದ 10ನೇ ತರಗತಿ ಓದಿದ್ದು, ಪದವಿಪೂರ್ವ ಶಿಕ್ಷಣವನ್ನು ಜಾವಳ್ಳಿಯ ಅರಬಿಂದೋ ಕಾಲೇಜಿನಲ್ಲಿ ಪೂರ್ಣಗೊಳಿಸಿದ್ದಾರೆ. ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿ ಪಡೆದಿದ್ದಾರೆ.

ಅಭಿಪ್ರಾಯ: 5ನೇ ಪ್ರಯತ್ನದಲ್ಲಿ ಯಶಸ್ಸು ಸಾಧಿಸಿರುವ ಮೇಘನಾ, 2008–09ರಲ್ಲಿ ಶಿವಮೊಗ್ಗಕ್ಕೆ ಬಂದಿದ್ದ ಮಾಜಿ ರಾಷ್ಟ್ರಪತಿ ಡಾ.ಎಪಿಜೆ ಅಬ್ದುಲ್ ಕಲಾಂ ಅವರು ಚಿಣ್ಣರನ್ನು ಉದ್ದೇಶಿಸಿ ಮಾತನಾಡುವಾಗ ಬದುಕಿನಲ್ಲಿ ಚಿಕ್ಕ ಗುರಿ ಇಟ್ಟುಕೊಳ್ಳುವುದು ಅಪರಾಧ ಎಂದು ಹೇಳಿದ್ದರು. ಮನೆಗೆ ಬಂದವಳೇ 'ಚಿಕ್ಕ ಗುರಿ, ದೊಡ್ಡ ಗುರಿ ಅಂದರೇನು?' ಎಂದು ಅಮ್ಮನ ಬಳಿ ಕೇಳಿ ತಿಳಿದುಕೊಂಡೆ. ಆಗ ಯುಪಿಎಸ್‌ಸಿ ಪರೀಕ್ಷೆ ಬರೆದು ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಳ್ಳುವ ಕನಸು ಹುಟ್ಟಿತ್ತು, ಅದು ಈಗ ನನಸಾಗಿದೆ' ಎಂದು 'ಪ್ರಜಾವಾಣಿ'ಯೊಂದಿಗೆ ಹರ್ಷ ವ್ಯಕ್ತಪಡಿಸಿದರು.

ಯುಪಿಎಸ್‌ಸಿ ಪರೀಕ್ಷೆಯಲ್ಲಿ ಕನ್ನಡ ಸಾಹಿತ್ಯವನ್ನು ಐಚ್ಛಿಕ ವಿಷಯವಾಗಿ ಆಯ್ಕೆ ಮಾಡಿಕೊಂಡು ಯಶಸ್ಸು ಪಡೆದಿರುವ ಇವರು, ಭರತನಾಟ್ಯ, ಸಂಗೀತ ಹಾಗೂ ಗಮಕ ಗಾಯನದ ಜೊತೆಗೆ ಶಿವಮೊಗ್ಗದ 'ಹೊಂಗಿರಣ' ಸಂಸ್ಥೆಯ ಮೂಲಕ ರಂಗ ಚಟುವಟಿಕೆಗಳಲ್ಲೂ ತೊಡಗಿಕೊಂಡಿದ್ದಾರೆ.

'ಐಪಿಎಸ್ ಅಧಿಕಾರಿಯಾಗುವ ಆಸೆ'

652 ರ‍್ಯಾಂಕ್

ಹೆಸರು: ಸಂಪ್ರೀತ್ ಸಂತೋಷ್ **ಊರು:** ಮಂಡ್ಯ

ಹಿನ್ನೆಲೆ: 2023–24ನೇ ಸಾಲಿನ ಯುಪಿಎಸ್‌ಸಿ ಫಲಿತಾಂಶದಲ್ಲಿ 868ನೇ ರ‍್ಯಾಂಕ್ ಪಡೆದು ಭಾರತೀಯ ಕಂದಾಯ ಸೇವೆಗೆ ಆಯ್ಕೆಯಾಗಿದ್ದರು. ಪ್ರಸ್ತುತ ಹೈದರಾಬಾದ್‌ನಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಈ ಸಾಲಿನ ಫಲಿತಾಂಶವನ್ನು ಮತ್ತಷ್ಟು ವೃದ್ಧಿಸಿಕೊಂಡಿದ್ದಾರೆ. ತಂದೆ ಸಂತೋಷ್ ಕುಮಾರ್ ಸಹಕಾರ ಇಲಾಖೆ ಅಧಿಕಾರಿಯಾಗಿದ್ದಾರೆ.

ಅಭಿಪ್ರಾಯ: ಬೆಂಗಳೂರಿನ ಪಿಇಎಸ್ ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವಿ ಪಡೆದೆ. ಭಾರತೀಯ ಆಡಳಿತ ಸೇವೆ, ಪೊಲೀಸ್ ಸೇವೆ ಸೇರಬೇಕು ಎನ್ನುವ ಗುರಿ ಇಟ್ಟುಕೊಂಡಿದ್ದೆ. ಮೊದಲ ಪ್ರಯತ್ನದಲ್ಲಿ ನಿರೀಕ್ಷಿತ ಅಂಕಗಳು ಬರಲಿಲ್ಲ. ಈಗ ಐಪಿಎಸ್ ಅಧಿಕಾರಿಯಾಗುವ ನಿರೀಕ್ಷೆ ಮೂಡಿದೆ.

'ಎನ್‌ಸಿಆರ್‌ಟಿ ಪಠ್ಯ ಓದಿನಿಂದ ಆಸಕ್ತಿ'

724 ರ‍್ಯಾಂಕ್

ಹೆಸರು: ಎಂ.ಆರ್. ನಿಖಿಲ್ **ಊರು:** ಮೈಸೂರು **ವಿದ್ಯಾರ್ಹತೆ:** ಬಿ.ಇ

ಹಿನ್ನೆಲೆ: ಮೈಸೂರಿನ ಕುವೆಂಪುನಗರದ ಐಶ್ವರ್ಯ ಲೇಔಟ್ ನಿವಾಸಿ, ಪೌರಾಡಳಿತ ಇಲಾಖೆ ನಿವೃತ್ತ ಪೌರಾಯುಕ್ತ ರಮೇಶ್ ಹಾಗೂ ಶ್ರೀರಂಗಪಟ್ಟಣ ಬಿಇಒ ಕಚೇರಿಯ ಶಿಕ್ಷಣ ಸಂಯೋಜಕಿ ಬಿ.ಕೆ. ಪ್ರತಿಮಾ ದಂಪತಿ ಪುತ್ರ, ಕೌಟಿಲ್ಯ ಶಾಲೆಯಲ್ಲಿ ಪ್ರೌಢಶಿಕ್ಷಣ, ಕಾವೇರಿ ಕಾಲೇಜಿನಲ್ಲಿ ಪಿಯು, ಎನ್‌ಐಇ ಕಾಲೇಜಿನಲ್ಲಿ ಬಿ.ಇ. ಪದವಿ.

ಐದನೇ ಪ್ರಯತ್ನದಲ್ಲಿ ಯಶಸ್ಸು, ಭೂಗೋಳ ಶಾಸ್ತ್ರ ಐಚ್ಛಿಕ ವಿಷಯ. 2022–23ನೇ ಸಾಲಿನ ಕೆಎಎಸ್ ಪರೀಕ್ಷೆಯಲ್ಲಿ ನಾಲ್ಕನೇ ರ‍್ಯಾಂಕ್ ವಿಜೇತ. ಸದ್ಯ ಬೆಂಗಳೂರಿನಲ್ಲಿ ಸಹಾಯಕ ಕಾರ್ಮಿಕ ಆಯುಕ್ತ.

ಅಭಿಪ್ರಾಯ: ಎಂಜಿನಿಯರಿಂಗ್ ನಾಲ್ಕನೇ ವರ್ಷದಲ್ಲಿರುವಾಗ ಎನ್‌ಸಿಆರ್‌ಟಿ ಪಠ್ಯಪುಸ್ತಕಗಳ ಓದಿನಿಂದ ಸಿದ್ಧತೆ ಶುರುವಾಯಿತು. ಹಿಂದಿನ ಎರಡು ಬಾರಿ ಸಂದರ್ಶನದ ಹಂತ ತಲುಪಿದ್ದೆ. ಕೆಎಎಸ್ ಉತ್ತೀರ್ಣನಾದ ಬಳಿಕ ಉದ್ಯೋಗದ ಜೊತೆಗೆ ತಯಾರಿ ಮುಂದುವರಿಸಿದ್ದೆ. ಪೋಷಕರ ಜೊತೆಗೆ ಹಿರೇಮಠ ಅಂತಹವರ ಮಾರ್ಗದರ್ಶನ ನೆರವಾಯಿತು. ನಿತ್ಯ 8–10 ಗಂಟೆ ಓದುತ್ತಿದ್ದೆ. ಹಿಂದಿನ ಪರೀಕ್ಷೆಗಳ ಅನುಭವ ಸಹಾಯಕ್ಕೆ ಬಂತು. ಪತ್ರದ ಜೊತೆಗೆ ಆನ್‌ಲೈನ್ ಓದು ಸಹ ಇತ್ತು.

ಆರನೇ ಪ್ರಯತ್ನದಲ್ಲಿ ಯಶಸ್ಸು

739 ರ‍್ಯಾಂಕ್

ಹೆಸರು: ಇಂದ್ರಾಕ್ಷಿತಾ **ಊರು:** ಕುಂದಾಪುರದ ಬೋಳಂಬಳ್ಳಿ (ಹೈದರಾಬಾದ್‌ನಲ್ಲಿ ನೆಲೆಸಿದ್ದಾರೆ)

ಹಿನ್ನೆಲೆ: ಹೈದರಾಬಾದ್‌ನ ಉದ್ಯಮಿ ರಾಘವೇಂದ್ರ ರಾವ್, ಮಮತಾ ದಂಪತಿ ಪುತ್ರಿ, ಪ್ರಾಥಮಿಕ ಶಿಕ್ಷಣದಿಂದ ಸ್ನಾತಕೋತ್ತರ ಪದವಿವರೆಗೆ ಹೈದರಾಬಾದ್‌ನಲ್ಲಿಯೇ ಕಲಿತವರು. ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅವರು, ಯುಪಿಎಸ್‌ಸಿಯಲ್ಲಿ ಆರನೇ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ.

ಅಭಿಪ್ರಾಯ: 'ಚಿಕ್ಕಂದಿನಿಂದಲೇ ನಾಗರಿಕ ಸೇವಾ ಅಧಿಕಾರಿಯಾಗಬೇಕೆಂಬ ಕನಸಿತ್ತು, ಪರೀಕ್ಷೆಗಾಗಿ ದಿನದಲ್ಲಿ, ವಾರದಲ್ಲಿ ಸಿಲೆಬಸ್ ಓದಿ ಪೂರ್ತಿಗೊಳಿಸಬೇಕೆಂಬ ಗುರಿ ಹಾಕಿಕೊಳ್ಳುತ್ತಿದ್ದೆ, ಅದಕ್ಕಾಗಿ ದಿನದಲ್ಲಿ 8ರಿಂದ 10 ಗಂಟೆ ಓದುತ್ತಿದ್ದೆ, ಪರೀಕ್ಷೆ ಹತ್ತಿರ ಬರುವಾಗ ದಿನದಲ್ಲಿ 10 ಗಂಟೆ ಓದುತ್ತಿದ್ದೆ.

'ಪ್ರಜಾವಾಣಿ ಓದು ದೊಡ್ಡ ಪರಿಣಾಮ'

812 ರ‍್ಯಾಂಕ್

ಹೆಸರು: ತನಕ ಡಿ. ಆನಂದ್ **ಊರು:** ಮೈಸೂರು **ವಿದ್ಯಾರ್ಹತೆ:** ಬಿ.ಇ

ಹಿನ್ನೆಲೆ: ಮೈಸೂರಿನ ಶ್ರೀರಾಂಪುರದ ನಿವಾಸಿ, ಡಿ. ಕೆ.ಎ.ದಿವಾಕರ್ ಹಾಗೂ ಗ್ರೇಸಿ ಆಶಾಲತಾ ದಂಪತಿ ಪುತ್ರ, ಮರಿಮಲ್ಲಪ್ಪ ಶಿಕ್ಷಣ ಸಂಸ್ಥೆಯಲ್ಲಿ ಪಿಯುವರೆಗೆ, ಎನ್‌ಐಇ ಕಾಲೇಜಿನಲ್ಲಿ ಬಿ.ಇ. ಪದವಿ. ಆರನೇ ಪ್ರಯತ್ನದಲ್ಲಿ ಯಶಸ್ಸು, ಸೋಶಿಯಾಲಜಿ ಐಚ್ಛಿಕ ವಿಷಯ ಓದು. 2 ಬಾರಿ ಸಂದರ್ಶನ ಎದುರಿಸಿದ್ದರು. ಸದ್ಯ ಮೈಸೂರಿನ ನವೋದಯ ಫೌಂಡೇಶನ್ ಸಂಸ್ಥೆಯ ನವೋದ– ಪ್ರಮುಖ ತರಬೇತಿ ಸಂಸ್ಥೆಯಲ್ಲಿ ಬೋಧಕ.

ಅಭಿಪ್ರಾಯ: ಮೈಸೂರಿನ ಸರ್ಕಾರಿ ಕಾಲೇಜಿನಲ್ಲಿ ಓದಿದ ಅವರು ಯುಪಿಎಸ್‌ಸಿಯಲ್ಲಿ 340ನೇ ಸ್ಥಾನಗಳಿಸಿದ್ದು ಹೆಚ್ಚು ಪ್ರೇರೇಪಿಸಿತು. ಕೋವಿಡ್ ಲಾಕ್‌ಡೌನ್ ವೇಳೆ ದೃಢ ನಿರ್ಧಾರ ಮಾಡಿ ಹೆಚ್ಚಿನ ಅಧ್ಯಯನದಲ್ಲಿ ತೊಡಗಿದೆ. ನಿತ್ಯ 6 ಗಂಟೆ ಓದುತ್ತಿದ್ದೆ. ಮುಖ್ಯ ಪರೀಕ್ಷೆ ತಯಾರಿ ವೇಳೆ 10ರಿಂದ 12 ಗಂಟೆಗಳಿಗೂ ತಲುಪುತ್ತಿತ್ತು. ತರಬೇತಿ ನಿರತರೊಂದಿಗೆ ಚರ್ಚೆ, 'ಪ್ರಜಾವಾಣಿ' ಪತ್ರಿಕೆಯ ಓದು ದೊಡ್ಡ ಪರಿಣಾಮವನ್ನು ಬೀರಿದೆ.

ಮಂಗಳೂರಿನಲ್ಲಿ ವಾಟರ್ ಮೆಟ್ರೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ ಮೊದಲ ಬಾರಿಗೆ ವಾಟರ್ ಮೆಟ್ರೊ ಯೋಜನೆ ಅನುಷ್ಠಾನ ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಜಲಸಾರಿಗೆ ಮಂಡಳಿ ಸಭೆಯಲ್ಲಿ 'ಕರ್ನಾಟಕ ಜಲ ಸಾರಿಗೆ ನೀತಿ 2024' ಬಿಡುಗಡೆ ಮಾಡಲಾಯಿತು. ಈ ವೇಳೆ, ಮಂಗಳೂರಿನ ಗುರುಪುರ–ನೇತ್ರಾವತಿ ನದಿಯಲ್ಲಿ ಆರಂಭಿಸಲಿರುವ ವಾಟರ್ ಮೆಟ್ರೊ ಯೋಜನೆಯ ಪ್ರಸ್ತಾವನೆಗೆ ಮುಖ್ಯಮಂತ್ರಿ ಅನುಮೋದನೆ ನೀಡಿದರು.

ಸಿದ್ದರಾಮಯ್ಯ

ಸಾಗರಮಾಲಾ ಯೋಜನೆಯಡಿ ಮಂಗಳೂರಿನಲ್ಲಿ ಕರ್ನಾಟಕ ಜಲಸಾರಿಗೆ ತರಬೇತಿ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಗೂ ಒಪ್ಪಿಗೆ ನೀಡಿದರು.

ಪುನರ್ವಸತಿ, ಬಂದರು ಸಂಬಂಧಿತ ಕಾರ್ಯಾಚರಣೆಗಳಿಗೆ ಭೂಮಿ ಹಂಚಿಕೆ ಮತ್ತು ಗುತ್ತಿಗೆ ಅವಧಿಯನ್ನು ಪರಿಶೀಲಿಸಿ ಪ್ರಸ್ತಾವನೆ ಸಲ್ಲಿಸಲು ಹಾಗೂ ಅತಿಕ್ರಮಣ ಮಾಡಿದವರನ್ನು ಕೂಡಲೇ ತೆರವುಗೊಳಿಸುವಂತೆ ಮುಖ್ಯಮಂತ್ರಿ ಸೂಚಿಸಿದರು.

ಉತ್ತರಕನ್ನಡ ಜಿಲ್ಲೆಯಲ್ಲಿ ಗುರುತಿಸಲಾಗಿರುವ ದ್ವೀಪಗಳ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಡ್ರೋನ್ ಸರ್ವೆ ಮಾಡಿಸಿ, ಮೂರು ತಿಂಗಳ ಒಳಗೆ ವರದಿ ನೀಡುವಂತೆ ಅಲ್ಲಿನ ಜಿಲ್ಲಾಧಿಕಾರಿಗೆ ಸಿದ್ದರಾಮಯ್ಯ ನಿರ್ದೇಶನ ನೀಡಿದರು.

ಆಂಧ್ರಪ್ರದೇಶ, ವಿಶಾಖಪಟ್ಟಣ, ಕೇರಳ, ತಮಿಳುನಾಡು, ಗುಜರಾತ್‌ನಲ್ಲಿ ಬಂದರುಗಳು ಹೇಗೆ ಕಾರ್ಯನಿರ್ವಹಿಸುತ್ತಿವೆ ಎಂಬುದರ ಬಗ್ಗೆ ಅಧ್ಯಯನ ಮಾಡಿ ವರದಿ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಒಳನಾಡು ಮತ್ತು ಜಲಸಾರಿಗೆ ಸಚಿವ ಮಂಕಾಳ ವೈದ್ಯ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತು ಇತರ ಅಧಿಕಾರಿಗಳು ಇದ್ದರು.

ಮಂಚೇನಹಳ್ಳಿಯಲ್ಲಿ ದಾರಿ ವಿಚಾರವಾಗಿ ಘರ್ಷಣೆ

ರೈತನ ತೊಡೆಗೆ ಗುಂಡೇಟು

ಪ್ರಜಾವಾಣಿ ವಾರ್ತೆ

ಮಂಚೇನಹಳ್ಳಿ (ಚಿಕ್ಕಬಳ್ಳಾಪುರ): ತಾಲ್ಲೂಕಿನ ಕನಗಾನಕೊಪ್ಪ ಸಮೀಪದ ಬೆಟ್ಟದಲ್ಲಿ ಕಲ್ಲು ಗಣಿಗಾರಿಕೆ ಲಾರಿಗಳ ಸಂಚಾರಕ್ಕೆ ದಾರಿ ಮಾಡುವ ವಿಚಾರವಾಗಿ ಬುಧವಾರ ಎರಡು ಗುಂಪುಗಳ ನಡುವೆ ನಡೆದ ಗಲಾಟೆಯಲ್ಲಿ ರೈತರೊಬ್ಬರ ಮೇಲೆ ಗುಂಡು ಹಾರಿಸಲಾಗಿದೆ.

ಸಕಲೇಶ್ ಎಂಬಾತ ಸ್ಥಳೀಯ ರೈತ ರವಿಕುಮಾರ್ ಮೇಲೆ ಗುಂಡು ಹಾರಿಸಿದ್ದಾರೆ. ಸಕಲೇಶ್, ವಿಧಾನ ಪರಿಷತ್ ಮಾಜಿ ಸದಸ್ಯ, ಬಿಜೆಪಿ ಮುಖಂಡ ವೈ.ಎ.ನಾರಾಯಣಸ್ವಾಮಿ ಅವರ ಆಪ್ತ ಎನ್ನಲಾಗಿದೆ. ಈ ಗಣಿಯು ನಾರಾಯಣಸ್ವಾಮಿ ಅವರ ಪತ್ನಿ ಉಷಾ ನಂದಿನಿ ಹೆಸರಿನಲ್ಲಿದೆ. ದಾಳಿಯಿಂದ ಆಕ್ರೋಶಗೊಂಡ ಗ್ರಾಮಸ್ಥರು ಬುಧವಾರ ಸಂಜೆ ಮಂಚೇನಹಳ್ಳಿಯಲ್ಲಿ ಪ್ರತಿಭಟನೆ ನಡೆಸಿದರು.

ಏನಿದು ಘಟನೆ: ಗ್ರಾಮದ ಸಮೀಪ ಕಲ್ಲು ಗಣಿಗಾರಿಕೆಗೆ ರೈತರ ವಿರೋಧ ಇತ್ತು. ಗಣಿಗಾರಿಕೆ ಲಾರಿಗಳು ಸಂಚರಿಸಲು ರಸ್ತೆ ಮಾಡಲು ಗಣಿ ಮಾಲೀಕರು ಮುಂದಾಗಿದ್ದರು. ಇದಕ್ಕೆ ವಿರೋಧ ವ್ಯಕ್ತಪಡಿಸಿ ಫೆಬ್ರುವರಿಯಲ್ಲಿ ಮಂಚೇನ ಹಳ್ಳಿಯಲ್ಲಿ ರೈತ ಸಂಘ, ಮಂಚೇನಹಳ್ಳಿ ತಾಲ್ಲೂಕು ಪರಿಸರ ಹಿತರಕ್ಷಣಾ ಸಮಿತಿ ಕಾರ್ಯಕರ್ತರು ಪ್ರತಿಭಟಿಸಿದ್ದರು.

'ಬೆಟ್ಟದ ತಪ್ಪಲಿನಲ್ಲಿ ಮುನೇಶ್ವರ ಗುಡಿ, ತಿಮ್ಮರಾಯನಗುಡಿ ಇದೆ. ಸ್ವಚ್ಛ ಗಾಳಿ, ನೀರು, ಮೇವು ನೀಡುತ್ತಿರುವ ನಮ್ಮ ಊರಿನ ಬೆಟ್ಟ ಗುಡ್ಡಗಳಲ್ಲಿ ಗಣಿಗಾರಿಕೆ ಮಾಡಲು ಬಿಡುವುದಿಲ್ಲ' ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದ್ದರು.

ಸಕಲೇಶ್ ಗುಂಡು ಹಾರಿಸುತ್ತಿರುವ ದೃಶ್ಯ

ಇದೇ ವಿಚಾರವಾಗಿ ಈಚೆಗೆ ವೃತ್ತ ನಿರೀಕ್ಷಕ ಕೆ.ಪಿ.ಸತ್ಯನಾರಾಯಣ್, ಗ್ರಾಮಸ್ಥರು ಮತ್ತು ಗಣಿಗಾರಿಕೆಗೆ ಸಂಬಂಧಿಸಿದವರ ಜತೆ ಸಭೆ ಕೂಡ ನಡೆಸಿದ್ದರು.

ಬುಧವಾರ ಸಕಲೇಶ್, ಜೆಸಿಬಿ ಮತ್ತು ಟ್ರ್ಯಾಕ್ಟರ್‌ಗಳನ್ನು ತಂದು ರಸ್ತೆ ನಿರ್ಮಿಸಲು ಮುಂದಾಗಿದ್ದಾರೆ. ಅವರ ಜತೆ 40ಕ್ಕೂ ಹೆಚ್ಚು ಜನರನ್ನು ಕರೆ ತಂದಿದ್ದರು. ರಸ್ತೆ ನಿರ್ಮಾಣಕ್ಕೆ ಸ್ಥಳೀಯರು ವಿರೋಧ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದಿದೆ. ಆಗ ಸಕಲೇಶ್, ರಿವಾಲ್ವರ್‌ನಿಂದ ರವಿಕುಮಾರ್ ಮೇಲೆ ಗುಂಡು ಹಾರಿಸಿದ್ದು ಅವರ ಎಡಗಾಲಿನ ತೊಡೆಗೆ ತಗುಲಿದೆ.

'ಬರ್ರೊ ಯಾರು ಬರುತ್ತೀರಾ ಬರ್ರೊ' ಎಂದು ಕಿರುಚುತ್ತಾ ಓಡಾಡುವ ದೃಶ್ಯಗಳ ವಿಡಿಯೊ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ.

'ಗ್ರಾಮಸ್ಥರು ದಾಳಿ ಮಾಡಿದ ಕಾರಣ ಗುಂಡು ಹಾರಿಸಿದೆವು' ಎಂದು ಗಣಿಗಾರಿಕೆಗೆ ಮುಂದಾಗಿದ್ದವರ ಕಡೆಯವರು ತಿಳಿಸಿದರೆ, 'ಇದೆಲ್ಲವೂ ಸುಳ್ಳು. ಯಾರ ಮೇಲೂ ದಾಳಿ ಮಾಡಿಲ್ಲ. ಉದ್ದೇಶಪೂರ್ವಕವಾಗಿ ಗುಂಡು ಹಾರಿಸಿದ್ದಾರೆ' ಎಂದು ಗ್ರಾಮಸ್ಥರು ದೂರಿದ್ದಾರೆ.

ರವಿಕುಮಾರ್, ಸಕಲೇಶ್ ಮತ್ತಿತರರ ವಿರುದ್ಧ ಮಂಚೇನಹಳ್ಳಿ ಠಾಣೆಗೆ ದೂರು ನೀಡಿದ್ದಾರೆ. ರಾತ್ರಿವರೆಗೂ ಗೌರಿಬಿದನೂರು ಮತ್ತು ಮಂಚೇನಹಳ್ಳಿ ಪೊಲೀಸರು ಸ್ಥಳದಲ್ಲಿ ಇದ್ದರು.

ಆರೋಪಿ ಬಂಧನ

ಗುಂಡು ಹಾರಿಸಿದ ಸಕಲೇಶ್ ಅಲ್ಲಿಂದ ಪರಾರಿಯಾಗಿದ್ದ. ವಿಶೇಷ ತಂಡ ರಚಿಸಿ ಬಂಧಿಸಿದ್ದೇವೆ. ಗ್ರಾಮಸ್ಥರ ಜತೆಯೂ ಮಾತುಕತೆ ನಡೆಸಿದ್ದೇವೆ. ಈ ಬಗ್ಗೆ ಕಠಿಣ ಕ್ರಮಕೈಗೊಳ್ಳುತ್ತೇವೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ ತಿಳಿಸಿದ್ದಾರೆ.

'ರೈತರು ಚುನಾವಣೆಗೆ ಸ್ಪರ್ಧಿಸಬೇಕು'

ಪ್ರಜಾವಾಣಿ ವಾರ್ತೆ

ಸಂಕೇಶ್ವರ: 'ರಾಜ್ಯದಲ್ಲಿ ರೈತರ ಸರ್ಕಾರ ಅಸ್ತಿತ್ವಕ್ಕೆ ಬರಬೇಕಿದ್ದರೆ, ಮುಂಬರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ರೈತರು ಸ್ಪರ್ಧಿಸಬೇಕು. ರೈತರ ಶಕ್ತಿ ಮತ್ತು ಬೇಡಿಕೆಗಳು ಏನು ಎಂಬುದು ಎಲ್ಲರಿಗೂ ಗೊತ್ತಾಗಬೇಕು' ಎಂದು ರೈತ ಸಂಘಗಳ ಏಕೀಕರಣ ಸಮಿತಿಯ ರಾಜ್ಯ ಸಂಚಾಲಕ ಪಚ್ಚೆ ನಂಜುಂಡಸ್ವಾಮಿ ಕರೆ ನೀಡಿದರು.

ಪಚ್ಚೆ ನಂಜುಂಡ ಸ್ವಾಮಿ

ನಗರದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆ ಬುಧವಾರ ಹಮ್ಮಿಕೊಂಡಿದ್ದ ರೈತ ಜಾಗೃತಿ ಸಮಾವೇಶದಲ್ಲಿ ಮಾತನಾಡಿದ ಅವರು, ತರಕಾರಿ ಬೆಳೆಗಳು ಅಲ್ಪಾವಧಿಗೆ ಬಾಳಿಕೆ ಬರುತ್ತವೆ. ಶೀತಲೀಕರಣ ಘಟಕ ಸ್ಥಾಪಿಸಲು ಆದ್ಯತೆ ನೀಡಬೇಕು' ಎಂದರು.

ಬಳ್ಳಾರಿಯಲ್ಲಿ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

₹40 ಕೋಟಿ ಕೇಳಲು ನಿರ್ಧಾರ

● ಹರಿಶಂಕರ್ ಆರ್.

ಬಳ್ಳಾರಿ: ಈ ವರ್ಷ ಡಿಸೆಂಬರ್‌ನಲ್ಲಿ ಬಳ್ಳಾರಿಯಲ್ಲಿ ಜರುಗುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಖರ್ಚಿಗಾಗಿ ಸರ್ಕಾರದಿಂದ ₹40 ಕೋಟಿ ಅನುದಾನ ಕೇಳಿ ಪ್ರಸ್ತಾವ ಸಲ್ಲಿಸಲು ಕನ್ನಡ ಸಾಹಿತ್ಯ ಪರಿಷತ್ತು ನಿರ್ಧರಿಸಿದೆ. ಕಳೆದ ತಿಂಗಳು ಮಾರ್ಚ್ 21ರಂದು ನಡೆದ ಪರಿಷತ್ತಿನ ಕಾರ್ಯಕಾರಿ ಸಭೆಯಲ್ಲಿ ಇದರ ಬಗ್ಗೆ ಚರ್ಚೆಯಾಗಿದೆ.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಪರಿಷತ್ತು ಕೋರುವ ಅನುದಾನವನ್ನು ಸರ್ಕಾರ ಬಿಡುಗಡೆ ಮಾಡುತ್ತದೆ. ಹಾವೇರಿಯಲ್ಲಿ ನಡೆದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ವೆಚ್ಚಕ್ಕೆ ಸರ್ಕಾರದ ಆಯ-ವ್ಯಯದ ಮಂಡನೆಯಲ್ಲಿ ₹20 ಕೋಟಿ ಮೀಸಲಿಡಲಾಗಿತ್ತು. ನಂತರ ಹೆಚ್ಚುವರಿಯಾಗಿ ಖರ್ಚಾದ ₹5 ಕೋಟಿ ಬಿಡುಗಡೆ ಮಾಡಿತ್ತು.

'ಮಂಡ್ಯದಲ್ಲಿ ಜರುಗಿದ 87ನೇ ಸಮ್ಮೇಳನದ ವೆಚ್ಚಕ್ಕಾಗಿ ಮೊದಲಿಗೆ ₹25 ಕೋಟಿ ಬಿಡುಗಡೆ ಮಾಡಿ, ನಂತರ ಹೆಚ್ಚುವರಿಯಾಗಿ ಖರ್ಚಾದ ₹5 ಕೋಟಿ ಅನುದಾನವನ್ನು ಸರ್ಕಾರವು ಬಿಡುಗಡೆ ಮಾಡಿತು. ಬಳ್ಳಾರಿಯಲ್ಲಿ ನಡೆಯುವ 88ನೇ ಸಮ್ಮೇಳನದ ವೆಚ್ಚಕ್ಕಾಗಿ ಕನಿಷ್ಠ ₹40 ಕೋಟಿ ಅನುದಾನ ನೀಡಲು ಸರ್ಕಾರಕ್ಕೆ ಕೋರಬೇಕು' ಎಂದು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅಧ್ಯಕ್ಷ ಮಹೇಶ ಜೋಶಿ ಪ್ರಸ್ತಾಪಿಸಿದ್ದಾರೆ.

ಬಳ್ಳಾರಿ, ವಿಜಯನಗರ ಜಿಲ್ಲೆ ಸೇರಿ ಒಂದು ಸಮ್ಮೇಳನ ನಡೆಯುತ್ತಿದೆ. ಅದಕ್ಕೆ ₹40 ಕೋಟಿ ಅನುದಾನ ಕೋರಿ ಪ್ರಸ್ತಾವ ಸಲ್ಲಿಸಲು ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿದೆ

ಮಹೇಶ ಜೋಶಿ
ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್ತು

ಜೋಶಿ ಅವರ ಈ ಪ್ರಸ್ತಾವಕ್ಕೆ ಕಾರ್ಯಕಾರಿ ಸಮಿತಿಯು ಸಮ್ಮತಿಸಿದೆ. ಸಭಾ ನಡಾವಳಿಗಳಿಂದ ಇದು ಗೊತ್ತಾಗಿದೆ. 67 ವರ್ಷಗಳ ಬಳಿಕ ಕನ್ನಡದ ಉತ್ಸವವು ಅದ್ದೂರಿಯಾಗಿ ನೆರವೇರುವ ಲಕ್ಷಣಗಳು ಗೋಚರಿಸಿವೆ. ಆದರೆ, ಬಳ್ಳಾರಿಯಲ್ಲಿ ಎಲ್ಲಿ ಸಮ್ಮೇಳನ ನಡೆಯಬೇಕು ಎಂಬುದು ಸಮಿತಿಯಲ್ಲಿ ಇನ್ನೂ ನಿರ್ಧಾರವಾಗಿಲ್ಲ.

ಮಂಡ್ಯ ಸಮ್ಮೇಳನಕ್ಕೆ ₹29.65 ಕೋಟಿ ಖರ್ಚು: ಕಳೆದ ವರ್ಷ ಡಿಸೆಂಬರ್ 20ರಿಂದ 22ರವರೆಗೆ ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಒಟ್ಟು ₹29.65 ಕೋಟಿ ವೆಚ್ಚವಾಗಿತ್ತು. ಈ ಪೈಕಿ ₹3.17 ಕೋಟಿ ಜಿಎಸ್‌ಟಿ, ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ (ಎಂಸಿಎ) ಸೇವಾ ಶುಲ್ಕ ₹1.08 ಕೋಟಿ ಆಗಿತ್ತು. ಸರ್ಕಾರ 2 ಕಂತುಗಳಲ್ಲಿ ಒಟ್ಟು ₹30 ಕೋಟಿ ಅನುದಾನ ನೀಡಿತ್ತು. ಎಲ್ಲ ಮೂಲಗಳಿಂದ ಒಟ್ಟು ₹32.74 ಕೋಟಿ ಸಂಗ್ರಹವಾಗಿತ್ತು.

ಶ್ರೀಮತಿಗೆ 'ಅನುಪಮಾ ನಿರಂಜನ ಪ್ರಶಸ್ತಿ'

ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರದ 2022ನೇ ಸಾಲಿನ 'ಡಾ. ಅನುಪಮಾ ನಿರಂಜನ ವೈದ್ಯಕೀಯ ಹಾಗೂ ವಿಜ್ಞಾನ ಸಾಹಿತ್ಯ ಪ್ರಶಸ್ತಿ'ಗೆ ಮೈಸೂರಿನ ಶ್ರೀಮತಿ ಹರಿಪ್ರಸಾದ್ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ₹25 ಸಾವಿರ ನಗದು ಒಳಗೊಂಡಿದೆ.

ಆಯುಕ್ತರ ಕಛೇರಿ
ಮಹಾನಗರಪಾಲಿಕೆ, ಬಳ್ಳಾರಿ–583101.
ದೂರವಾಣಿ ಸಂಖ್ಯೆ : 08392–273479 /278168
ಫ್ಯಾಕ್ಸ್ : 08392–273477
ವೆಬ್‌ಸೈಟ್ : www.bellarycity.gov.in
ಇ–ಮೇಲ್: ka.ballari.cc@gmail.com
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101

ಸಂ:ಮನಪಾಬ/ಆಶಾ/ ಸ್ವಚ್ಛ ಭಾರತ್ / ಎಂ.ಆರ್ ಎಫ್ /01/2025–26 ದಿನಾಂಕ:– 22 .04.2025

ಟೆಂಡರ್ ಪ್ರಕಟಣೆ

ಬಳ್ಳಾರಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ್ ಮಿಷನ್ ಯೋಜನೆ– 2ರ ಅಡಿಯಲ್ಲಿ ಪಾಲಿಕೆಗೆ ಅನುಮೋದನೆಗೊಂಡ Supply,Installation, Commissioning and Successful run of Machineries and Equipments for 91 TPD Material recovery Facility under SBM2-0 at Ballari City Corporation ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಅರ್ಹ ಏಜೆನ್ಸಿ/ಸರಬರಾಜುದಾರರು ಈ ಕೆಳಕಂಡ ದಿನಾಂಕದೊಳಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್ಮೆಂಟ್ ಪೋರ್ಟಲ್(KPPP) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಕ್ರ.ಸಂ	ವಿಷಯ	ದಿನಾಂಕ	ಸಮಯ
1	ಇಂಡೆಂಟ್ ಸಂಖ್ಯೆ:–DMA/2024-25/IND3681/CALL-3		
2	ಟೆಂಡರ್ ಪೂರ್ವಭಾವಿ ಸಭೆ ದಿನಾಂಕ	02.05.2025	ಮಹಾನಗರಪಾಲಿಕೆಯ ಸಭಾಂಗಣದಲ್ಲಿ ಸಮಯ: 11.30 AM
3	ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ	07.05.2025	5.00 PM ಗಂಟೆವರೆಗೆ
4	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	08.05.2025	5.30 PM ನಂತರ
5	ಆರ್ಥಿಕ ಬಿಡ್ ತರೆಯುವ ದಿನಾಂಕ	12.05.2025	11.30 AM ನಂತರ

ಸದರಿ ಟೆಂಡರ್ನ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಮಹಾನಗರಪಾಲಿಕೆ, ಬಳ್ಳಾರಿ ಕಛೇರಿಯ ಕೆಲಸದ ವೇಳೆಯಲ್ಲಿ ದೂರವಾಣಿ ಸಂಖ್ಯೆ: 08392–273479 ಅಥವಾ ವೆಬ್‌ಸೈಟ್ http://kppp.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.

ತಮ್ಮ ವಿಶ್ವಾಸಿ
ಆಯುಕ್ತರು, ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ.

ಜಲಾನಯನ ಅಭಿವೃದ್ಧಿ ಇಲಾಖೆ
7 & 8ನೇ ಮಹಡಿ, ಕಾವೇರಿ ಭವನ, ಕ.ಗೃ.ಮ ಸಂಕೀರ್ಣ, ಕೆ.ಜಿ. ರಸ್ತೆ, ಬೆಂಗಳೂರು–560009.

ಸಂಖ್ಯೆ:ಜಅಇ/ಆಡಳಿತ–3/ವಿನಿ–1/ವಿವ–31/ವಾಹನ ಟೆಂಡರ್/2024–25/ಕರೆ–2 ದಿನಾಂಕ: 22.04.2025

ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ)

ಈ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ವಾಹನಗಳ ಸೇವೆಯನ್ನು ಪಡೆಯಲು ದ್ವಿ–ಲಕೋಟೆ ಪದ್ಧತಿಯಲ್ಲಿ ನೊಂದಾಯಿತ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **kppp.karnataka.gov.in** ನಲ್ಲಿ ಟೆಂಡರ್ ದಾಖಲಾತಿಗಳು ಲಭ್ಯವಿರುತ್ತದೆ. ಇ–ಪೋರ್ಟಲ್ ಮುಖಾಂತರ ನೊಂದಾಯಿತ ಸಂಸ್ಥೆಯವರು **ದಿನಾಂಕ: 24.04.2025 ರಿಂದ 08.05.2025ರ ಸಾಯಂಕಾಲ 5:00 ಗಂಟೆ**ಯವರೆಗೆ **ರೂ.1,82,000/–** ಗಳ ಇ.ಎಂ.ಡಿ **(EMD)** ಮೊತ್ತವನ್ನು ಠೇವಣಿಯಿಟ್ಟು ಆನ್‌ಲೈನ್ ಮುಖಾಂತರ ಟೆಂಡರ್ (**Upload** ಮಾಡಬಹುದು). ಮುದ್ರಿತ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಪ್ರೀ ಬಿಡ್ ಮೀಟಿಂಗ್ **ದಿನಾಂಕ: 02.05.2025 ರಂದು ಬೆಳಿಗ್ಗೆ 11:00 ಗಂಟೆ**ಗೆ ನಡೆಯಲಿದೆ.

DIPR/CP/RO326/AAPL/2025-26 ಸಹಿ/– ನಿರ್ದೇಶಕರು

ಬನ್ನೇರುಘಟ್ಟ ಜೈವಿಕ ಉದ್ಯಾನವನ
ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು – 560083. ಫೋನ್: 080–29776466 / 29776467
ಇ–ಮೇಲ್: ed@bannerughattabiopark.org

ಸಂಖ್ಯೆ: ಎ3/ಬಬಪಾ/ಅಕ್ವೇರಿಯಂ/ಟಿಎ/2024–25 ದಿನಾಂಕ: 21–04–2025

ಮರು – ಟೆಂಡರ್ ಪ್ರಕಟಣೆ

ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು ಇಲ್ಲಿ ಅಕ್ವೇರಿಯಂ ಸ್ಥಾಪಿಸಲು ವ್ಯವಹಾರ ಸಲಹೆಗಾರರನ್ನು (ಪಿಪಿಪಿ ಫ್ರೇಮ್‌ವರ್ಕ್) ನೇಮಿಸಲು ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮರು ಟೆಂಡರ್‌ನ್ನು ಕರೆಯಲಾಗಿರುತ್ತದೆ.

ವಿವರವಾದ ಟೆಂಡರ್ ಅಧಿಸೂಚನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **21–04–2025 ರ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಸೇವಾ ಸ್ಥಳಕ್ಕೆ ಭೇಟಿ ನೀಡುವ ದಿನಾಂಕ ಮತ್ತು ಸಮಯ: **ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯೊಳಗೆ ಕೆಲಸದ ದಿನಗಳಲ್ಲಿ**. ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **24–04–2025 ರಂದು ಮಧ್ಯಾಹ್ನ 3.00 ಗಂಟೆಗೆ.** ನಿಗಧಿತ ಇ.ಎಂ.ಡಿ ಹಾಗೂ ಟೆಂಡರ್ ಪ್ರೊಸೆಸ್ಸಿಂಗ್ ಫೀ ಯೊಂದಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **29–04–2025 ರ ಸಂಜೆ 5.00 ಗಂಟೆವರೆಗೆ.** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: **01–05–2025 ರ ಬೆಳಿಗ್ಗೆ 11.30 ಗಂಟೆಗೆ.** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: **ನಂತರ ತಿಳಿಸಲಾಗುವುದು.**

ಸಹಿ/–
ವಾಸಾಸಂಇ/ವಾ.ಪ್ರ/324/ಅಡ್ವಟೋರ್/2025–26 ಕಾರ್ಯನಿರ್ವಾಹಕ ನಿರ್ದೇಶಕರು

ನಿರಾಶ್ರಿತರ ಪರಿಹಾರ ಕೇಂದ್ರ ತುಮಕೂರು.
ಅಜ್ಜಗೊಂಡನಹಳ್ಳಿ ರಾ.ಹೆ.–04 ಕೋರಾ ಹತ್ತಿರ
ತುಮಕೂರು–572102
E-mail-npktumkur@gmail.com Po:0816-2970033
ಸಂ:ನಿಪಕೇತು/ಆಹಾರ/ಟೆಂಡರ್/ಸಿಆರ್–20/2024–25 ದಿನಾಂಕ: 19.04.2025

ಟೆಂಡರ್ ಪ್ರಕಟಣೆ

ವಿವರ: ಆಹಾರ ಪದಾರ್ಥಗಳ ಹಾಗೂ ಇತರೇ ಅಗತ್ಯ ಸಾಮಾಗ್ರಿಗಳ ಖರೀದಿ. **ಟೆಂಡರ್ ಪ್ರಕಟಣೆಯ ಸಂಖ್ಯೆ & ದಿನಾಂಕ:** ಸಂಖ್ಯೆ: ನಿಪಕೇತು/ಆಹಾರ/ಟೆಂಡರ್/ಸಿಆರ್–20/2024–25 ದಿನಾಂಕ: **19.04.2025,** ಟೆಂಡರ್‌ಗಿಟ್ಟ ಅಂದಾಜು ಮೊತ್ತ **ರೂ.150.00** ಲಕ್ಷಗಳಲ್ಲಿ. ಇ.ಎಂ.ಡಿ ಮೊತ್ತ ರೂ.03.00 ಲಕ್ಷಗಳಲ್ಲಿ. ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ & ಸಮಯ : **16.05.2025** ಮಧ್ಯಾಹ್ನ 03.00ಗಂಟೆಯೊಳಗೆ. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **ಮತ್ತು ವೇಳೆ: 19.05.2025 (ಸೋಮವಾರ) ಮದ್ಯಾಹ್ನ 03.00ಗಂಟೆಗೆ.** ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : **21.05.2025 (ಬುಧವಾರ) ಮದ್ಯಾಹ್ನ 12.00 ಗಂಟೆಗೆ.**

ಹೆಚ್ಚಿನ ಮಾಹಿತಿಗಾಗಿ: ಅಧೀಕ್ಷಕರು, ನಿರಾಶ್ರಿತರ ಪರಿಹಾರ ಕೇಂದ್ರ, ಅಜ್ಜಗೊಂಡನಹಳ್ಳಿ. ರಾ.ಹೆ.4. ಕೋರಾ ಹತ್ತಿರ, ತುಮಕೂರು–572128 E-mail-npktumkur@gmail.com

ಸಹಿ/–ಅಧೀಕ್ಷಕರು,
ನಿರಾಶ್ರಿತರ ಪರಿಹಾರ ಕೇಂದ್ರ, ತುಮಕೂರು
DIPR/TUM/27/KSMCA/2025-26

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಹೇಮಾವತಿ ನಾಲಾ ವಿಭಾಗ, ಎಡಿಯೂರು–572 142, ಪೋ: 7338590199
ಇ–ಮೇಲ್: eeyediyur1@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–16/2024–25
ದಿನಾಂಕ: 27.03.2025

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಒಟ್ಟು 07 ಕಾಮಗಾರಿಗಾಗಿ ಐಟಂವಾರು ದರದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ.410.84 ಲಕ್ಷ ರೂಪಾಯಿಗಳು & ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.334.52 ಲಕ್ಷ ರೂಪಾಯಿಗಳು.

ಕೆಲಸ ಪೂರ್ಣಗೊಳಿಸಲು ನಿಗಧಿಪಡಿಸಿರುವ ಅವಧಿ 05 ತಿಂಗಳು ಇ.ಎಂ.ಡಿ ಹಣ ಹಾಗೂ ಪ್ರೊಸಸಿಂಗ್ ಶುಲ್ಕವನ್ನು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು, ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿನಾಂಕ: 09.04.2025 ಮಧ್ಯಾಹ್ನ 5.00 ಗಂಟೆಯವರೆಗೆ ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: 05.05.2025 ಮಧ್ಯಾಹ್ನ 5:00 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06.05.2025 ಸಂಜೆ 5:00 ಗಂಟೆಗೆ ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ವಿಭಾಗ, ಕಾನೀನಿನಿ., ಎಡಿಯೂರು.
DIPR/TUM/29/KSMCA/2025-26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇಪಿ–09/181/2025–26 ದಿನಾಂಕ: 23.04.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಆಧುನಿಕ ತಂತ್ರಜ್ಞಾನ ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಸಿವಿಲ್ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : ಮೈಸೂರು ಜಿಲ್ಲೆ, ಹೆಬ್ಬಾಳ ಕೈಗಾರಿಕಾ ಪ್ರದೇಶದ ಪ್ರಸ್ತಾವಿತ ಮೈಸೂರು ರಫ್ತು ಕೇಂದ್ರ ಸ್ಥಾಪನೆಯ ಉಳಿದ ಭಾಗದ ನಿರ್ಮಾಣ ಕಾಮಗಾರಿ. (3ನೇ ಕರೆ).

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 03.05.2025 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
DIPR/CP/331/Zen/2025-26 ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

ಕರ್ನಾಟಕ ಸರ್ಕಾರ
ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ
ಬಸವನ ಬಾಗೇವಾಡಿ ರೋಡ, ವಿಜಯಪುರ –586 109 ದೂರವಾಣಿ ಸಂಖ್ಯೆ: 08352–276996,
ಇ–ಮೇಲ್: bdacommissionerbijapur@gmail.com ವೆಬ್‌ಸೈಟ್:www.vijayapura.uda.gov.in
ಸಂಖ್ಯೆ:ನಪ್ರಾವಿ/ಸಾಉನಿವಿ/ಪ್ರಕಟಣೆ/2025–26/80 ದಿನಾಂಕ:16.04.2025

ನಾಗರೀಕ ಸೌಲಭ್ಯದ 27 ನಿವೇಶನಗಳನ್ನು ಮೂವತ್ತು ವರ್ಷಗಳ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವ ಕುರಿತು

ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರವು ತನ್ನ ವ್ಯಾಪ್ತಿಯಲ್ಲಿನ 27 ನಾಗರೀಕ ಸೌಲಭ್ಯದ ನಿವೇಶನಗಳನ್ನು ಗುತ್ತಿಗೆ ಆಧಾರದ ಮೇಲೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಮತ್ತು ನಾಗರೀಕ ಸೌಲಭ್ಯದ ನಿವೇಶನಗಳ ಹಂಚಿಕೆ ನಿಯಮಗಳು 1991ರ ರಿತ್ಯಾ ಹಂಚಿಕೆ ಮಾಡಲಾಗುವದು. ಹಾಗೂ ಪ್ರತಿ ಚ.ಅಡಿಗೆ ರೂ: 450/–ರಂತೆ ನಿಗಧಿ ಪಡಿಸಿದೆ. ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ. ಅರ್ಜಿ ಸಲ್ಲಿಸುವವರು ರೂ:7,000/–ರಂತೆ ಪ್ರಾಧಿಕಾರದಲ್ಲಿ ನೋಂದಣಿ ಫೀ ಪಾವತಿಸಬೇಕು ಆಸಕ್ತ ಸಂಘ/ಸಂಸ್ಥೆಗಳು ನಿಬಂಧನೆಗಳಿಗನುಸಾರವಾಗಿ ಅರ್ಜಿ ಸಲ್ಲಿಸಕೊಳ್ಳಬಹುದಾಗಿರುತ್ತದೆ.

ಸಂಘ/ಸಂಸ್ಥೆ, ಅಸ್ತಿತ್ವತೆಯ ಬಗ್ಗೆ ದಾಖಲೆಗಳನ್ನು ಪ್ರಾಧಿಕಾರದಲ್ಲಿ ಪರಿಶೀಲನೆ ಮಾಡಿಕೊಂಡ ನಂತರವೇ ನಿಗದಿತ ನಮೂನೆ **1 & 2** ನ್ನು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ವಿಜಯಪುರ. ಬ,ಬಾಗೇವಾಡಿ ರಸ್ತೆ ವಿಜಯಪುರ. ಇವರ ಕಚೇರಿಯಲ್ಲಿ **ದಿನಾಂಕ:17.04.2025** ರಿಂದ ಬೆಲೆ ರೂ: **200**/–ಗಳನ್ನು ಸಂದಾಯಮಾಡಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಭರ್ತಿ ಮಾಡಿದ ನಮೂನೆ **1 ಹಾಗೂ 2** ಇವುಗಳನ್ನು ನಿಗಧಿತ ನೋಂದಣಿ ಶುಲ್ಕ ಹಾಗೂ ಪ್ರಾರಂಭಿಕ ಠೇವಣಿಯೊಂದಿಗೆ **ದಿನಾಂಕ:16.05.2025** ರಂದು ಸಾಯಂಕಾಲ **5.00 ಗಂಟೆಯ** ಒಳಗಾಗಿ ತಲುಪುವಂತೆ ಸಲ್ಲಿಸಬಹುದು. ಒಂದು ವೇಳೆ ಅರ್ಜಿ ಸಲ್ಲಿಸುವ ಕಡೆಯ ದಿನ ಸರ್ಕಾರದಿಂದ ಆಕಸ್ಮಿಕ ರಜೆ ದಿನವೆಂದು ಘೋಷಿಸಿದಲ್ಲಿ ಮುಂದಿನ ಕೆಲಸದ ದಿನವನ್ನು ಅರ್ಜಿ ಸಲ್ಲಿಸುವ ಕೊನೆಯ ದಿನವೆಂದು ಪರಿಗಣಿಸಲಾಗುತ್ತದೆ. ನಿಗದಿತ ಸಮಯದ ನಂತರ ಕಳುಹಿಸಲಾದ ಅಥವಾ ದೋಷಪೂರಿತ ಹಾಗೂ ಸರಿಯಾದ ಮಾಹಿತಿ ನೀಡದ ಅರ್ಜಿಗಳನ್ನು ತಿರಸ್ಕರಿಸಲಾಗುವದು. ಹೆಚ್ಚಿನ ಮಾಹಿತಿ ಹಾಗೂ ನಾಗರೀಕ ಸೌಲಭ್ಯದ ನಿವೇಶನಗಳ ಷರತ್ತುಗಳೊಳಗೊಂಡ ವಿವರಗಳುಳ್ಳ ಪ್ರತಿಯನ್ನು ಪ್ರಾಧಿಕಾರದ ಕಾರ್ಯಾಲಯದಲ್ಲಿ ಸಂಪರ್ಕಿಸಿ ಕಚೇರಿ ವೇಳೆಯಲ್ಲಿ ಪಡೆಯಬಹುದು ಮತ್ತು ಪ್ರಾಧಿಕಾರದ ಅಧಿಕೃತ ವೆಬ್‌ಸೈಟ್ www.vijayapur.uda.gov.in ನಲ್ಲಿ ವೀಕ್ಷಿಸಬಹುದು.

ಸಹಿ/– ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ
ಸಹಿ/– ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ
ವಾಸಾಸಂಇ/ವಿಜಯಪುರ/26/ಕೆಎಸ್‌ಎಂಸಿಎ/2025–26

ಕರ್ನಾಟಕ ಸರಕಾರ
ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ – 581 301
DISTRICT URBAN DEVELPOMENT CELL, D.C. OFFICE UTTARA KANNADA DISTRICT, KARWAR-581 301
ದೂರವಾಣಿ: 08382 221170 Email:ka.uttarakannada.dudc@gmail.com
No: UK/DUDC/AmrutNagarothanaPhase-4/CR/2024-25 Dated: 22-04-2025

ಟೆಂಡರು ಪ್ರಕಟಣೆ

ಕೆಟಿಪಿಪಿ ಕಾಯ್ದೆ 1999 ನಿಯಮ 2000 ರಂತೆ, ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕಾರವಾರರವರು ಅಮೃತ ನಗರೋತ್ಥಾನ ಹಂತ – 4 ಯೋಜನೆಯಡಿ ಈ ಕೆಳಗೆ ವಿವರಿಸಿದ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. **KPWD** ಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರು ಎಲ್ಲಾ ದಾಖಲಾತಿಗಳೊಂದಿಗೆ **KPPP** ಪೋರ್ಟಲ್ **(http:/kppp.karnataka.gov.in)** ಮೂಲಕ ತಮ್ಮ ದರವನ್ನು ಸಲ್ಲಿಸಬಹುದಾಗಿದೆ. ಟೆಂಡರ್ ವಿವರ ಹಾಗೂ ವೇಳಾ ಪಟ್ಟಿ ಈ ಕೆಳಗಿನಂತಿರುತ್ತದೆ.

ಟೆಂಡರ್‌ನ್ನು ಸಲ್ಲಿಸಲು ಪ್ರಾರಂಭದ **ದಿನಾಂಕ: 23–04–2025 ಸಮಯ 16.00 ಗಂಟೆ** (1) ಗುತ್ತಿಗೆದಾರರೊಂದಿಗೆ ಪೂರ್ವಭಾವಿ ಸಭೆ/ಸ್ಪಷ್ಟೀಕರಣ **ದಿನಾಂಕ: 02–05–2025 ಸಮಯ 11.00 ಗಂಟೆ** ಜಿಲ್ಲಾ ನಗರಾಭಿವೃದ್ಧಿ ಕೋಶ ಕಚೇರಿ ಮಾಡುವುದು (2) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 17–05–2025 ಸಮಯ 17.00 ಗಂಟೆ** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 19–05–2025 ಸಮಯ 17.30 ಗಂಟೆ** (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 24–05–2025 ಸಮಯ 16.00 ಗಂಟೆ**

ನಗರ ಸ್ಥಳೀಯ ಸಂಸ್ಥೆ ಹೆಸರು	ಇಂಡೆಂಟ್ ನಂ
ನಗರಸಭೆ ಕಾರವಾರ	DMA/2024-25/RD/WORK_INDENT37619
	DMA/2024-25/OW/WORK_INDENT37653
	DMA/2024-25/BD/WORK_INDENT37680
	DMA/2024-25/OW/WORK_INDENT37651
	DMA/2024-25/OW/WORK_INDENT37669

ಟೆಂಡರ್ ಕುರಿತು ಹೆಚ್ಚಿನ ಮಾಹಿತಿಗಾಗಿ **http:/kppp.karnataka.gov.in. & http://www.uttarakannadadudc.mrc.gov.in/** ಅಥವಾ ಈ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ
DIPR/ADK/MCA/53/25-26 dt. 23.04.2025

ಸುಂಕ ಸಮರ: ಕೈಗಾರಿಕಾ ಸಚಿವರ ಸಭೆ

ಪ್ರಜಾವಾಣಿ ವಾರ್ತೆ

ಎಂ.ಬಿ ಪಾಟೀಲ

ಬೆಂಗಳೂರು: ಅಮೆರಿಕ ಸಾರಿರುವ ಸುಂಕ ಸಮರ, ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಮಾಡಿಕೊಂಡಿರುವ ಒಡಂಬಡಿಕೆಗಳ ಸ್ಥಿತಿಗತಿ ಮತ್ತು ಇತ್ತೀಚಿನ ಜಾಗತಿಕ ರಾಜಕೀಯ ಬೆಳವಣಿಗೆಗಳ ಕುರಿತು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಚರ್ಚಿಸಿದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಭಾರತ ಸೇರಿ ಹಲವು ದೇಶಗಳಿಂದ ಆಮದು ಮಾಡಿಕೊಳ್ಳುತ್ತಿರುವ ಉತ್ಪನ್ನಗಳ ಮೇಲೆ ಭಾರಿ ಸುಂಕ ಏರಿಸಲು ಅಮೆರಿಕ ತೀರ್ಮಾನಿಸಿದೆ. ಸದ್ಯಕ್ಕೆ ಅದು ಪ್ರತಿಸುಂಕ ವಿಧಿಸುವುದನ್ನು ಮೂರು ತಿಂಗಳ ಕಾಲ ಮುಂದೂಡಿದೆ. ಅಮೆರಿಕದ ಈ ಕ್ರಮ ಕರ್ನಾಟಕದ ಐಟಿ, ಬಿಟಿ, ಎಲೆಕ್ಟ್ರಾನಿಕ್ಸ್, ಫಾರ್ಮಾಸ್ಯೂಟಿಕಲ್, ರಕ್ಷಣಾ ಉತ್ಪನ್ನ ಮತ್ತಿತರ ರಫ್ತು ವಹಿವಾಟಿನ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಬೀರಲಿದೆ ಎನ್ನುವುದನ್ನು ಸಭೆಯಲ್ಲಿ ಅಂದಾಜು ಮಾಡಲಾಯಿತು ಎಂದು ತಿಳಿಸಿದರು.

'ಈ ಪರಿಸ್ಥಿತಿಯನ್ನು ರಾಜ್ಯವು ಸದವಕಾಶವಾಗಿ ಪರಿವರ್ತಿಸಿಕೊಳ್ಳಬೇಕಾಗಿದೆ. ಪ್ರತಿಸುಂಕದ ಹೊಡೆತಕ್ಕೆ ಹಲವು ದೇಶಗಳು, ಅನೇಕ ಉದ್ದಿಮೆಗಳು ನಲುಗಬಹುದು. ಅಂತಹ ಸಂದರ್ಭದಲ್ಲಿ ರಾಜ್ಯದ ಪಾತ್ರ ಹೇಗಿರಬೇಕು? ನಮ್ಮ ಹೂಡಿಕೆ ಒಪ್ಪಂದಗಳಿಗೆ ಯಾವ ತೊಂದರೆಯೂ ಆಗದಂತೆ ಹೇಗೆ ಮುನ್ನೆಚ್ಚರಿಕೆ ವಹಿಸಬೇಕು ಎಂಬುದರ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು' ಎಂದು ಹೇಳಿದರು.

ಸುಂಕ ಸಮರವನ್ನು ಒಂದು ದೇಶವಾಗಿ ಹೇಗೆ ಎದುರಿಸಬೇಕೆಂದು ಕೇಂದ್ರ ಸರ್ಕಾರ ಯೋಚಿಸುತ್ತಿದೆ. ಒಂದು ರಾಜ್ಯವಾಗಿ ಕರ್ನಾಟಕವು ಕೂಡ ಇದಕ್ಕೆ ಸಿದ್ಧವಾಗಬೇಕು. ಅದಕ್ಕಾಗಿ ಸಮಾಲೋಚನೆ ನಡೆಸಲಾಗಿದೆ ಎಂದು ಪಾಟೀಲ ತಿಳಿಸಿದರು.

ಬೋಸ್ಟನ್ ಕನ್ಸಲ್ಟೆನ್ಸಿ ಗ್ರೂಪ್‌ನ ಅಂತರರಾಷ್ಟ್ರೀಯ ವ್ಯಾಪಾರ ತಜ್ಞ ಮೈಕೆಲ್ ಅವರು ಅಮೆರಿಕದಿಂದ ವರ್ಚುವಲ್ ರೂಪದಲ್ಲಿ ಭಾಗವಹಿಸಿ ಮಾಹಿತಿ ನೀಡಿದರು.

ಸುಂಕ ಸಮರದ ಪರಿಣಾಮಗಳನ್ನು ವಿಶ್ಲೇಷಣೆ ಮಾಡುವ ಕೆಲಸ ನಡೆಯುತ್ತಿದ್ದು, ಈ ಹಂತದಲ್ಲಿ ಹೀಗೆಯೇ ಆಗುತ್ತದೆ ಎಂದು ಹೇಳುವುದು ಕಷ್ಟ. ಸ್ವಲ್ಪ ದಿನ ಕಾದು ನೋಡಬೇಕಾಗಿದೆ. ಚೀನಾ ಉತ್ಪನ್ನಗಳ ಮೇಲೆ ಹೆಚ್ಚು ತೆರಿಗೆ ಹಾಕಿದ್ದು, ಅದರ ಪರಿಣಾಮಗಳ ವಿಶ್ಲೇಷಣೆ ನಡೆದಿದೆ ಎಂದು ಮೈಕಲ್ ಅವರು ಹೇಳಿದರು.

ನಗರದಲ್ಲಿ ಇಂದು

ರಾಜ್ಯಮಟ್ಟದ ಕಲಾ ಸಂಸ್ಕೃತಿ ಉತ್ಸವ: ಉದ್ಘಾಟನೆ: ಟಿ.ಎಚ್. ಆಂಜನಪ್ಪ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಅತಿಥಿ: ಲೇಪಾಕ್ಷಿ ಸಂತೋಷರಾವ್, ಆಯೋಜನೆ: ರಂಗ ಸಂಸ್ಥಾನ, ಸ್ಥಳ: ಶೇಷಾದ್ರಿಪುರಂ ಕಾಲೇಜಿನ ಆವರಣ, ಶೇಷಾದ್ರಿಪುರ, ಬೆಳಿಗ್ಗೆ 9.30

ಸಂಸ್ಕೃತಿ ಸಮ್ಮಿಲನ: ಉದ್ಘಾಟನೆ: ಮನು ಬಳಿಗಾರ್, ಅಧ್ಯಕ್ಷತೆ: ಮದನ್ ಕುಮಾರ್, ಅತಿಥಿಗಳು: ಜಯಶ್ರೀ ಅರವಿಂದ್, ವಿ. ಮನೋಹರ್, ನಿಶ್ಚಲ್ ಬಿ.ಎಸ್., ಜಿ.ಸಿ. ರಾಜು, 'ಭಾವ ಗಾನ': ಚಿನ್ಮಯ್, ನವೀನ್ ಜಾಂಬ್ಳೆ, ಸವಿತಾ ಬಾಗಲಕೋಟೆ, ಆಶಿತಾ ರವಿ, 'ಗೋಕುಲ ಯಾನ– ನೃತ್ಯರೂಪಕ: ಸಾಹಿತ್ಯ: ಮುರಳಿಕೃಷ್ಣ ಬೆಳಾಲು, ಗಾಯನ: ಚಂದ್ರಿಕಾ ರಾಜಾರಾಮ್, ನೃತ್ಯ ನಿರ್ದೇಶನ: ಎ.ಎಸ್. ಆರತಿ ಸುರೇಶ್, 'ರಾವಣನ ಮಾತೃಭಕ್ತಿ' ನಾಟಕ ಪ್ರದರ್ಶನ: ನಿರ್ದೇಶನ: ಎಸ್. ತಿಲಕ್ ರಾಜ್, ಆಯೋಜನೆ: ಸಂಸ್ಕೃತಿ ಸಮ್ಮಿಲನ, ಸ್ಥಳ: ಕೆಎಲ್‌ಇ ಪದವಿ ಕಾಲೇಜಿನ ಸಭಾಂಗಣ, ನಾಗರಭಾವಿ, ಬೆಳಿಗ್ಗೆ 10.30ರಿಂದ

ವ್ಯಕ್ತಿ ವೈಶಿಷ್ಟ್ಯ ವಿಚಾರಸಂಕಿರಣ: 'ವ್ಯಕ್ತಿತ್ವ ವಿಕಸನ ಮತ್ತು ಒತ್ತಡ ರಹಿತ ಜೀವನ' ಉಪನ್ಯಾಸ: ರೋಹಿತ್ ನಾಗೇಶ್, ಅಧ್ಯಕ್ಷತೆ: ಡಾ.ವಿ. ರಾಮ್‌ಪ್ರಸಾತ್ ಮನೋಹರ್, ಅತಿಥಿ: ಸುರೇಶ್ ಬಿ., ಆಯೋಜನೆ: ಬೆಂಗಳೂರು ಜಲಮಂಡಳಿ ಅಭಿಯಂತರರ ಸಂಘ, ಸ್ಥಳ: ಜಲಮಂಡಳಿಯ ಸಭಾಂಗಣ, ನಾಲ್ಕನೇ ಮಹಡಿ, ಬೆಂಗಳೂರು ಜಲಮಂಡಳಿ ಕಾವೇರಿ ಭವನ, ಕೆ.ಜಿ. ರಸ್ತೆ, ಮಧ್ಯಾಹ್ನ 3

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ಅಕ್ಷತಾ ರುದ್ರಪಟ್ಣ ಮತ್ತು ತಂಡ, ಸಂಗೀತ ಕಛೇರಿ: ಭಾರ್ಗವಿ ವೆಂಕಟರಾಮ್, ಎಚ್.ಕೆ. ವೆಂಕಟರಾಮ್, ಜೆ. ವೈದ್ಯನಾಥನ್, ನಾರಾಯಣ ಮೂರ್ತಿ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 4ರಿಂದ

ಡಾ. ರಾಜ್‌ಕುಮಾರ್ ಜನ್ಮದಿನಾಚರಣೆ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಕೆ.ವಿ. ಪ್ರಭಾಕರ್, ಸಾಧು ಕೋಕಿಲ, ಮೆಹಬೂಬ್ ಪಾಷ, ಆಯೇಷಾ ಖಾನಂ, ಶಾಲಿನಿ ರಜನೀಶ್, ಎಲ್.ಕೆ. ಅತೀಕ್, ಎಸ್. ನಾರಾಯಣ, ಶಿವರಾಜ್ ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಅಶ್ವಿನಿ ಪುನೀತ್‌ರಾಜ್‌ಕುಮಾರ್, ಆಯೋಜನೆ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಡಾ. ರಾಜ್‌ಕುಮಾರ್ ಪ್ರತಿಷ್ಠಾನ, ಸ್ಥಳ: ವಾರ್ತಾ ಸೌಧ, ಇನ್ಫೆಂಟ್ರಿ ರಸ್ತೆ, ಮಧ್ಯಾಹ್ನ 3

'ಹೌಸ್‌ಫುಲ್' ರಾಜ್‌ಕುಮಾರ್ ಅವರ ಜನ್ಮದಿನದ ನೆನಪಿನಲ್ಲಿ ರಾಜ್‌ಕುಮಾರ್ ನಟಿಸಿರುವ ಹಳೆ ಚಲನಚಿತ್ರ ಗೀತೆಗಳು, ಶಾಸ್ತ್ರೀಯ ನೃತ್ಯ ಕಾರ್ಯಕ್ರಮ, ಆಯೋಜನೆ: ಇಂಟರ್‌ನ್ಯಾಷನಲ್ ಆರ್ಟ್ಸ್ ಆ್ಯಂಡ್ ಕಲ್ಚರಲ್ ಫೌಂಡೇಶನ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5



ಸಿ.ಕೆ. ನಾಗರಾಜರಾವ್, ಕೆ.ಪಿ. ರಾವ್, ಕೊರಟಿ ಶ್ರೀನಿವಾಸರಾವ್ ದತ್ತಿ: 'ಸಾಹಿತ್ಯ ಸಂವರ್ಧನೆ ಮತ್ತು ಸಾಂಸ್ಕೃತಿಕ ಸಂಘಟನೆಗಳು' ಉಪನ್ಯಾಸ: ರಾಮಲಿಂಗೇಶ್ವರ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

BANGALORE DEVELOPMENT AUTHORITY

T. Chowdaiah Road, Kumara Park West, Bengaluru - 560 020

No.: BDA/EE/DSKL/TEND/WORK/16/2025-26 Date: 22.04.2025

INVITATION FOR TENDER (IFT) (SHORT-TERM TENDER) (Two Cover System) Through GoK KPPP Portal only

1. The Executive Engineer, DSKL Division, Bangalore Development Authority(BDA), Bengaluru, on behalf of the Commissioner, Bangalore Development Authority, Bengaluru, invites tenders from eligible Tenderers on item rate basis for the Construction Work detailed in the table below. The Tenderers may submit Tenders for the Work given in the table through KPP Portal of the Government of Karnataka (viz.http://kppp.karnataka.gov.in) The Tenderers are advised to note the Minimum Qualification Criteria specified in Clause 3 of the Instructions to Tenderers to qualify for Award of the Contract as per Standard Bidding Document uploaded in the KPP Portal.
2. Tenders must be accompanied by Earnest Money Deposit specified for the Work in the table below. Earnest Money Deposit will have to be in any one of the forms as specified in the Tender Document and shall have to be vaild for 180 days beyond the Validity of the Tender.
3. Other Details can be seen in the Tender Document.

Sl. No.	Name of the work	Cost of work Proposed (Rs.in Cr including GST)	EMD (Rs. in Lakhs)	Stipulated Period of Completion (in Months)	Eligibility of Contractor and Category
1	Development of Ramagondanahalli Lake	8.5	As per the e-Procurement	11 Months (Including monsoon season)	Class I & Above
2	Development of Veerasagara Lake	6.00	As per the e-Procurement	11 Months (Including monsoon season)	Class I & Above
3	Comprehensive Development and Restoration of Byala kere-1	9.00	As per the e-Procurement	11 Months (Including monsoon season)	Class I & Above
4	Comprehensive Development and Restoration of Byala kere-2	9.5	As per the e-Procurement	11 Months (Including monsoon season)	Class I & Above
5	Comprehensive Development and Restoration of Byala kere-3	12.5	As per the e-Procurement	11 Months (Including monsoon season)	Class I & Above
6	Comprehensive Development and Restoration of Medi Agrahara Lake	9.00	As per the e-Procurement	11 Months (Including monsoon season)	Class I & Above
7	Comprehensive Development and Restoration of Guni Agrahara Lake	7.00	As per the e-Procurement	11 Months (Including monsoon season)	Class I & Above
8	Comprehensive Development and Restoration Ganigarahalli Lake	14.5	As per the e-Procurement	11 Months (Including monsoon season)	Class I & Above
9	Comprehensive Development and Restoration of Kalathammanahalli Lake	8.00	As per the e-Procurement	11 Months (Including monsoon season)	Class I & Above
10	Improvements of Chikkabanavara lake	12.00	As per the e-Procurement	11 Months (Including monsoon season)	Class I & Above

Note : Calendar of Events: (1) Availability of tender documents in e-Procurement portal: **24.04.2025 onwards. (2)** Last date of Receipt of queries: **08.05.2025 up to 13.00 hrs. (3)** Date of Pre-bid meeting: **28.04.2025 up to 16.00 hrs. (4)** Last date of submission of tenders: **08.05.2025 up to 16.00 hrs. (5)** Date of Opening technical bid: **09.05.2025 up to 16.15 hrs. (6)** Date of opening of financial bid: will be intimated to qualified tenders.

(1) A Pre-Tender Meeting will be held at in the office of the Executive Engineer, Bengaluru Development Authority, Kumara Park West, T.Chowdaiah Road, Bengaluru-560 020 to clarify the issue and to answer questions on any matter that may be raised at that stage as stated in "Instructions of Tenderers" of the Technical Bid Document. **(2)** Aspiring Tenderers/Contractors who have not registered in Karnataka Public Procurement Portal should register before participating through the webiste: **http://kppp.karanataka.gov.in (3)** Before Submission of Online Tenders, Tenderers must be filled and submitted online. **(4)** All the Information's required for Tenders must be filled and submitted online. **(5)** For details, Registration and e-Payment visit GoK KPP Portal website:**https://kppp.karnataka.gov.in** or contact: KPP Portal Helpdesk. **(6)** This Tender Notice can also be seen on the BDA **website:www.bda.gov.in**

Sd/- Executive Engineer, DSKL Division, BDA, Bengaluru

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಅನೆಕ್ಸ್ ಕಟ್ಟಡ–1, ನರಸಿಂಹರಾಜ ಚೌಕ, ಬೆಂಗಳೂರು – 560 002

ಸಂಖ್ಯೆ: ಬೃಬೆಂಮಪಾ/ಮು.ಆಯುಕ್ತರು/ಪಿಎಸ್‌ಆರ್(ಜಿ)/208/2025–26 ನಮೂನೆ – I ದಿನಾಂಕ: 23.04.2025

ಪ್ರಕಟಣೆ

ನಮೂನೆ – I [ಸೆಕ್ಷನ್ 14ಬಿ (4) (I)]

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14–ಬಿ (4) ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, **ಕಾಡುಗೋಡಿಯಲ್ಲಿ (ಚೈ: 35+840ಕಿಮೀ ಇಂದ ಚೈ:36+600ಕಿಮೀ) ರಸ್ತೆ ಮೇಲ್ಸೇತುವೆ ನಿರ್ಮಾಣ ಕಾಮಗಾರಿಗಾಗಿ** ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ. ಭೂ ಮಾಲೀಕರು ಹಾಗೂ ಸಾರ್ವಜನಿಕ ಉದ್ದೇಶಕ್ಕೆ ಅವಶ್ಯಕವಾಗಿ ಬೇಕಾಗಿರುವ ಪ್ರದೇಶಗಳ ಆಸಕ್ತ ವ್ಯಕ್ತಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ತಮ್ಮ ಸಂಬಂಧಪಟ್ಟ ದಾಖಲೆಗಳ ಪ್ರತಿಗಳೊಂದಿಗೆ ಅಂದರೆ, (1) ಕ್ರಯ/ವಿಭಾಗ/ಇತರೆ ಡೀಡ್‌ಗಳ ಟೈಟಲ್, (2) ತಹಲ್‌ವರೆಗಿನ ಪಹಣಿಗಳು, (3) ಮ್ಯುಟೇಷನ್ ಪ್ರತಿ, (4) ತೆರಿಗೆ ಪಾವತಿ ರಸೀದಿಗಳು, (5) ಕೃಷೀಯೇತರ ಬಳಕೆಗಾಗಿ ಭೂ ಪರಿವರ್ತನಾ ಆದೇಶ ಪ್ರತಿ, (6) ಕಂದಾಯ ರೇಖಾಚಿತ್ರ (7) ಆಕಾರ್ ಬಂದ್ ಇತ್ಯಾದಿಗಳನ್ನು ಖುದ್ದಾಗಿ ಈ ಕೆಳಗೆ ನಮೂದಿಸಿರುವ ವಿಳಾಸದಲ್ಲಿ ಅವರ ಸ್ವತ್ತಿಗೆ ಸಂಬಂಧಿಸಿದಂತೆ ಈ ಪ್ರಕಟಣೆಯ 30 ದಿನಗಳೊಳಗಾಗಿ ಆಸಕ್ತಿಯನ್ನು ತೋರ್ಪಡಿಸತಕ್ಕದ್ದು.

ಭೂ ಮಾಲೀಕರು / ಆಸಕ್ತ ವ್ಯಕ್ತಿಗಳು ಹಾಜರಾಗಿ ಹಾಗೂ ಅವರ ಹಕ್ಕುಗಳನ್ನು ಸಲ್ಲಿಸಬೇಕಾದ ಸ್ಥಳ	ವಿಭಾಗ / ಉಪ–ವಿಭಾಗ / ಶಾಖೆ ಕಚೇರಿಗಳ ಹೆಸರು ಮತ್ತು ವಿಳಾಸ	ದಿನಾಂಕ ಮತ್ತು ಸಮಯ
ಉಪ ಆಯುಕ್ತರು (ಎಲ್‌ಎಕ್ಯೂ & ಟಿಡಿಆರ್) ಕೊಠಡಿ ಸಂ: 208, 2ನೇ ಮಹಡಿ, ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೆಂಗಳೂರು–560002	ಕಾರ್ಯಪಾಲಕ ಅಭಿಯಂತರರು, ಯೋಜನಾ ಕಛೇರಿ ಬೆಂಗಳೂರು ದಕ್ಷಿಣ, ಕೆಆರ್‌ಡಿಸಿಎಲ್, ಬೆಂಗಳೂರು	ಪ್ರಕಟಣೆಯ ದಿನಾಂಕದಿಂದ 30 ದಿನಗಳು ಸಮಯ: ಬೆಳಿಗ್ಗೆ 10:00 ರಿಂದ ಸಂಜೆ 5.00 ಗಂಟೆಯವರೆಗೆ

ಅನುಸೂಚಿತ ಸ್ವತ್ತುಗಳಂತೆ ಯಾರ ಸ್ವತ್ತುಗಳು ಸ್ವಾಧೀನಕೊಳ್ಳಪಡುತ್ತವೋ ಅಂತಹ ಸ್ವತ್ತಿನ ಮಾಲೀಕರು/ಆಸಕ್ತ ವ್ಯಕ್ತಿಗಳು ಅಭಿವೃದ್ಧಿ ಹಕ್ಕುಗಳ ಮಂಜೂರಾತಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಒಪ್ಪಿಗೆ ನೀಡತಕ್ಕದ್ದು.

ಸೌಲಭ್ಯ ಹಕ್ಕುಗಳ ಪ್ರಯೋ ನಿಯಮಗಳ ಕಾಯ್ದೆ – 2016ರಂತೆ ಸ್ವಾಧೀನಕ್ಕೊಳಪಡುವ ಭೂಮಿಗಳ ಷೆಡ್ಯೂಲ್ ಸ್ವತ್ತುಗಳ ಭೂ ಮಾಲೀಕರು / ನಿರ್ಮಾಣಗೊಂಡಿರುವ ಕಟ್ಟಡದಲ್ಲಿ ಒಂದು ಬಾರಿ ಕಟ್ಟಡ ಪ್ರದೇಶವನ್ನು ಒಪ್ಪಿಸಿದ ಮೇಲೆ ಒಪ್ಪಿಸಲಾದ ಕಟ್ಟಡ ಪ್ರದೇಶದ ಮೌಲ್ಯದ ಅಂದಾಜಿನಂತೆ ಪ್ರದೇಶದ ಮಾರುಕಟ್ಟೆ ಮೌಲ್ಯವನ್ನು ಭಾಗಿಸಿದಾಗ ಆರ್ಥಿಕ ಪರಿಹಾರಗಳ ಬದಲಾಗಿ ಸ್ವಾಧೀನಕ್ಕೊಳಪಟ್ಟ ಭೂಮಿಯ ಎರಡರಷ್ಟು ಭೂಪ್ರದೇಶವನ್ನು ಭೂ ಮಾಲೀಕರು ಪಡೆಯುತ್ತಾರೆ. ಮೂಲ ಪ್ಲಾಟ್ ಮತ್ತು ಸ್ವೀಕರಿಸಿದ ಪ್ಲಾಟ್‌ಗಳಲ್ಲಿ ಮಾರುಕಟ್ಟೆ ಮೌಲ್ಯದೊಂದಿಗೆ ಅಪವರ್ತನ ಮಾಡುವುದರೊಂದಿಗೆ ಪರಿಗಣಿಸಲಾಗದ ಭೂಮಿಯನ್ನು ಬಳಸಬಹುದಾಗಿದೆ. ಪರಿಗಣಿಸಲಾದ ಭೂಮಿಯು ಎಫ್‌ಎಆರ್‌ಗೆ ಅರ್ಹವಾಗಿದ್ದು, ನಿಯಮಗಳಲ್ಲಿ ತಿಳಿಸಿರುವ ನಿಯಮ ಮತ್ತು ಷರತ್ತುಗಳಂತೆ ಸ್ವೀಕರಿಸಲಾದ ಪ್ಲಾಟ್‌ಗಳಲ್ಲಿ ಹೆಚ್ಚುವರಿ ಬಿಲ್ಟಪ್ ಪ್ರದೇಶವಾಗಿ ಬಳಸಬಹುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೆ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಡೆಪ್ಯೂಟಿ ಕಮೀಷನರ್‌ರವರ ಕಚೇರಿ (ಎಲ್‌ಎಕ್ಯೂ & ಟಿಡಿಆರ್), ಬೃ.ಬೆಂ.ಮಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಷೆಡ್ಯೂಲ್

"ಕಾಡುಗೋಡಿಯಲ್ಲಿ (ಚೈ: 35+840ಕಿಮೀ ಇಂದ ಚೈ:36+600ಕಿಮೀ) ರಸ್ತೆ ಮೇಲ್ಸೇತುವೆ ನಿರ್ಮಾಣ ಕಾಮಗಾರಿಗಾಗಿ ಅವಶ್ಯಕವಿರುವ ಭೂಸ್ವಾಧೀನ ಪ್ರಕ್ರಿಯೆ".

Name of the District : **Bengaluru Urban** Name of the Taluk : **Bengaluru East** Name of the Village : **Kadugodi**

Sl. No.	Sy. No/ Khatha No.	Type of land		Nature of Land			Dimension of the land / plot & Extent in Sq.m.		Boundaries of the land / plot				Building Details			Present activity on land/ Building (Specify Specific activity such as shop, office. factory apartment, individual house etc.	Market (guidelines) value of the land per Sq.m.			Name and address of the owner of the plot / land for which DRC is to be issued
		Vacant	Built up	Agriculture	Converted undeveloped	Approved Layout/ developed Land Building Site	Dimension	Extent	East	West	North	South	Extent in Sq.m	Type of Construction and No. of floors	Floor area Ratio		Agriculture/B-Khatha	Converted Undeloped	Developed Site	
1	Sy No.271	Vacant						1644.01	Remaining portion of sy No.271	Road	Belthuru Village Boundary	Nala	-	-	-	-	7,907/-	25,648/-	36,641/-	Rajamatha Adhnadanagar
2	Sy No.259	Vacant						505.85	Remaining portion of sy No.259	Road	Railway Track	sy No.308	-	-	-	-	7,907/-	25,648/-	36,641/-	BMTC
3	Sy No.308	Vacant						1112.87	sy No.307 & Remaining portion of sy No.308	sy No.218	sy No.259	sy No.218	-	-	-	-	7,907/-	25,648/-	36,641/-	Government
4	Sy No.307	Vacant						50.58	Remaining portion of sy No.307	sy No.308	sy No.308	sy No.218	-	-	-	-	7,907/-	25,648/-	36,641/-	Government Burial Ground
5	Sy No.218	Vacant						1618.72	Remaining portion of sy No.218, Sy No. 308 & Nala	Road	sy No.259	Remaining portion of sy No.218	-	-	-	-	7,907/-	25,648/-	36,641/-	Mysore Toboco Company Alembic Glass Factory, Dharak Limited & Divisional Engineer Telegraph
Total Extent to be acquired in Sqm.								**4932.03**												

ಟಿಪ್ಪಣಿ :

- ಮಾರುಕಟ್ಟೆ ಮೌಲ್ಯವನ್ನು ಸ್ವತ್ತಿನ ಪರಿವರ್ತನೆ ಮತ್ತು ಅಭಿವೃದ್ಧಿಯ ಸ್ಥಿತ್ಯಂತರದ ಮೇಲೆ ನಮೂನೆ–3 ರ ಆಧಾರದಲ್ಲಿ ಸ್ವತ್ತಿನ ಮಾಲೀಕರು ಹಾಜರುಪಡಿಸುವ ದಸ್ತಾವೇಜುಗಳ ಮೇಲೆ ನಿರ್ಧರಿಸಲಾಗುವುದು.
- ಕಟ್ಟಡದ ವಿಸ್ತೀರ್ಣವನ್ನು ಅಭಿವೃದ್ಧಿ ಹಕ್ಕುಗಳ ನಿಯಮಗಳು 2016ರ ಕಟ್ಟಡದ ಮೌಲ್ಯಮಾಪನ ಹಾಗೂ ಸೌಲಭ್ಯಗಳ ಆಧಾರದಲ್ಲಿ ನಮೂನೆ–3 ಸಾರ್ವಜನಿಕ ನೋಟೀಸ್ ಹಂತದಲ್ಲಿ ಪರಿವೀಕ್ಷಿಸಲಾಗುವುದು.

ಸಹಿ/– ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

CENTURY CLUB
1, Seshadri Road, Bangalore – 560 001.
Ph.: 22214121/22215122/9740556482/9740556092.
Email: club@centuryclub.in / Website: www.centuryclub.in

TENDER NOTIFICATION

Sealed tenders are invited from reputed Civil and Interior Contractors/Firms for the following Renovation works:

- Renovation of Table Tennis Section, estimated cost Rs.58 lakhs + GST.
- Application fee Rs.7,500/- + GST

The Tender documents may be collected by paying an application fee by Cash/DD/IMPS between 10 am & 6 pm from the Century Club Office/Reception on all days from 24.04.2025 to 30.04.2025. The last date for submission of Sealed Tender is on or before 5 pm on 07.05.2025. The Tenders may be put in the Drop Box at Century Club Office. The date of opening Sealed Tenders will be 6 pm on 07.05.2025 at the Office of Century Club.

Sd/-
S. Balasubramaniam
Hon. Secretary

JOB OPPORTUNITIES

Multiple Vacancy

EMPLOYMENT OPPORTUNITY Retired Persons, House wives, Self Employed. Good Earning Opportunity. No Targets. Regular Payouts. Contact 8660473849 / 7975093296

Teachers/ Professors

SHRI CHAITANYA EDUCATION SOCIETY(R) #33 Kathriguppe main road, VivekanandaNagar, BSK 3rd stage, Bangalore- 560085 requires NTT, PUC, D.Ed, BA B.Ed qualified Lady TEACHERS for Nursery, Primary and High School teachers. Contact No. 9739703039.

HIGH SCHOOL TEACHERS. Social Science and English, Physical Education. Cambridge English School, Mathikere, Bangalore-54. M: 9379191544

PERSONAL

Change of Name

CHANGE OF NAME
I, **Rahila Valiya Peedikayil,** residing at No. E-350, Sri Narayana Layout, Phase-2, Near Divine Providence School, Kommasandra, Dommasandra Post, Bengaluru- 562125. in the records my daughter name entered as **Rinza Amna Valiya Peedikayil and Rinza Amna** hereby declaring that both names belonged to her only. vide affidavit dated 23.04.2025 before notary A Prabhakar, Bengaluru

I, SHAILAJA w/o Late H.N Keshava Murthy Aged about 66 years. Residing at No.1523, (FF) 11th Main Road, vijayanagar, Bangalore- 560040, declare that I have changed my Name from SHAILAJA to SHAILAJA NADIG For all purposes.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

‘ವಿಶ್ವ ಪುಸ್ತಕ ದಿನ’ದ ಸಂದರ್ಭದಲ್ಲಿ ವಿಶೇಷ ಉಪನ್ಯಾಸ ನೀಡಿದ ಸಾಹಿತಿ ರಹಮತ್ ತರೀಕೆರೆ

‘ನೋಡುವ ಸಂಸ್ಕೃತಿ ಮಧ್ಯೆ ನಶಿಸುತ್ತಿದೆ ಓದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಜಿಟಲ್ ಯುಗದಲ್ಲಿ ನೋಡುವ ಮತ್ತು ಕೇಳುವ ಸಂಸ್ಕೃತಿ ಅತಿವೇಗವಾಗಿ ಬೆಳೆಯುತ್ತಿದ್ದು, ಓದುವ ಸಂಸ್ಕೃತಿ ಕಡಿಮೆಯಾಗುತ್ತಿದೆ. ಇದು ಮುಂದೆ ಎಲ್ಲಿಗೆ ಹೋಗಿ ನಿಲ್ಲಲಿದೆ ಎಂಬುದು ಗೊತ್ತಾಗುತ್ತಿಲ್ಲ ಎಂದು ಸಾಹಿತಿ ರಹಮತ್ ತರೀಕೆರೆ ಅವರು ತಿಳಿಸಿದರು.

ಕರ್ನಾಟಕ ಪುಸ್ತಕ ಮಾರಾಟಗಾರರು, ಪ್ರಕಾಶಕರು, ಲೇಖಕರ ಸಂಘಕ್ಕೆ ಚಾಲನೆ, ಅಂಬೇಡ್ಕರ್ ಜಯಂತಿ, ವಿಶ್ವ ಪುಸ್ತಕ ದಿನ ಕಾರ್ಯಕ್ರಮದಲ್ಲಿ ‘ಸಮಕಾಲೀನ ಸಂದರ್ಭದಲ್ಲಿ ಪುಸ್ತಕಗಳು’ ಕುರಿತು ವಿಶೇಷ ಉಪನ್ಯಾಸ ನೀಡಿದರು.

ತಾಳ್ಮೆಯೇ ಇಲ್ಲದ ಯುವ ಸಮುದಾಯ ಇದೆ. ದೊಡ್ಡ ಕೃತಿಗಳನ್ನು ಅವರು ಓದುತ್ತಾರಾ ಎಂಬ ಬಗ್ಗೆ ಸಂಶಯವಿದೆ. ಕನಿಷ್ಠ ಅವರು ಡಿಜಿಟಲ್‌ನಲ್ಲಿಯಾದರೂ ಓದುವಂತಾಗಬೇಕು. ಪುಸ್ತಕ ಸಂಸ್ಕೃತಿ ನಶಿಸಿದರೂ ಓದುವ ಸಂಸ್ಕೃತಿ ನಶಿಸಬಾರದು ಎಂದು ಆಶಯ ವ್ಯಕ್ತಪಡಿಸಿದರು.

ಪುಸ್ತಕಗಳು ಓದುಗರ ಮೇಲೆ ಮತ್ತು ಸಮಾಜದ ಮೇಲೆ ಬೀರುವ ಪರಿಣಾಮಗಳನ್ನು ಗಣನೆಗೆ ತೆಗೆದುಕೊಳ್ಳದೇ ಕೇವಲ ವ್ಯಾಪಾರದ ಉದ್ದೇಶ ವೊಂದನ್ನೇ ಇಟ್ಟುಕೊಂಡು ಪುಸ್ತಕ ಉತ್ಪಾದನೆ ಮಾಡುವ ಒಂದು ವರ್ಗ ಇದೆ. ರಾಜಕೀಯ ಅಜೆಂಡಗಳಿಗಾಗಿ ಗತಕಾಲವನ್ನು ತಿರುಚಿ ಬರೆದಿರುವು ದನ್ನು ಪ್ರಕಟಿಸುವ ವರ್ಗವೂ ದೊಡ್ಡ ಮಟ್ಟದಲ್ಲಿದೆ. ಆದರೆ, ಇವುಗಳ ಬದಲು ನಮಗೆ ಬೇಕಿರುವುದು ಮನುಕುಲದ ಒಳಿತಿಗಾಗಿ ಕೃತಿ ಪ್ರಕಟಿಸಿ, ಸಂವೇದನಾಶೀಲ ನಾಗರಿಕರನ್ನು ಸೃಷ್ಟಿಸುವ, ರಾಜಕೀಯ ಪ್ರಜ್ಞೆಯನ್ನು ಮೂಡಿಸುವ ಮೂರನೇ ವರ್ಗ ಎಂದು ವಿಶ್ಲೇಷಿಸಿದರು.

ಕರ್ನಾಟಕ ಪುಸ್ತಕ ಮಾರಾಟಗಾರರು, ಪ್ರಕಾಶಕರು ಹಾಗೂ ಲೇಖಕರ ಸಂಘದ ಲಾಂಛನವನ್ನು ಡಿ.ಎನ್‌. ಗುರುಪ್ರಸಾದ್, ಆರ್. ಪೂರ್ಣಿಮಾ, ಮಾವಳ್ಳಿ ಶಂಕರ್ ಮತ್ತು ರಹಮತ್ ತರೀಕೆರೆ ಬಿಡುಗಡೆ ಮಾಡಿದರು ಪ್ರಜಾವಾಣಿ ಚಿತ್ರ

ಪ್ರಕಾಶಕರು, ಮಾರಾಟಗಾರರು, ಲೇಖಕರ ಜೊತೆಗೆ ಪರಿಚಾರಕರನ್ನು, ಹಿನ್ನೆಲೆಯಲ್ಲಿದ್ದುಕೊಂಡು ಪುಸ್ತಕ ಪ್ರೀತಿಯಿಂದ ಕೆಲಸ ಮಾಡುವವರನ್ನು ಸೇರಿಸಿ ಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಂಬೇಡ್ಕರ್ ಅವರ ವ್ಯಕ್ತಿತ್ವ, ಚಳವಳಿ ಮತ್ತು ಚಿಂತನೆಯ ಹಿಂದೆ ಪುಸ್ತಕಗಳಿವೆ. ಕಹಿ ಅನುಭವ, ಅಧ್ಯಯನ ಮತ್ತು ಚಿಂತನೆಗಳೇ ಶ್ರೇಷ್ಠ ಪುಸ್ತಕಗಳಾಗಿ ಬಂದಿವೆ. ಸಂವಿಧಾನ ರಚನೆಯ ಹಿಂದೆಯ ಓದು ಇದೆ. ಏಷ್ಯಾದಲ್ಲಿಯೇ ಎರಡನೇ ಅತಿದೊಡ್ಡ ಖಾಸಗಿ ಪುಸ್ತಕಾಲಯ ಅಂಬೇಡ್ಕರ್ ಮನೆಯಲ್ಲಿತ್ತು ಎಂದು ಅವರು ಮಾಹಿತಿ ನೀಡಿದರು.

ಸಂಘದ ಲಾಂಛನ ಬಿಡುಗಡೆ ಮಾಡಲಾಯಿತು. ಪ್ರಕಾಶಕಿ ಆರ್. ಪೂರ್ಣಿಮಾ, ಹೋರಾಟಗಾರ ಮಾವಳ್ಳಿ ಶಂಕರ್, ಆಕೃತಿ ಪುಸ್ತಕದ ಗುರುಪ್ರಸಾದ್ ಡಿ.ಎನ್. ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

‘ರೇವಾ ವಿಶ್ವಸಂವಾದ’ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಭಾರತ ಹಾಗೂ ತೈವಾನ್ ನಿಯೋಗಗಳ ಸದಸ್ಯರು

ವಿಶ್ವಸಂವಾದ: ಪರಿಹಾರೋಪಾಯದ ಚರ್ಚೆ

ಪ್ರಜಾವಾಣಿ ವಾರ್ತೆ

ಯಲಹಂಕ: ರೇವಾ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದ್ದ ‘ರೇವಾ ವಿಶ್ವಸಂವಾದ-2025’ಕ್ಕೆ ಚಾಲನೆ ದೊರೆತಿದ್ದು, ಭಾರತ ಹಾಗೂ ತೈವಾನ್ ನಿಯೋಗಗಳ ಮಧ್ಯೆ ಜಾಗತಿಕ ವಿಷಯಗಳಿಗೆ ಸಂಬಂಧಿಸಿದಂತೆ ಸಂವಾದಗಳು ನಡೆದವು.

ತೈವಾನ್‌ನ ತೈಪೆನಲ್ಲಿರುವ ಪ್ರಾಸ್ಪೆಕ್ಟ್ಸ್ ಫೌಂಡೇಷನ್‌ನ ಸಹಯೋಗದಲ್ಲಿ ಎರಡು ದಿನಗಳ ಈ ವಿಶ್ವಸಂವಾದ ಆಯೋಜಿಸಲಾಗಿದೆ.

ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಪಿ. ಶ್ಯಾಮರಾಜು, ‘ವಿಶ್ವದ ಎರಡು ಬಲಿಷ್ಠ ಪ್ರಜಾಪ್ರಭುತ್ವಗಳಾದ ಭಾರತ ಹಾಗೂ ತೈವಾನ್ ಸಮಾನ ದೃಷ್ಟಿಕೋನ ಹೊಂದಿವೆ. ಎರಡೂ ದೇಶಗಳ ವಿಷಯ ತಜ್ಞರು, ವಿದ್ವಾಂಸರು ಹಾಗೂ ನೀತಿ ನಿರೂಪಕರ ಮಧ್ಯದ ದ್ವಿಪಕ್ಷೀಯ ಮಾತುಕತೆಗೆ ಈ ವೇದಿಕೆ ಸಾಕ್ಷಿಯಾಗಿದೆ. ಎರಡು ದಿನಗಳ ಈ ಸಂವಾದದಲ್ಲಿ ಪ್ರಮುಖ ಜಾಗತಿಕ ಸಮಸ್ಯೆಗಳು ಹಾಗೂ ವಿವಿಧ ಕ್ಷೇತ್ರಗಳ ಸಹಯೋಗದೊಂದಿಗೆ ಒದಗಿಸಬಹುದಾದ ಪರಿಹಾರಗಳ ಬಗ್ಗೆ ಚರ್ಚೆ ನಡೆಯಲಿದೆ’ ಎಂದು ಹೇಳಿದರು.

ತೈವಾನ್ ನಿಯೋಗದ ನೇತೃತ್ವ ವಹಿಸಿಕೊಂಡಿರುವ ಪ್ರಾಸ್ಪೆಕ್ಟ್ಸ್ ಫೌಂಡೇಷನ್‌ನ ನಿರ್ದೇಶಕ ಐ-ಚುಂಗ್‌ಲೈ, ‘ಭಾರತ ಹಾಗೂ ತೈವಾನ್‌ನ ಬಲಿಷ್ಠ ಸಂಬಂಧಕ್ಕೆ ಈ ಸಂವಾದ ಸಾಕ್ಷಿಯಾಗಿದೆ. ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತವು ಗಣನೀಯ ಪ್ರಾಬಲ್ಯವನ್ನು ಹೊಂದಿದ್ದು, ಜಾಗತಿಕ ಮಟ್ಟದಲ್ಲಿ ಮುಖ್ಯ ಪಾತ್ರ ವಹಿಸಿದೆ. ಹೀಗಾಗಿ, ಅವಿಷ್ಕಾರ ಹಾಗೂ ತಂತ್ರಗಾರಿಕೆ ಕ್ಷೇತ್ರದಲ್ಲಿ ಭಾರತ ಮತ್ತು ತೈವಾನ್ ಪರಸ್ಪರ ಸಹಕಾರದೊಂದಿಗೆ ಕೆಲಸ ಮಾಡಿ, ಜಾಗತಿಕ ಪ್ರಗತಿಗೆ ಮುನ್ನುಡಿ ಬರೆಯಬೇಕಿದೆ’ ಎಂದರು.

ಪುಸ್ತಕೋದ್ಯಮಕ್ಕೆ ₹20 ಕೋಟಿ ಮೀಸಲಿಡಿ: ವಸುಂಧರಾ ಭೂಪತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪುಸ್ತಕೋದ್ಯಮದ ಸಂಕಷ್ಟ ನಿವಾರಣೆಗೆ ಸರ್ಕಾರವು ಪ್ರತಿ ವರ್ಷ ₹20 ಕೋಟಿ ಅನುದಾನವನ್ನಾದರೂ ಬಜೆಟ್‌ನಲ್ಲಿ ಮೀಸಲಿಡಬೇಕು. ಪುಸ್ತಕಗಳು ಪ್ರಕಟಗೊಂಡ ವರ್ಷವೇ ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಖರೀದಿಸುವಂತಾಗಬೇಕು’ ಎಂದು ಲೇಖಕಿ ಡಾ. ವಸುಂಧರಾ ಭೂಪತಿ ಅಭಿಪ್ರಾಯಪಟ್ಟರು.

ಕರ್ನಾಟಕ ಪ್ರಕಾಶಕರ ಸಂಘವು ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಿಶ್ವ ಪುಸ್ತಕ ಮತ್ತು ಕೃತಿಸ್ವಾಮ್ಯ ದಿನಾಚರಣೆ ಸಮಾರಂಭದಲ್ಲಿ ರಾಯಚೂರಿನ ಬಂಡಾರ ಪ್ರಕಾಶನದ ರೇಣುಕಾ ಕೋಡುಗುಂಟಿ ಅವರಿಗೆ ‘ನಂಜನಗೂಡು ತಿರುಮಲಾಂಬ ಪ್ರಶಸ್ತಿ’ ಹಾಗೂ ಶಿವಮೊಗ್ಗದ ಅಹರ್ನಿಶಿ ಪ್ರಕಾಶನದ ಅಕ್ಷತಾ ಹುಂಚದಕಟ್ಟೆ ಅವರಿಗೆ ‘ಎಂ. ಗೋಪಾಲಕೃಷ್ಣ ಅಡಿಗ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ಈ ವೇಳೆ ಮಾತನಾಡಿದ ವಸುಂಧರಾ ಭೂಪತಿ, ‘ರಾಜ್ಯದಲ್ಲಿ 7,200 ಗ್ರಂಥಾಲಯಗಳಿವೆ. ಸರ್ಕಾರವು ಸಾರ್ವಜನಿಕ ಗ್ರಂಥಾಲಯ ಇಲಾಖೆಯಡಿ 2007ರಲ್ಲಿ ಏಕಗವಾಕ್ಷಿ ಯೋಜನೆಯನ್ನು ಪ್ರಾರಂಭಿಸಿತು. ಈ ಯೋಜನೆಯಡಿ ಕೃತಿಯೊಂದರ 300 ಪ್ರತಿಗಳನ್ನು ಖರೀದಿಸಲಾಗುತ್ತಿತ್ತು. ಈಗ 2021ರ ಪುಸ್ತಕ ಪಟ್ಟಿ ಪ್ರಕಟವಾಗಿದೆ. ಆದರೆ, ಯೋಜನೆಯಡಿ ಪುಸ್ತಕಗಳ ಖರೀದಿಯನ್ನೇ ನಿಲ್ಲಿಸಲಾಗಿದೆ. ಪುಸ್ತಕ ಖರೀದಿಗೆ ಬಜೆಟ್‌ನಲ್ಲಿ ಅನುದಾನ ಮೀಸಲಿಡುವುದು ಸರ್ಕಾರದ ಜವಾಬ್ದಾರಿ. ಈ ಸಂದರ್ಭದಲ್ಲಿ ಪಟ್ಟಿ ಬಂದಿದೆಯೆಂದು ಖುಷಿ ಪಡಬೇಕೊ, ಇಲಾಖೆ ಖರೀದಿಸುತ್ತಿಲ್ಲ ಎಂದು ದುಃಖ ಪಡಬೇಕೊ ಎಂಬುದು ತಿಳಿಯದಾಗಿದೆ’ ಎಂದು ಹೇಳಿದರು.


ಸಮಾರಂಭದಲ್ಲಿ ರೇಣುಕಾ ಕೋಡುಗುಂಟಿ ಅವರಿಗೆ ‘ನಂಜನಗೂಡು ತಿರುಮಲಾಂಬ ಪ್ರಶಸ್ತಿ’ ಹಾಗೂ ಅಕ್ಷತಾ ಹುಂಚದಕಟ್ಟೆ ಅವರಿಗೆ ‘ಎಂ. ಗೋಪಾಲಕೃಷ್ಣ ಅಡಿಗ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಡಾ. ವಸುಂಧರಾ ಭೂಪತಿ, ಬಂಜಗೆರೆ ಜಯಪ್ರಕಾಶ್, ಪ್ರಕಾಶ್ ಕಂಬತ್ತಳ್ಳಿ ಮತ್ತು ಬೈರಮಂಗಲ ರಾಮೇಗೌಡ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಪ್ರಕಾಶಕರು ಸರ್ಕಾರದ ನೆರವು ಬೇಡ ಎನ್ನುವ ಸ್ಥಿತಿಯಲ್ಲಿ ಇಲ್ಲ. ಏಕಗವಾಕ್ಷಿ ಯೋಜನೆಯಡಿ ದುರ್ಬಲ ಪ್ರಕಾಶಕರ ಪುಸ್ತಕಗಳನ್ನು ಮೊದಲು ಖರೀದಿಸಬೇಕು

ಅಕ್ಷತಾ ಹುಂಚದಕಟ್ಟೆ, ಪ್ರಕಾಶಕಿ

ಪ್ರಶಸ್ತಿ ಪ್ರದಾನ ಮಾಡಿದ ಸಾಹಿತಿ ಬಂಜಗೆರೆ ಜಯಪ್ರಕಾಶ್, ‘ಬರವಣಿಗೆ ಎನ್ನುವುದು ಪಂಡಿತರ ವಲಯದ ಸ್ವತ್ತಲ್ಲ. ಎಲ್ಲರೂ ಬರೆಯಬಹುದಾಗಿದೆ. ರಾಜ್ಯದಲ್ಲಿ ಪ್ರತಿ ವರ್ಷ ಸುಮಾರು ಎಂಟು ಸಾವಿರ ಪುಸ್ತಕಗಳು ಪ್ರಕಟವಾಗುತ್ತವೆ. ಅವುಗಳಲ್ಲಿ ನೂರು ಕೃತಿಗಳು ಮೌಲಿಕವಾಗಿ ಉಳಿದರೂ ಕನ್ನಡ ಸಾಹಿತ್ಯ ಮುಂದಕ್ಕೆ ಹೋಗಲಿದೆ. ಓದುಗರೇ ಅಂತಿಮ ತೀರ್ಪುಗಾರರಾಗಿದ್ದು, ಅವರು ಅಗೋಚರ ನೆಲೆಯಲ್ಲಿ ತೀರ್ಪನ್ನು ನೀಡುತ್ತಾರೆ. ಈಗ ಪುಸ್ತಕೋದ್ಯಮವು ಒಂದು ರೀತಿಯಲ್ಲಿ ಸುಖದ ಹಾದಿ, ಮತ್ತೊಂದು ಕಡೆಗೆ ದುಃಖದ ಹಾದಿಯಲ್ಲಿ ಸಾಗುತ್ತಿದೆ. ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಏಕಗವಾಕ್ಷಿ ಯೋಜನೆಯಡಿ ಪುಸ್ತಕಗಳನ್ನು ಖರೀದಿಸಿ, ಪುಸ್ತಕೋದ್ಯಮಕ್ಕೆ ಪ್ರೋತ್ಸಾಹ ನೀಡಬೇಕು’ ಎಂದು ಹೇಳಿದರು.

ಇದೇ ವೇಳೆ ಸಾಹಿತ್ಯ ಲೋಕ ಪಬ್ಲಿಕೇಷನ್ಸ್‌ನ ರಘುವೀರ್, ಅಮೂಲ್ಯ ಪುಸ್ತಕದ ಕೃಷ್ಣ ಚೆಂಗಡಿ, ಅವ್ವ ಪುಸ್ತಕಾಲಯದ ಅನಂತ್ ಕುಣಿಗಲ್, ಕದಂಬ ಪ್ರಕಾಶನದ ನಾಗೇಶ್ ಹಾಗೂ ಬುಕ್ ಸರ್ಕಲ್‌ನ ಶ್ರೀನಾಥ್ ಅವರಿಗೆ ‘ಪುಸ್ತಕ ಗೌರವ ಪುರಸ್ಕಾರ’ ನೀಡಿ, ಗೌರವಿಸಲಾಯಿತು.

ಪೂರೈಕೆ ಕುಸಿತ: ತೆಂಗಿನಕಾಯಿ ದುಬಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆಂಗಿನಕಾಯಿ ದರ ಹೆಚ್ಚಳವಾಗಿದ್ದು, ಚಿಲ್ಲರೆ ಮಾರುಕಟ್ಟೆಯಲ್ಲಿ ಮಧ್ಯಮ ಗಾತ್ರದ ಒಂದು ತೆಂಗಿನಕಾಯಿಯು ₹60 ರಿಂದ ₹70ರಂತೆ ಮಾರಾಟವಾಗುತ್ತಿದೆ. ಇದು ತೆಂಗು ಬೆಳೆಗಾರರಿಗೆ ಸಂತಸ ತಂದರೆ, ಗ್ರಾಹಕರಿಗೆ ಹೊರೆಯಾಗಿದೆ.

ದುಬಾರಿ ದರ ಒಂದೆಡೆಯಾದರೆ ಮಾರುಕಟ್ಟೆಯಲ್ಲಿ ಗುಣಮಟ್ಟದ,ಬಲಿತ ಕಾಯಿಗಳ ಕೊರತೆ ಕಾಡುತ್ತಿದೆ. ದರ ಹೆಚ್ಚಳವಾಗಿರುವ ಕಾರಣದಿಂದ ಇನ್ನೂ ಬಲಿಯದ ಹಾಗೂ ಕಡಿಮೆ ಗಾತ್ರದ ತೆಂಗಿನಕಾಯಿಗಳು ಹೆಚ್ಚಾಗಿ ಪೂರೈಕೆಯಾಗುತ್ತಿವೆ. ಸಣ್ಣ ಗಾತ್ರದ ಒಂದು ಕಾಯಿ ₹40ರಿಂದ ₹50ರಂತೆ ಮಾರಾಟವಾಗುತ್ತಿದೆ. ಚಟ್ನಿ ಸಹಿತ ಮಸಾಲೆ ಪದಾರ್ಥಗಳ ತಯಾರಿಕೆಗೆ ತೆಂಗಿನಕಾಯಿ ಅಗತ್ಯವಾಗಿ ರುವುದರಿಂದ ಹೋಟೆಲ್, ರೆಸ್ಟೋರೆಂಟ್‌ಗಳಿಗೆ ದರ ಏರಿಕೆ ಬಿಸಿ ತಟ್ಟಿದೆ.

‘ತೆಂಗಿನಕಾಯಿ ಇಳುವರಿ ಕಡಿಮೆ’


‘ಯಶವಂತಪುರ ಎಪಿಎಂಸಿ ಮಾರುಕಟ್ಟೆಯಲ್ಲಿ ಒಂದು ಸಾವಿರ ತೆಂಗಿನಕಾಯಿಗಳು ಕನಿಷ್ಠ ₹30 ಸಾವಿರದಿಂದ ಗರಿಷ್ಠ ₹50 ಸಾವಿರವಿದವರೆಗೆ ಮಾರಾಟವಾಗುತ್ತಿವೆ ಎಂದು ತಿಳಿಸಿದರು’ ಎಂದು ಎಪಿಎಂಸಿಯ ಅಧಿಕಾರಿಗಳು ಮಾಹಿತಿ ನೀಡಿದರು.

‘ಚಟ್ನಿ, ಸಾಂಬಾರ್, ಗೊಜ್ಜು ಸೇರಿದಂತೆ ಮಸಾಲೆ ಪದಾರ್ಥಗಳ ತಯಾರಿಕೆಗೆ ತೆಂಗಿನಕಾಯಿ ಅಗತ್ಯ-ವಾಗಿದ್ದು, ಪ್ರತಿದಿನ ಕನಿಷ್ಠ 1ರಿಂದ 2 ತೆಂಗಿನಕಾಯಿ ಬೇಕಾಗುತ್ತಿದೆ. ಆದರೆ, ಚಿಲ್ಲರೆ ಅಂಗಡಿಗಳಲ್ಲಿ ಗುಣಮಟ್ಟವಿಲ್ಲದ ಕಾಯಿಗೆ ₹50 ಕೊಡಬೇಕಾಗಿದೆ’ ಎಂದು ಗೃಹಿಣಿ ಶಿಲ್ಪಾ ಅವರು ಬೇಸರ ವ್ಯಕ್ತಪಡಿಸಿದರು.

‘ಇಡ್ಲಿ, ದೋಸೆ, ಪುಲಾವ್ ಸಹಿತ ಬೆಳಗಿನ ಬಹುತೇಕ ಉಪಾಹಾರದ ಜೊತೆಗೆ ಚಟ್ನಿ ತಯಾರಿಸಲು ಹಾಗೂ ಸಾಂಬಾರ್, ಪಲ್ಯಕ್ಕೆ ತೆಂಗಿನಕಾಯಿ ಹೆಚ್ಚಾಗಿ ಬಳಸುತ್ತೇವೆ. ತೆಂಗಿನಕಾಯಿ ದರ ಏರಿಕೆ ಹೋಟೆಲ್ ಉದ್ಯಮಕ್ಕೂ ಪೆಟ್ಟು ನೀಡಿದೆ. ಗುಣಮಟ್ಟದ ತೆಂಗಿನಕಾಯಿಗಳು ಸಿಗುತ್ತಿಲ್ಲ. ನಮಗೆ ಒಂದು ದಿನಕ್ಕೆ 80–100 ತೆಂಗಿನಕಾಯಿ ಬೇಕಾಗುತ್ತದೆ. ಅದಕ್ಕೆ ಹೆಚ್ಚುವರಿಗೆ ₹ 1 ಸಾವಿರ ಪಾವತಿಸುತ್ತಿದ್ದೇವೆ’ ಎಂದು ನಿಸರ್ಗ ಗ್ರ್ಯಾಂಡ್ ಹೋಟೆಲ್‌ನ ಮಾಲೀಕ ಎಸ್‌.ಪಿ. ಕೃಷ್ಣರಾಜು ‘ಪ್ರಜಾವಾಣಿ’ಗೆ ತಿಳಿಸಿದರು.

ತರಕಾರಿ ದರ ಇಳಿಕೆ: ಮಾರುಕಟ್ಟೆಗೆ ಬೇಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಟೊಮೆಟೊ ಪೂರೈಕೆಯಾಗುತ್ತಿರುವುದು ದರ ಕುಸಿತಕ್ಕೆ ಕಾರಣವಾಗಿತ್ತು. ಕಳೆದ ಎರಡು ವಾರಗಳಿಗೆ ಹೋಲಿಸಿದರೆ ಟೊಮೆಟೊ ದರ ಅಲ್ಪ ಹೆಚ್ಚಾಗಿದ್ದು, ಕೆ.ಜಿಗೆ ₹20ರಂತೆ ಮಾರಾಟವಾಗುತ್ತಿದೆ ಎಂದು ವ್ಯಾಪಾರಿಗಳು ತಿಳಿಸಿದರು.

ತರಕಾರಿ: ಕೆ.ಆರ್. ಮಾರುಕಟ್ಟೆಯ ದರಗಳು ಪ್ರತಿ ಕೆ.ಜಿಗೆ (₹ಗಳಲ್ಲಿ)

ತರಕಾರಿ	ಕಳೆದ ವಾರ	ಈ ವಾರ
ಕ್ಯಾರೆಟ್	60	40
ಕ್ಯಾಪ್ಸಿಕಮ್	70	60
ಈರುಳ್ಳಿ	40	30
ಬೀನ್ಸ್	80	40
ಟೊಮೆಟೊ	10	20
ಆಲೂಗಡ್ಡೆ	30	30
ಬೀಟ್‌ರೂಟ್	40	40
ಹಾಗಲಕಾಯಿ	60	60
ಬೂದುಗುಂಬಳ	40	40
ಹೀರೆಕಾಯಿ	60	60
ಮೆಣಸಿನಕಾಯಿ	80	60
ನಾಟಿ ಬಟಾಣಿ	240	200
ಬೆಳ್ಳುಳ್ಳಿ	160	120

ವಿಕಾಸ್‌ಗೆ ನ್ಯಾಯ: ಡಿಕೆಶಿ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಂಗ್ ಕಮಾಂಡರ್ ಶಿಲಾದಿತ್ಯ ಬೋಸ್‌ನಿಂದ ಹಲ್ಲೆಗೆ ಒಳಗಾಗಿರುವ ಕನ್ನಡಿಗ ವಿಕಾಸ್ ಕುಮಾರ್ ಅವರಿಗೆ ನ್ಯಾಯ ಸಿಗುವಂತೆ ಮಾಡಲಾಗುವುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಕಾಸ್‌ಗೆ ಬುಧವಾರ ಕರೆ ಮಾಡಿ ಮಾತನಾಡಿದ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ನಾಗವಾರಪಾಳ್ಯದ ಘಟನೆಗೆ ಸಂಬಂಧಿಸಿದಂತೆ ಹಲ್ಲೆಗೊಳಗಾಗಿದ್ದ ವಿಕಾಸ್‌ಗೆ ಧೈರ್ಯ ತುಂಬಿದ್ದೇನೆ. ಕನ್ನಡಿಗರು ಸಮಸ್ಯೆಯಲ್ಲಿದ್ದರೆ ಕರ್ನಾಟಕ ಸರ್ಕಾರ ಜೊತೆ ನಿಲ್ಲಲಿದೆ. ತಪ್ಪಿತಸ್ಥರಿಗೆ ಶಿಕ್ಷೆ ನೀಡಲೂ ಬದ್ಧರಿದ್ದೇವೆ. ಯಾವುದಕ್ಕೂ ಹೆದರುವ ಅಗತ್ಯವಿಲ್ಲ’ ಎಂದರು.

ಪಹಲ್ಗಾಮ್ ಉಗ್ರರ ದಾಳಿಗೆ ಆದಿಚುಂಚನಗಿರಿ ಶ್ರೀ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಉಗ್ರರು ದಾಳಿ ನಡೆಸಿರುವುದನ್ನು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಖಂಡಿಸಿದ್ದಾರೆ.

ಘಟನೆಯಲ್ಲಿ ಮುಗ್ಧ ಜನರು ಸಾವನ್ನಪ್ಪಿರುವುದು ಆಘಾತ ತಂದಿದೆ. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬದವರಿಗೆ ಸಂತಾಪಗಳು.ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವವರು ಚೇತರಿಸಿಕೊಳ್ಳಲಿ ಎಂದು ಸ್ವಾಮೀಜಿ ಹಾರೈಸಿದ್ದಾರೆ.

ದಾಳಿಯಲ್ಲಿ ರಾಜ್ಯದ ಮೂವರು ಸಾವನ್ನಪ್ಪಿರುವುದು ಅತ್ಯಂತ ದುರದೃಷ್ಟಕರ. ಮೃತರ ಕುಟುಂಬಗಳಿಗೆ ದುಃಖವನ್ನು ಭರಿಸುವ ಶಕ್ತಿ ಸಿಗಲಿ. ಇಂಥ ಸಂದರ್ಭದಲ್ಲಿ ಸಂತ್ರಸ್ತರ ಕುಟುಂಬದವರೊಂದಿಗೆ ಶ್ರೀಮಠ ಇರಲಿದೆ ಎಂದು ಭರವಸೆ ನೀಡಿದ್ದಾರೆ.

ಒಂದು ಕಾಲದಲ್ಲಿ ಜಮ್ಮು-ಕಾಶ್ಮೀರ ಅಶಾಂತಿಯ ಬೀಡಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಅವರ ದಿಟ್ಟ ನಿರ್ಧಾರಗಳಿಂದಾಗಿ ಕಳೆದ ಹಲವು ವರ್ಷಗಳಿಂದ ಕಣಿವೆ ರಾಜ್ಯದಲ್ಲಿ ಶಾಂತಿ ನೆಲಸಿತ್ತು. ಇದನ್ನು ಸಹಿಸದ ಉಗ್ರರು ಪ್ರವಾಸಿಗರ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ. ಇದನ್ನು ಯಾವುದೇ ಕಾರಣಕ್ಕೂ ಸಹಿಸಲು ಸಾಧ್ಯವಿಲ್ಲ ಎಂದರು.

‘ಭಯೋತ್ಪಾದನೆಗೆ ಜಾತಿ, ಧರ್ಮದ ಬಣ್ಣಕಟ್ಟುವುದು ಬೇಡ. ಇದರಲ್ಲಿ ಯಾರೇ ಭಾಗಿಯಾಗಿದ್ದರೂ ಅದನ್ನು ನಾವು ಖಂಡಿಸಲೇಬೇಕು. ಪಕ್ಷ ರಾಜಕಾರಣ ಮರೆತು ಎಲ್ಲರೂ ಒಗ್ಗಟ್ಟಾಗಿರಬೇಕಾದ ಸಮಯ ಇದು’ ಎಂದು ಸಲಹೆ ನೀಡಿದ್ದಾರೆ.

‘ಇದು ಭಾರತದ ಸಾರ್ವಭೌಮತೆ ಮೇಲೆ ನಡೆದಿರುವ ದಾಳಿಯಾಗಿದೆ. ಉಗ್ರರನ್ನು ಮಟ್ಟಹಾಕಲು ಸರ್ಕಾರ ಏನೆಲ್ಲಾ ಸಾಧ್ಯವೋ ಅದನ್ನು ಮಾಡಬೇಕು. ನಾವು ಒಂದಾಗಿದ್ದೇವೆ ಎಂಬ ಸಂದೇಶವನ್ನು ರವಾನಿಸಲೇಬೇಕು’ ಎಂದು ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಯುಸಿ ಸಾಧಕರು

ಕೆಬಿಸಿ ಪಿಯು. ಕಾಲೇಜು, ಕೋಡಿಪಾಳ್ಯ, ಕೆಂಗೇರಿ


ರೇವನ್ ಎಸ್‌.ಜಿ. (98.67%) ವೇದಾವತಿ (97%) ಸಂಜನಾ ಬಿ.ಆರ್. (96%) ಶಶಾಂಕ್ ಎನ್. (96%)
ಜಹೀರ್ ಐ. ಬೆನಕಲ್ (95.50%) ಮೋನಿಕಾ ಕೆ.ಎಚ್. (95.33%) ಧನುಷ್ ಎಸ್. (95.33%) ಮೋಹನ್ ಎಚ್. (95.17%)

ಸೇಂಟ್ ಚಾರ್ಲ್ಸ್ ಪಿಯು ಕಾಲೇಜು, ಲಿಂಗರಾಜಪುರ

ಕೀರ್ತನಾ ಎಂ. (98.83%) ಜಾಯ್ಸ್ ಮೇರಿ ಎಲ್. (98.17%) ಪೂಜಾ ನಂದಿತಾ ಎ. (98.17%) ಜೆಶಿಕಾ ಜೆ. (98.17%) ರಕ್ಷಾ ಎಸ್. (95.83%)

ಉದ್ಯಮಿ ನಿತೇಶ್ ಶೆಟ್ಟಿ ವಿಚಾರಣೆ

ರಾಮನಗರ: ಭೂಗತ ಲೋಕದ ಮಾಜಿ ಡಾನ್ ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಮೇಲೆ ತಾಲ್ಲೂಕಿನ ಬಿಡದಿ ಬಳಿ ವಾರದ ಹಿಂದೆ ನಡೆದ ಗುಂಡಿನ ದಾಳಿಗೆ ಸಂಬಂಧಿಸಿದಂತೆ ಪ್ರಕರಣದ ಮೂರನೇ ಆರೋಪಿ ರಿಯಲ್ ಎಸ್ಟೇಟ್ ಉದ್ಯಮಿ ನಿತೇಶ್ ಎಸ್ಟೇಟ್ ಮಾಲೀಕ ನಿತೇಶ್ ಶೆಟ್ಟಿ ಅವರನ್ನು ಬಿಡದಿ ಪೊಲೀಸ್ ಠಾಣೆಯಲ್ಲಿ ತನಿಖಾಧಿಕಾರಿಗಳು ಬುಧವಾರ ವಿಚಾರಣೆ ನಡೆಸಿದರು.

ಪೊಲೀಸರ ನೋಟಿಸ್ ಹಿನ್ನೆಲೆಯಲ್ಲಿ ನಿತೇಶ್ ತಮ್ಮ ವಕೀಲರೊಂದಿಗೆ ಸಂಜೆ ವಿಚಾರಣೆಗೆ ಹಾಜರಾದರು.

वित्त मंत्रालय MINISTRY OF FINANCE
सत्यमेव जयते

ಕ್ವಾರ್ಟರ್ಲಿ ರಿಟರ್ನ್ ಮಂತ್ಲಿ ಪೇಮೆಂಟ್ (ಕ್ಯುರ್‌ಎಂಪಿ)

ಹ.ವ. 2024–25ರ ಅವಧಿಯಲ್ಲಿ ರೂ. 5 ಕೋಟಿವರೆಗೆ ಸರಾಸರಿ ವಾರ್ಷಿಕ ವಹಿವಾಟು ಹೊಂದಿರುವ ಸಣ್ಣ ತೆರಿಗೆ ಪಾವತಿದಾರರ ವ್ಯಾಪಾರ ಸರಳೀಕರಣಗೊಳಿಸುವ ಉದ್ದೇಶವುಳ್ಳ ಒಂದು ಕ್ರಮ

ಕ್ಯುಆರ್‌ಎಂಪಿ ಯೋಜನೆ ಪಡೆದುಕೊಳ್ಳಲು ಬಯಸುವ ಅರ್ಹ ತೆರಿಗೆ ಪಾವತಿದಾರರು, ಜಿಎಸ್‌ಟಿ ಪೋರ್ಟಲ್‌ನಲ್ಲಿ (www.gst.gov.in) ಕೆಳಕಂಡ ಕ್ರಮಗಳನ್ನು ಅನುಸರಿಸುವ ಮೂಲಕ ಈ ಯೋಜನೆಯನ್ನು ಪಡೆದುಕೊಳ್ಳಬಹುದು.

ತೆರಿಗೆ ಪಾವತಿದಾರರ ಇಂಟರ್‌ಫೇಸ್‌ಗೆ ಲಾಗಿನ್ ಮಾಡಿರಿ

ಸರ್ವೀಸಸ್ > ರಿಟರ್ನ್ಸ್ > ಆಪ್ಟ್-ಇನ್ ಕ್ವಾರ್ಟರ್ಲಿ ರಿಟರ್ನ್ ಆಪ್ಷನ್

ಈಗಾಗಲೇ ಕ್ಯುಆರ್‌ಎಂಪಿ ಯೋಜನೆ ಆಯ್ಕೆ ಮಾಡಿಕೊಂಡಿರುವ ತೆರಿಗೆ ಪಾವತಿದಾರರು ಈ ಯೋಜನೆಗಾಗಿ ಪುನಃ ಅಪ್ಲಾಯ್ ಮಾಡಬೇಕಾಗಿಲ್ಲ

ಲಾಭಗಳು

- ಒಂದು ತ್ರೈಮಾಸಿಕದಲ್ಲಿ ಕೇವಲ ಒಂದು ಬಾರಿ ಮಾತ್ರ ಫಾರಂ ಜಿಎಸ್‌ಟಿಆರ್–1 ಮತ್ತು ಜಿಎಸ್‌ಟಿಆರ್–3ಬಿ ನಮೂನೆಯಲ್ಲಿ ಜಿಎಸ್‌ಟಿ ಸ್ಟೇಟ್‌ಮೆಂಟ್ಸ್/ರಿಟರ್ನ್ಸ್ ಫೈಲ್ ಮಾಡಿ
- ಯೋಜನೆಯಲ್ಲಿ ಸುಲಭವಾಗಿ ಸೇರಿಕೊಳ್ಳಬಹುದು ಮತ್ತು ನಿರ್ಗಮಿಸಬಹುದು
- ಸರಳವಾದ ಇನ್ವಾಯ್ಸ್ ಫರ್ನಿಷಿಂಗ್ ಫೆಸಿಲಿಟ (ಐಎಫ್‌ಎಫ್) ಸೌಕರ್ಯವನ್ನು ಆನಂದಿಸಿರಿ
- ಒಂದು ತ್ರೈಮಾಸಿಕದ ಮೊದಲ ಎರಡು ತಿಂಗಳಲ್ಲಿ ಫಿಕ್ಸೆಡ್ ಸಮ್ ಮೆಥಡ್ (ಪ್ರಿ-ಫಿಲ್ಡ್ ಚಲನ್) ಅಥವಾ ಸೆಲ್ಫ್ ಅಸೆಸ್‌ಮೆಂಟ್ ಮೆಥಡ್ (ಐಟಿಸಿ ಹೊಂದಾಣಿಕೆ ನಂತರದಲ್ಲಿ ಬಾಕಿ ಇರುವ ವಾಸ್ತವ ತೆರಿಗೆ) ಅನ್ನು ಅನುಕೂಲಕರವಾಗಿ ಬಳಸಿಕೊಳ್ಳುವ ಮೂಲಕ ಮಾಸಿಕ ತೆರಿಗೆ ಪಾವತಿಸಿ
- ಪ್ರತಿ ತ್ರೈಮಾಸಿದಲ್ಲಿ ಒಂದು ಬಾರಿ ಐಟಿಸಿ ಮತ್ತು ತೆರಿಗೆಯ ಸ್ವಯಂ ಮೌಲ್ಯಮಾಪನ ಮಾಡಿರಿ

ಹ.ವ. 2025–26ರ ಕ್ಯು1 ನಿಂದ ಕ್ಯುಆರ್‌ಎಂಪಿ ಯೋಜನೆ ಆಯ್ಕೆ ಮಾಡಿಕೊಳ್ಳಲು ಕೊನೆಯ ದಿನಾಂಕ

30ನೇ ಏಪ್ರಿಲ್, 2025

ಹಿಂದಿನ ತ್ರೈಮಾಸಿಕದ ಎರಡನೇ ತಿಂಗಳ ಮೊದಲ ದಿನದಿಂದ ತ್ರೈಮಾಸಿಕದ ಮೊದಲ ತಿಂಗಳ ಕೊನೆಯ ದಿನದವರೆಗೆ ಕೂಡ, ಅರ್ಹ ನೋಂದಾಯಿತ ವ್ಯಕ್ತಿಯು ಆಯ್ಕೆ ಮಾಡಿಕೊಳ್ಳಬಹುದು.

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಅಧಿಸೂಚನೆ ಸಂ. 81 ರಿಂದ 85/2020–ಸೆಂಟ್ರಲ್ ಟ್ಯಾಕ್ಸ್ & ಸುತ್ತೋಲೆ ಸಂ. 143/13/2020–ಜಿಎಸ್‌ಟಿ ಎಲ್ಲವೂ ದಿನಾಂಕ 10.11.2020

ಜಿಎಸ್‌ಟಿ ರಿಟರ್ನ್ ಫೈಲಿಂಗ್: ಇದು ತ್ವರಿತ, ಸುಲಭ ಮತ್ತು ಸರಳೀಕೃತ

ಕ್ಯುಆರ್‌ಎಂಪಿ ಯೋಜನೆಯ ವಿವರಗಳಾಗಿ ಸ್ಕ್ಯಾನ್ ಮಾಡಿರಿ

CBC 15502/13/0003/2526

ಕೇಂದ್ರೀಯ ಅಪ್ರತ್ಯಕ್ಷ ತೆರಿಗೆಗಳು ಮತ್ತು ಸುಂಕಗಳ ಮಂಡಳಿ

@cbicindia @cbic_india @cbicindia @CBICINDIA CBIC India

ಸಂಕ್ಷಿಪ್ತ ಸುದ್ದಿ

ಮದ್ಯಪಾನ ಮಾಡಿ ಗಲಾಟೆ: ಆಸ್ಪತ್ರೆಯಲ್ಲಿ ಸ್ವಚ್ಛತೆ ಕೆಲಸದ ಶಿಕ್ಷೆ

ಸೋಮವಾರಪೇಟೆ: ಪಟ್ಟಣದಲ್ಲಿ ಈಚೆಗೆ ಮದ್ಯ ಸೇವಿಸಿ ಸಾರ್ವಜನಿಕವಾಗಿ ಗಲಾಟೆ ಮಾಡಿ, ಶಾಂತಿ ಕದಡುತ್ತಿದ್ದ ಮೂವರು ಆರೋಪಿಗಳಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಒಂದು ದಿನದ ಸ್ವಚ್ಛತಾ ಕೆಲಸ ಮತ್ತು ₹ 1 ಸಾವಿರ ದಂಡ ವಿಧಿಸಿ ಇಲ್ಲಿನ ಹಿರಿಯ ಸಿವಿಲ್ ನ್ಯಾಯಾಲಯ ಆದೇಶಿಸಿದೆ.

ಆರೋಪಿಗಳಾದ ಪಟ್ಟಣದ ದೀಪಕ್, ಕೌಶಿಕ್, ಕಾರ್ತಿಕ್ ಅವರನ್ನು ಪಟ್ಟಣ ಪೊಲೀಸರು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಆರೋಪಿಗಳು ತಪ್ಪು ಒಪ್ಪಿಕೊಂಡಿದ್ದರಿಂದ, ಬಿಎನ್‌ಎಸ್ 275ರಂತೆ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಗೋಪಾಲಕೃಷ್ಣ ಅವರು ಬುಧವಾರ ಶಿಕ್ಷೆ ವಿಧಿಸಿದರು. ಸೋಮವಾರಪೇಟೆ ಪೊಲೀಸ್ ಠಾಣೆ ಎಸ್‌ಐ ಗೋಪಾಲ್ ಸಮ್ಮುಖದಲ್ಲಿ ಆರೋಪಿಗಳು ಸರ್ಕಾರಿ ಆಸ್ಪತ್ರೆಯಲ್ಲಿ ಸ್ವಚ್ಛತಾ ಕೆಲಸ ನಿರ್ವಹಿಸಿದರು.

ಸರ್ಕಾರಿ ಆಸ್ಪತ್ರೆಯಲ್ಲಿ ಬಾಣಂತಿ ಸಾವು

ಹೊಸಪೇಟೆ (ವಿಜಯನಗರ): ಇಲ್ಲಿನ ಸರ್ಕಾರಿ ತಾಯಿ ಮಗು ಆಸ್ಪತ್ರೆಯಲ್ಲಿ (ಎಂಸಿಎಚ್) ಬುಧವಾರ ಹಗರಿಬೊಮ್ಮನಹಳ್ಳಿ ತಾಲ್ಲೂಕು ದಶಮಾಪುರ ಗ್ರಾಮದ ಶಾಂತಾ (20) ಎಂಬ ಬಾಣಂತಿ ಮೃತಪಟ್ಟಿದ್ದಾರೆ. ಅವರ ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಇದಕ್ಕೆ ಕಾರಣ ಎಂದು ಕುಟುಂಬದವರು ಆರೋಪಿಸಿದ್ದಾರೆ.

ಶಾಂತಾ

‘ಭಾನುವಾರ ಸಿಸೇರಿಯನ್ ಹೆರಿಗೆ ಮೂಲಕ ಶಾಂತಾ ಆರೋಗ್ಯವಂತ ಹೆಣ್ಣು ಮಗುವಿಗೆ ಜನ್ಮ ನೀಡಿದ್ದರು. ಆದರೆ, ನಂತರ ವೈದ್ಯರು ಸರಿಯಾಗಿ ನಿಗಾ ವಹಿಸದ ಕಾರಣ ಆಕೆಯ ಸಾವನ್ನಪ್ಪಿರುವ ಸಾಧ್ಯತೆಯಿದೆ. ಇದರ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ. ಹೆರಿಗೆ ಮಾಡಿದ ಗುತ್ತಿಗೆ ವೈದ್ಯೆ ಡಾ. ಸಿಂಧೂ ಷಾ ಮತ್ತು ಗುತ್ತಿಗೆ ಶುಶ್ರೂಷಕ ಎಸ್‌.ಜೆ.ರಘುನಾಥ್ ಅವರನ್ನು ಕರ್ತವ್ಯ ಲೋಪ ಆರೋಪದ ಮೇಲೆ ವಜಾಗೊಳಿಸಲಾಗಿದೆ’ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಲ್‌.ಆರ್‌.ಶಂಕರ್ ನಾಯ್ಕ್ ತಿಳಿಸಿದರು.

‘ಶಾಂತಾ ಅವರಿಗೆ ಬೇರೆ ಏನಾದರೂ ಕಾಯಿಲೆ ಇತ್ತೆ ಎಂಬುದನ್ನು ಪತ್ತೆ ಮಾಡಲಾಗುತ್ತಿದೆ. ಡಾ. ಸಿಂಧೂ ಷಾ ಅವರು ಉಜ್ಜಿನಿ ಸಮುದಾಯ ಆರೋಗ್ಯ ಕೇಂದ್ರದ ಸ್ತ್ರೀರೋಗ ತಜ್ಞರಾಗಿದ್ದು, ಇಲ್ಲಿ ನಿಯೋಜಿಸಲಾಗಿತ್ತು’ ಎಂದು ತಿಳಿಸಿದರು.

ಹೊಸ ಪಕ್ಷ ಸ್ಥಾಪನೆ ಯತ್ನಾಳ ಸುಳಿವು

ಹಾವೇರಿ: ‘ಜನರು ಹಣ ಪಡೆದು, ಮತ ಹಾಕುವುದನ್ನು ನಿಲ್ಲಿಸಬೇಕು. ಹಿಂದೂಗಳ ಪರ ಹೋರಾಡುವ ವ್ಯಕ್ತಿಗೆ ಪಕ್ಷ–ಜಾತಿ ಭೇದ ಮರೆತು ಮತ ಹಾಕಬೇಕು. ಹೀಗೆ ನಡೆದುಕೊಂಡಲ್ಲಿ, 2028ರಲ್ಲಿ ನಮ್ಮದು ಹಾಗೂ ಕೆ.ಇ. ಕಾಂತೇಶ ಅವರ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತದೆ’ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದಲ್ಲಿ ಕ್ರಾಂತಿವೀರ ಯುವ ಬ್ರಿಗೇಡ್ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ‘ಸ್ವಾತಿ ಬ್ಯಾಡಗಿ ಹತ್ಯೆ ಪ್ರಕರಣದ ಅನ್ಯಾಯದ ವಿರುದ್ಧ ನ್ಯಾಯ ಜಾಥಾ’ದಲ್ಲಿ ಪಾಲ್ಗೊಂಡಿದ್ದ ಅವರು, ಹೊಸ ಪಕ್ಷ ಸ್ಥಾಪನೆ ಬಗ್ಗೆ ಸುಳಿವು ನೀಡಿದರು.

‘ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಗುಣಗಳನ್ನು ಹೊಂದಿರುವ ವ್ಯಕ್ತಿಯೇ ರಾಜ್ಯದ ಮುಂದಿನ ಮುಖ್ಯಮಂತ್ರಿ ಆಗುವರು. ಪ್ರತಿಯೊಂದು ಹಳ್ಳಿಗೂ ಹೋಗಿ, ಹಿಂದೂಗಳು ಮತ್ತು ಪರಿಶಿಷ್ಟ ಜಾತಿ– ಪಂಗಡದವರನ್ನು ಭೇಟಿಯಾಗುವೆ’ ಎಂದರು.

ಕೆಪಿಎಸ್‌ಸಿಯಲ್ಲಿ ಲಂಚ: ‘ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ಕನ್ನಡ ಕಲಿತವರಿಗೆ ಅನ್ಯಾಯ ಆಗುತ್ತಿದೆ. ಕೆಪಿಎಸ್‌ಸಿ ಸದಸ್ಯರಾಗಲು ₹5 ಕೋಟಿಯಿಂದ 10 ಕೋಟಿ, ಅಧ್ಯಕ್ಷರಾಗಲು ₹50 ಕೋಟಿ, ಉಪ ವಿಭಾಗಾಧಿಕಾರಿ ಹುದ್ದೆಗೆ ₹2 ಕೋಟಿ, ಡಿವೈಎಸ್ಪಿ ಹುದ್ದೆಗೆ ₹2 ಕೋಟಿ ಹಾಗೂ ಪಿಎಸ್‌ಐಗೆ ₹1 ಕೋಟಿ ಲಂಚ ನೀಡಬೇಕಾದ ಪರಿಸ್ಥಿತಿಯಿದೆ’ ಎಂದರು.

ಮೃತರಿಗೆ ತಲಾ ₹10 ಲಕ್ಷ ಪರಿಹಾರ: ಒಮರ್ ಘೋಷಣೆ

ಶ್ರೀನಗರ (ಪಿಟಿಐ): ದಕ್ಷಿಣ ಕಾಶ್ಮೀರದ ಪಹಲ್ಗಾಮ್ ಉಗ್ರರ ದಾಳಿಯಲ್ಲಿ ಮಂಗಳವಾರ ಮೃತಪಟ್ಟವರ ಕುಟುಂಬಕ್ಕೆ ಜಮ್ಮು ಮತ್ತು ಕಾಶ್ಮೀರ ಸರ್ಕಾರ ತಲಾ ₹ 10 ಲಕ್ಷ ಪರಿಹಾರ ಘೋಷಣೆ ಮಾಡಿದೆ. ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ‘ಎಕ್ಸ್’ ಪೋಸ್ಟ್‌ನಲ್ಲಿ ಪರಿಹಾರದ ಮಾಹಿತಿ ನೀಡಿದ್ದಾರೆ. ‘ದಾಳಿಯಿಂದ ಆಘಾತ ಮತ್ತು ದುಃಖಿತನಾಗಿದ್ದೇನೆ. ಪರಿಹಾರ ಧನವು ಅಮೂಲ್ಯ ಜೀವಗಳಿಗೆ ಬೆಲೆ ಕಟ್ಟುವಂಥದ್ದಲ್ಲ’ ಎಂದಿದ್ದಾರೆ.

21 ಸಾವಿರಕ್ಕೂ ಅಧಿಕ ಜನರ ರಕ್ತದ ಮಾದರಿ ಪರೀಕ್ಷೆ • ಸಾವಿರಕ್ಕೂ ಹೆಚ್ಚು ಜನರಿಗೆ ಡೆಂಗಿ ದೃಢ

ಮುಂಗಾರು ಪೂರ್ವದಲ್ಲೇ ಡೆಂಗಿ ಭೀತಿ

• ವರುಣ ಹೆಗಡೆ

ಬೆಂಗಳೂರು: ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮುಂಗಾರು ಪೂರ್ವ ಮಳೆಯಿಂದಾಗಿ ಈ ವರ್ಷ ಬೇಸಿಗೆಯಲ್ಲಿಯೇ ಡೆಂಗಿ ಪ್ರಕರಣ ಹೆಚ್ಚಳಕ್ಕೆ ಪೂರಕವಾದ ವಾತಾವರಣ ನಿರ್ಮಾಣವಾಗಿದೆ. ಡೆಂಗಿ ಶಂಕೆ ಕಾರಣ 21 ಸಾವಿರಕ್ಕೂ ಅಧಿಕ ಮಂದಿಯ ರಕ್ತದ ಮಾದರಿ ಪರೀಕ್ಷೆ ಮಾಡಲಾಗಿದ್ದು, ಸಾವಿರಕ್ಕೂ ಹೆಚ್ಚು ಜನರಲ್ಲಿ ಡೆಂಗಿ ಜ್ವರ ದೃಢಪಟ್ಟಿದೆ.

ಹಗಲಿನಲ್ಲಿ ಕಚ್ಚುವ ಈಡೀಸ್ ಈಜಿಪ್ಟಿ ಸೊಳ್ಳೆಗಳಿಂದ ಡೆಂಗಿ ಜ್ವರ ಹರಡುತ್ತದೆ. ಪ್ರತಿ ವರ್ಷ ಮುಂಗಾರು ಮಳೆ ಕಾಣಿಸಿಕೊಂಡ ಬಳಿಕ ಈ ಜ್ವರ ಹೆಚ್ಚಿನವರನ್ನು ಬಾಧಿಸುತ್ತಿತ್ತು. ನಿಂತ ನೀರಿನಲ್ಲಿ ಈಡೀಸ್ ಸೊಳ್ಳೆಗಳು ಲಾರ್ವಾ ಉತ್ಪತ್ತಿ ಮಾಡುತ್ತವೆ. ಜೂನ್–ಜುಲೈ ಬಳಿಕ ಪ್ರಕರಣಗಳ ಸಂಖ್ಯೆ ಏರುಗತಿಯಾಗುತ್ತಿತ್ತು. ಕಳೆದ ವರ್ಷ ಮುಂಗಾರು ಮಳೆ ಕೊರತೆ ಉಂಟಾಗಿ, ಬಿಸಿಲು–ಮಳೆಯಿಂದಾಗಿ ಜೂನ್ ಬಳಿಕ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ವರದಿಯಾಗಿದ್ದವು. ವರ್ಷಾಂತ್ಯಕ್ಕೆ ಡೆಂಗಿ ಪ್ರಕರಣಗಳ ಒಟ್ಟು ಸಂಖ್ಯೆ 32 ಸಾವಿರದ ಗಡಿ ದಾಟಿತ್ತು. ಈ ವರ್ಷ ಏಪ್ರಿಲ್‌ನಲ್ಲಿ ಸುರಿದ ಮಳೆಯಿಂದಾಗಿ ಮುಂಗಾರು ಪೂರ್ವದಲ್ಲಿಯೇ ಡೆಂಗಿ ಪ್ರಕರಣಗಳು ಹೆಚ್ಚಳವಾಗುವ ಸಾಧ್ಯತೆಯಿದ್ದು, ಆರೋಗ್ಯ ಇಲಾಖೆಯು ಈ ಬಗ್ಗೆ ಜಾಗೃತಿ ಮೂಡಿಸಲಾರಂಭಿಸಿದೆ.

2017ರಲ್ಲಿ 17 ಸಾವಿರಕ್ಕೂ ಅಧಿಕ ಡೆಂಗಿ ಪ್ರಕರಣಗಳು ದೃಢಪಟ್ಟಿದ್ದವು. 2020ರಲ್ಲಿ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿತ್ತು. ನಂತರದ ವರ್ಷಗಳಲ್ಲಿ ಪ್ರಕರಣಗಳು ಏರುಗತಿಯಲ್ಲಿವೆ. ಕಳೆದ ವರ್ಷ ಗರಿಷ್ಠ ಪ್ರಕರಣಗಳು ವರದಿಯಾಗಿವೆ. ಜ್ವರದ ತೀವ್ರತೆಗೆ 16 ಮಂದಿ ಮೃತಪಟ್ಟಿದ್ದಾರೆ. ಈ ವರ್ಷ ಈಗಾಗಲೇ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ದೃಢಪಟ್ಟಿವೆ.

ಬಿಬಿಎಂಪಿಯಲ್ಲಿ ಗರಿಷ್ಠ: ರಾಜ್ಯದಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಗರಿಷ್ಠ ಪ್ರಕರಣಗಳು ವರದಿಯಾಗಿದ್ದು, 2,361 ಡೆಂಗಿ ಶಂಕಿತರ ರಕ್ತದ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಅವರಲ್ಲಿ 435 ಮಂದಿಯಲ್ಲಿ ಡೆಂಗಿ ದೃಢಪಟ್ಟಿದೆ. ತುಮಕೂರು (73) ಮತ್ತು ಕಲಬುರಗಿಯಲ್ಲಿ (51) ಪ್ರಕರಣಗಳ ಸಂಖ್ಯೆ 50ರ ಗಡಿ ದಾಟಿದೆ. 19 ಜಿಲ್ಲೆಗಳಲ್ಲಿ ಪ್ರಕರಣಗಳ ಸಂಖ್ಯೆ ಎರಡಂಕಿ ತಲುಪಿದೆ. ಈವರೆಗೆ ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ.

‘ಡೆಂಗಿ ಜ್ವರವನ್ನು ಸಾಂಕ್ರಾಮಿಕ ಕಾಯಿಲೆ ಎಂದು ಘೋಷಿಸಲಾಗಿದೆ. ರಾಜ್ಯದಲ್ಲಿ ಕಳೆದ ವರ್ಷ ಡೆಂಗಿ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ವರದಿಯಾದ ಕಾರಣ ಈ ವರ್ಷ ರೋಗ ತಡೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ನಿವೇಶನ, ಕಟ್ಟಡ, ನೀರಿನ ಟ್ಯಾಂಕ್, ಉದ್ಯಾನ, ಆಟದ ಮೈದಾನ ಸೇರಿ ವಿವಿಧೆಡೆ ಸೊಳ್ಳೆಗಳ ಸಂತಾನೋತ್ಪತ್ತಿ ತಡೆಗೆ ಜನರೂ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ನೀರಿನ ಸಂಗ್ರಹದ ಪಾತ್ರೆಗಳು, ಸಂಪ್‌ಗಳು ಮತ್ತು ಓವರ್‌ಹೆಡ್ ಟ್ಯಾಂಕ್‌ಗಳನ್ನು ಸುರಕ್ಷಿತವಾಗಿ ಮುಚ್ಚಿರುವುದನ್ನು ಖಚಿತ ಪಡಿಸಿಕೊಳ್ಳಬೇಕು’ ಎಂದು ಆರೋಗ್ಯ ಇಲಾಖೆಯ ಸಮಗ್ರ ರೋಗ ಕಣ್ಗಾವಲು ಯೋಜನೆ (ಐಡಿಎಸ್‌ಪಿ) ನಿರ್ದೇಶಕ ಡಾ. ಅನ್ಸರ್ ಅಹಮದ್ ತಿಳಿಸಿದರು.



ಡೆಂಗಿ ಜ್ವರಕ್ಕೆ ನಿರ್ದಿಷ್ಟ ಚಿಕಿತ್ಸೆಯಿಲ್ಲ. ರೋಗ ಲಕ್ಷಣಗಳನ್ನು ಆಧರಿಸಿ ಚಿಕಿತ್ಸೆ ನೀಡಲಾಗುತ್ತದೆ. ಪರೀಕ್ಷೆ ಹಾಗೂ ಚಿಕಿತ್ಸೆಯು ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಭ್ಯವಿದೆ
ಡಾ. ಅನ್ಸರ್ ಅಹಮದ್
ಆರೋಗ್ಯ ಇಲಾಖೆ ಐಡಿಎಸ್‌ಪಿ ನಿರ್ದೇಶಕ

ಡೆಂಗಿ ಪೀಡಿತರಲ್ಲಿ ವಯಸ್ಕರೇ ಅಧಿಕ

ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ, ರಾಜ್ಯದಲ್ಲಿ ಈವರೆಗೆ ದೃಢಪಟ್ಟ ಡೆಂಗಿ ಪ್ರಕರಣಗಳಲ್ಲಿ ಒಂದು ವರ್ಷದೊಳಗಿನ 44 ಮಕ್ಕಳೂ ಸೇರಿದ್ದಾರೆ. 519 ಮಂದಿ ಒಂದರಿಂದ 18 ವರ್ಷದೊಳಗಿನವರಾದರೆ, 522 ಮಂದಿ 18 ವರ್ಷಗಳು ಮೇಲ್ಪಟ್ಟವರಾಗಿದ್ದಾರೆ. ಡೆಂಗಿ ಪರೀಕ್ಷೆಗೆ ಸಂಬಂಧಿಸಿದಂತೆ ಖಾಸಗಿ ಆಸ್ಪತ್ರೆಗಳಿಗೆ ಸರ್ಕಾರವು ದರ ನಿಗದಿ ಮಾಡಿದೆ. ಎಲಿಸಾ ಎನ್‌ಎಸ್ 1 ಪರೀಕ್ಷೆಗೆ ₹300, ಎಲಿಸಾ ಐಜಿಎಂ ಪರೀಕ್ಷೆಗೆ ₹300 ನಿಗದಿಪಡಿಸಲಾಗಿದೆ. ‘ರ್‍ಯಾಪಿಡ್ ಕಾರ್ಡ್’ ಪರೀಕ್ಷೆಗೆ ₹250 ಗೊತ್ತುಪಡಿಸಲಾಗಿದೆ.

ಸುದ್ದಿ 2 ನಿಮಿಷ

ಸಾರಿಗೆ ನಿಗಮಗಳ ಬಾಕಿ ತೀರಿಸಲು ₹ 2,000 ಕೋಟಿ ಸಾಲ: ಸಚಿವ

ಕಲಬುರಗಿ: ‘ರಾಜ್ಯದ ಸಾರಿಗೆ ನಿಗಮಗಳ ಬಾಕಿ ತೀರಿಸಲು ₹ 2,000 ಕೋಟಿ ಸಾಲ ತೆಗೆದುಕೊಳ್ಳಲು ರಾಜ್ಯ ಸರ್ಕಾರವು ಒಪ್ಪಿಗೆ ನೀಡಿದೆ’ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ತಿಳಿಸಿದರು.

ಇಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಈ ಸಾಲವನ್ನು ನಿಗಮಗಳು ತೀರಿಸಬೇಕಿಲ್ಲ. ಅದನ್ನು ಸರ್ಕಾರವೇ ತೀರಿಸಲಿದೆ. ಸಾಲ ತೀರಿಸಿದ ಬಳಿಕ ಉಳಿಯುವ ಹಣ ನಿಗಮಗಳಿಗೆ ಮುಂದಿನ ಯೋಜನೆಗಳಿಗೆ ನೆರವಾಗಲಿದೆ’ ಎಂದರು.

‘ಈ ವರ್ಷ 2,000 ಬಸ್‌ಗಳನ್ನು ಖರೀದಿಸಿ ವಾಯವ್ಯ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳಿಗೆ ತಲಾ 700 ಬಸ್‌ಗಳನ್ನು ನೀಡಲಾಗುವುದು. ಉಳಿದ ಬಸ್‌ಗಳು ಕೆಎಸ್‌ಆರ್‌ಟಿಸಿಗೆ ಸೇರಲಿವೆ. ಬಿಎಂಟಿಸಿಯಿಂದ ಯಾವುದೇ ಬೇಡಿಕೆ ಇಲ್ಲ. ಕೆಕೆಆರ್‌ಟಿಸಿ ಅಧಿಕಾರಿಗಳು ಶೀಘ್ರವೇ ಪ್ರಸ್ತಾವನೆ ಸಲ್ಲಿಸಲಿ’ ಎಂದು ಹೇಳಿದರು.

ವಂದೇ ಭಾರತ್ ರೈಲು ನಿರ್ವಹಣೆಗೆ ಪ್ರತ್ಯೇಕ ಡಿಪೊ

ಹುಬ್ಬಳ್ಳಿ: ರಾಜ್ಯದಲ್ಲಿ ವಂದೇ ಭಾರತ್ ರೈಲುಗಳಿಗೆ ಪ್ರಯಾಣಿಕರಿಂದ ಉತ್ತಮ ಸ್ಪಂದನೆ ಸಿಕ್ಕಿದೆ. ಇದಕ್ಕೆ ಪೂರಕವಾಗಿ ವಂದೇ ಭಾರತ್ ರೈಲುಗಳ ಸಂಚಾರ ಕೂಡ ಹೆಚ್ಚಾಗಿದೆ. ಈ ರೈಲುಗಳ ವಿಶೇಷ ನಿರ್ವಹಣೆಗಾಗಿ ರಾಜ್ಯದ 3 ಕಡೆ ಡಿಪೊ ನಿರ್ಮಿಸಲು ನೈರುತ್ಯ ರೈಲ್ವೆ ಉದ್ದೇಶಿಸಿದೆ. ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ರೈಲ್ವೆ ನಿಲ್ದಾಣ (ಎಸ್‌.ಎಂ.ವಿ.ಬಿ– ಬೈಯಪ್ಪನಹಳ್ಳಿ), ಥಣಿಸಂದ್ರ ಹಾಗೂ ಹುಬ್ಬಳ್ಳಿ ನಿಲ್ದಾಣವನ್ನು ಆಯ್ಕೆ ಮಾಡಲಾಗಿದೆ.

ಪ್ರಸ್ತುತ ಈಗ ಎಲ್ಲ ರೈಲುಗಳ ಜೊತೆ ಜೊತೆಗೆ ವಂದೇ ಭಾರತ್ ರೈಲುಗಳ ನಿರ್ವಹಣೆ ಮಾಡಲಾಗುತ್ತಿದೆ. ವಂದೇ ಭಾರತ್ ರೈಲುಗಳ ವಿನ್ಯಾಸ ಅತ್ಯಾಧುನಿಕ ಮಾದರಿಯಲ್ಲಿದೆ ಹಾಗೂ ಇತರ ರೈಲುಗಳಿಗಿಂತ ಭಿನ್ನವಾಗಿರುವುದರಿಂದ ಪ್ರತ್ಯೇಕ ಡಿಪೊ ಅವಶ್ಯಕತೆ ಇದೆ ಎಂಬುದನ್ನು ಅರಿತ ರೈಲ್ವೆ ಮಂಡಳಿ, ಹೊಸ ಡಿಪೊ ಸ್ಥಾಪಿಸಲು ಅನುಮೋದನೆ ನೀಡಿದೆ. ಇದಕ್ಕಾಗಿ ಒಟ್ಟು ₹ 619.55 ಕೋಟಿ ವೆಚ್ಚ ಮಾಡಲಿದೆ.

ಎಂ.ಎಸ್‌.ವಿ.ಬಿ–ಬೈಯಪ್ಪನಹಳ್ಳಿ ಡಿಪೊಗಾಗಿ ₹49.60 ಕೋಟಿ, ಹುಬ್ಬಳ್ಳಿಯ ಡಿಪೊಗಾಗಿ ₹299.80 ಕೋಟಿ ಹಾಗೂ ಥಣಿಸಂದ್ರ ಡಿಪೊಗಾಗಿ ₹270.15 ಕೋಟಿ ಅನುದಾನ ತೆಗೆದಿರಿಸಲಾಗಿದೆ. ಟೆಂಡರ್ ಹಂತದಲ್ಲಿದ್ದು, ಶೀಘ್ರವೇ ನಿರ್ಮಾಣ ಕಾಮಗಾರಿ ಆರಂಭಗೊಳ್ಳಲಿದೆ. 2027ರ ಆಗಸ್ಟ್ ವೇಳೆಗೆ ಕಾಮಗಾರಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

‘ವಂದೇ ಭಾರತ್ ರೈಲುಗಳ ನಿರ್ವಹಣೆಗೆ ಪ್ರತ್ಯೇಕ ಡಿಪೊ ಬೇಕು. ಬೆಂಗಳೂರಿನಲ್ಲಿ ಈಗಾಗಲೇ ಹಲವು ರೈಲುಗಳ ದುರಸ್ತಿ ನಡೆದಿದೆ. ಈ ಒತ್ತಡವನ್ನು ಕಡಿಮೆ ಮಾಡುವ ಉದ್ದೇಶದಿಂದ ಮೂರು ಕಡೆ ಪ್ರತ್ಯೇಕ ಡಿಪೊ ನಿರ್ಮಿಸಲಾಗುತ್ತಿದೆ’ ಎಂದು ನೈರುತ್ಯ ರೈಲ್ವೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಮಂಜುನಾಥ ಕನಮಡಿ ಹೇಳಿದರು.

₹275.51 ಕೋಟಿಯಲ್ಲಿ ಅರ್ಧದಷ್ಟು ಅಕ್ರಮ

ಒಂದನೇ ಪುಟದಿಂದ...

ಈ ಮೂರು ವಲಯ ಮತ್ತು ಮೂರು ಜಿಲ್ಲೆಗಳಲ್ಲಿ ಕೋವಿಡ್ ನಿರ್ವಹಣೆಗಾಗಿ ಪಿಪಿಇ ಕಿಟ್ ಸೇರಿದಂತೆ ವೈದ್ಯಕೀಯ ಪರಿಕರಗಳ ಖರೀದಿಯಲ್ಲಿ ನಡೆದ ಹಗರಣದ ಅಕ್ರಮವನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದೆ. ಒಟ್ಟು 176 ಪ್ರಕರಣಗಳಲ್ಲಿ ಶಿಸ್ತು ಕ್ರಮ ತೆಗೆದುಕೊಳ್ಳಬೇಕು ಎಂದು ಶಿಫಾರಸು ಮಾಡಿದೆ.

ಚಾಮರಾಜನಗರದ ಮಲೆ ಮಹದೇಶ್ವರ ಬೆಟ್ಟದಲ್ಲಿ ಗುರುವಾರ (ಏಪ್ರಿಲ್ 24) ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಈ ವರದಿಯು ಮಂಡನೆ ಆಗಲಿದೆ. ಈ ಸಭೆಗೆ ಆರೋಗ್ಯ ಇಲಾಖೆ ಸಿದ್ಧಪಡಿಸಿರುವ ಟಿಪ್ಪಣಿಯು ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

ಕೆಲ ಗಂಭೀರ ಪ್ರಕರಣಗಳಲ್ಲಿ ಹೆಚ್ಚಿನ ತನಿಖೆ ಕೈಗೊಳ್ಳುವ ಅಗತ್ಯವಿದೆ. ಹೀಗಾಗಿ ಲೋಕಾಯುಕ್ತ ಅಥವಾ ಇತರ ತನಿಖಾ ಸಂಸ್ಥೆಗಳಿಗೆ ವಹಿಸಬೇಕು. ಇಂಥ ಪ್ರಕರಣಗಳಲ್ಲಿ ಭಾಗಿ ಆಗಿರುವವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಆಗಿರುವ ನಷ್ಟ ವಸೂಲು ಮಾಡಬೇಕು ಎಂದು ಶಿಫಾರಸು ಮಾಡಿದೆ.

ಅವ್ಯವಹಾರಕ್ಕೆ ಕೈಜೋಡಿಸಿರುವ ಅಧಿಕಾರಿ, ನೌಕರರ ಮೇಲೆ ಇಲಾಖಾ ವಿಚಾರಣೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಅಕ್ರಮದಲ್ಲಿ ಭಾಗಿಯಾದ ಕಂಪನಿಗಳು, ವೆಂಡರ್ಸ್‌ಗಳಿಂದ ಹೆಚ್ಚುವರಿ ಹಣವನ್ನು ವಸೂಲು ಮಾಡುವಂತೆ ಆಯೋಗ ಹೇಳಿದೆ.

‘ಡಿಕುನ್ಹ ಆಯೋಗದ ಮೊದಲ ಮಧ್ಯಂತರ ವರದಿಯನ್ನು 2024ರ ಅ. 10ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಗಿತ್ತು. ಅಂದಿನ ಸಭೆ ನೀಡಿದ್ದ ಅನುಮೋದನೆಯಂತೆ, ಎರಡನೇ ಮಧ್ಯಂತರ ವರದಿಯಲ್ಲಿ ನಮೂದಿಸಿರುವ ಹಣ ದುರುಪಯೋಗ ಮತ್ತು ಇತರ ಲೋಪದೋಷಗಳ ಶಿಫಾರಸಿನ ಬಗ್ಗೆಯೂ ಕಾನೂನಿನ ಪ್ರಕಾರ ಕೈಗೊಳ್ಳಲು ಒಪ್ಪಿಗೆ ನೀಡಬೇಕು’ ಎಂದು ಸಚಿವ ಸಂಪುಟ ಸಭೆಗೆ ಮಂಡಿಸಿರುವ ಪ್ರಸ್ತಾವದಲ್ಲಿ ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ ಕೋರಿದ್ದಾರೆ.

ಕೋವಿಡ್ ನಿರ್ವಹಣೆಗೆ ಎಲ್ಲಿ, ಎಷ್ಟು ವೆಚ್ಚ?

ಇಲಾಖೆ	ಒಟ್ಟು ವೆಚ್ಚ (₹ ಕೋಟಿಗಳಲ್ಲಿ)	ವಸೂಲು ಮೊತ್ತ (₹ ಕೋಟಿಗಳಲ್ಲಿ)	ಶಿಸ್ತು ಕ್ರಮಕ್ಕೆ ಪ್ರಕರಣಗಳು
ಬಿಬಿಎಂಪಿ ಬೊಮ್ಮನಹಳ್ಳಿ ವಲಯ	47.24	19.08	16
ಬಿಬಿಎಂಪಿ ದಕ್ಷಿಣ ವಲಯ	54.53	33.4	43
ಬಿಬಿಎಂಪಿ ಪಶ್ಚಿಮ ವಲಯ	29.14	24.86	15
ಬಿಬಿಎಂಪಿ ಯಲಹಂಕ ವಲಯ	25.47	14.81	24
ಬೆಂಗಳೂರು ಗ್ರಾಮಾಂತರ ಜಿಲ್ಲೆ	43.85	27.87	43
ಗದಗ ಜಿಲ್ಲೆ	44.62	4.74	24
ಕೊಪ್ಪಳ ಜಿಲ್ಲೆ	30.66	2.82	11
ಒಟ್ಟು	275.51	128.04	176

ಸಮಾಧಿ ಸ್ಥಳ ವೆಚ್ಚ, ಮರಣ ಪರಿಹಾರದಲ್ಲೂ ಲೂಟಿ

ಬಿಬಿಬಿಎಂಪಿ ವ್ಯಾಪ್ತಿಯಲ್ಲಿ ಶಾಮಿಯಾನ, ಬ್ಯಾರಿಕೇಡ್ ಅಳವಡಿಕೆ, ಕಂಪ್ಯೂಟರ್, ಲ್ಯಾಪ್‌ಟಾಪ್ ಖರೀದಿ, ಬ್ಲೀಚಿಂಗ್ ಪೌಡರ್ ಖರೀದಿ, ಕೋವಿಡ್ ಕೇರ್ ಸೆಂಟರ್, ಹೋರ್ಡಿಂಗ್‌ಗಳು ಮತ್ತು ಕರಪತ್ರಗಳು, ಸಾರ್ವಜನಿಕ ಜಾಗೃತಿ ಘೋಷಣೆಗಾಗಿ ಆಟೊ ಬಾಡಿಗೆ, ಕೋವಿಡ್ ವಾರ್ ರೂಂ ಮತ್ತು ಲಸಿಕೆ ನೀಡಲು ಮಾನವ ಸಂಪನ್ಮೂಲ ಹೀಗೆ ಎಲ್ಲದರಲ್ಲೂ ಭಾರಿ ಮೊತ್ತದ ಅವ್ಯವಹಾರ ನಡೆದಿರುವುದನ್ನು ಡಿಕುನ್ಹ ವಿಚಾರಣಾ ಆಯೋಗವು ಪತ್ತೆ ಮಾಡಿದೆ.

ಮೃತದೇಹಗಳ ಸಮಾಧಿ ಸ್ಥಳದ ವೆಚ್ಚ, ಮರಣ ಪರಿಹಾರ, ಹೋಟೆಲ್ ಕ್ವಾರಂಟೈನ್, ಊಟ ಸರಬರಾಜು, ಆಹಾರಧಾನ್ಯ ಕಿಟ್ ವಿತರಣೆಯಲ್ಲೂ ಹಣ ಲೂಟಿ ಮಾಡಿರುವುದನ್ನು ಆಯೋಗವು ಗುರುತಿಸಿದೆ. ಇನ್ನು ಜಿಲ್ಲೆಗಳಲ್ಲಿ ಅತ್ಯವಶ್ಯಕ ಔಷಧಗಳು ಮತ್ತು ಇತರ ವೈದ್ಯಕೀಯ ಸೌಲಭ್ಯಗಳ ಖರೀದಿ, ಔಷಧಗಳ ಕಿಟ್, ಆಂಬುಲೆನ್ಸ್, ಆಮ್ಲಜನಕ ಸಿಲಿಂಡರ್, ಮಾಸ್ಕ್, ಪಿಪಿಇ ಕಿಟ್, ಗ್ಲೌಸ್, ಸ್ಯಾನಿಟೈಸರ್ ಮುಂತಾದವುಗಳ ಖರೀದಿಯಲ್ಲಿ ಬೃಹತ್ ಮೊತ್ತದ ಅಕ್ರಮ ನಡೆದಿದೆ ಎಂದೂ ವರದಿಯಲ್ಲಿ ಪಟ್ಟಿ ಮಾಡಿದೆ.

ಭಕ್ತಿ ಭಂಡಾರ 15 ವರ್ಷಗಳ ಬಳಿಕ ಬೆಳಗಾವಿ ತಾಲ್ಲೂಕಿನ ಶಿಂಧೊಳ್ಳಿಯಲ್ಲಿ ಬುಧವಾರ ನಡೆದ ಗ್ರಾಮದೇವತೆ ಮಹಾಲಕ್ಷ್ಮಿ ಜಾತ್ರೆಯಲ್ಲಿ ಭಕ್ತರು ಭಂಡಾರದಲ್ಲಿ ಮಿಂದೆದ್ದರು ಚಿತ್ರ: ಏಕನಾಥ ಅಗಸಿಮನಿ

ನಿರಪರಾಧಿಯಾಗಿ ಬಿಡುಗಡೆಗೊಂಡ ಸುರೇಶ್

ಕೊಲೆಯಾಗಿದ್ದ ಮಹಿಳೆ ಪತ್ತೆ ಪ್ರಕರಣ: ತನಿಖಾಧಿಕಾರಿ ವಿರುದ್ಧ ಪ್ರಕರಣ ದಾಖಲಿಸಲು ಆದೇಶ

ಪ್ರಜಾವಾಣಿ ವಾರ್ತೆ

ಮೈಸೂರು: ಪತ್ನಿ ಮಲ್ಲಿಗೆಯನ್ನು ಕೊಲೆ ಮಾಡಿದ ಆರೋಪದಡಿ ಜೈಲುವಾಸ ಅನುಭವಿಸಿದ್ದ ಕುಶಾಲನಗರದ ಬಸವನಹಳ್ಳಿಯ ಸುರೇಶ್ ಅವರನ್ನು ಸೆಷನ್ಸ್ ನ್ಯಾಯಾಲಯ ನಿರಪರಾಧಿ ಎಂದು ಘೋಷಿಸಿದ್ದು, ಪ್ರಕರಣದ ತನಿಖಾಧಿಕಾರಿಯಾಗಿದ್ದ ಅಂದಿನ ಬೈಲಕುಪ್ಪೆ ಸರ್ಕಲ್ ಇನ್‌ಸ್ಪೆಕ್ಟರ್ ಬಿ.ಜಿ.ಪ್ರಕಾಶ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಆದೇಶಿಸಿದೆ.

ಪ್ರಕರಣಕ್ಕೆ ಸಂಬಂಧಿಸಿ ಸುರೇಶ್ ಹೆಸರನ್ನು ಪೊಲೀಸ್ ದಾಖಲೆಗಳಿಂದ ತೆಗೆದು ಹಾಕುವಂತೆ; ಬೆಟ್ಟದಪುರ ಪೊಲೀಸರಿಗೆ ನಿರ್ದೇಶಿಸಿದ 5ನೇ ಜಿಲ್ಲಾ ಹೆಚ್ಚುವರಿ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಗುರುರಾಜ್ ಸೋಮಕ್ಕಳವರ್ ಅವರು, ಸುರೇಶ್ ಅವರಿಗೆ ₹1 ಲಕ್ಷ ಪರಿಹಾರ ನೀಡುವಂತೆ ಸರ್ಕಾರದ ಗೃಹ ಇಲಾಖೆಯ ಮುಖ್ಯ ಕಾರ್ಯದರ್ಶಿಗೆ ಆದೇಶಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದ ಆದೇಶವನ್ನು ಬುಧವಾರ ತೆರೆದ ನ್ಯಾಯಾಲಯದಲ್ಲಿ ಪ್ರಕಟಿಸಿದ ನ್ಯಾಯಾಧೀಶರು, ‘ಪೊಲೀಸರು ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದಾರೆ, ಆತ ತಪ್ಪು ಮಾಡಿಲ್ಲ’ ಎಂಬ ತೀರ್ಮಾನದೊಂದಿಗೆ ಸುರೇಶ್ ಅವರನ್ನು ‘ನಿರಪರಾಧಿ’ ಎಂದು ಘೋಷಿಸಿದರು.

ಬಿ.ಜಿ.ಪ್ರಕಾಶ್ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ ಕಲಂ 193, 195ರ ಅಡಿ (ಸುಳ್ಳು ಪ್ರಕರಣ ಸೃಷ್ಟಿ, ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಕೆ) ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಜಿಲ್ಲಾ ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿಗೆ ನಿರ್ದೇಶಿಸಿದರು.

ಸುರೇಶ್

‘ಪ್ರಕರಣದ ತನಿಖಾ ತಂಡದಲ್ಲಿದ್ದ ಅಂದಿನ ಪ್ರೊಬೆಷನರಿ ಐಪಿಎಸ್ ಅಧಿಕಾರಿ ಜಿತೇಂದ್ರ ಕುಮಾರ್, ಬೆಟ್ಟದಪುರ ಪಿಎಸ್‌ಐ ಮಹೇಶ್ ಕುಮಾರ್, ಎಸ್‌ಐ ಪ್ರಕಾಶ್ ಯತ್ತಿಮನಿ ವಿರುದ್ಧ ಇಲಾಖಾ ತನಿಖೆ ನಡೆಸಬೇಕು’ ಎಂದು ಮೈಸೂರು ಐಜಿಪಿಗೆ, ‘ಪ್ರಸ್ತುತ ಪ್ರಕರಣದಲ್ಲಿ ದಾಖಲಾದ ಯುಡಿಆರ್ ಕುರಿತು ತನಿಖೆ ನಡೆಸಿ, ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಿದರು.

ಘಟನೆಯ ಹಿನ್ನೆಲೆ: ನಾಲ್ಕು ವರ್ಷದ ಹಿಂದೆ, ಬೆಟ್ಟದಪುರದ ಶಾನುಭೋಗನಹಳ್ಳಿಯಲ್ಲಿ ದೊರಕಿದ್ದ ಶವವನ್ನು, ಕುಶಾಲನಗರದ ಮಹಿಳೆ ಮಲ್ಲಿಗೆಯವರದ್ದು ಎಂದು ಬಿಂಬಿಸಿ ‘ಮಲ್ಲಿಗೆಯನ್ನು ಆಕೆಯ ಗಂಡ ಸುರೇಶ್ ಕೊಲೆ ಮಾಡಿದ್ದಾನೆ’ ಎಂದು ಆರೋಪಿಸಿ ಬೆಟ್ಟದಪುರ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಸುರೇಶ್ ವಿಚಾರಣಾಧೀನ ಕೈದಿಯಾಗಿ 2 ವರ್ಷದಿಂದ ಜೈಲುವಾಸ ಅನುಭವಿಸುತ್ತಿದ್ದು, ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದರು.

ಏ.1ರಂದು ಮಲ್ಲಿಗೆಯು ತನ್ನ ಪ್ರಿಯತಮ ಗಣೇಶ್‌ನೊಂದಿಗೆ ಪತ್ತೆಯಾದ ಬಳಿಕ ಪ್ರಕರಣ ತಿರುವು ಪಡೆದುಕೊಂಡಿತ್ತು. ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಾಲಯವು ಪೊಲೀಸ್ ತನಿಖಾಧಿಕಾರಿಗಳ ಕರ್ತವ್ಯ ಲೋಪವನ್ನು ಎತ್ತಿಹಿಡಿದು, ಬುಧವಾರ (ಏ.23)ಕ್ಕೆ ಆದೇಶ ಕಾಯ್ದಿರಿಸಿತ್ತು.

ಶುಲ್ಕ ಪಡೆಯದೆ ವಕೀಲರಿಂದ ವಾದ

ಸುರೇಶ್ ಜೈಲಿನಲ್ಲಿದ್ದ ಸಮಯದಲ್ಲಿ ಆತನ ತಂದೆ ಗಾಂಧಿ ಅವರು ವಕೀಲ ಪಾಂಡು ಪೂಜಾರಿ ಅವರನ್ನು ಭೇಟಿಯಾಗಿ, ಪೊಲೀಸರು ಸುಳ್ಳು ಪ್ರಕರಣ ದಾಖಲಿಸಿ ಮಗನನ್ನು ಜೈಲಿಗೆ ಹಾಕಿರುವ ಬಗ್ಗೆ ತಿಳಿಸಿದ್ದರು. ಪ್ರಕರಣ ಕೈಗೆತ್ತಿಕೊಂಡ ಪಾಂಡು ಪೂಜಾರಿ ಇಲ್ಲಿಯವರೆಗೆ ಸುರೇಶ್ ಕುಟುಂಬದಿಂದ ಯಾವುದೇ ಶುಲ್ಕ ಪಡೆಯದೆ ವಾದ ಮಂಡಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಅಮಾಯಕರನ್ನು ಬಲಾಢ್ಯರು ಹೇಗೆ ತುಳಿಯುತ್ತಾರೆ ಎಂಬುದಕ್ಕೆ ಇದು ಉದಾಹರಣೆ. ಆದಿವಾಸಿ ಸಮುದಾಯದ ಸುರೇಶ್ ಆರ್ಥಿಕವಾಗಿ ದುರ್ಬಲರಾಗಿದ್ದರಿಂದ ನೆರವಾಗಿರುವೆ. ನ್ಯಾಯಾಲಯವನ್ನು ನಂಬಿದರೆ ನ್ಯಾಯ ದೊರೆಯುತ್ತದೆ ಎಂಬುದಕ್ಕೆ ಈ ಪ್ರಕರಣ ಸಾಕ್ಷಿಯಾಗಿದೆ’ ಎಂದರು.

‘ಪಾಂಡು ಪೂಜಾರಿ ದೇವರಂತೆ ಬಂದು ನನ್ನನ್ನು ಕಾಪಾಡಿದ್ದಾರೆ. ಕಾನೂನಿನ ಅರಿವಿಲ್ಲದ ನನ್ನನ್ನು ದೊಡ್ಡ ತೊಂದರೆಯಿಂದ ಹೊರತಂದಿದ್ದಾರೆ’ ಎಂದು ಸುರೇಶ್ ಕೃತಜ್ಞತೆ ವ್ಯಕ್ತಪಡಿಸಿದರು.

ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಿದ್ದೇವೆ. ತನಿಖೆಯಲ್ಲಿ ಭಾಗಿಯಾಗಿ ಸುಳ್ಳು ಪ್ರಕರಣ ದಾಖಲಿಸಿದ ಅಧಿಕಾರಿಗಳೆಲ್ಲರಿಗೂ ಶಿಕ್ಷೆಯಾಗಬೇಕು
ಪಾಂಡು ಪೂಜಾರಿ, ಸುರೇಶ್ ಪರ ವಕೀಲ

ಈ ಪ್ರಕರಣದಲ್ಲಿ ಸುರೇಶ್ ನಿರಪರಾಧಿಯಾಗಿ ಬಿಡುಗಡೆಯಾಗಿರುವುದು ವಿಶೇಷ. ಕೆಲವೇ ಪ್ರಕರಣದಲ್ಲಿ ಈ ರೀತಿಯ ಆದೇಶ ಬಂದಿದೆ
ಪಿ.ಜೆ.ರಾಘವೇಂದ್ರ
ವಕೀಲರು

ಜನಾಕ್ರೋಶ ಯಾತ್ರೆ ತಾತ್ಕಾಲಿಕ ಸ್ಥಗಿತ

ಬಳ್ಳಾರಿ: ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಕೈಗೊಂಡಿರುವ ಜನಾಕ್ರೋಶ ಯಾತ್ರೆಯ ಮೂರನೇ ಹಂತದ ರ್‍ಯಾಲಿಯನ್ನು ಎರಡು ದಿನ ಮುಂದೂಡಲಾಗಿದೆ ಎಂದು ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯಸಚೇತಕ ಹಾಗೂ ಯಾತ್ರೆಯ ಸಂಚಾಲಕ ಎನ್. ರವಿಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ‘ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರರ ದಾಳಿಗೆ ಕರ್ನಾಟಕದ ಮೂವರು ಸೇರಿದಂತೆ ದೇಶದ 28 ನಾಗರಿಕರು ಹತರಾಗಿದ್ದಾರೆ. ಅವರಿಗೆ ಸಂತಾಪ ಸೂಚಿಸುವ ಹಿನ್ನೆಲೆಯಲ್ಲಿ ಯಾತ್ರೆ ಮುಂದೂಡಲಾಗಿದೆ’ ಎಂದಿದ್ದಾರೆ.

ರಾಜ್ಯ ಸಂಯುಕ್ತ ವಸತಿನಿಲಯ ಕಾರ್ಮಿಕರ ಸಂಘದ ಆಗ್ರಹ

ಕೆಲಸ ಕಾಯಂಗೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ವಸತಿನಿಲಯ, ವಸತಿಯುತ ಶಾಲೆ, ಆಶ್ರಮ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರನ್ನು (‘ಡಿ’ ಗುಂಪಿನ ಹುದ್ದೆ) ಕಾಯಂ ಮಾಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಸಂಯುಕ್ತ ವಸತಿನಿಲಯ ಕಾರ್ಮಿಕರ ಸಂಘದಿಂದ ಬುಧವಾರ ಪ್ರತಿಭಟನೆ ನಡೆಯಿತು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕಾರ್ಮಿಕರು, ಅಡುಗೆ ಸಿಬ್ಬಂದಿ, ಕಾವಲುಗಾರರಾಗಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದೇವೆ. ಶೋಷಣೆಗೆ ಕಾರಣವಾಗಿರುವ ಹೊರಗುತ್ತಿಗೆ ಪದ್ಧತಿ ರದ್ದುಗೊಳಿಸಬೇಕು. ಸರ್ಕಾರದಿಂದಲೇ ನೇರವಾಗಿ ವೇತನ ಪಾವತಿಸಬೇಕು ಎಂದು ಒತ್ತಾಯಿಸಿದರು.

ಬೆಲೆ ಏರಿಕೆಗೆ ತಕ್ಕಂತೆ ಕನಿಷ್ಠ ವೇತನವನ್ನು ತಿಂಗಳಿಗೆ ₹35,950ಕ್ಕೆ ಪರಿಷ್ಕರಣೆ ಮಾಡಬೇಕು. ಕೈಗವಸು ಸೇರಿದಂತೆ ಸುರಕ್ಷಾ ಸಾಮಗ್ರಿಯನ್ನು ಉಚಿತವಾಗಿ ಒದಗಿಸಬೇಕು. ವಾರದ ರಜೆ, ಗಳಿಕೆ ರಜೆ ಹಾಗೂ ಸಾಂದರ್ಭಿಕ ರಜೆ ಮಂಜೂರು ಮಾಡಬೇಕು. ಸರ್ಕಾರಿ ರಜಾ ದಿನಗಳಂದು ಕೆಲಸ ಮಾಡುವ ನೌಕರರಿಗೆ ನಿಯಮದಂತೆ ದುಪ್ಪಟ್ಟು ವೇತನ ನೀಡಬೇಕು ಎಂದು ಕೋರಿದರು.

ರಾಜ್ಯ ಸಂಯುಕ್ತ ವಸತಿನಿಲಯ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಹಾಸ್ಟೆಲ್ ಕಾರ್ಮಿಕರು ಬುಧವಾರ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಹಾಸ್ಟೆಲ್ ಹಾಗೂ ವಸತಿಯುತ ಶಾಲೆಗಳಲ್ಲಿ ಮಂಜೂರಾತಿ ಹುದ್ದೆಗಳ ಸಂಖ್ಯೆಗೆ ತಕ್ಕಂತೆ ಅಡುಗೆ ಸಿಬ್ಬಂದಿ ನೇಮಿಸಬೇಕು. ವೇತನ ಚೀಟಿ, ನೇಮಕಾತಿ ಪತ್ರ, ಗುರುತಿನ ಚೀಟಿ, ಇಎಸ್‌ಐ ಕಾರ್ಡ್ ವಿತರಣೆ ಮಾಡಬೇಕು ಎಂದು ಆಗ್ರಹಿಸಿದರು.

ಅಡುಗೆ ಸಿಬ್ಬಂದಿಯ ಸಂಖ್ಯೆ ಕಡಿತ ಮಾಡಿರುವ ಸಮಾಜ ಕಲ್ಯಾಣ ಇಲಾಖೆಯ ಆದೇಶವನ್ನು ತಕ್ಷಣ ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನಾ ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿದ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತ ಕೆ.ರಾಕೇಶ್ ಕುಮಾರ್, ‘ಕಾರ್ಮಿಕರಿಗೆ ತಕ್ಷಣವೇ ಸುರಕ್ಷಾ ಸಾಮಗ್ರಿ ನೀಡಲಾಗುವುದು. ರಜೆ ಮಂಜೂರಾತಿಗೂ ಕ್ರಮ ತೆಗೆದುಕೊಳ್ಳಲಾಗುವುದು. ಕಾರ್ಮಿಕರಿಗೆ ವರ್ಷಪೂರ್ತಿ ವೇತನ ಪಾವತಿಸುವ ಸಂಬಂಧ ಕ್ರಮ ಕೈಗೊಳ್ಳುವಂತೆ ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗುವುದು’ ಎಂದು ಭರವಸೆ ನೀಡಿದರು.

ಸಂಘದ ರಾಜ್ಯ ಅಧ್ಯಕ್ಷ ಕೆ.ಸೋಮಶೇಖರ್ ಯಾದಗಿರಿ, ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಕಾರ್ಯದರ್ಶಿ ಡಿ.ನಾಗಲಕ್ಷ್ಮಿ, ಎಐಯುಟಿಯುಸಿ ರಾಜ್ಯ ಉಪಾಧ್ಯಕ್ಷ ಕೆ.ವಿ.ಭಟ್, ಸಂಘದ ರಾಜ್ಯ ಕಾರ್ಯದರ್ಶಿ ಮಹೇಶ್ ಚಿಕಲಪರ್ವಿ, ಉಪಾಧ್ಯಕ್ಷರಾದ ಎಚ್‌.ಟಿ.ಮಲ್ಲಿಕಾರ್ಜುನ್, ಮಹೇಶ್ ನಾಡಗೌಡ, ಶರಣಪ್ಪ ಜಿ. ತೇಳಿಗೇರಿಕರ್, ಎಂ.ಜಿ.ರಾಘವೇಂದ್ರ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮಧ್ಯಾಹ್ನ 12ಕ್ಕೆ ನಿಗದಿ: ಹಲವು ಘೋಷಣೆಗಳ ನಿರೀಕ್ಷೆ

ಮಹದೇಶ್ವರ ಬೆಟ್ಟದಲ್ಲಿ ಸಂಪುಟ ಸಭೆ

ಪ್ರಜಾವಾಣಿ ವಾರ್ತೆ

ಮಹದೇಶ್ವರ ಬೆಟ್ಟ (ಚಾಮರಾಜನಗರ ಜಿಲ್ಲೆ): ಹನೂರು ತಾಲ್ಲೂಕಿನ ಮಹದೇಶ್ವರ ಬೆಟ್ಟದಲ್ಲಿ ಗುರುವಾರ ಸಚಿವ ಸಂಪುಟ ಸಭೆ ನಡೆಯಲಿದ್ದು, ಇದಕ್ಕೆ ಸಕಲ ಸಿದ್ಧತೆಗಳು ನಡೆದಿವೆ.

ಮಧ್ಯಾಹ್ನ 12ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸಚಿವ ಸಂಪುಟ ಸಭೆ ನಡೆಯಲಿದ್ದು, ಗಡಿ ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಹೆಚ್ಚು ಮಹತ್ವ ಪಡೆದುಕೊಂಡಿದೆ. ನೆರೆಯ ಮೈಸೂರು, ಮಂಡ್ಯ, ಹಾಸನ ಸೇರಿದಂತೆ ಮೈಸೂರು ಪ್ರದೇಶದ ಪ್ರಗತಿಗೆ ಸಂಬಂಧಿಸಿದ ಯೋಜನೆಗಳು ಘೋಷಣೆಯಾಗುವ ನಿರೀಕ್ಷೆ ಹೊಂದಲಾಗಿದೆ.

1997ರಲ್ಲಿ ಮೈಸೂರು ಜಿಲ್ಲೆಯಿಂದ ಬೇರ್ಪಟ್ಟು ನೂತನ ಜಿಲ್ಲೆಯಾಗಿ ರಚನೆಯಾದರೂ ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ತೀರಾ ಹಿಂದುಳಿದಿರುವ ಜಿಲ್ಲೆಯ ಅಭಿವೃದ್ಧಿಗೆ ಸಚಿವ ಸಂಪುಟ ಸಭೆಯಲ್ಲಿ ವಿಶೇಷ ಪ್ಯಾಕೇಜ್ ಘೋಷಣೆಯ ನಿರೀಕ್ಷೆಗಳು ಗರಿಗೆದರಿವೆ. ಎಸ್‌.ಎಂ. ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ ಬಿಳಿಗಿರಿರಂಗನಬೆಟ್ಟದಲ್ಲಿ ವಿಶೇಷ ಸಚಿವ ಸಂಪುಟ ಸಭೆ ನಡೆದಿತ್ತು. ಅದಾದ ನಂತರ ಈಗ ಇಡೀ ಸರ್ಕಾರವೇ ಮಾದಪ್ಪನ ಸನ್ನಿಧಿಗೆ ಬರುತ್ತಿದೆ.

ಚಾಮರಾಜನಗರ ಹಾಗೂ ಜಿಲ್ಲೆಯ ಪಟ್ಟಣಗಳಿಗೆ ಒಳಚರಂಡಿ ವ್ಯವಸ್ಥೆ, ರಸ್ತೆಗಳ ಅಭಿವೃದ್ಧಿ, ನೀರಾವರಿ ಯೋಜನೆಗಳು, ಬುಡಕಟ್ಟು ಸಮುದಾಯಗಳಿಗೆ ವಸತಿ, ಹಾಡಿಗಳಿಗೆ ರಸ್ತೆ, ವಿದ್ಯುತ್ ಸಂಪರ್ಕ ಸೇರಿದಂತೆ ಸಮಗ್ರ ಅಭಿವೃದ್ಧಿಗೆ ಬೇಕಾಗಿರುವ ಯೋಜನೆಗಳ ಬಗ್ಗೆ ಜಿಲ್ಲಾಡಳಿತ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದು, ಈ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಲಿದೆ. ಕೆರೆಗಳಿಗೆ ನೀರು ತುಂಬಿಸುವುದು ಹಾಗೂ ನಾಲೆಗಳ ಅಭಿವೃದ್ಧಿಗೆ ಅನುದಾನ ನಿರೀಕ್ಷಿಸಲಾಗುತ್ತಿದೆ.

‘ಬೆಟ್ಟ’ದ ‘ಜೇನುಮಲೆ’ ಭವನದ ಮುಂಭಾಗ ಸಭೆಗೆ ತಯಾರಿ ಮಾಡಿಕೊಳ್ಳಲಾಗಿದೆ. ಜರ್ಮನ್ ಟೆಂಟ್ ಹಾಕಲಾಗಿದೆ. ಕೆಲ ಸಚಿವರು ಬುಧವಾರವೇ ಬಂದು ವಾಸ್ತವ್ಯ ಹೂಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ಹಲವರು ಗುರುವಾರ ಬೆಳಿಗ್ಗೆ ಆಗಮಿಸಲಿದ್ದಾರೆ. ಅಧಿಕಾರಿ ವರ್ಗ ಬೀಡುಬಿಟ್ಟಿದೆ. ಮಹದೇಶ್ವರ ದೇವಸ್ಥಾನ, ಪ್ರವೇಶದ್ವಾರ ಸೇರಿದಂತೆ ಬೆಟ್ಟದಾದ್ಯಂತ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು, ಮದುವಣಗಿತ್ತಿಯಂತೆ ಕಂಗೊಳಿಸುತ್ತಿದೆ.

ಏನೇನು ಉದ್ಘಾಟನೆ?

- ಮಹದೇಶ್ವರನ ಚರಿತ್ರೆ ಒಳಗೊಂಡ ಮ್ಯೂಸಿಯಂ
- ವಜ್ರಮಲೆ ಭವನ ವಸತಿಗೃಹ
- ಸಮಗ್ರ ಒಳಚರಂಡಿ ಯೋಜನೆ
- 1 ಮೆಗಾವಾಟ್ ಸೋಲಾರ್ ಸೌರಶಕ್ತಿ ಘಟಕ
- ದೊಡ್ಡಕೆರೆ ಜೀರ್ಣೋದ್ಧಾರ ಕಾಮಗಾರಿ
- ವಜ್ರಮಲೆ ಭವನ ವಸತಿ ಗೃಹದ ರಸ್ತೆ ತಡೆಗೋಡೆ
- ಮಹದೇಶ್ವರನ ಪ್ರತಿಮೆವರೆಗೆ ನಿರ್ಮಿಸಿದ ಸಿಸಿ ರಸ್ತೆ
- ಚರಂಡಿ, ಸಾಲೂರು ಮಠದ ವೇದಾಗಮ ಪಾಠಶಾಲೆ

ಯಾವ್ಯಾವುದಕ್ಕೆ ಶಂಕುಸ್ಥಾಪನೆ?

- ಬೆಟ್ಟದ ಸ್ವಾಗತ ಕಮಾನು • ದಾಸೋಹ ಭವನ
- ತಂಗುದಾಣ • ಡಾರ್ಮೆಟರಿ ಕಟ್ಟಡ
- ರಂಗನಾಥಸ್ವಾಮಿ ದೇವಾಲಯದ ಜೀರ್ಣೋದ್ಧಾರ
- 6 ಕೂಡು ರಸ್ತೆಗಳ ಅಭಿವೃದ್ಧಿ
- ಮಹದೇಶ್ವರ ಬೃಹತ್ ಪ್ರತಿಮೆಯ ಹೊರ ಆವರಣ ಸುತ್ತಲೂ ಗೇಬಿಯನ್ ವಾಲ್
- ಜೆಎಸ್‌ಎಸ್ ಆರ್ಚ್–ಲೋಕೋಪಯೋಗಿ ಇಲಾಖೆ ಕಚೇರಿವರೆಗೆ ಸಿಸಿ ರಸ್ತೆ ಮತ್ತು ಚರಂಡಿ
- ಅಂಚೆ ಕಚೇರಿಯಿಂದ ಅಂತರಗಂಗೆ ಮಾರ್ಗ ಅಭಿವೃದ್ಧಿ
- ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಿಂದ ಸಾಲೂರು ಮಠದವರೆಗೆ ರಸ್ತೆ
- ಡಾಂಬರೀಕರಣ, ದಾಸೋಹ ಭವನ ಎದುರು ಶೌಚಾಲಯ
- ಸ್ನಾನಗೃಹ, ಪೌರಕಾರ್ಮಿಕರಿಗೆ ವಸತಿಗೃಹ ನಿರ್ಮಾಣ

ಡಿಐಜಿ, ಇಬ್ಬರು ಎಸ್‌ಪಿ, ನಾಲ್ವರು ಹೆಚ್ಚುವರಿ ಎಸ್‌ಪಿ ಭದ್ರತೆಯ ಉಸ್ತುವಾರಿ ವಹಿಸಿದ್ದು, 20 ಡಿವೈಎಸ್‌ಪಿ ಸಹಿತ 1,300 ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಸಚಿವ ಸಂಪುಟ ಸಭೆಯ ನಂತರ ಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಭೆಯನ್ನೂ ಮುಖ್ಯಮಂತ್ರಿ ನಡೆಸಲಿದ್ದು, ನಂತರ ಬೆಟ್ಟದಲ್ಲೇ ವಾಸ್ತವ್ಯ ಹೂಡುತ್ತಾರೆ.

ಅಲ್ಲಿ ಹರಿದ ನೆತ್ತರು; ಇಲ್ಲಿ ನಿಲ್ಲದ ಕಣ್ಣೀರು...

ಮಂಜುನಾಥ ರಾವ್ ಪಾರ್ಥಿವ ಶರೀರ ಶಿವಮೊಗ್ಗಕ್ಕೆ ಇಂದು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಕಾಶ್ಮೀರದಲ್ಲಿ ಉಗ್ರರ ಗುಂಡಿಗೆ ಬಲಿಯಾದ ರಿಯಲ್ ಎಸ್ಟೇಟ್ ಉದ್ಯಮಿ ಮಂಜುನಾಥ ರಾವ್ ಅವರ ಪಾರ್ಥಿವ ಶರೀರವನ್ನು ಗುರುವಾರ ಬೆಳಿಗ್ಗೆ 8 ಗಂಟೆಗೆ ಶಿವಮೊಗ್ಗಕ್ಕೆ ತರಲಾಗುತ್ತಿದೆ.

ಶ್ರೀನಗರದಿಂದ ಬುಧವಾರ ಸಂಜೆ ಹೊರಟ ವಿಶೇಷ ವಿಮಾನ ರಾತ್ರಿ ಮುಂಬೈ ಮೂಲಕ ತಡರಾತ್ರಿ 2 ಗಂಟೆಗೆ ಬೆಂಗಳೂರು ತಲುಪಲಿದ್ದು, ಬೆಂಗಳೂರಿನಿಂದ ರಸ್ತೆ ಮಾರ್ಗವಾಗಿ ಹೊರಟು ಬೆಳಿಗ್ಗೆ ಶಿವಮೊಗ್ಗ ತಲುಪಲಿದೆ.

ಕಾಶ್ಮೀರಕ್ಕೆ ತೆರಳಿರುವ ಕಾರ್ಮಿಕ ಸಚಿವ ಸಂತೋಷ್ ಲಾಡ್, ಮಂಜುನಾಥ ರಾವ್ ಅವರ ಪತ್ನಿ ಪಲ್ಲವಿ ಹಾಗೂ ಪುತ್ರ ಅಭಿಜಯ ರಾವ್ ಅವರನ್ನು ಭೇಟಿ ಮಾಡಿ ಧೈರ್ಯ ತುಂಬಿದ್ದು, ಪಾರ್ಥಿವ ಶರೀರ ಊರಿಗೆ ತರಲು ನೆರವಾಗಿದ್ದಾರೆ.

ಸಚಿವ ಮಧು ಬಂಗಾರಪ್ಪ ಬುಧವಾರ ಬೆಳಿಗ್ಗೆ ಮಂಜುನಾಥರಾವ್ ಮನೆಗೆ ಭೇಟಿ ಕೊಟ್ಟು ಕುಟುಂಬದವರಿಗೆ ಸಾಂತ್ವನ ಹೇಳಿ, ಮೃತದೇಹ ತರಲು ಸರ್ಕಾರದಿಂದ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ಸಾಗರ ಶಾಸಕ ಬೇಳೂರು ಗೋಪಾಲಕೃಷ್ಣ, ವಿಧಾನಪರಿಷತ್ ಸದಸ್ಯೆ ಬಲ್ಕೀಶ್ ಬಾನು, ಪೂರ್ವ ವಲಯ ಐಜಿಪಿ ಬಿ.ಆರ್. ರವಿಕಾಂತೇಗೌಡ, ಆರ್‌ಎಸ್‌ಎಸ್ ಪ್ರಾಂತ್ಯ ಕಾರ್ಯವಾಹ ಪಟ್ಟಾಭಿರಾಮ್, ಮಾಜಿ ಸಚಿವ ಕಿಮ್ಮನೆ ರತ್ನಾಕರ ಮಂಜುನಾಥರಾವ್ ಮನೆಗೆ ತೆರಳಿ ಕುಟುಂಬದವರಿಗೆ ಧೈರ್ಯ ಹೇಳಿದರು.

ಮಂಜುನಾಥ ರಾವ್ ಅವರ ಶಿವಮೊಗ್ಗದಲ್ಲಿನ ನಿವಾಸಕ್ಕೆ ಬುಧವಾರ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಅವರು ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು

ಕೋರ್ಟ್ ಕಲಾಪದಿಂದ ದೂರ ಉಳಿದ ವಕೀಲರು: ಉಗ್ರರ ದಾಳಿ ಖಂಡಿಸಿ ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿದ ಶಿವಮೊಗ್ಗ ವಕೀಲರ ಸಂಘದ ಪದಾಧಿಕಾರಿಗಳು, ಉಗ್ರರ ದಾಳಿಯಲ್ಲಿ ಮೃತರಾದವರ ಗೌರವಾರ್ಥ ನ್ಯಾಯಾಲಯದ ಕಲಾಪದಿಂದ ಹೊರಗುಳಿದರು. ಶಿವಮೊಗ್ಗದ ಶಾಂತಿ ನಡಿಗೆ ಸಮಿತಿಯಿಂದ ಸಂಜೆ ಮೇಣದ ಬತ್ತಿ ಬೆಳಗಿಸಿ ಉಗ್ರರ ದಾಳಿಯಲ್ಲಿ ಸಾವಿಗೀಡಾದವರಿಗೆ ನಮನ ಸಲ್ಲಿಸಲಾಯಿತು.

ಮುಸ್ಲಿಂ ಸಮುದಾಯದಿಂದ ಪ್ರತಿಭಟನೆ: ಉಗ್ರರ ದಾಳಿಯನ್ನು ಶಿವಮೊಗ್ಗದ ಮರ್ಕಜಿ ಸುನ್ನಿ ಜಾಮಿಯಾ ಮಸೀದಿ ಸಮಿತಿ ತೀವ್ರವಾಗಿ ಖಂಡಿಸಿದೆ. ಸಮಿತಿ ನೇತೃತ್ವದಲ್ಲಿ ಮುಸ್ಲಿಂ ಸಮುದಾಯದವರು ಜಿಲ್ಲಾಧಿಕಾರಿ ಕಚೇರಿ ಎದುರು ಬುಧವಾರ ಸಭೆ ನಡೆಸಿ, ಭಯೋತ್ಪಾದಕ ಚಟುವಟಿಕೆ ಮಟ್ಟ ಹಾಕುವಂತೆ ಕೇಂದ್ರ ಸರ್ಕಾರವನ್ನು ಆಗ್ರಹಿಸಿತು.

ವರ್ತಕರಿಂದ ವಹಿವಾಟು ಬಂದ್

‘ಭಯೋತ್ಪಾದಕರ ದಾಳಿ ಖಂಡಿಸಿ ಹಾಗೂ ಮೃತ ಮಂಜುನಾಥ ರಾವ್ ಅವರ ಗೌರವಾರ್ಥ ಶಿವಮೊಗ್ಗದಲ್ಲಿ ವರ್ತಕರು ಅಂಗಡಿಗಳ ಬಾಗಿಲು ಹಾಕಿ ಅರ್ಧದಿನ ವಹಿವಾಟು ಬಂದ್ ಮಾಡಲಿದ್ದಾರೆ. ಮಧ್ಯಾಹ್ನ ಅಂತ್ಯಕ್ರಿಯೆ ಮುಗಿದ ನಂತರ ವಹಿವಾಟು ಮತ್ತೆ ಆರಂಭಿಸಲು ನಿರ್ಧರಿಸಲಾಗಿದೆ’ ಎಂದು ಶಾಸಕ ಎಸ್.ಎನ್. ಚನ್ನಬಸಪ್ಪ ತಿಳಿಸಿದರು.

ಬೆಳಿಗ್ಗೆ 10.30ಕ್ಕೆ ವಿಜಯನಗರದ ಮಂಜುನಾಥ ರಾವ್ ಅವರ ಮನೆಯಿಂದ ರೋಟರಿ ಚಿತಾಗಾರಕ್ಕೆ ಮೆರವಣಿಗೆ ಹೊರಡಲಿದೆ. ಅಂತ್ಯಕ್ರಿಯೆಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪಾಲ್ಗೊಳ್ಳಲಿದ್ದಾರೆ ಎಂದರು.

ಅಳಿಯ ಬಾಕ್ಸ್‌ನಲ್ಲಿ ಬರ್ತಾರೆ: ಅತ್ತೆ ದುಃಖ

ಭರತ್ ಭೂಷಣ್

ಅಳಿಯ ಭರತ್ ಭೂಷಣ್, ಮಗಳು ಸುಜಾತಾ, ಮೂರು ವರ್ಷದ ಮೊಮ್ಮಗ ಸೇರಿ ಐವರು ಏಪ್ರಿಲ್ 18ರಂದು (ಶುಕ್ರವಾರ) ಕಾಶ್ಮೀರದ ಪ್ರವಾಸಕ್ಕೆ ತೆರಳಿದ್ದರು. ನಾಲ್ವರು ವಾಪಸ್ ಬರ್ತಾ ಇದ್ದಾರೆ. ಅಳಿಯ ಬಾಕ್ಸ್‌ನಲ್ಲಿ ಬರ್ತಾರೆ...

ಕಾಶ್ಮೀರದಲ್ಲಿ ಉಗ್ರರ ಗುಂಡಿಗೆ ಬಲಿಯಾದ ಮತ್ತೀಕೆರೆಯ ಗೋಕುಲ ಬಡಾವಣೆಯ ನಿವಾಸಿ ಭರತ್ ಭೂಷಣ್ ಅವರ ಅತ್ತೆ ವಿಮಲಾ ಅವರು ಹೀಗೆ ಹೇಳುತ್ತಲೇ ಕಣ್ಣೀರಾದರು.

‘ಮಗಳು ವೈದ್ಯೆ. ಮಂಗಳವಾರ ಮಧ್ಯಾಹ್ನ 2.45ರ ಸುಮಾರಿಗೆ ಕರೆ ಮಾಡಿ ಘಟನೆ ಕುರಿತು ಮಾಹಿತಿ ನೀಡಿದಳು’ ಎಂದು ದುಃಖಿತರಾದರು.

‘ಸಾಫ್ಟ್‌ವೇರ್ ಉದ್ಯೋಗಿ ಆಗಿದ್ದ ಭರತ್ ಭೂಷಣ್ ಅವರು ಭದ್ರಪ್ಪ ಲೇಔಟ್‌ನಲ್ಲಿ ಡಯಾಗ್ನೋಸ್ಟಿಕ್ ಕೇಂದ್ರವನ್ನೂ ನಡೆಸುತ್ತಿದ್ದರು. ಐದು ವರ್ಷದ ಹಿಂದೆ ಮದುವೆ ಆಗಿತ್ತು. ಕಾಶ್ಮೀರಕ್ಕೆ ಹೋಗಬೇಕೆಂದು ಮಗಳು ಹಾಗೂ ಅಳಿಯ ಬಹಳ ದಿನಗಳಿಂದ ಯೋಚಿಸಿದ್ದರು. ಕಳೆದ ವರ್ಷ ನಾವು ಹೋಗಿದ್ದವು. ಈ ವರ್ಷ ಅವರು ತೆರಳಿದ್ದರು. ಬುಧವಾರ ಮಧ್ಯಾಹ್ನದ ವೇಳೆಗೆ ಬೆಂಗಳೂರಿಗೆ ವಾಪಸ್ ಬರಬೇಕಿತ್ತು. ಅಷ್ಟರಲ್ಲಿ ಉಗ್ರರು ನನ್ನ ಅಳಿಯನನ್ನು ಬಲಿ ಪಡೆದಿದ್ದಾರೆ’ ಎಂದು ಹೇಳಿದರು.

‘ಮೊಮ್ಮಗ ಅಳಿಯನ ಭುಜದ ಮೇಲೆ ಕುಳಿತುಕೊಂಡಿದ್ದ. ಮೊಮ್ಮಗನನ್ನು ಕೆಳಕ್ಕೆ ಇಳಿಸಿದ ಭಯೋತ್ಪಾದಕರು ಹೆಸರು ಕೇಳಿದ್ದಾರೆ. ಆಧಾರ್ ಕಾರ್ಡ್ ತೋರಿಸುವಂತೆ ಹೇಳಿದ್ದಾರೆ. ನಂತರ, ಭರತ್ ಕುಸಿದು ಬೀಳುವವರೆಗೆ ಗುಂಡಿನ ದಾಳಿ ನಡೆಸಿದ್ದಾರೆ. ಮಕ್ಕಳು ಹಾಗೂ ಮಹಿಳೆಯರನ್ನು ಸಾಯಿಸುವುದಿಲ್ಲ ಎಂದು ಹೇಳಿದ್ದಾರೆ. ಉಗ್ರರು ಅಲ್ಲಿಂದ ಪರಾರಿಯಾದ ಮೇಲೆ ಮಗಳು ಕರೆ ಮಾಡಿ ಘಟನೆ ಕುರಿತು ಮಾಹಿತಿ ನೀಡಿದಳು’ ಎಂದು ಹೇಳಿದರು.

ಬೆಂಗಳೂರಿನ ಟೆಕಿ ಸಾವು

ಮಧುಸೂದನ್

ಕಾಶ್ಮೀರದ ಪಹಲ್ಗಾಮ್ ಬಳಿಯ ಬೈಸರನ್ ಕಣಿವೆಯಲ್ಲಿ ಉಗ್ರರು ನಡೆಸಿದ ಗುಂಡಿನ ದಾಳಿಯಲ್ಲಿ ಬೆಂಗಳೂರಿನ ಮತ್ತೊಬ್ಬ ಸಾಫ್ಟ್‌ವೇರ್ ಎಂಜಿನಿಯರ್ ಮೃತಪಟ್ಟಿದ್ದಾರೆ.

ರಾಮಮೂರ್ತಿ ನಗರದಲ್ಲಿ ನೆಲಸಿದ್ದ ಮಧುಸೂದನ್ ಸೋಮಿಶೆಟ್ಟಿ ರಾವ್ (44) ಎಂಬುವರು ಮೃತಪಟ್ಟಿದ್ದಾರೆ. ಇವರು ಐಬಿಎಂನಲ್ಲಿ ಕೆಲಸ ಮಾಡುತ್ತಿದ್ದರು. ಉಗ್ರರು ನಡೆಸಿದ ದುಷ್ಕೃತ್ಯದಿಂದಾಗಿ ರಾಜ್ಯದ ಒಟ್ಟು ಮೂವರು ಮೃತಪಟ್ಟಿದ್ದಾರೆ.

ಆಂಧ್ರಪ್ರದೇಶದ ನೆಲ್ಲೂರಿನ ಮಧುಸೂದನ್ ಅವರು 10 ವರ್ಷಗಳಿಂದ ಬೆಂಗಳೂರಿನಲ್ಲಿ ನೆಲಸಿದ್ದಾರೆ. ಎರಡು ವರ್ಷಗಳ ಹಿಂದೆ ರಾಮಮೂರ್ತಿ ನಗರದಲ್ಲಿ ಹೊಸ ಮನೆ ನಿರ್ಮಿಸಿದ್ದರು.

ಪತ್ನಿ ಕಾಮಾಕ್ಷಿ ಪ್ರಸನ್ನ, ಪುತ್ರಿ ಮೇದಾಶ್ರೀ, ಪುತ್ರ ಮುಕುಂದ ಶ್ರೀದತ್ತ ಹಾಗೂ ಸ್ನೇಹಿತರ ಜೊತೆಗೆ ಮಧುಸೂದನ್ ಅವರು ಭಾನುವಾರ ಕಾಶ್ಮೀರ ಪ್ರವಾಸಕ್ಕೆ ತೆರಳಿದ್ದರು. ಕಾಶ್ಮೀರದ ವಿವಿಧ ಪ್ರವಾಸಿ ತಾಣಗಳಿಗೆ ಭೇಟಿ ನೀಡಿ ಮಂಗಳವಾರ ಪಹಲ್ಗಾಮ್ ಬಳಿಯ ಬೈಸರನ್ ಕಣಿವೆಗೆ ತೆರಳಿದ್ದರು. ಮಧುಸೂದನ್ ಅವರ ಪತ್ನಿ, ಮಕ್ಕಳು ಹಾಗೂ ಸ್ನೇಹಿತರು ಊಟ ತರಲು ತೆರಳಿದ್ದರು. ಮಧುಸೂದನ್ ಅವರು ಹುಲ್ಲುಗಾವಲಿನಲ್ಲಿ ಕುಳಿತಿದ್ದರು. ಆಗ ಉಗ್ರರು ನಡೆಸಿದ ದಾಳಿಯಲ್ಲಿ ಮೃತಪಟ್ಟಿದ್ದಾರೆ. ಗುಂಡಿನ ಶಬ್ದ ಕೇಳಿ ಪತ್ನಿ ಸ್ಥಳಕ್ಕೆ ಬಂದು ನೋಡುವಷ್ಟರಲ್ಲಿ ಮಧುಸೂದನ್ ರಕ್ತದ ಮಡುವಿನಲ್ಲಿ ಬಿದ್ದಿದ್ದರು ಎಂದು ಕುಟುಂಬಸ್ಥರು ಹೇಳಿದರು.

‘ವಾಯುವಿಹಾರಕ್ಕೆ ತೆರಳುವ ಸಂದರ್ಭದಲ್ಲಿ ಮಧುಸೂದನ್ ಮಾತನಾಡಿಸುತ್ತಿದ್ದರು. ಅವರು ಸ್ನೇಹಜೀವಿ ಆಗಿದ್ದರು’ ಎಂದು ಅವರ ಪಕ್ಕದ ಮನೆಯವರು ನೆನಪಿಸಿಕೊಂಡರು. ಪಾರ್ಥಿವ ಶರೀರವನ್ನು ಆಂಧ್ರಪ್ರದೇಶದ ನೆಲ್ಲೂರಿಗೆ ಕೊಂಡೊಯ್ಯುವ ಸಾಧ್ಯತೆಯಿದೆ.

ಉಗ್ರನ ಬಂದೂಕನ್ನು ಕಸಿದುಕೊಳ್ಳಲು ಯತ್ನಿಸಿದ್ದ ಮುಸ್ಲಿಂ ಯುವಕ

ಪ್ರವಾಸಿಗರಿಗಾಗಿ ಜೀವತೆತ್ತ ಆದಿಲ್

• ಜುಲ್ಫೀಕರ್ ಮಜೀದ್

ಶ್ರೀನಗರ: ದಕ್ಷಿಣ ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್ ಗಿರಿಧಾಮದ ಬೈಸರನ್‌ನಲ್ಲಿ ಭಯೋತ್ಪಾದಕರು ಮಂಗಳವಾರ ಪ್ರವಾಸಿಗರ ಮೇಲೆ ಗುಂಡಿನ ಮಳೆ ಸುರಿಸುತ್ತಿದ್ದಾಗ, ಅಲ್ಲಿದ್ದ ಮುಸ್ಲಿಂ ವ್ಯಕ್ತಿಯೊಬ್ಬರು ತಮ್ಮ ಜೀವ ಲೆಕ್ಕಿಸದೆ ಹಲವರ ಪ್ರಾಣ ಉಳಿಸಿ ಅಮರರಾಗಿದ್ದಾರೆ.

ಭಯೋತ್ಪಾದಕರ ಗುಂಡಿಗೆ ತನ್ನ ಜೀವ ಕಳೆದುಕೊಂಡ ಈ ವ್ಯಕ್ತಿ, ಹಲವು ಮುಸ್ಲಿಮೇತರ ಪ್ರವಾಸಿಗರ ಜೀವ ಉಳಿಸಲು ನೆರವಾಗಿದ್ದಾರೆ.

–ಹೀಗೆ ಶೌರ್ಯ ಪ್ರದರ್ಶಿಸಿ ಸಹೋದರತ್ವದ ಸಾರವನ್ನು ಸಾರಿದವರು, ಕುದುರೆ ಸವಾರಿ ಕೆಲಸಗಾರ ಸೈಯದ್ ಆದಿಲ್ ಹುಸೇನ್ ಶಾ (28).

ಘಟನೆಯ ವಿವರ: ಬೈಸರನ್‌ಗೆ ಕುದುರೆಯ ಮೇಲೆ ಪ್ರವಾಸಿಗರನ್ನು ಕರೆದೊಯ್ಯುತ್ತಿದ್ದ ಆದಿಲ್, ಬಂದೂಕುಧಾರಿಗಳು ಗುಂಡು ಹಾರಿಸಿದಾಗ ಕುಟುಂಬವೊಂದಕ್ಕೆ ಮಾರ್ಗದರ್ಶನ ನೀಡುತ್ತಿದ್ದರು.

ಉಗ್ರರು ದಾಳಿ ನಡೆಸಿದ ವೇಳೆ ತಪ್ಪಿಸಿಕೊಂಡು ಹೋಗುವ ಬದಲಿಗೆ ಆದಿಲ್, ಭಯೋತ್ಪಾದಕನ ಬಳಿ ಧಾವಿಸಿ ಬಂದೂಕನ್ನು ಕಸಿದುಕೊಳ್ಳಲು ಯತ್ನಿಸಿದರು. ಈ ಸಂದರ್ಭದಲ್ಲಿ ದೊರೆತ ಅಲ್ಪ ಅವಧಿಯು ಪ್ರವಾಸಿಗರಿಗೆ ಅಲ್ಲಿಂದ ತಪ್ಪಿಸಿಕೊಳ್ಳಲು ಅವಕಾಶ ಒದಗಿಸಿತು’ ಎಂದು ಪ್ರತ್ಯಕ್ಷದರ್ಶಿಯಾದ ಕುದುರೆ ಸವಾರಿ ನಿರ್ವಾಹಕ ಗುಲಾಂ ನಬಿ ವಿವರಿಸಿದರು.

‘ಭಯೋತ್ಪಾದಕರು ಬುಲೆಟ್‌ಗಳ ಮೂಲಕ ನಮ್ಮನ್ನು ವಿಭಜಿಸಲು ಬಂದಾಗ, ಆದಿಲ್ ಪ್ರೀತಿಯ ಸಂಕೇತವಾಗಿ ಎದ್ದುನಿಂತರು. ಅವರು, ಜನರ ಜೀವಗಳ ಜತೆಗೆ ನಮ್ಮ ಸಾಮೂಹಿಕ ಅಂತಃಸಾಕ್ಷಿಯನ್ನೂ ರಕ್ಷಿಸಿದರು’ ಎಂದು ಸ್ಥಳೀಯ ವ್ಯಾಪಾರಿ ಇಮ್ತಿಯಾಜ್ ಲೋನ್ ಪ್ರತಿಕ್ರಿಯಿಸಿದರು.

ತಾಯಿಯ ರೋದನೆ: ಮಗನನ್ನು ಕಳೆದುಕೊಂಡ ದುಃಖದಿಂದ ಆದಿಲ್ ಅವರ ತಾಯಿ ರೋದಿಸುತ್ತಿದ್ದರು. ‘ನಮ್ಮ ಕುಟುಂಬಕ್ಕೆ ಆತನೇ ಆಧಾರವಾಗಿದ್ದ. ಆತ ಕುದುರೆ ಸವಾರಿಯ ಕೆಲಸ ಮಾಡಿ ತರುತ್ತಿದ್ದ ಹಣದ ಮೇಲೆಯೇ ಕುಟುಂಬ ನಡೆಯುತ್ತಿತ್ತು. ಈಗ ಮಗನೇ ಇಲ್ಲ. ನಮಗೆ ದಿಕ್ಕೇ ತೋಚುತ್ತಿಲ್ಲ’ ಎಂದು ಅವರ ತಾಯಿ ಕಣ್ಣೀರು ಹಾಕಿದರು.

ಗುಂಡಿಕ್ಕುವ ಮುನ್ನ ಹೆಸರು ಕೇಳಿದ ಉಗ್ರರು

ಕಾನ್ಪುರ(ಪಿಟಿಐ): ಕಾಶ್ಮೀರದ ಪಹಲ್ಗಾಮ್ ಪ್ರವಾಸ ಕೈಗೊಂಡಿದ್ದ ನಗರದ ಉದ್ಯಮಿ ಶುಭಂ ದ್ವಿವೇದಿ, ಉಗ್ರರ ಗುಂಡಿಗೆ ಬಲಿಯಾಗಿದ್ದಾರೆ. ಉಗ್ರರು, ಶುಭಂ ಅವರಿಗೆ ಗುಂಡಿಕ್ಕುವ ಮುನ್ನ ಅವರ ಹೆಸರು ಕೇಳಿದ್ದಾರೆ.

31 ವರ್ಷದ ಶುಭಂ ಸಿಮೆಂಟ್ ಮಾರಾಟದ ವ್ಯವಹಾರ ನಡೆಸುತ್ತಿದ್ದರು. ಫೆಬ್ರುವರಿ 12ರಂದು ಮದುವೆಯಾಗಿತ್ತು. ಪತ್ನಿ ಹಾಗೂ ಕುಟುಂಬದ ಇತರ 9 ಸದಸ್ಯರೊಂದಿಗೆ ಅವರು ಏಪ್ರಿಲ್ 16ರಂದು ಕಾಶ್ಮೀರಕ್ಕೆ ಪ್ರವಾಸ ಕೈಗೊಂಡಿದ್ದರು.

ಶುಭಂ ಅವರ ತಂದೆ–ತಾಯಿ, ಸಹೋದರಿ, ಬಾಮೈದ, ಸಹೋದರಿಯ ಅತ್ತೆ–ಮಾವ ಸೇರಿ ಎಲ್ಲರೂ ಸೋನ್‌ಮಾರ್ಗ ಹಾಗೂ ಗುಲ್‌ಮಾರ್ಗಕ್ಕೆ ಭೇಟಿ ನೀಡಿದ ನಂತರ ಪಹಲ್ಗಾಮ್ ತಲುಪಿದ್ದರು ಎಂದು ಮೂಲಗಳು ಹೇಳುತ್ತವೆ.

‘ನವದಂಪತಿ ಮಂಗಳವಾರ ಕುದುರೆ ಸವಾರಿಗೆ ತೆರಳಲು ನಿರ್ಧರಿಸಿದ್ದರೆ, ಕುಟುಂಬದ ಇತರ ಸದಸ್ಯರು ತಾವು ತಂಗಿದ್ದ ಹೋಟೆಲ್‌ನಲ್ಲಿಯೇ ಉಳಿದುಕೊಂಡಿದ್ದರು. ಆದರೆ, ಶುಭಂ ದಂಪತಿಯ ಸಂತಸ ಬಹಳ ಕ್ಷಣ ಉಳಿಯಲಿಲ್ಲ’ ಎಂದು ಶುಭಂ ಸಂಬಂಧಿ ಮನೋಜ್ ದ್ವಿವೇದಿ ವಿವರಿಸಿದರು.

‘2–3 ಜನ ಉಗ್ರರು ಅವರ ಬಳಿ ತೆರಳಿದ್ದರು. ಅವರ ಗುರುತು ಕೇಳಿ, ನಂತರ ಅವರ ತಲೆಗೆ ಗುಂಡಿಕ್ಕಿದ್ದಾರೆ. ಪತ್ನಿ ಎದುರೇ ಶುಭಂ ಪ್ರಾಣ ಬಿಟ್ಟಿದ್ದಾರೆ’ ಎಂದು ಮನೋಜ್ ದ್ವಿವೇದಿ ವಿವರಿಸಿದರು. ಈ ದುರ್ಘಟನೆ ಕುರಿತು ಮನೋಜ್ ಅವರಿಗೆ ಶುಭಂ ತಂದೆ ಸಂಜಯ್ ದ್ವಿವೇದಿ ದೂರವಾಣಿ ಕರೆ ಮಾಡಿ ತಿಳಿಸಿದ್ದಾರೆ.

‘ಉಗ್ರರು ಮೊದಲು ಶುಭಂ ಅವರಿಗೆ ‘ಕಲ್ಮಾ’ ಪಠಿಸುವಂತೆ ಸೂಚಿಸಿದ್ದಾರೆ. ಅದನ್ನು ಹೇಳಲು ವಿಫಲಗೊಂಡಾಗ ಶುಭಂ ಅವರಿಗೆ ಗುಂಡು ಹೊಡೆದಿದ್ದಾರೆ’ ಎಂದು ಶುಭಂ ಅವರ ಮತ್ತೊಬ್ಬ ಸಂಬಂಧಿ ಸೌರಭ್ ಹೇಳುತ್ತಾರೆ.

‘ನಿನ್ನ ಗಂಡನಿಗೆ ನಾವೇನು ಮಾಡಿದ್ದೇವೆ ಎಂಬುದನ್ನು ನಿಮ್ಮ ಸರ್ಕಾರಕ್ಕೆ ಹೇಳು ಎಂಬುದಾಗಿ ಶುಭಂ ಪತ್ನಿಯನ್ನು ಉದ್ದೇಶಿಸಿ ಒಬ್ಬ ಉಗ್ರ ಹೇಳಿದ್ದಾನೆ’ ಎಂದೂ ಸೌರಭ್ ವಿವರಿಸಿದ್ದಾರೆ.

ದುಃಖತಪ್ತ ಶುಭಂ ಕುಟುಂಬದ ಸದಸ್ಯರನ್ನು ಜಿಲ್ಲಾಧಿಕಾರಿ ಜಿತೇಂದ್ರ ಪ್ರತಾಪಸಿಂಗ್ ಭೇಟಿ ಮಾಡಿ, ಧೈರ್ಯ ತುಂಬಿದ್ದಾರೆ. ಸಾಧ್ಯವಿರುವ ಎಲ್ಲ ಸಹಾಯ ನೀಡುವುದಾಗಿ ಭರವಸೆ ನೀಡಿದ್ದಾರೆ.

ನವವಿವಾಹಿತ ಅಧಿಕಾರಿ ಹುತಾತ್ಮ

ಪ್ರಜಾವಾಣಿ ವಾರ್ತೆ/ಪಿಟಿಐ

ಚಂಡೀಗಢ/ಕೊಚ್ಚಿ: ವಾರದ ಹಿಂದಷ್ಟೇ ವಿವಾಹವಾಗಿ, ಪತ್ನಿಯೊಂದಿಗೆ ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ಗೆ ಮಧುಚಂದ್ರಕ್ಕೆ ಹೋಗಿದ್ದ ಭಾರತೀಯ ನೌಕಾಪಡೆಯ ಅಧಿಕಾರಿ ಲೆಫ್ಟಿನೆಂಟ್ ವಿನಯ್ ನರ್ವಾಲ್ (26) ಭಯೋತ್ಪಾದಕರ ಗುಂಡಿಗೆ ಬಲಿಯಾಗಿದ್ದಾರೆ.

ನರ್ವಾಲ್ ಅವರು ಏಪ್ರಿಲ್ 16ರಂದು ಹಿಮಾಂಶಿ ಜತೆಗೆ ದಾಂಪತ್ಯಕ್ಕೆ ಕಾಲಿಟ್ಟಿದ್ದರು. .

ಹರಿಯಾಣದ ಕರ್ನಾಲ್ ಜಿಲ್ಲೆಯ ಭುಸ್ಲಿ ಗ್ರಾಮದವರಾದ ವಿನಯ್ ನರ್ವಾಲ್ 2022ರಲ್ಲಿ ನೌಕಾಪಡೆಗೆ ಸೇರಿದ್ದರು. ಕಳೆದ ಒಂದೂವರೆ ವರ್ಷಗಳಿಂದ ಕೊಚ್ಚಿಯ ದಕ್ಷಿಣ ನೌಕಾ ಕಮಾಂಡ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ವಿಟ್ಜರ್ಲೆಂಡ್‌ಗೆ ಹೋಗಬೇಕಿದ್ದ ದಂಪತಿ: ನರ್ವಾಲ್ ಅವರ ನೆರೆಹೊರೆಯವರಾದ ಸೀಮಾ ಅವರು ‘ನವದಂಪತಿ ಮಧುಚಂದ್ರಕ್ಕೆ ಸ್ವಿಟ್ಜರ್ಲೆಂಡ್‌ಗೆ ಹೋಗಲು ಯೋಜಿಸಿದ್ದರು. ಆದರೆ, ಅವರಿಗೆ ಲಭ್ಯವಿದ್ದ ರಜೆ ಪರಿಗಣಿಸಿ ಕಾಶ್ಮೀರಕ್ಕೆ ಹೋಗಿದ್ದರು. ಈಗ ಅವರ ಇಡೀ ಕುಟುಂಬದ ನೋವನ್ನು ಯಾರಿಗೂ ಊಹಿಸಲು ಆಗದು’ ಎಂದು ಪ್ರತಿಕ್ರಿಯಿಸಿದ್ದಾರೆ.

ಆಘಾತ ವ್ಯಕ್ತಪಡಿಸಿದ ನೌಕಾಪಡೆ: ‘ಲೆಫ್ಟಿನೆಂಟ್ ವಿನಯ್ ನರ್ವಾಲ್ ಅವರ ದುರಂತ ಸಾವಿನಿಂದ ನೌಕಾ ಸಿಬ್ಬಂದಿ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಮತ್ತು ಭಾರತೀಯ ನೌಕಾಪಡೆಯ ಎಲ್ಲಾ ಸಿಬ್ಬಂದಿ ಆಘಾತಕ್ಕೊಳಗಾಗಿದ್ದಾರೆ ಮತ್ತು ತೀವ್ರ ದುಃಖಿತರಾಗಿದ್ದಾರೆ’ ಎಂದು ನೌಕಾಪಡೆಯ ವಕ್ತಾರರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕೊಚ್ಚಿ ಮೂಲದ ವ್ಯಕ್ತಿ ಬಲಿ: ಪತ್ನಿ, ಮಗಳು ಮತ್ತು ಮೊಮ್ಮಕ್ಕಳೊಂದಿಗೆ ರಜೆ ಕಳೆಯಲು ಕಾಶ್ಮೀರಕ್ಕೆ ಹೋಗಿದ್ದ ಕೊಚ್ಚಿಯ ಎಡಪ್ಪಳ್ಳಿಯ ರಾಮಚಂದ್ರನ್ (65) ಕೂಡ ಭಯೋತ್ಪಾದಕರ ದಾಳಿಗೆ ಬಲಿಯಾಗಿದ್ದಾರೆ.

ದೆಹಲಿಯ ಐಜಿಐ ವಿಮಾನ ನಿಲ್ದಾಣಕ್ಕೆ ಬುಧವಾರ ಲೆಫ್ಟಿನೆಂಟ್ ವಿನಯ್ ನರ್ವಾಲ್ ಅವರ ಪಾರ್ಥಿವ ಶರೀರವನ್ನು ತಂದಾಗ ಶವದ ಪೆಟ್ಟಿಗೆ ಮುಂದೆ ನಿಂತು ಪತ್ನಿ ಹಿಮಾಂಶಿ ಅವರು ಕಂಬನಿಗರೆದರು– ಪಿಟಿಐ ಚಿತ್ರ

ಪತಿಗೆ ಸಲ್ಯೂಟ್... ಜೈ ಹಿಂದ್ !

ಗುರುಗ್ರಾಮ್‌ನ ಹಿಮಾಂಶಿ ನರ್ವಾಲ್ ಪಿಎಚ್.ಡಿ ವಿದ್ಯಾರ್ಥಿನಿ. ಲೆಫ್ಟಿನೆಂಟ್ ವಿನಯ್ ನರ್ವಾಲ್ ಅವರ ಜತೆಗೆ ವಾರದ ಹಿಂದಷ್ಟೇ ಹಸೆಮಣೆ ಏರಿದ್ದರು. ಪಹಲ್ಗಾಮ್ ಬಳಿಯ ಬೈಸರನ್‌ನ ಸುಂದರ ಹುಲ್ಲುಗಾವಲಿನಲ್ಲಿ ‘ಭೇಲ್‌ಪುರಿ’ ಸವಿಯುತ್ತಿದ್ದಾಗ ಭಯೋತ್ಪಾದಕನೊಬ್ಬ ವಿನಯ್ ತಲೆಗೆ ಗುಂಡು ಹಾರಿಸಿದ್ದಾನೆ. ತಲೆ ಸೀಳಿದ ಗುಂಡು ಪತ್ನಿಯ ಮುಖದ ಮೇಲೂ ರಕ್ತ ಚಿಮ್ಮಿಸಿದೆ. ಕ್ಷಣಾರ್ಧದಲ್ಲಿ ವಿನಯ್ ಅಂಗಾತ ನೆಲಕ್ಕುರುಳಿದ್ದಾರೆ.

ಧರೆಗೆ ಕುಸಿದುಹೋದ ಭಾವದಲ್ಲಿ ಪತಿಯ ಶವದ ಪಕ್ಕದಲ್ಲಿ ಕುಳಿತ ಆಕೆಯ ಮೂಕರೋದನದ ಚಿತ್ರವು ಅದೆಷ್ಟು ಹೃದಯಗಳನ್ನು ಗಾಸಿಗೊಳಿಸಿತೋ, ಮಮ್ಮಲ ಮರುಗಿಸಿತೋ..... ನಿಟ್ಟುಸಿರಿನ ನಿಡುಸುಯ್ಯುವಂತೆ ಮಾಡಿತೋ.... ಸಾವಿರ ಪದಗಳಿಗೆ ಸಿಗದ ಆಕೆಯ ‘ಶೋಕತಪ್ತ ಚಿತ್ರ’ವೇ ಎಲ್ಲವನ್ನೂ ಹೇಳುತ್ತಿತ್ತು.

ವಿನಯ್ ಅವರ ಪಾರ್ಥಿವ ಶರೀರರವನ್ನು ಬುಧವಾರ ದೆಹಲಿಗೆ ತಂದಾಗ, ಹಿಮಾಂಶಿ ಅವರು ತನ್ನ ದುಃಖ, ಸಂಕಟ ನಿಯಂತ್ರಿಸಿಕೊಳ್ಳುತ್ತಲೇ ಪತಿಯ ಶವಪೆಟ್ಟಿಗೆ ಅಪ್ಪಿಕೊಂಡು.... ಜೈಹಿಂದ್ ಹೇಳುತ್ತಾ, ಸೆಲ್ಯೂಟ್ ಮಾಡಿ ವಿದಾಯದ ವಂದನೆ ಹೇಳಿದ ಪರಿ ಯೋಧರ ತ್ಯಾಗ, ಬಲಿದಾನವನ್ನು ಮತ್ತಷ್ಟು ಮಗದಷ್ಟು ಗೌರವಿಸುವಂತೆ, ದೇಶಾಭಿಮಾನವನ್ನು ಪುಟದೇಳಿಸುವಂತೆ ಮಾಡಿದೆ. ಆಕೆ ಪತಿಗೆ ಅಶ್ರುತರ್ಪಣ ಸಲ್ಲಿಸಿದ ದೃಶ್ಯ ಕೋಟಿಕೋಟಿ ಮನಸುಗಳನ್ನು ಮಿಡಿಯುವಂತೆ ಮಾಡಿದೆ.

ಪಾಕ್ ಜತೆಗಿನ ಸಂಬಂಧ ಕಡಿತ

ಒಂದನೇ ಪುಟದಿಂದ...

ಅಟ್ಟಾರಿ ಗಡಿಯಲ್ಲಿ ಇರುವ ಚೆಕ್‌ಪೋಸ್ಟ್‌ಅನ್ನು (ತಪಾಸಣಾ ಠಾಣೆ) ತಕ್ಷಣದಿಂದ ಜಾರಿಗೆ ಬರುವಂತೆ ಮುಚ್ಚಲಾಗುತ್ತದೆ ಎಂದು ಅವರು ಹೇಳಿದರು. ಈ ಮಾರ್ಗದ ಮೂಲಕ ಗಡಿ ದಾಟಿದವರು ಮೇ 1ಕ್ಕೆ ಮೊದಲು ವಾಪಸ್ಸಾಗಬೇಕು.

ನವದೆಹಲಿಯಲ್ಲಿ ಇರುವ ಪಾಕಿಸ್ತಾನದ ದೂತಾವಾಸ ಕಚೇರಿಗಳಲ್ಲಿ ಕರ್ತವ್ಯದಲ್ಲಿರುವ ಮಿಲಿಟರಿ, ರಕ್ಷಣೆ, ನೌಕಾಸೇನೆ ಮತ್ತು ವಾಯುಸೇನೆಯ ಸಲಹೆಗಾರರನ್ನು ಭಾರತದಿಂದ ಹೊರಕ್ಕೆ ಕಳುಹಿಸಲಾಗುತ್ತದೆ ಎಂದರು. ಅವರು ಒಂದು ವಾರದಲ್ಲಿ ಭಾರತದಿಂದ ನಿರ್ಗಮಿಸಬೇಕಿದೆ.

ಇಸ್ಲಾಮಾಬಾದ್‌ನಲ್ಲಿ ಇರುವ ಭಾರತದ ದೂತಾವಾಸ ಕಚೇರಿಗಳಿಂದ ರಕ್ಷಣೆ, ನೌಕಾಪಡೆ ಮತ್ತು ವಾಯುಪಡೆಯ ಸಲಹೆಗಾರರನ್ನು ಭಾರತವು ವಾಪಸ್ ಕರೆಸಿಕೊಳ್ಳಲಿದೆ.

‘ದೂತಾವಾಸ ಕಚೇರಿಗಳ ಸಿಬ್ಬಂದಿ ಸಂಖ್ಯೆಯನ್ನು ಈಗಿರುವ 55ರಿಂದ 30ಕ್ಕೆ ಇಳಿಸಲಾಗುತ್ತದೆ. ಇದು ಮೇ 1ಕ್ಕೆ ಮೊದಲು ಜಾರಿಗೆ ಬರಲಿದೆ’ ಎಂದು ಮಿಸ್ರಿ ಹೇಳಿದರು.

ಪಾಕಿಸ್ತಾನದ ಪ್ರಜೆಗಳಿಗೆ ಸಾರ್ಕ್ ವೀಸಾ ವಿನಾಯಿತಿ ಯೋಜನೆಯ ಅಡಿಯಲ್ಲಿ ಭಾರತ ಪ್ರವೇಶಿಸಲು ಅವಕಾಶ ಇರುವುದಿಲ್ಲ. ಈಗಾಗಲೇ ಇಂತಹ ವೀಸಾ ಪಡೆದಿದ್ದರೆ, ಅದು ರದ್ದಾಗಿದೆ ಎಂದು ಭಾವಿಸಬೇಕು ಎಂಬ ಮಾಹಿತಿಯನ್ನು ಮಿಸ್ರಿ ನೀಡಿದರು.

ಪಹಲ್ಗಾಮ್‌ನಲ್ಲಿ ನಡೆದ ದಾಳಿಯ ಬಗ್ಗೆ ಸಮಿತಿಗೆ ಪೂರ್ಣ ವಿವರ ಒದಗಿಸಲಾಯಿತು. ‘ವಿಶ್ವದ ಹಲವು ರಾಷ್ಟ್ರಗಳು ಭಾರತದ ಜೊತೆ ನಿಲ್ಲುವುದಾಗಿ ಹೇಳಿವೆ’ ಎಂದು ಮಿಸ್ರಿ ಮಾಹಿತಿ ನೀಡಿದರು.

ಕೇಂದ್ರಾಡಳಿತ ಪ್ರದೇಶವಾಗಿರುವ ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾವಣೆಯನ್ನು ಯಶಸ್ವಿಯಾಗಿ ನಡೆಸಿದ ಹಿನ್ನೆಲೆಯಲ್ಲಿ, ಈ ಪ್ರದೇಶವು ಆರ್ಥಿಕ ಬೆಳವಣಿಗೆಯ ಕಡೆ ಸಾಗುತ್ತಿರುವ ಕಾರಣಕ್ಕೆ ಈ ದಾಳಿ ನಡೆದಿದೆ ಎಂಬುದನ್ನು ಸಭೆಯ ಗಮನಕ್ಕೆ ತರಲಾಯಿತು ಎಂದರು.

ಭದ್ರತಾ ಸ್ಥಿತಿಯನ್ನು ಪರಿಶೀಲಿಸಿದ ಸಮಿತಿಯು, ಗರಿಷ್ಠ ಎಚ್ಚರ ಕಾಯ್ದುಕೊಳ್ಳುವಂತೆ ಎಲ್ಲ ಪಡೆಗಳಿಗೆ ಸೂಚನೆ ನೀಡಿದೆ.

ಜಲ ಒಪ್ಪಂದದ ಕುರಿತು

ಸಿಂಧೂ ಜಲ ಒಪ್ಪಂದವು ವಿಶ್ವ ಬ್ಯಾಂಕ್ ಮಧ್ಯಸ್ಥಿಕೆಯಲ್ಲಿ 1960ರಲ್ಲಿ ಸಾಕಾರಗೊಂಡಿತು. ಭಾರತ-ಪಾಕಿಸ್ತಾನದ ನಡುವೆ ಹಲವು ಬಾರಿ ಸಂಘರ್ಷ ಉಂಟಾಗಿದ್ದರೂ ಈ ಒಪ್ಪಂದವನ್ನು ಅಮಾನತು ಮಾಡಿದ್ದ ನಿದರ್ಶನ ಇಲ್ಲ.

ಈಗ ಕೇಂದ್ರವು ಈ ಒಪ್ಪಂದವನ್ನು ತಕ್ಷಣದಿಂದಲೇ ಅಮಾನತು ಮಾಡಿರುವ ಪರಿಣಾಮ, ರಾವಿ, ಬಿಯಾಸ್ ಮತ್ತು ಸತ್ಲೇಜ್ ನದಿಗಳ ನೀರು ಪಾಕಿಸ್ತಾನಕ್ಕೆ ಹರಿಯುವುದರ ಮೇಲೆ ಪರಿಣಾಮ ಉಂಟಾಗಲಿದೆ ಎಂದು ವಿಶ್ಲೇಷಣೆಗಳು ಹೇಳಿವೆ.

ದಾಳಿ ಖಂಡಿಸಿ ಜಮ್ಮು–ಕಾಶ್ಮೀರ ಬಂದ್

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ/ಜಮ್ಮು: ‘ಇದಾಗಬಾರದಿತ್ತು... ಕಾಶ್ಮೀರದ ಹೆಸರಿನಲ್ಲೂ ಇಸ್ಲಾಂನ ಹೆಸರಿನಲ್ಲೂ ಇದು ನಡೆಯಬಾರದಿತ್ತು. ಮುಗ್ಧ ಜನರನ್ನು ಹತ್ಯೆ ಮಾಡುವುದು ಎಂದರೆ ಇಡೀಯ ಮಾನವತೆಯನ್ನೇ ಹತ್ಯೆ ಮಾಡಿದಂತೆ ಎಂದು ಇಸ್ಲಾಂ ಹೇಳುತ್ತದೆ. ಮನುಷ್ಯನ ಜೀವವನ್ನು ಗೌರವಿಸು ಎಂದು ಇಸ್ಲಾಂ ಹೇಳುತ್ತದೆ...’

–ಹೀಗೆಂದವರು ಶ್ರೀನಗರ ನಿವಾಸಿ ಹಾಜಿ ಬಶೀರ್ ಅಹಮ್ಮದ್ ದಾರ್.

ಭಯೋತ್ಪಾದಕ ದಾಳಿಯನ್ನು ಖಂಡಿಸಿ, ಸುಮಾರು 35 ವರ್ಷಗಳ ಇತಿಹಾಸದಲ್ಲಿ ಕಾಶ್ಮೀರದಲ್ಲಿ ಬಂದ್ ನಡೆದಿರಲಿಲ್ಲ. ಹಿಂದೂ ಮುಸ್ಲಿಂ ಭೇದವಿಲ್ಲದೆಯೇ ಎಲ್ಲ ಧರ್ಮದ ಜನರು, ಮುಸ್ಲಿಂ ಧಾರ್ಮಿಕ ಸಂಘಟನೆಗಳು ಸೇರಿ ಎಲ್ಲ ಧಾರ್ಮಿಕ ಸಂಘಟನೆಗಳು, ರಾಷ್ಟ್ರ ಹಾಗೂ ಕಾಶ್ಮೀರದಲ್ಲಿ ಪ್ರಾದೇಶಿಕವಾಗಿರುವ ಎಲ್ಲ ರಾಜಕೀಯ ಪಕ್ಷಗಳು, ವಿವಿಧ ಸಂಘ ಸಂಸ್ಥೆಗಳು ಬುಧವಾರ ಕಾಶ್ಮೀರದ ತುಂಬೆಲ್ಲಾ ಬೀದಿಗಿಳಿದಿದ್ದರು.

ಕಾಶ್ಮೀರದ ಅನಂತನಾಗ್ ಜಿಲ್ಲೆಯಲ್ಲಿ ಟ್ಯಾಕ್ಸಿ ಮಾಲೀಕರ ಸಂಘದವರು ಬುಧವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಕಾಶ್ಮೀರ ಮಾತ್ರವಲ್ಲದೆ ಜಮ್ಮು ಸೇರಿ ವಿವಿಧೆಡೆ ಬಂದ್ ಆಚರಿಸಲಾಯಿತು. ಪ್ರತಿಭಟನೆಗಳೂ ನಡೆದವು. ಪಾಕಿಸ್ತಾನದ ವಿರುದ್ಧ ಘೋಷಣೆಗಳನ್ನು ಕೂಗಲಾಯಿತು. ಪಾಕಿಸ್ತಾನದ ಧ್ವಜವನ್ನೂ ಸುಡಲಾಯಿತು.

ಜಮ್ಮು ಮತ್ತು ಕಾಶ್ಮೀರದಲ್ಲಿ ಖಾಸಗಿ ಶಾಲೆಗಳನ್ನು ಮುಚ್ಚಲಾಗಿತ್ತು. ಅಗತ್ಯ ವಸ್ತುಗಳ ಅಂಗಡಿಗಳು ಮಾತ್ರವೇ ತೆರೆದಿದ್ದವು. ಕಾಶ್ಮೀರದ ಬೀದಿ ಬೀದಿಗಳಲ್ಲಿ ಸಾರ್ವಜನಿಕರು ಮೊಂಬತ್ತಿ ಹಿಡಿದು, ದಾಳಿಯನ್ನು ಖಂಡಿಸಿ ಸಾವಿರಾರು ಸಂಖ್ಯೆಯಲ್ಲಿ ಮೆರವಣಿಗೆ ನಡೆಸಿದರು.

‘ಕಾಶ್ಮೀರದ ಜನರು ಯಾವತ್ತಿಗೂ ಭಯೋತ್ಪಾದನೆಯ ವಿರುದ್ಧ ಇದ್ದವರು. ಆದರೂ ಕಾಶ್ಮೀರದ ಜನರ ವಿರುದ್ಧ ಪಿತೂರಿಗಳು ನಡೆಯುತ್ತಿವೆ. ಇಲ್ಲಿನ ಆರ್ಥಿಕತೆಯನ್ನು ಹಾಳು ಮಾಡುವುದೇ ಇದರ ಉದ್ದೇಶ’ ಎಂದು ಹಣ್ಣುಗಳ ಅಂಗಡಿ ಇಟ್ಟುಕೊಂಡಿರುವ ಜಿ.ಎಂ. ಬಂಡೆ ಅಭಿಪ್ರಾಯಪಟ್ಟರು.

ಉಗ್ರರ ಹುಡುಕಿ ಹೊಡೆದು ಹಾಕಿ: ಖರ್ಗೆ

ಪ್ರಜಾವಾಣಿ ವಾರ್ತೆ

ಮಲ್ಲಿಕಾರ್ಜುನ ಖರ್ಗೆ

ಬೆಂಗಳೂರು: ‘ಉಗ್ರರ ದಾಳಿಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರ ತಕ್ಷಣ ಸರ್ವಪಕ್ಷ ಸಭೆ ಕರೆದು ಎಲ್ಲರ ಅಭಿಪ್ರಾಯ ಪಡೆಯುವುದರ ಜತೆಗೆ ಉಗ್ರರನ್ನು ಹುಡುಕಿ ಹೊಡೆದು ಹಾಕಬೇಕು’ ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕರೂ ಆಗಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಕಾಂಗ್ರೆಸ್ ಪಕ್ಷವು ಕೇಂದ್ರ ಸರ್ಕಾರಕ್ಕೆ ಸಂಪೂರ್ಣ ಸಹಕಾರ ನೀಡಲಿದೆ’ ಎಂದರು.

‘ಉಗ್ರರ ದಾಳಿ ವಿಚಾರವಾಗಿ ಚರ್ಚಿಸಲು ನವದೆಹಲಿಯ ಎಐಸಿಸಿ ಕಚೇರಿಯಲ್ಲಿ ಏಪ್ರಿಲ್ 24ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಕರೆಯಲಾಗಿದೆ’ ಎಂದರು.

‘ಇದು ದೇಶದ ಮೇಲೆ ನಡೆದ ದಾಳಿ. ಇಡೀ ದೇಶ ಆಘಾತಕ್ಕೆ ಒಳಗಾಗಿದ್ದು, ಪಾಕಿಸ್ತಾನದ ಭಯೋತ್ಪಾದಕ ಸಂಘಟನೆ ಈ ದಾಳಿಯ ಹೊಣೆ ಹೊತ್ತಿದೆ. ಅಮಾಯಕ ನಾಗರಿಕರ ಮೇಲೆ ದಾಳಿ ಮಾಡುವವರು ಮನುಷ್ಯರಲ್ಲ. ನಾವು ತಕ್ಕ ತಿರುಗೇಟು ನೀಡಬೇಕು. ಆದರೆ, ಈ ವಿಚಾರದಲ್ಲಿ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸದೆ ಪ್ರಚಾರ ಪಡೆಯಬಾರದು. ಇಂತಹ ಸಂದರ್ಭದಲ್ಲಿ ಯಾರು ಹೆಚ್ಚು ಕೆಲಸ ಮಾಡಿದರು, ಯಾರು ಮಾಡಿಲ್ಲ ಎಂಬ ಚರ್ಚೆಗಳು ಬರಬಾರದು’ ಎಂದರು.

> **ರಾಜಕೀಯ ಮಾಡುವ ಸಮಯ ಇದಲ್ಲ. ನಾವು ಕೇಂದ್ರ ಸರ್ಕಾರದ ಜತೆ ನಿಲ್ಲುತ್ತೇವೆ. ದೇಶದ ಏಕತೆ ಹಾಗೂ ಸಮಗ್ರತೆಯ ರಕ್ಷಣೆಗೆ ನಾವು ಒಂದಾಗುತ್ತೇವೆ**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

‘ಇದು ಎಲ್ಲರೂ ಒಗ್ಗಟ್ಟಾಗಿ ಮೃತರ ಕುಟುಂಬಗಳಿಗೆ ನ್ಯಾಯ ದೊರಕಿಸಿಕೊಡುವ ಸಮಯ. ಈ ಹೀನ ಕೃತ್ಯ ಮಾಡಿದವರಿಗೆ ಕಠಿಣ ಶಿಕ್ಷೆ ನೀಡುವ ಸಮಯ. ಭಯೋತ್ಪಾದನೆ ಸವಾಲಿನ ಕುರಿತು ಸರ್ಕಾರ ಎಲ್ಲ ಪಕ್ಷಗಳ ಜತೆ ಚರ್ಚಿಸಬೇಕು. ವಿರೋಧ ಪಕ್ಷಗಳ ಸಲಹೆಗಳನ್ನು ಸ್ವೀಕರಿಸಲಿ, ಸಾಧ್ಯವಾಗದ್ದನ್ನು ತಿರಸ್ಕರಿಸಲಿ’ ಎಂದು ಹೇಳಿದರು.

ಗುಪ್ತಚರ ಇಲಾಖೆಯ ವೈಫಲ್ಯ– ಸಿ.ಎಂ

‘ಉಗ್ರರ ದಾಳಿಯ ಮಾಹಿತಿ ಕೊರತೆಯು ಕೇಂದ್ರದ ಗುಪ್ತಚರ ಇಲಾಖೆಯ ವೈಫಲ್ಯ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಕಾಶ್ಮೀರಕ್ಕೆ ತೆರಳಿರುವ ಕನ್ನಡಿಗರ ರಕ್ಷಣೆ ಹಾಗೂ ಇನ್ನಿತರ ವ್ಯವಸ್ಥೆಗಳಿಗಾಗಿ ಅಧಿಕಾರಿಗಳ ತಂಡವನ್ನು ರವಾನಿಸಲಾಗಿದೆ. ಅಲ್ಲದೇ, 40ಕ್ಕೂ ಹೆಚ್ಚು ಕನ್ನಡಿಗರನ್ನು ವಿಶೇಷ ವಿಮಾನದ ಮೂಲಕ ಸುರಕ್ಷಿತವಾಗಿ ಕರೆತರಲು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರನ್ನೂ ಕಾಶ್ಮೀರಕ್ಕೆ ಕಳುಹಿಸಲಾಗಿದೆ’ ಎಂದರು.

‘ಉಗ್ರರ ದಾಳಿ ಪೂರ್ವಯೋಜಿತ ಸಂಚು. ಈ ದಾಳಿ ನಡೆಯುವ ಮಾಹಿತಿ ಮೊದಲೇ ತಿಳಿಯುವಲ್ಲಿ ಕೇಂದ್ರದ ಗುಪ್ತಚರ ಇಲಾಖೆ ವಿಫಲವಾಗಿದೆ. ಈ ಹಿಂದೆ ನಡೆದಿದ್ದ ಪುಲ್ವಾಮಾ ದಾಳಿಯ ವೇಳೆಯೂ ವೈಫಲ್ಯ ಇತ್ತು’ ಎಂದರು.

ಸುವರ್ಣ ನ್ಯೂಸ್‌ನಲ್ಲಿ ಸುವರ್ಣಾವಕಾಶ

ಅನುಭವಿ ಪತ್ರಕರ್ತರು
ಅರ್ಹತೆಗಳು :
* ಯಾವುದೇ ಪ್ರತಿಷ್ಠಿತ ಕನ್ನಡ ನ್ಯೂಸ್ ಚಾನಲ್, ಪತ್ರಿಕೆ, ವೆಬ್‌ಸೈಟ್‌ಗಳಲ್ಲಿ 5 ವರ್ಷ ಕೆಲಸ ಮಾಡಿದ ಅನುಭವವಿರಬೇಕು.
* ಯಾವುದೇ ವಿಷಯದಲ್ಲಿ ಪದವಿ ಪಡೆದಿರಬೇಕು.
* ವಯಸ್ಸು 35 ವರ್ಷದ ಒಳಗಿರಬೇಕು.

ಹೊಸಬರಿಗೆ ಆದ್ಯತೆ
ಅರ್ಹತೆಗಳು :
* ಯಾವುದೇ ವಿಷಯದಲ್ಲಿ ಪದವಿಯಾಗಿರಬೇಕು.
* 10ನೇ ತರಗತಿಯಿಂದಲೇ ಉತ್ತಮ ಅಕಾಡೆಮಿಕ್ ಹಿನ್ನೆಲೆಯಿರಬೇಕು.
* ಪತ್ರಿಕೋದ್ಯಮದ ಮೇಲೆ ಸೆಳೆತ ಇರಬೇಕು.
* ಕನ್ನಡ & ಇಂಗ್ಲಿಷ್ ಭಾಷೆಗಳ ಮೇಲೆ ಉತ್ತಮ ಹಿಡಿತವಿರಬೇಕು.
* ವಯಸ್ಸು 26 ವರ್ಷದ ಒಳಗಿರಬೇಕು.

ಆಸಕ್ತ ಅಭ್ಯರ್ಥಿಗಳು ತಮ್ಮ ಸ್ವ-ವಿವರವನ್ನು ಈ ಕೆಳಕಂಡ ಇ-ಮೇಲ್‌ಗೆ ಕಳುಹಿಸಿ careers@suvarnanews.in

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : ಮೇ 05, 2025

asianet ಸುವರ್ಣ ನ್ಯೂಸ್
ನೇರ. ದಿಟ್ಟ. ನಿರಂತರ

❦ ಸುಭಾಷಿತ ❦
ಪ್ರೇಮ ಎಂದರೆ ತನ್ನಲ್ಲಿ ಇನ್ನೊಬ್ಬರನ್ನು, ಇನ್ನೊಬ್ಬರಲ್ಲಿ ತನ್ನನ್ನು ಕಾಣುವ ಪ್ರಯತ್ನ.
–ಗೋಪಾಲಕೃಷ್ಣ ಅಡಿಗ

ನಾಗರಿಕರ ಮೇಲೆ ಕೋಮು ಮನಃಸ್ಥಿತಿಯ ದಾಳಿ ಖಂಡನೀಯ

ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ಪಟ್ಟಣದ ಸಮೀಪವಿರುವ ಬೈಸರನ್ ಎಂಬ ಪ್ರವಾಸಿ ಸ್ಥಳದಲ್ಲಿ ಭಯೋತ್ಪಾದಕರು ನಡೆಸಿದ ಹೇಯ ಗುಂಡಿನ ದಾಳಿಯಲ್ಲಿ 27 ಮಂದಿ ಮೃತಪಟ್ಟಿದ್ದಾರೆ. ಇತ್ತೀಚಿನ ದಿನಗಳಲ್ಲಿ ನಡೆದ ಅತ್ಯಂತ ಕ್ರೂರವಾದ ದಾಳಿ ಇದಾಗಿದೆ. ಕೋಮುವಾದಿ ಮನಸ್ಥಿತಿಯಿಂದ ನಾಗರಿಕರ ಮೇಲೆ ನಡೆಸಿದ ಈ ದಾಳಿ ಖಂಡನೀಯ. ಸಂತ್ರಸ್ತರಲ್ಲಿ ಕರ್ನಾಟಕ ಮತ್ತು ಇತರ ಹಲವು ರಾಜ್ಯಗಳವರು ಇದ್ದಾರೆ. ವಿದೇಶದ ಪ್ರಜೆಗಳಿಬ್ಬರು ಕೂಡ ಮೃತಪಟ್ಟಿದ್ದಾರೆ. ಕಾಶ್ಮೀರದ ಪ್ರವಾಸೋದ್ಯಮವು ಈಚಿನ ಎರಡು ವರ್ಷಗಳಲ್ಲಿ ಚೇತರಿಕೆ ಕಂಡಿತ್ತು. ಅದನ್ನು ಹಾಳುಗೆಡವುವುದೇ ಈ ದಾಳಿಯ ಮುಖ್ಯ ಉದ್ದೇಶ ಎಂಬುದರಲ್ಲಿ ಸಂದೇಹವೇನೂ ಇಲ್ಲ. ಈ ವರ್ಷದ ಮೊದಲ ತ್ರೈಮಾಸಿಕದಲ್ಲಿ ಸುಮಾರು ಐದು ಲಕ್ಷ ಪ್ರವಾಸಿಗರು ಇಲ್ಲಿಗೆ ಭೇಟಿ ಕೊಟ್ಟಿದ್ದಾರೆ. ಕಳೆದ ವರ್ಷ ಒಂದು ಕೋಟಿ ಪ್ರವಾಸಿಗರು ಬಂದಿದ್ದರು. ಪಾಕಿಸ್ತಾನವನ್ನು ನೆಲೆಯಾಗಿರಿಸಿಕೊಂಡಿರುವ ಲಷ್ಕರ್-ಎ-ತಯಬಾ ಉಗ್ರಗಾಮಿ ಸಂಘಟನೆಗೆ ನಿಷ್ಠೆ ಹೊಂದಿರುವ 'ದಿ ರೆಸಿಸ್ಟೆನ್ಸ್ ಫ್ರಂಟ್' (ಟಿಆರ್‌ಎಫ್) ಎಂಬ ಗುಂಪು ಈ ದುಷ್ಕೃತ್ಯದ ಹೊಣೆ ಹೊತ್ತಿದೆ. ಹಾಗಾಗಿ, ದಾಳಿಯ ಹಿಂದೆ ಯಾರಿದ್ದಾರೆ ಎಂಬುದು ಸ್ಪಷ್ಟವಾಗಿದೆ.



ಪಹಲ್ಗಾಮ್ ದಾಳಿಯಿಂದಾಗಿ ಇಡೀ ದೇಶ ಆಘಾತಗೊಂಡಿದೆ. ಇಂತಹ ಕೃತ್ಯ ಮರುಕಳಿಸುವುದಿಲ್ಲ ಎಂಬುದನ್ನು ಸರ್ಕಾರವು ಖಾತರಿಪಡಿಸಬೇಕು

ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರು ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿಯೇ ದಾಳಿ ನಡೆಸಲಾಗಿದೆ. ಭಾರತಕ್ಕೆ ಮುಜುಗರ ಆಗಲಿ ಎಂಬುದು ದಾಳಿಯ ಇನ್ನೊಂದು ಉದ್ದೇಶವಾಗಿರಬಹುದು. ಕಾಶ್ಮೀರದಲ್ಲಿ ಭಯೋತ್ಪಾದನೆ ಇನ್ನೂ ಇದೆ ಎಂಬ ಸಂದೇಶ ಸಾರುವ ಉದ್ದೇಶವೂ ಉಗ್ರರಿಗೆ ಇದ್ದಿರಬಹುದು. ಅದೇನೇ ಇರಲಿ, ಭಯೋತ್ಪಾದಕರ ದಾಳಿಯ ಬಗ್ಗೆ ಪ್ರತ್ಯಕ್ಷದರ್ಶಿಗಳು ನೀಡಿರುವ ವಿವರಗಳು ನಾಗರಿಕ ಸಮಾಜ ಬೆಚ್ಚಿಬೀಳುವಂತೆ ಇವೆ. ಪಹಲ್ಗಾಮ್ ದಾಳಿ ಹಿಂದೆ ಪಾಕಿಸ್ತಾನದ ಕೈವಾಡ ಇದೆ ಎಂಬುದು ಸಾಬೀತಾದರೆ ತಕ್ಕ ಪ್ರತಿಕ್ರಿಯೆಯನ್ನು ಭಾರತ ನೀಡಬೇಕಾಗುತ್ತದೆ.

ದಾಳಿಯಿಂದಾಗಿ ಇಡೀ ದೇಶ ಆಘಾತಗೊಂಡಿದೆ, ಕೃತ್ಯವನ್ನು ಇಡೀ ದೇಶ ಖಂಡಿಸಿದೆ. ಇಂತಹ ಕೃತ್ಯ ಮರುಕಳಿಸುವುದಿಲ್ಲ ಎಂಬುದನ್ನು ಸರ್ಕಾರವು ಖಾತರಿ ಪಡಿಸಬೇಕು. ಕಾಶ್ಮೀರದಿಂದ ಭಯೋತ್ಪಾದನೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಗಿದೆ ಎಂದು ಸರ್ಕಾರವು ಈ ಹಿಂದೆ ಹೇಳಿಕೊಂಡಿತ್ತು. ಆದರೆ ಇದು ನಿಜವಲ್ಲ. ಅಲ್ಲೊಂದು-ಇಲ್ಲೊಂದು ಭಯೋತ್ಪಾದನಾ ಕೃತ್ಯಗಳು ನಡೆಯುವುದು ಮತ್ತು ಎನ್‌ಕೌಂಟರ್‌ಗಳು ಆಗಾಗ ನಡೆಯುತ್ತಲೇ ಇವೆ. ಪ್ರತಿಯೊಂದು ಇಂಚು ನೆಲ ಮತ್ತು ಪ್ರತಿಯೊಬ್ಬ ವ್ಯಕ್ತಿಯನ್ನು ಭದ್ರತಾ ಪಡೆಗಳು ರಕ್ಷಿಸಲು ಸಾಧ್ಯವಿಲ್ಲ ಎಂದು ಆಡಳಿತದಲ್ಲಿದ್ದವರು ಈ ಹಿಂದೆ ಹೇಳಿದ್ದಿದೆ. ಹಾಗಿದ್ದರೂ ಪಹಲ್ಗಾಮ್ ಪ್ರಮುಖ ಪ್ರವಾಸಿ ತಾಣವಾಗಿದ್ದು ಇಲ್ಲಿ ವಿಶೇಷ ಗಮನ ಹರಿಸಬೇಕಿತ್ತು. ಗುಪ್ತಚರ ವ್ಯವಸ್ಥೆಯ ವೈಫಲ್ಯವೂ ಇಲ್ಲಿ ಎದ್ದು ಕಾಣುವಂತಿದೆ. 'ಇಂತಹ ಹೀನ ಕೃತ್ಯ ನಡೆಸಿ ತಮ್ಮ ಆರ್ಥಿಕತೆಯನ್ನು ಹಾಳು ಮಾಡಿದವರ ಮೇಲೆ ಸ್ಥಳೀಯರಿಗೆ ಸಹಾನುಭೂತಿ ಇರಲು ಸಾಧ್ಯವಿಲ್ಲ. ಜಮ್ಮು-ಕಾಶ್ಮೀರದಲ್ಲಿ ಬುಧವಾರ ಬಂದ್ ನಡೆಸಲಾಗಿದೆ. ಸರ್ಕಾರವು ಜನರೊಂದಿಗಿನ ಸಂಬಂಧವನ್ನು ಬಹಳ ನಿಕಟಗೊಳಿಸಬೇಕು. ಸಾರ್ವಜನಿಕರ ವಿಶ್ವಾಸವನ್ನು ಗಳಿಸಲು ಹೆಚ್ಚು ಪ್ರಯತ್ನಗಳನ್ನು ಮಾಡಬೇಕು. ಕೇಂದ್ರಾಡಳಿತ ಪ್ರದೇಶವಾಗಿರುವ ಜಮ್ಮು-ಕಾಶ್ಮೀರಕ್ಕೆ ರಾಜ್ಯದ ಸ್ಥಾನ ನೀಡುವ ಭರವಸೆ ಈಡೇರಿಸುವುದರತ್ತ ಸರ್ಕಾರ ಈವರೆಗೆ ಏನನ್ನೂ ಮಾಡಿಲ್ಲ. ಇಲ್ಲಿ ಕಳೆದ ವರ್ಷ ವಿಧಾನಸಭಾ ಚುನಾವಣೆ ನಡೆದಿದೆ. ಜನರು ಹೆಚ್ಚಿನ ಸಂಖ್ಯೆಯಲ್ಲಿ ಮತದಾನದಲ್ಲಿ ಭಾಗವಹಿಸಿದ್ದರು. ಮತದಾನವು ಶಾಂತಿಯುತವಾಗಿ ನಡೆದಿತ್ತು. ಜನರು ಸರ್ಕಾರವೊಂದನ್ನು ಆಯ್ಕೆ ಮಾಡಿದ್ದಾರೆ. ಆದರೆ, ಕೇಂದ್ರ ಸರ್ಕಾರವು ಅದರ ಅಧಿಕಾರವನ್ನು ಮೊಟಕುಗೊಳಿಸಿ ಲೆಫ್ಟಿನೆಂಟ್ ಗವರ್ನರ್‌ಗೆ ಹೆಚ್ಚಿನ ಅಧಿಕಾರ ನೀಡಿದೆ. ಭದ್ರತಾ ಪಡೆಗಳನ್ನು ಹೆಚ್ಚಾಗಿ ನಿಯೋಜಿಸುವುದರಿಂದ ಮಾತ್ರ ಶಾಂತಿ ಸ್ಥಾಪಿಸಲು ಸಾಧ್ಯವಿಲ್ಲ. ಜನರ ಜೊತೆಗೆ ಹೆಚ್ಚಿನ ನಂಟು ಬೆಳೆಸಿಕೊಳ್ಳುವ ಮೂಲಕ ಜನರ ವಿಶ್ವಾಸವನ್ನು ಹೆಚ್ಚಿಸಬಹುದು.

ದಿನದ ಟ್ವೀಟ್

ಹಿಂಸೆಗೆ ಗೆಲುವಿಲ್ಲ

ಭಾರತಾಂಬೆಯ ಕಳಶದಂತೆ ಇರುವ ಜಮ್ಮು ಮತ್ತು ಕಾಶ್ಮೀರ ಎಂದಿಗೂ ನಮ್ಮದೇ... ಪಹಲ್ಗಾಮ್‌ನಲ್ಲಿ ಉಗ್ರರು, ಅಮಾಯಕರ ಮೇಲೆ ನಡೆಸಿದಂತಹ ಕೃತ್ಯವನ್ನು ಎಂದಿಗೂ ಯಾರೂ ಕ್ಷಮಿಸಲಾಗದು. ಎಲ್ಲಾ ಧರ್ಮದ ಸಾರ ಪ್ರೀತಿ ಹಾಗೂ ಅಹಿಂಸೆ. ಪ್ರೀತಿಯಿಂದ ಸಾಧಿಸಲಾಗದ್ದನ್ನು ಹಿಂಸೆ ಹಾಗೂ ದ್ವೇಷದಿಂದ ಸಾಧಿಸಲು ಸಾಧ್ಯವೇ ಇಲ್ಲ... #PahalgamTerroristAttack

ಧ್ರುವ ಸರ್ಜಾ, ಚಿತ್ರನಟ

ಕಿಡಿನುಡಿ

ನಾವು ಸರ್ಕಾರಕ್ಕೆ ಕೆಲವು ಪ್ರಶ್ನೆಗಳನ್ನು ಕೇಳಬಹುದೇ ಅಥವಾ ಹಾಗೆ ಮಾಡಿದರೆ ಅದು ರಾಷ್ಟ್ರ ವಿರೋಧಿ ನಡೆಯಾಗುವುದೇ? #PahalgamTerroristAttack

ನಿಹಾರ್ ದೇಸಾಯಿ, ವೈದ್ಯ

25 ವರ್ಷಗಳ ಹಿಂದೆ
ಸೋಮವಾರ, 24-4-2000

• **ಭೀಕರ ಬರಗಾಲ: ನೆರವಿಗೆ ರಾಷ್ಟ್ರಕ್ಕೆ ಪ್ರಧಾನಿ ಮೊರೆ**

ನವದೆಹಲಿ, ಏ. 23– ರಾಷ್ಟ್ರದಲ್ಲಿ, ವಿಶೇಷವಾಗಿ ಗುಜರಾತ್ ಮತ್ತು ರಾಜಸ್ಥಾನದಲ್ಲಿ ಭೀಕರ ಬರಗಾಲಕ್ಕೆ ತುತ್ತಾಗಿರುವ ಜನರ ನೆರವಿಗೆ ಧಾವಿಸುವಂತೆ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ರಾಷ್ಟ್ರದ ಜನತೆಗೆ ಕಳಕಳಿಯಿಂದ ಮನವಿ ಮಾಡಿಕೊಂಡಿದ್ದಾರೆ.

ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಅವರು, 'ನಿರ್ಗತಿಕರ ವಿಶೇಷ ನಿಧಿ ಮತ್ತು ಇತರ ಯೋಜನೆಗಳಿಂದ ಕೇಂದ್ರ ಸರ್ಕಾರ ಹಣವನ್ನು ಬಿಡುಗಡೆ ಮಾಡುತ್ತಿದೆ. ಆದರೆ ಬರಗಾಲಕ್ಕೆ ತುತ್ತಾಗಿರುವ ಜನ ಮತ್ತು ಜಾನುವಾರುಗಳ ಸಂಖ್ಯೆಯನ್ನು ಗಮನಿಸಿದರೆ ಸರ್ಕಾರದ ಈ ಹಣ ಸಾಲುವುದಿಲ್ಲ. ಆಹಾರ, ಮೇವು, ಇತರ ಸೌಲಭ್ಯಗಳಿಗೆ ಅಪಾರ ಪ್ರಮಾಣದಲ್ಲಿ ಹಣ ಬೇಕಾಗುತ್ತದೆ ಎಂದು ತಿಳಿಸಿದರು.

'ನೀವೆಲ್ಲ ಕೈಗೂಡಿಸಿದರೆ ಮಾತ್ರ ಸಂಕಷ್ಟ ದಲ್ಲಿರುವ ಜನರನ್ನು ಸಂರಕ್ಷಿಸ ಬಹುದು' ಎಂದು ವಾಜಪೇಯಿ ಅವರು ತಿಳಿಸಿದರು.

• **ವರ್ಷದ ಬಳಿಕ ಮರಳಿದ 19 ಮೀನುಗಾರರು**

ಚೆನ್ನೈ, ಏ. 23 (ಪಿಟಿಐ)– ಅಪರಾಧ ಎಸಗಿದುದರ ಪಾಕಿಸ್ತಾನ ಮತ್ತು ಇರಾನ್‌ನ ಜೈಲುಗಳಲ್ಲಿ ಕಳೆದ ಒಂದು ವರ್ಷದಿಂದ ಬಂಧಿತರಾಗಿದ್ದ 19 ಮಂದಿ ಮೀನುಗಾರರು ಇಂದು ಸ್ವದೇಶಕ್ಕೆ ಹಿಂತಿರುಗಿದರು. ಈ ಸಂದರ್ಭದಲ್ಲಿ ಅವರಿಗೆ ಹಾರ್ದಿಕ ಸ್ವಾಗತ ನೀಡಲಾಯಿತು.

ಕಳೆದ ವರ್ಷ ಫೆಬ್ರುವರಿ 16ರಂದು ಮೀನು ಹಿಡಿಯುವ ಗುತ್ತಿಗೆ ಮೇಲೆ ಸೌದಿ ಅರೇಬಿಯಾಕ್ಕೆ ತೆರಳಿದ್ದ ಮೀನುಗಾರರು ಆಕಸ್ಮಿಕವಾಗಿ ಇರಾನ್ ಜಲಪ್ರದೇಶವನ್ನು ಪ್ರವೇಶಿಸಿದ್ದರಿಂದ ಇರಾನ್‌ನ ಅಧಿಕಾರಿಗಳು ಬಂಧಿಸಿದ್ದರು.

ಬಿಡುಗಡೆ ಬಳಿಕ ಈ ಕೈದಿಗಳನ್ನು ಇರಾನ್ ಅಧಿಕಾರಿಗಳು ಪಾಕ್‌ಗೆ ಹಸ್ತಾಂತರಿಸಿ, ಭಾರತಕ್ಕೆ ಒಪ್ಪಿಸುವಂತೆ ಕೇಳಿಕೊಂಡಿದ್ದರು. ಆದರೆ ಪಾಕಿಸ್ತಾನಿ ಅಧಿಕಾರಿಗಳು ಅವರನ್ನು ಕ್ವೆಟ್ಟಾದ ಜೈಲಿನಲ್ಲಿ ಹಲವು ತಿಂಗಳುಗಳ ಕಾಲ ಬಂಧನದಲ್ಲಿ ಇರಿಸಿದ್ದರು. ಬಳಿಕ ಅವರನ್ನು ಕರಾಚಿ ಜೈಲಿಗೆ ಸ್ಥಳಾಂತರಿಸಲಾಗಿತ್ತು.

50 ವರ್ಷಗಳ ಹಿಂದೆ
ಗುರುವಾರ, 24-4-1975

• **ಮಲ್ಪೆ: ಸರ್ವ ಋತು ಮೀನುಗಾರಿಕೆ ಬಂದರು**

ಬೆಂಗಳೂರು, ಏ. 23– ರಾಜ್ಯದ ಪಶ್ಚಿಮ ಕರಾವಳಿಯಲ್ಲಿರುವ ಮಲ್ಪೆಯನ್ನು ಸರ್ವ ಋತು ಮೀನುಗಾರಿಕೆ ಬಂದರನ್ನಾಗಿ ಪರಿವರ್ತಿಸಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ.

ಎರಡು ಕೋಟಿ ಹದಿನೇಳು ಲಕ್ಷ ರೂಪಾಯಿ ವೆಚ್ಚದ ಈ ಯೋಜನೆ ಇನ್ನು ಮೂರು ವರ್ಷಗಳಲ್ಲಿ ಪೂರ್ಣಗೊಂಡಾಗ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸ ಕೈಗಾರಿಕೆ ಉದ್ದಿಮೆಗಳು ದಾಂಗುಡಿ ಇಡಲಿವೆ ಎಂದು ಮೀನುಗಾರಿಕೆ ಸಚಿವ ಕೆ.ಟಿ. ರಾಥೋಡ್ ಅವರು ಇಂದು ಸುದ್ದಿಗಾರರಿಗೆ ತಿಳಿಸಿದರು.

• **ಖದೀಮರಿಗೆ ಜೈಲಿನಲ್ಲಿ ವಿಶೇಷ ಸೌಲಭ್ಯ**

ನವದೆಹಲಿ, ಏ. 23 – ಬಂಧಿತ ಕಳ್ಳಸಾಗಾಣಿಕೆದಾರರಿಗೆ ವಿಶೇಷ ಸೌಲಭ್ಯ ನೀಡಲಾಗಿದೆ ಎಂದು ಇಂದು ಲೋಕಸಭೆಯಲ್ಲಿ ವಿರೋಧಪಕ್ಷದ ನಾಯಕರು ಆಪಾದಿಸಿದಾಗ ಸುಮಾರು ಮುಕ್ಕಾಲು ಗಂಟೆ ಸಭೆಯಲ್ಲಿ ಗಲಭೆ-ಗೊಂದಲ ಉಂಟಾಯಿತು.

ರಾಷ್ಟ್ರದ ನಾನಾ ಭಾಗಗಳಿಂದ ಕೆಲವು ಮಂದಿ ಕಳ್ಳಸಾಗಾಣಿಕೆದಾರರನ್ನು ಆಗ್ರಾ ಜೈಲಿಗೆ ವಿಮಾನದಲ್ಲಿ ಕರೆತರಲಾಯಿತು ಎಂದೂ ವಿರೋಧಪಕ್ಷದ ಸದಸ್ಯರು ಆಪಾದಿಸಿದರು. ಈ ವಿಮಾನಯಾನದ ವೆಚ್ಚ ಎಷ್ಟೆಂಬುದನ್ನು ಸಭೆಗೆ ತಿಳಿಸಬೇಕೆಂದೂ ಒತ್ತಾಯಪಡಿಸಿದರು.

ಬಂಧಿತ ಕಳ್ಳಸಾಗಾಣಿಕೆದಾರರಿಗೆ ವಿಶೇಷ ಸೌಲಭ್ಯ ಕಲ್ಪಿಸುವಂತೆ ಕೇಂದ್ರ ಸರ್ಕಾರವೇನೂ ಆಜ್ಞೆ ಮಾಡಿಲ್ಲ ಎಂಬ ಕೇಂದ್ರ ಗೃಹಮಂತ್ರಿ ಕೆ.ಬ್ರಹ್ಮಾನಂದ ರೆಡ್ಡಿ ಅವರ ಉತ್ತರ ವಿರೋಧಪಕ್ಷದ ಸದಸ್ಯರಿಗೆ ತೃಪ್ತಿ ನೀಡಲಿಲ್ಲ.

ಬಲಿಷ್ಠ ಜಾತಿಗಳು ಜಾತಿಪ್ರಜ್ಞೆ ಹೊಂದುವುದು ತಮಗೆ ತಾವೇ ಮಾಡಿಕೊಳ್ಳುವ ಅವಮಾನ

ವಂಚಿತರ ಗೋಳು, ಬಾಯಿದ್ದವರ ಬೊಬ್ಬೆ



ವಿಶ್ಲೇಷಣೆ
ಪ್ರೊ. ಎಸ್.ಜಿ.ಸಿದ್ಧರಾಮಯ್ಯ

ಚಾತುರ್ವರ್ಣ ವ್ಯವಸ್ಥೆಯ ಕಾರಣದಿಂದಾಗಿ ಒಡೆದು ಛಿದ್ರಗೊಂಡಿರುವ ಮಾನವ ಸಮಾಜದಲ್ಲಿ ಸಮಾನತೆ ಎಂಬುದು ಕನಸಾಗಿದೆ. ಶಿಕ್ಷಣ, ಸಂಪನ್ಮೂಲ, ಭೂಒಡೆತನ, ರಾಜಕೀಯ ಅಧಿಕಾರ ಎಲ್ಲವುಗಳಿಂದಲೂ ವಂಚನೆಗೆ ಈಡಾಗಿರುವ ದನಿ ಇಲ್ಲದ ಸಣ್ಣಪುಟ್ಟ ಸಮುದಾಯಗಳ ದುಃಖ-ದುಮ್ಮಾನಗಳನ್ನು ಕೇಳುವವರೇ ಇಲ್ಲ. ಸರ್ವರ ಏಳಿಗೆಯನ್ನೂ ಹಾರೈಸಿ ಬಂದ ಸಂವಿಧಾನವನ್ನು ಈಗಿನ ಆಡಳಿತಗಳು ವಿರೂಪಗೊಳಿಸುತ್ತಿವೆ. ಯಾವುದೋ ಕಾಲಘಟ್ಟದಲ್ಲಿ ಮಾಡಿದ ಜಾತಿ ಜನಗಣತಿಯನ್ನು ಈಗಲೂ ಪರಿಗಣನೆಗೆ ತೆಗೆದುಕೊಂಡು ಸಾಮಾಜಿಕ ನ್ಯಾಯವನ್ನು ನೀಡತೊಡಗಿರುವುದು ಪ್ರಜಾಪ್ರಭುತ್ವದ ವ್ಯಂಗ್ಯವೇ ಸರಿ.

ಉಂಡವನು ಉಂಡೇ ತೇಗಿದ, ಹಸಿದವನು ಹಸಿದೇ ಸತ್ತ ಎಂಬಂತೆ ಆಗಿರುವುದು ವಂಚಿತ ಸಮುದಾಯಗಳ ದುರಂತ. ಕರ್ನಾಟಕದಲ್ಲೇ 52 ಅಲೆಮಾರಿ ಸಮುದಾಯಗಳಿದ್ದು ಅವುಗಳಿಗೆ ಇನ್ನೂ ಸರಿಯಾದ ವಿಳಾಸವಿಲ್ಲ. ಹೇಳಿಕೊಳ್ಳುವುದಕ್ಕೆ ಊರಾಗಲೀ ವಾಸಿಸುವುದಕ್ಕೆ ಒಂದು ಸೂರಾಗಲೀ ಇರದ ಸಣ್ಣಪುಟ್ಟ ಸಮುದಾಯಗಳು ಶಿಕ್ಷಣ, ಆಶ್ರಯ, ಭೂಮಿ, ಉದ್ಯೋಗ, ಮತಾಧಿಕಾರ... ಎಲ್ಲವುಗಳಿಂದಲೂ ವಂಚಿತವಾಗಿವೆ. ಇದರ ಜತೆಗೆ ಅವರು ಬಹುನಾಮಿಗಳಾಗಿರುವುದರಿಂದ, ಒಂದೊಂದು ಕಡೆ ಒಂದೊಂದು ಹೆಸರಿನಲ್ಲಿ ಅವರನ್ನು ಕರೆಯುತ್ತಿರುವುದರಿಂದ, ನಾಗರಿಕ ಸಮಾಜ ಅವರ ಗಣತಿ ಮಾಡುವಾಗ ಅವೈಜ್ಞಾನಿಕ ಲೆಕ್ಕಾಚಾರಗಳಾಗುತ್ತವೆ. ಇದನ್ನು ಹೇಳಿಕೊಳ್ಳುವುದಕ್ಕೂ ಅವರಿಗೆ ಬಾಯಿ ಇಲ್ಲ, ಬಲ ಮೊದಲೇ ಇಲ್ಲ. ಇಂಥ ಸಮುದಾಯಗಳು ಇನ್ನೂ ಮುಖ್ಯವಾಹಿನಿಗೆ ಬಾರದೇ ಇರುವುದು ನಮ್ಮ ರಾಜಕೀಯ ಸ್ವಾತಂತ್ರ್ಯದ ಸೋಲು. ಏಕೆಂದರೆ, ಸಾಂಸ್ಕೃತಿಕವಾಗಿ ಬಲಿಷ್ಠಗೊಂಡಿರುವ ಜಾತಿಗಳು ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ತಮ್ಮ ಜಹಗೀರು ಮಾಡಿಕೊಂಡಂತೆ ವರ್ತಿಸುತ್ತಿವೆ. ಮಠ-ಪೀಠಗಳು ಇದಕ್ಕೆ ತಾಳ ಹಾಕುತ್ತಾ ಪ್ರಜಾಪ್ರಭುತ್ವದಲ್ಲಿ ಜಾತೀಯತೆ, ಕೋಮುಪ್ರಜ್ಞೆ ಬೆಳೆಯುವುದಕ್ಕೆ ಕಾರಣವಾಗಿವೆ. ಹೀಗಾಗಿ, ಬಲಿಷ್ಠ ಜಾತಿಗಳ ಬೊಬ್ಬೆ, ಅಬ್ಬರ ಜಾಸ್ತಿಯಾಗಿ ಎಲ್ಲಾ ಜನಪರ ಯೋಜನೆಗಳು ಅಪವ್ಯಾಖ್ಯೆಗೆ ಈಡಾಗುತ್ತಿವೆ. ಸತ್ಯಸಂಗತಿ ಬೆಳಕಿಗೆ ಬಾರದೆ ಸಾಮಾಜಿಕ ನ್ಯಾಯ ಎಂಬುದು ಮಣ್ಣುಪಾಲಾಗಿದೆ.

ಜಾತಿ ವ್ಯವಸ್ಥೆಯ ಬಗ್ಗೆ ವೈಜ್ಞಾನಿಕ ದೃಷ್ಟಿಕೋನದ ಅಧ್ಯಯನ ನಡೆಸಿದ್ದ ಬಾಬಾಸಾಹೇಬ್ ಅಂಬೇಡ್ಕರ್ ಅವರು, ಅಸಮಾನತೆ ತೊಲಗಬೇಕಾದರೆ ವಂಚನೆಗೆ ಒಳಗಾಗಿರುವ ಸಮುದಾಯಗಳು ಶಿಕ್ಷಣ- ಸಂಘಟನೆ- ಹೋರಾಟಕ್ಕೆ ತೊಡಗಬೇಕಾದ ಅಗತ್ಯದ ಕುರಿತು ಮಾತನಾಡಿದ್ದಾರೆ. ಅವರು ಹೇಳುವ ಸಂಘಟನೆಯ ಅರ್ಥ ಅಸಂಘಟಿತವಾಗಿ ಎಲ್ಲದರಿಂದಲೂ ವಂಚನೆಗೆ ಒಳಗಾಗಿರುವ ಸಮುದಾಯಗಳಿಗೆ ಅನ್ವಯಿಸುವ ಮಾತು. ದುರ್ಬಲರ, ವಂಚಿತರ ನೈತಿಕ ಹಕ್ಕಿನ 'ಸಂಘಟನೆ'. ಅವರು ಸಂಘಟಿತರಾಗುವುದು ಜಾತಿಯ ವಿಷಬೀಜ ಬಿತ್ತುವುದಕ್ಕಾಗಿ ಅಲ್ಲ; ಜಾತಿಯ ವಿಷದಿಂದ ಹೊರಬರುವುದಕ್ಕಾಗಿ. ಆದ್ದರಿಂದಲೇ ಅವರ ಸಂಘಟನೆಯ ಉದ್ದೇಶದ ಹಿಂದೆ ಶಿಕ್ಷಣವಿದೆ, ಮುಂದೆ ಹೋರಾಟವಿದೆ. ಈ ಹೋರಾಟದ ಗುರಿ ತಮ್ಮ ಹಕ್ಕನ್ನು ತಾವು ಪಡೆಯಬೇಕಾಗಿರುವುದೇ ಆಗಿದೆ. ಹೀಗಾಗಿ, ವಂಚಿತರಿಗೆ ಸಂಘಟನೆ ಎಂಬುದು ನೈತಿಕ ಹಕ್ಕಾದರೆ ಬಲಿಷ್ಠರಿಗೆ ಸಂಘಟನೆಯಾಗಲು ನೈತಿಕ ಅಧಿಕಾರ ಇರುವುದಿಲ್ಲ.

ಈ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಬಲಿಷ್ಠರು, ಉಳ್ಳವರು ಉದಾರಿಗಳಾಗಿ ವರ್ತಿಸಬೇಕಾದ ಅಗತ್ಯವಿದೆ. ದನಿ ಇಲ್ಲದವರ ಪರವಾಗಿ ಯೋಚಿಸುವ ಮಾತೃಪ್ರಜ್ಞೆ ಬೆಳೆಸಿಕೊಳ್ಳುವ ಅಗತ್ಯವಿದೆ. ಅದನ್ನು ಬಿಟ್ಟು ಜಾತಿಪ್ರಜ್ಞೆ ಮೆರೆಯುವುದು ಬಲಿಷ್ಠ ಜಾತಿಗಳು ತಮಗೆ ತಾವೇ ಮಾಡಿಕೊಳ್ಳುವ ಅವಮಾನ. ತಮ್ಮತಮ್ಮ ಜಾತಿಗಳಲ್ಲಿ ಹುಟ್ಟಿ, ಜಾತಿಪ್ರಜ್ಞೆಯಿಂದ ಬಿಡುಗಡೆಗೊಂಡು ಮಹಾ ಮಾನವತಾವಾದಿಗಳಾಗಿ ಬೆಳೆದ ನಾಡಿನ ಮಹಾಚೇತನಗಳಿಗೆ ಮಾಡುವ ಅವಮಾನ.

ಬಸವಣ್ಣನವರು 'ಆನು ಹಾರುವನೆಂದಡೆ ಕೂಡಲಸಂಗಮದೇವ ನಗುವನಯ್ಯಾ' ಎಂದು ಜಾತಿ ಶ್ರೇಷ್ಠತೆಯ ಬಗ್ಗೆ ನಾಚಿಕೆಪಟ್ಟುಕೊಂಡವರು. ಉತ್ತಮಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದಿಂದ ಬಿಡುಗಡೆಗೊಂಡು, ಅಸ್ಪೃಶ್ಯರಮನೆಯ ಮಗನಾದರು. ಹೀಗೆ ಅಪವರ್ಣೀಕರಣ ಪ್ರಜ್ಞೆಯಲ್ಲಿ ಮಹಾ ಮಾನವತಾವಾದಿಯಾದರು. ಇಂದು ಪ್ರಬಲ ಜಾತಿಗಳಿಗೆ ಬಸವಣ್ಣನವರು ಮಾದರಿಯಾಗಬೇಕು. ಜಾತ್ಯತೀತ ರಾಷ್ಟ್ರದಲ್ಲಿ ಬಲಿಷ್ಠ ಜಾತಿಗಳು ಬಸವಪ್ರಜ್ಞೆಯಿಂದ ಬಾಳಿದಾಗ ಮಾತ್ರ ಸಾಮಾಜಿಕ ನ್ಯಾಯ ಸಾಧಿತವಾಗುತ್ತದೆ. ಅಂದರೆ ಪ್ರಬಲ ಜಾತಿಗಳ ಸಂಘಟನೆಗಳಿಗೆ ಈ ದೇಶದಲ್ಲಿ ಜಾತಿಯ ಹೆಸರಿನಲ್ಲಿ ಸಂಘಟಿತವಾಗುವುದಕ್ಕೆ ಯಾವುದೇ ನೈತಿಕ ಅಧಿಕಾರ ಇರುವುದಿಲ್ಲ. ಇದು ಕಾನೂನಾತ್ಮಕ ಅವಕಾಶದ ಪ್ರಶ್ನೆಯಲ್ಲ, ಮಾನವಾಂತಃಕರಣದ ಬಸವಪ್ರಜ್ಞೆಯ ಉತ್ತರದಾಯಿತ್ವ. ಕುವೆಂಪು ಅವರು ಪ್ರತಿಪಾದಿಸಿದ ಬಡವರ ಏಳ್ಗೆಯ ಮನುಜಮತ ವಿಶ್ವಪಥದ ಉತ್ತರದಾಯಿತ್ವ. ಕುಲ ಕುಲ ಕುಲವೆಂದು ಬಡಿದಾಡದಿರಿ ಎಂದ ಕನಕದಾಸರ ಉತ್ತರದಾಯಿತ್ವ... ಇಂಥ ಉತ್ತರದಾಯಿತ್ವಕ್ಕೆ ಭಾಜನವಾಗದೇ ಹೋದಾಗ ಯಾವುದೇ ಬಲಿಷ್ಠ ಜಾತಿ ಸಂಘಟನೆಗಳಿಗೆ ಆ ಮಹಾನುಭಾವರ ಹೆಸರನ್ನು ಹೇಳುವ ನೈತಿಕ ಅಧಿಕಾರ ಇಲ್ಲದೇ ಹೋಗುತ್ತದೆ.

ನಮ್ಮ ಬಹುತೇಕ ರಾಜಕಾರಣಿಗಳು, ಸ್ವಾಮೀಜಿಗಳು, ಬುದ್ಧಿಜೀವಿಗಳು ಜಾತ್ಯತೀತ ಎಂಬ ಪದವನ್ನು ಪದೇಪದೇ ಬಳಸುತ್ತಾರೆ. ಆದರೆ ಇವರೆಲ್ಲರೂ ಅದಕ್ಕೆ ವಿರುದ್ಧವಾಗಿ ಜಾತಿಯ ಕೂಪಮಂಡೂಕ ಸಂಘಟನೆಗಳು ಬೆಳೆಯುವುದಕ್ಕೆ ಬೆಂಬಲ ನೀಡುತ್ತಾರೆ. ಪ್ರಜಾಪ್ರಭುತ್ವ ಎಂಬುದು ಬಲಿಷ್ಠ ಜಾತಿಗಳ ಕೊಬ್ಬುವಿಕೆಗೆ ನೀರೆರೆಯುವುದಾದರೆ ದುರ್ಬಲ ಜಾತಿಗಳು, ಅಸಂಘಟಿತ ಜಾತಿಗಳ ಗೋಳನ್ನು ಕೇಳುವವರು ಯಾರು? ಈ ನೆಲೆಯಲ್ಲಿ ಜಾತಿ ಜನಗಣತಿ ಎಂಬುದು ಸಂವಿಧಾನಾತ್ಮಕ ತುರ್ತಿನ ಅಗತ್ಯವಾಗಿದೆ. ಇಂಥ ಅಗತ್ಯಪಾಲನೆಗೇ ಅಡ್ಡಬರುವ ದೊಡ್ಡ ಬಾಯಿಗಳಿಗೆ ವಿವೇಕ ಹೇಳುವವರಾರು? ವಿವೇಕ ಹೇಳಬೇಕಾದ ಶಾಸಕರು, ಸಂಸದರೇ ಜಾತಿ ಸಂಘರ್ಷಗಳಿಗೆ ಕುಮ್ಮಕ್ಕು ಕೊಡುತ್ತಿರುವಾಗ ಅವರ ನೈತಿಕ ನಡೆ ಪ್ರಶ್ನಾರ್ಹವಲ್ಲವೇ? ಒಂದೇ ಜಾತಿಯ ಶಾಸಕರು, ಸಂಸದರು ಒಂದೆಡೆ ಸೇರಿ, ಸಾಮಾಜಿಕ ನ್ಯಾಯದ ಪರವಾಗಿ ನಡೆಯುವ ಯಾವುದೇ ಕಾರ್ಯಕ್ರಮದ ವಿರುದ್ಧವಾಗಿ ಸಭೆ ನಡೆಸುವುದು ಸಂವಿಧಾನ ವಿರೋಧಿ ನಡೆಯಲ್ಲವೇ? ಜನತೆಗೆ ನೀತಿ ಹೇಳಬೇಕಾದ ಇವರೇ ನೀತಿಗೆಟ್ಟ ಸಂಘಟನೆಯಲ್ಲಿ ತೊಡಗಿದರೆ ಹೇಗೆ? ಸಂವಿಧಾನದ ಪ್ರಸ್ತಾವನೆಯನ್ನು ಪ್ರಮಾಣವಚನ ರೂಪದಲ್ಲಿ ಸಭೆ ಸಮಾರಂಭಗಳಲ್ಲಿ ಪಠಿಸುವುದಾದರೂ ಯಾಕೆ?

ಜಾತಿ ಜನಗಣತಿಗೆ ಆದೇಶ ಹೊರಡಿಸುವಾಗ ಯಾವ ಶಾಸಕರು, ಸಚಿವರು ಬೆಂಬಲ ಸೂಚಿಸಿದ್ದರೋ ಅವರೇ ಅದರ ಬಿಡುಗಡೆಗೆ ಅಡ್ಡಿಯಾಗುವುದು ಎಷ್ಟು ಸರಿ? ಅದು ಪ್ರಕಟವಾಗುವ ಮುಂಚೆಯೇ ಊಹಾಪೋಹಗಳ ಗಣತಿ ಲೆಕ್ಕಾಚಾರಗಳನ್ನು ಮುಂದಿಡುತ್ತಾ ವಿರೋಧಿಸುವುದು ಪ್ರಜಾಸತ್ತಾತ್ಮಕ ನಡವಳಿಕೆಯೇ? ಈ ಎಲ್ಲ ಪ್ರಶ್ನೆಗಳೂ ನೇರವಾಗಿ ಜಾತಿಪ್ರಜ್ಞೆಯ ಹಿತಾಸಕ್ತಿಯನ್ನು ಪ್ರಶ್ನಿಸುತ್ತಿರುವುದರಿಂದ ಅವರ ಉದ್ದೇಶ ಬಯಲಾಗುತ್ತಿದೆ.

ಜಾತಿ ಜನಗಣತಿ ಎಂಬುದು ಬರೀ ಜಾತಿಗಳ ಜನಸಂಖ್ಯಾ ಬಾಹುಳ್ಯವನ್ನು ಪ್ರಮಾಣೀಕರಿಸುವ ಲೆಕ್ಕಾಚಾರದ ಗಣತಿಯಲ್ಲ. ಶತಶತಮಾನಗಳಿಂದಲೂ ವಂಚನೆಗೊಳಗಾಗಿಯೂ ಸ್ವಾತಂತ್ರ್ಯಾನಂತರದ 78 ವರ್ಷಗಳ ಪ್ರಜಾಪ್ರಭುತ್ವದ ಅಡಿಯಲ್ಲಿಯೂ ಅದೇ ಅಸಮಾನತೆ, ಶೋಷಣೆ ಮುಂದುವರಿಯುತ್ತಿರುವುದನ್ನು ತಪ್ಪಿಸುವ ಪ್ರಾಥಮಿಕ ಪ್ರಯತ್ನವಿದು.

ಬಹುನಾಮಿಗಳಾಗಿರುವ ಅಲೆಮಾರಿ ಸಮುದಾಯಗಳ ಸಾಮ್ಯಪದನಾಮಧಾರಿಗಳಾಗಿರುವ ಪ್ರಬಲ ಜಾತಿಗಳ ಒಳಪಂಗಡದವರು ಈಗಿರುವ ಬಡ ಅಲೆಮಾರಿ, ದಲಿತ ಜಾತಿಗಳ ಮೀಸಲಾತಿಯ ತಟ್ಟೆಗೂ ಕೈಹಾಕಿ ಮೀಸಲಾತಿಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ತಪ್ಪಿಸುವಲ್ಲಿ ಜಾತಿ ಜನಗಣತಿ ಪ್ರಧಾನ ಪಾತ್ರ ವಹಿಸುತ್ತದೆ. ಆದರೆ ಈ ಎಲ್ಲಾ ಕಟು ವಾಸ್ತವಗಳನ್ನು ಬದಿಗಿರಿಸಿ, ಸಂಖ್ಯೆಗಳನ್ನು ಮಾತ್ರ ತೆಗೆದುಕೊಂಡು ಬೊಬ್ಬೆ ಹೊಡೆಯುವುದು ಎಷ್ಟು ಸರಿ? ಇಂತಹ ಅನ್ಯಾಯಗಳನ್ನು ತಪ್ಪಿಸಿ ಕಿಂಚಿತ್ ಪ್ರಮಾಣದಲ್ಲಿಯಾದರೂ ದುರ್ಬಲರ ಏಳಿಗೆಗೆ ದಾರಿ ಮಾಡಿಕೊಡಲಿರುವ ಜಾತಿ ಜನಗಣತಿಯ ಬಗ್ಗೆ ಸಂವಿಧಾನಾತ್ಮಕವಾಗಿ ಚರ್ಚೆಗೆ ಅವಕಾಶ ಮಾಡಿಕೊಡುವುದು ಪ್ರತಿ ನಾಗರಿಕನ ಕರ್ತವ್ಯ ಹಾಗೂ ಪ್ರತಿ ಜಾತಿ ಸಂಘಟನೆಯ ಆದ್ಯಕರ್ತವ್ಯ.

ಸಂವಾದ ಪ್ರಜಾಪ್ರಭುತ್ವದ ಗುಣ. ಯಾವುದೇ ವರದಿಯನ್ನೂ ವಾದ-ಪ್ರತಿವಾದದ ನೆಲೆಯಲ್ಲಿ ಪರಾಮರ್ಶಿಸಬೇಕಾದದ್ದು ಶಾಸನಸಭೆಯ ಕರ್ತವ್ಯ. ಈ ಕರ್ತವ್ಯಕ್ಕೆ ಅಡ್ಡಗಾಲು ಹಾಕುವ ಯಾವುದೇ ನಡೆಯೂ ಅಸಾಂವಿಧಾನಿಕ ನಡೆ, ಪ್ರಜಾಸತ್ತಾತ್ಮಕವಲ್ಲದ ನಡೆ.

ಚುರುಮುರಿ

ಸರ್ಕಾರಿ ಪ್ರಾಮಾಣಿಕತೆ!

• ಗುರು ಪಿ.ಎಸ್.

'ಇಲ್ನೋಡ್ರೀ... ನಮ್ ಸಿಎಂ ಸಾಹೇಬ್ರು ಎಂಥಾ ಜೋಕ್ ಮಾಡಿದ್ದಾರೆ' ಪೇಪರ್ ಓದುತ್ತಿದ್ದ ಹೆಂಡತಿ ಜೋರಾಗಿ ನಗುತ್ತಾ ನನ್ನನ್ನು ಕರೆದಳು.

'ಏನ್ ಜೋಕು, ಯಾಕಿಷ್ಟು ನಗ್ತಿದ್ದೀಯ?' ಎನ್ನುತ್ತ ಹತ್ತಿರ ಹೋದೆ.

'ನಮ್ ಸರ್ಕಾರಿ ನೌಕರರ ಪ್ರಾಮಾಣಿಕತೆಯಿಂದಲೇ ನಮ್ಮ ರಾಜ್ಯ ಇಷ್ಟೊಂದು ಪ್ರಗತಿ ಸಾಧಿಸಿದೆಯಂತೆ ರೀ'.

ನನಗೂ ನಗು ಬಂದರೂ ಅದನ್ನು ತೋರ್ಪಡಿಸದೆ, 'ರಾಜ್ಯದಲ್ಲಿ ಸರ್ಕಾರಿ ನೌಕರರು ಪ್ರಗತಿ ಸಾಧಿಸಿದ್ದಾರೆ ಎಂದಿರಬೇಕು ನೋಡು' ಎಂದೆ.

'ಹಾಗೆ ನಿಜ ಹೇಳಿದ್ದರೆ ಇಷ್ಟೊಂದು ನಗು ಬರುತ್ತಿರಲಿಲ್ಲ ಬಿಡಿ' ಎಂದಳು ಮತ್ತೆ ನಗುತ್ತಾ.

'ಇಷ್ಟೊಂದು ಅಣಕಿಸಬೇಡ, ಎಲ್ಲ ಸರ್ಕಾರಿ ನೌಕರರು ಅಪ್ರಾಮಾಣಿಕರಾಗಿರಲ್ಲ ತಿಳ್ಕೊ'.

'ಅಂದ್ರೆ, ಅರ್ಧಕ್ಕರ್ಧ ನೌಕರರು ಭ್ರಷ್ಟರು ಅಂತ ತಿಳ್ಕೊಬಹುದಾ?' ಮತ್ತೆ ವ್ಯಂಗ್ಯವಾಗಿ ಕೇಳಿದಳು.

'ಅಲ್ಲಲ್ಲ, ಅರ್ಧಕ್ಕರ್ಧದಷ್ಟು ನೌಕರರು ಪ್ರಾಮಾಣಿಕರು'.

ನನ್ನ ಉತ್ತರ ಕೇಳಿ ಮತ್ತೆ ನಗತೊಡಗಿದ ಹೆಂಡತಿ, 'ಮೂರ್ನಾಲ್ಕು ತಿಂಗಳಾದರೂ ಸ್ಯಾಲರಿ ಹಾಕಲಿಲ್ಲ ಅಂದ್ರೆ ಪಾಪ ಅವರಾದರೂ ಏನು ಮಾಡುತ್ತಾರೆ ಬಿಡಿ' ಎಂದಳು.

'ಸ್ಯಾಲರಿ ಲೇಟಾಗಿ ಬರುತ್ತೆ ಅಂದಮಾತ್ರಕ್ಕೆ ಎಲ್ಲರೂ ಲಂಚಕ್ಕೆ ಕೈ ಚಾಚುತ್ತಾರೆ ಅಂತ ಅರ್ಥವೇ?' ಸ್ವಲ್ಪ ಸಿಟ್ಟಿನಲ್ಲಿ ಕೇಳಿದೆ.

'ಹಾಗಲ್ಲ, ಹೂಡಿದ ಬಂಡವಾಳಕ್ಕೆ ಲಾಭ ನಿರೀಕ್ಷೆ ಮಾಡ್ತಾರೆ ಅಂದೆ'.

'ಅಂದ್ರೆ?'

'ಅಂದ್ರೆ, ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಪ್ರಾಧ್ಯಾಪಕ ಆಗೋಕೆ 50 ಲಕ್ಷ ರೂಪಾಯಿ ಲಂಚ ಕೊಡಬೇಕಂತೆ. ಹಾಗೆ, ಲಂಚ ಕೊಟ್ಟು ಪ್ರೊಫೆಸರ್ ಆದ ಮಹಾಶಯನಿಂದ ಪ್ರಾಮಾಣಿಕತೆ ನಿರೀಕ್ಷೆ ಮಾಡೋಕಾಗುತ್ತಾ?'

'ಒಟ್ನಲ್ಲಿ, ನಮ್ ಸಿಎಂ ಹೇಳಿಕೆ ನಿನಗೆ ಜೋಕ್ ಆಗಿಯೇ ಕಾಣ್ತಿದೆ ಅನ್ನು'.

'ಹೌದು ರೀ... ಪುಣ್ಯ, ಅವರು ನಮ್ಮ ರಾಜಕಾರಣಿಗಳ ಪ್ರಾಮಾಣಿಕತೆಯಿಂದ ರಾಜ್ಯ ಪ್ರಗತಿ ಸಾಧಿಸಿದೆ ಅಂತ ಹೇಳಿಲ್ಲ. ಹಾಗೆ ಹೇಳಿದ್ದರೆ ಇನ್ನೂ ದೊಡ್ಡ ಜೋಕ್ ಆಗಿರೋದು' ಎಂದಳು. ಇಬ್ಬರೂ ನಗತೊಡಗಿದೆವು.

ಸಂಗತ

ಬಲ್ಲವನೇ ಬಲ್ಲ ಓದಿನ ರುಚಿ

ಮೌಲ್ಯಯುತ ಪುಸ್ತಕಗಳನ್ನು ಓದುವವರ ಸಂಖ್ಯೆ ಹೆಚ್ಚಾಗಬೇಕಿದೆ

• ರಾಜಕುಮಾರ ಕುಲಕರ್ಣಿ

'ಪುಸ್ತಕಕ್ಕೂ ಒಂದು ದಿನವಿರುವುದು ಮಹತ್ವದ ಸಂಗತಿ. ಜನರಲ್ಲಿ ಈಗೀಗ ಪುಸ್ತಕಗಳ ಓದಿನ ಅಭಿರುಚಿ ಕ್ಷೀಣಿಸುತ್ತಿದೆ. ಮೊಬೈಲ್ ಫೋನ್ ಬಳಕೆಯಿಂದ ಯುವಜನ ಮಾತ್ರವಲ್ಲ ಎಲ್ಲ ವಯೋಮಾನದ ಓದುಗರೂ ಪುಸ್ತಕಗಳ ಓದಿನಿಂದ ವಿಮುಖರಾಗುತ್ತಿದ್ದಾರೆ. ಓದುಗರನ್ನು ಮತ್ತೆ ಪುಸ್ತಕಗಳತ್ತ ಕರೆತರಲು ಪುಸ್ತಕ ದಿನದ ಆಚರಣೆ ಈಗ ಹೆಚ್ಚು ಅಗತ್ಯವಾಗಿದೆ' ಎಂದು ಅಪಾರ ಪುಸ್ತಕಪ್ರೀತಿಯನ್ನು ಮೈಗೂಡಿಸಿಕೊಂಡಿರುವ ನನ್ನ ಮಿತ್ರರೊಬ್ಬರು ತುಂಬ ಕಳಕಳಿಯಿಂದ ಹೇಳಿದರು.

ಫೇಸ್‌ಬುಕ್ ಮತ್ತು ವಾಟ್ಸ್‌ಆ್ಯಪ್‌ನಲ್ಲಿ ಕಳೆದು ಹೋಗಿರುವವರಿಗೆ ಪುಸ್ತಕ ದಿನದ ಆಚರಣೆ ಇದೆ ಎನ್ನುವ ಅರಿವು ಇಲ್ಲವಾಗಿದೆ. ಪ್ರತಿವರ್ಷ ಏಪ್ರಿಲ್ 23ರಂದು 'ವಿಶ್ವ ಪುಸ್ತಕ ಮತ್ತು ಕೃತಿಸ್ವಾಮ್ಯ ದಿನ'ವನ್ನು ಆಚರಿಸಲಾಗುತ್ತದೆ. ಜನರಲ್ಲಿ ಪುಸ್ತಕಗಳ ಓದಿನ ಹವ್ಯಾಸವನ್ನು ಬೆಳೆಸುವ ಉದ್ದೇಶ ಈ ಆಚರಣೆಯ ಹಿಂದೆ ಇದೆ.

ಪುಸ್ತಕಗಳನ್ನು ಪ್ರಕಟಿಸಲು ಪ್ರಕಾಶನ ಸಂಸ್ಥೆಗಳಿವೆ. ಪ್ರಕಟಿತ ಪುಸ್ತಕಗಳನ್ನು ಓದುಗರಿಗೆ ತಲುಪಿಸಲೆಂದು ಪುಸ್ತಕ ಮಳಿಗೆಗಳು ಮತ್ತು ಗ್ರಂಥಾಲಯಗಳಿವೆ. ಪ್ರಕಟಿತ ಪುಸ್ತಕಗಳನ್ನು ವರ್ಣರಂಜಿತ ಸಮಾರಂಭಗಳಲ್ಲಿ ಬಿಡುಗಡೆ ಮಾಡಲಾಗುತ್ತಿದೆ. ಪ್ರಕಟಿತ ಪುಸ್ತಕಗಳ ಕುರಿತು ವಿಮರ್ಶೆಗಳು ಪ್ರಕಟವಾಗುತ್ತವೆ. ಈಗೀಗ ಲೇಖಕರೇ ಸಾಮಾಜಿಕ ಮಾಧ್ಯಮವನ್ನು ಬಳಸಿಕೊಂಡು ತಮ್ಮ ಪುಸ್ತಕಗಳ ಪ್ರಚಾರಕ್ಕಾಗಿ ಅಖಾಡಕ್ಕೆ ಇಳಿಯುತ್ತಿದ್ದಾರೆ. ರಾಜಧಾನಿ ಮಾತ್ರವಲ್ಲದೆ ಜಿಲ್ಲೆ, ತಾಲ್ಲೂಕು, ಹೋಬಳಿಗಳಲ್ಲೂ ಪುಸ್ತಕಗಳಿಗೆ ಪ್ರಶಸ್ತಿ ನೀಡುವ ಸಂಘ-ಸಂಸ್ಥೆಗಳು ತಲೆ ಎತ್ತಿವೆ. ಇಷ್ಟೆಲ್ಲ ಪ್ರಯತ್ನಗಳು ನಡೆಯುತ್ತಿರುವಾಗ ಪುಸ್ತಕಗಳ ಓದಿನ ವ್ಯಾಪ್ತಿ ವಿಸ್ತರಿಸಿದೆಯೇ ಎನ್ನುವ ಪ್ರಶ್ನೆಗೆ ಉತ್ತರ ಮಾತ್ರ ಆಶಾದಾಯಕವಾಗಿಲ್ಲ.

ನಮ್ಮಲ್ಲಿ ಗುಣಾತ್ಮಕ ಪುಸ್ತಕಗಳ ಪ್ರಕಟಣೆಗೆ ಆದ್ಯತೆ ಸಿಗುತ್ತಿಲ್ಲ. ಹೆಚ್ಚಿನ ಪ್ರಕಾಶಕರು ಕಳಪೆ ಗುಣಮಟ್ಟದ ಪುಸ್ತಕಗಳನ್ನು ಪ್ರಕಟಿಸಿ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ವಿಲೇವಾರಿ ಮಾಡುವುದರಲ್ಲೇ ಮಗ್ನರಾಗಿದ್ದಾರೆ. ಸಾರ್ವಜನಿಕ ಗ್ರಂಥಾಲಯಗಳು ಈ ಮೊದಲಿನಂತೆ ಸಮರ್ಪಕವಾಗಿ ಕಾರ್ಯನಿರ್ವಹಿಸದೆ ಪುಸ್ತಕಗಳನ್ನು ಸಂಗ್ರಹಿಸಿಡುವ ಗೋದಾಮುಗಳಾಗಿವೆ. ಓದುಗರ ಸಂಖ್ಯೆ ಕ್ಷೀಣಿಸುತ್ತಿರುವುದರಿಂದ ಪುಸ್ತಕ ಮಳಿಗೆಗಳು ಒಂದೊಂದಾಗಿ ಬಾಗಿಲು ಮುಚ್ಚುತ್ತಿವೆ. ವಿಮರ್ಶೆಗೆ ಕೊಡುಕೊಳ್ಳುವಿಕೆಯ ಮಾರುಕಟ್ಟೆ ಮೌಲ್ಯ ಪ್ರಾಪ್ತವಾಗಿರುವುದರಿಂದ ಟೊಳ್ಳು ಬರವಣಿಗೆ ಕೂಡ ಮೇಲ್ಪಂಕ್ತಿಗೆ ಬರುತ್ತಿದೆ.

ಪುಸ್ತಕದ ಜನಪ್ರಿಯತೆಯ ಮಾನದಂಡವಾಗಿ ಲೇಖಕರು ಹಲವು ಮುದ್ರಣವೆಂಬ ಗಿಮಿಕ್‌ನ ಮೊರೆ ಹೋಗಿದ್ದಾರೆ. ಪುಸ್ತಕವೊಂದು ಎಷ್ಟು ಪ್ರಮಾಣದಲ್ಲಿ ಓದಿಸಿಕೊಂಡಿದೆ ಎನ್ನುವುದನ್ನು ಅದರ ಆವೃತ್ತಿ ಸಂಖ್ಯೆಗಳನ್ನು ಆಧರಿಸಿ ಹೇಳಲು ಸಾಧ್ಯವಿಲ್ಲ. ಪುಸ್ತಕದ ಭೌತಿಕ ಸ್ವರೂಪವೇ ಅದನ್ನು ಹೇಳುತ್ತದೆ.

ಕೊರೊನಾ ವೈರಾಣು ಸೃಷ್ಟಿಸಿದ ಆತಂಕದ ಸನ್ನಿವೇಶದಲ್ಲಿ ಹಲವು ಉದ್ಯಮಗಳಂತೆ ಪುಸ್ತಕೋದ್ಯಮ ಕೂಡ ತನ್ನ ಮಗ್ಗುಲು ಬದಲಿಸಿತು. ಈ ಮೊದಲು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಿಗಷ್ಟೇ ಸೀಮಿತವಾಗಿದ್ದ ಇ-ಪುಸ್ತಕ ಎನ್ನುವ ಪರಿಕಲ್ಪನೆ ಕನ್ನಡ ಸಾಹಿತ್ಯ ಕ್ಷೇತ್ರಕ್ಕೂ ಕಾಲಿಟ್ಟಿತು. ಲಾಕ್‌ಡೌನ್ ಅವಧಿಯಲ್ಲಿ ಪುಸ್ತಕ ಪ್ರಕಟಣೆಯ ಕೆಲಸ ಸ್ಥಗಿತಗೊಂಡಿದ್ದರಿಂದ ಕೆಲವು ಪ್ರಕಾಶಕರು ಇ-ಪುಸ್ತಕದ ಮೊರೆ ಹೋದರು. ಕೆಲವು ಪ್ರಕಾಶಕರು ತಮ್ಮ ಪ್ರಕಾಶನದ ಪುಸ್ತಕಗಳನ್ನು 50 ಪ್ರತಿಶತ ರಿಯಾಯಿತಿ ದರದಲ್ಲಿ ಇ-ಪುಸ್ತಕ ರೂಪದಲ್ಲಿ ಓದುಗರಿಗೆ ಒದಗಿಸುವ ವ್ಯವಸ್ಥೆ ಮಾಡಿದರು. ಈ ಯೋಜನೆ ಅನೇಕ ಪ್ರಕಾಶಕರಿಗೆ ಸ್ಫೂರ್ತಿ ನೀಡಿತು.

ಪ್ರಕಾಶಕರು ಇ-ಪುಸ್ತಕದ ಕುರಿತು ಆಸ್ಥೆ ತಳೆಯಲು ಕಾರಣಗಳಿಲ್ಲದಿಲ್ಲ. ಪುಸ್ತಕ ಪ್ರಕಟಣೆಗಾಗಿ ಬಳಸುವ ಕಚ್ಚಾ ಸಾಮಗ್ರಿಗಳ ಬೆಲೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದರಿಂದ ಪ್ರಕಾಶಕರಿಗೆ ಪುಸ್ತಕ ಪ್ರಕಟಣೆ ಎನ್ನುವುದು ಆರ್ಥಿಕವಾಗಿ ಹೊರೆಯಾಗುತ್ತಿದೆ. ಕಾಗದ, ಮುದ್ರಣದ ಖರ್ಚು, ಲೇಖಕರಿಗೆ ಗೌರವಧನ, ಪುಸ್ತಕಗಳ ಸಾಗಣೆ ವೆಚ್ಚ ಇವನ್ನೆಲ್ಲ ಪ್ರಕಾಶಕರು ಭರಿಸಬೇಕಾಗಿದೆ.



ಸಾಹಿತ್ಯ ಕೃತಿಗಳನ್ನು ಪ್ರಕಟಿತ ಪುಸ್ತಕ ರೂಪದಲ್ಲಿ ಓದುವುದೇ ಚೆಂದದ ಸಂಗತಿ. ಅಲ್ಲಲ್ಲಿ ಸಾಲುಗಳ ಕೆಳಗೆ ಗೆರೆ ಎಳೆದು, ಪ್ರಶ್ನಾರ್ಥಕ ಚಿಹ್ನೆ ಮೂಡಿಸಿ, ಪಕ್ಕದ ಖಾಲಿಯಿರುವ ಮಾರ್ಜಿನ್‌ನಲ್ಲಿ ಟಿಪ್ಪಣಿ ಬರೆದು ಪುಸ್ತಕವನ್ನು ಓದಿದಾಗಲೇ ಅದರಲ್ಲಿನ ವಿಚಾರಗಳು ಅಂತರಾಳಕ್ಕೆ ಇಳಿಯಲು ಸಾಧ್ಯ ಎನ್ನುವ ಮನೋಭಾವದ ಓದುಗರ ಸಂಖ್ಯೆ ಬಹಳಷ್ಟಿದೆ. ಜೊತೆಗೆ ಕನ್ನಡ ಪುಸ್ತಕಗಳನ್ನು ಓದುವ ಓದುಗರ ವಯೋಮಾನವನ್ನು ಪರಿಗಣನೆಗೆ ತೆಗೆದುಕೊಂಡಾಗ ಅವರಲ್ಲಿ ವೃದ್ಧರು ಮತ್ತು ಮಧ್ಯವಯಸ್ಕರ ಸಂಖ್ಯೆಯೇ ಹೆಚ್ಚು. ಈ ವಯೋಮಾನದ ಓದುಗರನ್ನು ಇ-ಪುಸ್ತಕದ ಓದಿಗೆ ಹೊಂದಿಕೊಳ್ಳುವಂತೆ ಮಾಡುವುದು ಒಂದು ಸವಾಲಿನ ಕೆಲಸ. ಪುಸ್ತಕವನ್ನು ಕೈಯಲ್ಲಿ ಹಿಡಿದು ಅದರ ಹಾಳೆಗಳನ್ನು ಮಗುಚುತ್ತ ಓದುವಾಗ ದೊರೆಯುವ ಅನುಭೂತಿ ಅದೇ ಪುಸ್ತಕವನ್ನು ಕಂಪ್ಯೂಟರ್ ಪರದೆಯ ಮೇಲೆ ಓದುವಾಗ ಪ್ರಾಪ್ತವಾಗಲಾರದು.

ಲೇಖಕರು ಮತ್ತು ಪ್ರಕಾಶಕರು ಗಿಮಿಕ್‌ಗಳಿಂದ ಹೊರಬಂದು ಉತ್ತಮ ಕೃತಿಗಳನ್ನು ಓದುಗರಿಗೆ ನೀಡಬೇಕು. ಲೇಖಕರು, ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳ ಏನೆಲ್ಲ ವರಸೆಗಳ ನಡುವೆಯೂ ಓದುಗರು ಮೌಲ್ಯಯುತ ಪುಸ್ತಕಗಳನ್ನು ಓದಿಗಾಗಿ ಆಯ್ಕೆ ಮಾಡಿಕೊಳ್ಳುತ್ತಿರುವುದು ಸಂತಸದ ಸಂಗತಿ. ನಿರಾಸೆ ಎಂದರೆ ಇಂತಹ ಮನೋಭಾವದ ಓದುಗರ ಸಂಖ್ಯೆ ನಿರೀಕ್ಷಿತ ಪ್ರಮಾಣದಷ್ಟು ಇಲ್ಲ. ಲೇಖಕರು, ಪ್ರಕಾಶಕರು, ಪುಸ್ತಕ ವ್ಯಾಪಾರಿಗಳು ಮತ್ತು ಗ್ರಂಥಾಲಯಗಳು ಈ ದಿಸೆಯಲ್ಲಿ ಸಂಘಟಿತ ಪ್ರಯತ್ನ ಮಾಡಬೇಕಿದೆ. ಈ ಮೂಲಕ ಅತ್ಯುತ್ತಮ ಪುಸ್ತಕಗಳು ಪ್ರಕಟವಾಗಿ, ಸದಭಿರುಚಿಯ ಓದುಗರ ಸಂಖ್ಯೆ ಹೆಚ್ಚಿ 'ವಿಶ್ವ ಪುಸ್ತಕ ದಿನ'ದ ಆಚರಣೆ ಸಾರ್ಥಕವಾಗಲಿ.

ವಾಚಕರ ವಾಣಿ

ಪಹಲ್ಗಾಮ್ ಪ್ರಕರಣ: ಪ್ರತಿಕ್ರಿಯೆ ಗಂಭೀರವಾಗಿರಲಿ

ಕಾಶ್ಮೀರದ ಪಹಲ್ಗಾಮ್ ಬಳಿಯ ಕಣಿವೆಯಲ್ಲಿ ಉಗ್ರರಿಂದ ನಡೆದಿರುವ ಪ್ರವಾಸಿಗರ ಹತ್ಯೆ ಮಾನವ ಕುಲವನ್ನೇ ನಡುಗಿಸುವಷ್ಟು ಭೀಕರವಾದುದು. ಇದಕ್ಕೆ ಸರ್ಕಾರ ನೀಡುವ ಪ್ರತಿಕ್ರಿಯೆಯೂ ಅಷ್ಟೇ ಗಂಭೀರವಾಗಿ ಇದ್ದಾಗ ಮಾತ್ರ ಹತ್ಯೆಯಾದ ಅಮಾಯಕ ಜೀವಗಳಿಗೆ ನ್ಯಾಯ ಒದಗಿಸಿದಂತೆ ಆಗುತ್ತದೆ. ಕಾಶ್ಮೀರದಾದ್ಯಂತ ಹರಡಿರುವ ಉಗ್ರರನ್ನು ಹಾಗೂ ಅವರ ಕೃತ್ಯಕ್ಕೆ ಬೆಂಬಲ ನೀಡುವ ಆಂತರಿಕ ದ್ರೋಹಿಗಳನ್ನು ತ್ವರಿತಗತಿಯಲ್ಲಿ ಹತ್ತಿಕ್ಕಬೇಕು. ಉಗ್ರರು ಇಷ್ಟು ರಾಜಾರೋಷವಾಗಿ ಓಡಾಡುತ್ತಾ ಇಂತಹ ಕೃತ್ಯ ಎಸಗುತ್ತಾರೆ ಎಂದರೆ, ಅಲ್ಲಿನ ಆಡಳಿತದ ಲೋಪವೂ ಎದ್ದು ಕಾಣುತ್ತದೆ. ಈ ಎಲ್ಲಾ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಿ ಕಟ್ಟುನಿಟ್ಟಿನ ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕು.

ಸಚಿನ್ ಹೊಳೆಹದ್ದು, ಶೃಂಗೇರಿ

ಚಿಪ್ ಜೋಡಿಸಿದರೆ ಹಾರ್ನ್ ಗಪ್‌ಚಿಪ್

ತಲೆಚಿಟ್ಟು ಹಿಡಿಸಬಲ್ಲ ಹಾರ್ನ್‌ಗಳ ಬಗ್ಗೆ ನರರೋಗತಜ್ಞ ಡಾ. ಸುಧೀರ್ ಕುಮಾರ್ ತುಂಬ ಮಹತ್ವದ ಪ್ರಶ್ನೆಯನ್ನು ಎತ್ತಿದ್ದಾರೆ (ದಿನದ ಟ್ವೀಟ್- ಏ. 23). ಅನಗತ್ಯವಾಗಿ ಹಾರ್ನ್ ಮಾಡುವುದನ್ನು ನಿಷೇಧಿಸುವ ಕಾನೂನು ಯಾವಾಗ ಬಂದೀತೊ ಎಂದು ಅವರು ವ್ಯಥಿಸಿದ್ದಾರೆ. ಅಂಥ ಕಾನೂನುಗಳು ಬಂದರೂ ಅವನ್ನು ಜಾರಿಗೆ ತರುವುದು ಈ ಭ್ರಷ್ಟರ ದೇಶದಲ್ಲಿ ಅದೆಷ್ಟು ಕಷ್ಟ ಎಂಬುದನ್ನು ನಾವು ಪ್ಲಾಸ್ಟಿಕ್ ಮಾಲಿನ್ಯದ ವಿಷಯದಲ್ಲಿ ನೋಡಿದ್ದೇವೆ. ಆದರೆ ನಿಲ್ಲಿ; ಹಾರ್ನ್ ಬಳಕೆಯನ್ನು ತಗ್ಗಿಸಲು ತುಂಬ ಸುಲಭದ ಸೂತ್ರ ಇದೆಯೆಂದು ನನ್ನ ಟೆಕಿ ಗೆಳೆಯನೊಬ್ಬ ಹೇಳುತ್ತಾನೆ. ಅದೇನೆಂದರೆ, ತಿಂಗಳಿಗೆ ಇಂತಿಷ್ಟೇ ಬಾರಿ ಹಾರ್ನ್ ಬಳಸಬೇಕೆಂಬ 'ಕೋಟಾ' ನಿಗದಿ ಮಾಡಬೇಕು. ಅದಕ್ಕೆಂದು ಸಿಮ್ ಕಾರ್ಡ್ ಮಾದರಿಯ ಚಿಪ್ ಅಳವಡಿಕೆಯ ನಿಯಮವನ್ನು ಸಾರಿಗೆ ಇಲಾಖೆ ಜಾರಿಗೆ ತಂದು ಹಾರ್ನ್‌ಗೆ ಕಡ್ಡಾಯ ಜೋಡಿಸಬೇಕು. ಅವಧಿ ಮುಗಿದ ನಂತರದ ರೀಚಾರ್ಜ್ ಶುಲ್ಕ ತುಂಬ ದುಬಾರಿಯದಾಗಿರಬೇಕು. ಆಗ ಚಾಲಕರು ಹಾರ್ನ್ ಬಳಕೆಯಲ್ಲಿ ಮಿತವ್ಯಯ ಸಾಧಿಸಬಹುದು. ಇಂಥ ಟೆಕ್ ಸಾಧನಗಳು ಭ್ರಷ್ಟ ವ್ಯವಸ್ಥೆಯನ್ನು ತಕ್ಕಮಟ್ಟಿಗೆ ಮಟ್ಟ ಹಾಕಿರುವುದನ್ನು ನಾವು ಸಾರಿಗೆ ಇಲಾಖೆಯಲ್ಲಿ ಆಗಲೇ ನೋಡುತ್ತಿದ್ದೇವೆ ತಾನೆ?

ನಾಗೇಶ ಹೆಗಡೆ, ಕೆಂಗೇರಿ

ದ್ವಿಭಾಷಾ ಸೂತ್ರಕ್ಕೆ ಶರಣಾದ ಮಹಾರಾಷ್ಟ್ರ

ಮಹಾರಾಷ್ಟ್ರ ಸರ್ಕಾರವು ಕೇಂದ್ರದ ತ್ರಿಭಾಷಾ ಸೂತ್ರಕ್ಕೆ ಮಣೆಹಾಕಿ, ರಾಜ್ಯದಲ್ಲಿ ಮರಾಠಿ ಮತ್ತು ಇಂಗ್ಲಿಷ್ ಭಾಷೆಗಳೊಂದಿಗೆ ಹಿಂದಿಯನ್ನು 5ನೇ ತರಗತಿಯವರೆಗೆ ಕಡ್ಡಾಯ ಮಾಡಿ ವಾರದ ಹಿಂದಷ್ಟೇ ಹೊರಡಿಸಿದ್ದ ತನ್ನ ಆದೇಶವನ್ನು ಹಿಂತೆಗೆದುಕೊಂಡು, ಮರಾಠಿ, ಇಂಗ್ಲಿಷ್ ದ್ವಿಭಾಷಾ ಸೂತ್ರವನ್ನು ಅನುಷ್ಠಾನಗೊಳಿಸಲು ಮುಂದಾಗಿದೆ. ಹಿಂದಿ ಭಾಷೆಯನ್ನು ಕಡ್ಡಾಯಗೊಳಿಸುವುದರಿಂದ ಮರಾಠಿ ಭಾಷೆಗೆ ಹಿನ್ನಡೆ ಆಗಬಹುದು ಎನ್ನುವ ದೂರಗಾಮಿ ಯೋಚನೆಯಿಂದ ಮಹಾರಾಷ್ಟ್ರೀಯರು ಬಲವಂತದ ಹಿಂದಿ ಹೇರಿಕೆಯನ್ನು ವಿರೋಧಿಸಿದ್ದರು. ಈ ವಿರೋಧ ಎಷ್ಟು ತೀವ್ರವಾಗಿತ್ತೆಂದರೆ, ಪರಸ್ಪರ ಬದ್ಧವೈರಿಗಳಾದ ರಾಜ್ ಠಾಕ್ರೆ ಮತ್ತು ಉದ್ಧವ್ ಠಾಕ್ರೆ ಅವರು ಮರಾಠಿ ಅಸ್ಮಿತೆಯ ಹೆಸರಿನಲ್ಲಿ ಕೈಜೋಡಿಸಿದ್ದರು.

ಕರ್ನಾಟಕದಲ್ಲಿ ಕೂಡ ಈ ಸೂತ್ರದ ಬಗೆಗೆ ವಿರೋಧ ವ್ಯಕ್ತವಾಗಿದ್ದು, ಸಿದ್ದರಾಮಯ್ಯ ಅವರು ತ್ರಿಭಾಷಾ ಸೂತ್ರ ಮತ್ತು ಹಿಂದಿ ಹೇರಿಕೆಯನ್ನು ಖಡಾಖಂಡಿತವಾಗಿ ವಿರೋಧಿಸಿದ್ದಾರೆ. ಭಾಷಾ ವಿವಾದ ತಲೆ ಎತ್ತಿದಾಗೆಲ್ಲ ಬರೀ ದಕ್ಷಿಣದ ರಾಜ್ಯಗಳನ್ನು, ಅದರಲ್ಲೂ ಮುಖ್ಯವಾಗಿ ತಮಿಳುನಾಡನ್ನು ದ್ವೇಷಿಸುತ್ತಿದ್ದವರ ಬಾಯಿ ಈಗ ಮುಚ್ಚಿದೆ.

ರಮಾನಂದ ಎಸ್., ಬೆಂಗಳೂರು

ಆಸ್ತಿ ತೆರಿಗೆ ಪಾವತಿ: ಅವಧಿ ವಿಸ್ತರಣೆಯಾಗಲಿ

ಪ್ರತಿವರ್ಷ ಏಪ್ರಿಲ್‌ನಲ್ಲಿ ಆಯಾ ವರ್ಷದ ಆಸ್ತಿ ತೆರಿಗೆ ಪಾವತಿ ಶುರುವಾಗುತ್ತದೆ. ತೆರಿಗೆ ಪಾವತಿ ಮಾಡಲು ಏಪ್ರಿಲ್‌ನಲ್ಲಿ ಶೇಕಡ 5ರಷ್ಟು ರಿಯಾಯಿತಿ ಇರುವುದರಿಂದ ಬಹಳಷ್ಟು ಜನ ಈ ತಿಂಗಳು ತೆರಿಗೆಯನ್ನು ಪಾವತಿಸುತ್ತಾರೆ. ಆದರೆ ಸಾಮಾನ್ಯವಾಗಿ ಏಪ್ರಿಲ್‌ನಲ್ಲಿ ಭಾನುವಾರಗಳು ಮತ್ತು ಮಹಾವೀರ ಜಯಂತಿ, ಅಂಬೇಡ್ಕರ್ ಜಯಂತಿ, ಬಸವ ಜಯಂತಿ, ಗುಡ್‌ಫ್ರೈಡೆ ಒಳಗೊಂಡಂತೆ ಅನೇಕ ರಜಾ ದಿನಗಳು ಇರುತ್ತವೆ. ಹಾಗಾಗಿ, ಈ ತಿಂಗಳು ಹೆಚ್ಚೆಂದರೆ 20 ಅಥವಾ 21 ದಿನ ಮಾತ್ರ ಕೆಲಸದ ದಿನಗಳಾಗಿರುತ್ತವೆ.

ರಿಯಾಯಿತಿ ದರದಲ್ಲಿ ತೆರಿಗೆಯನ್ನು ಪಾವತಿಸಲು ಈ ಒಂದು ತಿಂಗಳ ಬದಲಾಗಿ ಮೇ 15ರವರೆಗೆ ಈ ಅವಧಿಯನ್ನು ವಿಸ್ತರಿಸಿದರೆ ಜನರಿಗೆ ಅನುಕೂಲವಾಗುತ್ತದೆ. ವಿಶೇಷವಾಗಿ ಇನ್ನೂ ಆನ್‌ಲೈನ್ ಪಾವತಿ ಚಾಲ್ತಿಗೆ ಬಂದಿರದ ಊರುಗಳ ಜನರಿಗೆ ಮತ್ತಷ್ಟು ಒಳಿತಾಗುತ್ತದೆ.

ಆಶಾ ಅಪ್ರಮೇಯ, ದಾವಣಗೆರೆ

ಫಲಿತಾಂಶದಲ್ಲಿ ಹಿನ್ನಡೆ: ಕಾರಣ ನೂರೆಂಟು

ಮಕ್ಕಳು ಮತ್ತು ಪೋಷಕರು ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಆರಿಸಿಕೊಳ್ಳುವುದಕ್ಕೆ ಸರ್ಕಾರಿ ಕಾಲೇಜುಗಳ ಫಲಿತಾಂಶವೇ ಕಾರಣ ಎಂದು ಕೆ.ಎನ್.ರಂಗನಾಥ್ ಅಭಿಪ್ರಾಯಪಟ್ಟಿದ್ದಾರೆ (ವಾ.ವಾ., ಏ. 22). ಖಾಸಗಿ ಕಾಲೇಜುಗಳು ಎಸ್‌ಎಸ್‌ಎಲ್‌ಸಿ ಫಲಿತಾಂಶ ಬರುವ ಮುನ್ನವೇ ಪೋಷಕರನ್ನು ಸಂಪರ್ಕಿಸಿ, ಅತಿಹೆಚ್ಚು ಅಂಕ ಪಡೆಯುವ ಸಾಧ್ಯತೆಯುಳ್ಳ ವಿದ್ಯಾರ್ಥಿಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಇದಕ್ಕೆ ಶುಲ್ಕ ರಿಯಾಯಿತಿಯ ಕೊಡುಗೆಯನ್ನು ನೀಡುತ್ತಾರೆ! ಇವರು ಆರಿಸಿಕೊಂಡ ಬಳಿಕ ಉಳಿಯುವ ಮಕ್ಕಳು ಅನಿವಾರ್ಯವಾಗಿ ಸರ್ಕಾರಿ ಕಾಲೇಜಿಗೆ ದಾಖಲಾಗುತ್ತಾರೆ. ಹಾಗಾಗಿ, ಸರ್ಕಾರಿ ಕಾಲೇಜುಗಳ ಫಲಿತಾಂಶದಲ್ಲಿ ಹಿನ್ನಡೆಯಾಗುವುದು ಸಹಜ.

ಪ್ರಥಮ ಪಿಯುಸಿಗೆ ದಾಖಲು ಮಾಡಿಕೊಂಡ ಬಳಿಕ ಕಲಿಕೆಯಲ್ಲಿ ಹಿಂದುಳಿದಿದ್ದಾರೆ ಎಂಬ ಕಾರಣ ಕೊಟ್ಟು ವರ್ಗಾವಣೆ ಪತ್ರ ಕೊಟ್ಟು ಕಳುಹಿಸುವ ಖಾಸಗಿ ಕಾಲೇಜುಗಳೂ ಇವೆ. ಮುಂದಿನ ವರ್ಷ ದ್ವಿತೀಯ ಪಿಯುಸಿಯಲ್ಲಿ ಕಾಲೇಜು ಶೇ 100ರಷ್ಟು ಫಲಿತಾಂಶ ಪಡೆಯುವುದಕ್ಕೆ ಇಂತಹ ವಿದ್ಯಾರ್ಥಿಗಳು ತೊಡರಾಗಬಹುದು ಎಂಬುದು ಇದರ ಹಿಂದಿರುವ ಉದ್ದೇಶ. ಹೀಗೆ ಮಾಡುವುದರಿಂದ ಮಕ್ಕಳ ಮನಸ್ಸಿನ ಮೇಲೆ ಎಂತಹ ಪರಿಣಾಮ ಉಂಟಾಗುತ್ತದೆ ಎಂಬುದರ ಬಗ್ಗೆ ಕಾಲೇಜುಗಳು ಕಿಂಚಿತ್ತೂ ಯೋಚಿಸುವುದಿಲ್ಲ.

ಮಂಜುನಾಥ ಕೇಶವ್, ಕೆ.ಆರ್.ಪೇಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾಶ್ಮೀರ

ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯ ಅಡಿಯಲ್ಲಿ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು 2019ರಲ್ಲಿ ರದ್ದುಪಡಿಸಲಾಗಿದೆ. ಅದರ ನಂತರ ಭಯೋತ್ಪಾದನಾ ಚಟುವಟಿಕೆ ಕಡಿಮೆ ಆಗಿದೆ ಎಂದೇ ಕೇಂದ್ರ ಸರ್ಕಾರ ಪ್ರತಿಪಾದಿಸಿತ್ತು. ಇದರ ನಡುವೆ, ಭಯೋತ್ಪಾದಕರು ಕಾಶ್ಮೀರವನ್ನು ಬಿಟ್ಟು ಜಮ್ಮು ಕಡೆಗೆ ಹೆಚ್ಚು ಗಮನಹರಿಸತೊಡಗಿದ್ದರು. ಆದರೆ, ಈಗ ಪಹಲ್ಗಾಮ್‌ನಲ್ಲಿ ನಡೆದಿರುವ ದಾಳಿ ಕಾಶ್ಮೀರದ ಪ್ರವಾಸೋದ್ಯಮ, ಉದ್ಯಮ ವಲಯಗಳು ಮತ್ತು ಜನರ ಜೀವನದ ಮೇಲೆ ಗಂಭೀರ ಪರಿಣಾಮ ಬೀರಬಹುದು

ಬದುಕು ಕಸಿದ ಉಗ್ರರು

ಪ್ರಜಾವಾಣಿ ವಾರ್ತೆ

ಜಮ್ಮು ಮತ್ತು ಕಾಶ್ಮೀರದಲ್ಲಿ ಆರು ದಶಕಗಳಿಂದ ಭಯೋತ್ಪಾದನಾ ಚಟುವಟಿಕೆಗಳು ನಡೆಯುತ್ತಿವೆ. ಈ ಪೈಕಿ ಹೆಚ್ಚು ದಾಳಿಗಳು ನಡೆದದ್ದು, ಸಾವು–ನೋವು ಸಂಭವಿಸಿದ್ದು ಕಾಶ್ಮೀರದಲ್ಲಿ. ಆದರೆ, 2019ರಲ್ಲಿ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದಾದ ನಂತರ ಕೇಂದ್ರಾಡಳಿತ ಪ್ರದೇಶವಾದ ಕಣಿವೆ ಪ್ರದೇಶದಲ್ಲಿ ಉಗ್ರರ ಉಪಟಳ ಕಡಿಮೆಯಾಗಿ ಸಹಜ ಸ್ಥಿತಿ ಮರುಕಳಿಸುತ್ತಿದೆ ಎಂಬಂತೆ ಭಾಸವಾಗಿತ್ತು, ಅದಕ್ಕೆ ಪೂರಕವೆಂಬಂತೆ ಅಲ್ಲಿ ಆರ್ಥಿಕ, ಪ್ರವಾಸೋದ್ಯಮ ಚಟುವಟಿಕೆಗಳು ಗರಿಗೆದರಿದ್ದವು.

ಆದರೆ, ವಿಶೇಷ ಸ್ಥಾನಮಾನ ರದ್ದಾದ ಬಳಿಕ ಭಯೋತ್ಪಾದಕರು ತಮ್ಮ ಕಾರ್ಯತಂತ್ರ ಬದಲಿಸಿದ್ದರು. ಕಾಶ್ಮೀರವನ್ನು ಬಿಟ್ಟು ಜಮ್ಮುವಿನಲ್ಲಿ ದಾಳಿಗಳನ್ನು ನಡೆಸತೊಡಗಿದರು. 2021ರಿಂದ ಜುಲೈ 2024ರವರೆಗೆ ಜಮ್ಮುವಿನ ವಿವಿಧ ಭಾಗಗಳಲ್ಲಿ 33 ಉಗ್ರ ದಾಳಿಗಳು ನಡೆದಿದ್ದವು. 2024ರ ಮಧ್ಯಭಾಗದವರೆಗೆ ಜಮ್ಮುವಿನಲ್ಲಿ ಎಂಟು ದಾಳಿಗಳು ನಡೆದು, 11 ಮಂದಿ ಸಾವಿಗೀಡಾಗಿದ್ದರು; ವರ್ಷದ ಮೊದಲ ಆರು ತಿಂಗಳಲ್ಲಿ ನಡೆದ ದಾಳಿಗಳಿಂದ 12 ಮಂದಿ ನಾಗರಿಕರು ಪ್ರಾಣ ಕಳೆದುಕೊಂಡಿದ್ದರು. ಜಮ್ಮು ಮತ್ತು ಕಾಶ್ಮೀರದಲ್ಲಿದ್ದ ಕೆಲವು ಸೈನಿಕರನ್ನು ಚೀನಾದ ಗಡಿಗೆ ಕಳಿಸಿದ್ದು ಕೂಡ ಇಲ್ಲಿ ಉಗ್ರ ಚಟುವಟಿಕೆಗಳ ಹೆಚ್ಚಳಕ್ಕೆ ಕಾರಣ ಎನ್ನಲಾಗಿತ್ತು.

ಭದ್ರತಾ ಪಡೆಗಳನ್ನು ತಪ್ಪು ದಾರಿಗೆಳೆಯುವುದು, ಗುಪ್ತಚರ ಅಧಿಕಾರಿಗಳ ದಿಕ್ಕುತಪ್ಪಿಸುವುದು ಸೇರಿದಂತೆ ಉಗ್ರರ ಹಲವು ತಂತ್ರಗಾರಿಕೆ ಇದರ ಹಿಂದಿತ್ತು. ಕಾಶ್ಮೀರಕ್ಕೆ ಹೋಲಿಸಿದರೆ, ಜಮ್ಮುವಿನಲ್ಲಿ ಕಡಿಮೆ ಸೇನಾ ನಿಯೋಜನೆ ಇದ್ದದ್ದು ಕೂಡ ಅಲ್ಲಿ ಉಗ್ರ ಚಟುವಟಿಕೆಗಳು ಹೆಚ್ಚಾಗಲು ಕಾರಣವಾಗಿತ್ತು. ಆದರೆ, ಈಗ ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್‌ನಲ್ಲಿ ನಡೆದಿರುವ ಭೀಕರ ದಾಳಿಯು, ಉಗ್ರರು ಮತ್ತೆ ಕಾಶ್ಮೀರದತ್ತ ದೃಷ್ಟಿ ನೆಟ್ಟಿರಬಹುದೇ ಎನ್ನುವ ಅನುಮಾನ ಮೂಡಿಸುತ್ತಿದೆ.

ಪಹಲ್ಗಾಮ್ ದಾಳಿಗೂ ಪಾಕಿಸ್ತಾನಕ್ಕೂ ಇರಬಹುದಾದ ಸಂಬಂಧದ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಕಳೆದ ವಾರ, ಏ.17ರಂದು ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸೀಮ್ ಮುನೀರ್ ದ್ವಿರಾಷ್ಟ್ರ ಸಿದ್ಧಾಂತದ ಬಗ್ಗೆ ಮಾತನಾಡುತ್ತಾ, ಹಿಂದೂ ಹಾಗೂ ಮುಸ್ಲಿಂ ಧರ್ಮಗಳು ಹೇಗೆ ಭಿನ್ನ ಎಂದು ವಿವರಿಸಿದ್ದರು. ಕಾಶ್ಮೀರ ಎಂದೆಂದಿಗೂ ಪಾಕಿಸ್ತಾನದ 'ಕಂಠನಾಳ' ಎಂದಿದ್ದರು. ಅವರ ಈ ಮಾತಿಗೂ ಪಹಲ್ಗಾಮ್ ದಾಳಿಗೂ ನಂಟು ಇದೆ ಎನ್ನಲಾಗುತ್ತಿದೆ. ಪಾಕಿಸ್ತಾನವು ಆಂತರಿಕ ಸಂಘರ್ಷ ಮತ್ತು ಆರ್ಥಿಕ ಕುಸಿತದಂತಹ ತೀವ್ರ ಸಮಸ್ಯೆಗಳನ್ನು ಎದುರಿಸುತ್ತಿದೆ. ಅಲ್ಲಿನ ಜನರ ವಿಶ್ವಾಸ ಗಳಿಸುವ ಸಲುವಾಗಿ ಸೇನೆ ಮತ್ತು ರಾಜಕಾರಣಿಗಳು ಕಾಶ್ಮೀರ ವಿವಾದವನ್ನು ಜೀವಂತವಾಗಿಡಲು ಬಯಸುತ್ತಿದ್ದು, ಅದರ ಭಾಗವಾಗಿಯೇ ಕಾಶ್ಮೀರದಲ್ಲಿ ಉಗ್ರ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತಿದ್ದಾರೆ ಎನ್ನಲಾಗಿದೆ.

ಅದರ ಮಾರನೇ ದಿನ, ಏ. 18ರಂದು ಪಾಕ್ ಆಕ್ರಮಿತ ಕಾಶ್ಮೀರದ ರಾವಲ್‌ಕೋಟ್‌ನಲ್ಲಿ ಭಾರತದ ಸೇನೆಯಿಂದ ಹತರಾದ ಇಬ್ಬರು ಉಗ್ರರ ಸ್ಮರಣಾರ್ಥ ನಡೆದ ರ‍್ಯಾಲಿಯಲ್ಲಿ ಲಷ್ಕರ್ ಕಮಾಂಡರ್ ಅಬು ಮೂಸಾ, 'ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ ಭಾರತದ ವಿರುದ್ಧ ಪ್ರತೀಕಾರ ತೆಗೆದುಕೊಳ್ಳಬೇಕು; ಕಾಶ್ಮೀರದಲ್ಲಿ ರಕ್ತಪಾತ ನಡೆಸಬೇಕು' ಎಂದು ಕರೆ ನೀಡುವ ಮೂಲಕ ಪ್ರಚೋದನಕಾರಿಯಾಗಿ ಮಾತನಾಡಿದ್ದ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಇಂಥ ಮಾತುಗಳೇ ಪಹಲ್ಗಾಮ್ ದಾಳಿಗೆ ಪ್ರೇರಣೆಯಾಗಿರಬಹುದು ಎನ್ನಲಾಗುತ್ತಿದೆ.

ಭಯೋತ್ಪಾದಕರು ದಾಳಿ ನಡೆಸಿದ ಬೈಸರನ್ ಕಣಿವೆಯಲ್ಲಿರುವ ಮಳಿಗೆಯೊಂದರ ಮುಂಭಾಗ ಬುಧವಾರ ಭದ್ರತಾ ಸಿಬ್ಬಂದಿ ಪರಿಶೀಲನೆ ನಡೆಸಿದರು –ಪಿಟಿಐ ಚಿತ್ರ

ಕಾಡುವ ಪ್ರಶ್ನೆಗಳು

- ಗುಪ್ತಚರ, ಭದ್ರತಾ ವೈಫಲ್ಯದಿಂದ ಉಗ್ರರ ದಾಳಿ ನಡೆದಿದೆಯೇ?
- ಪರಿಸ್ಥಿತಿ ಸಹಜ ಸ್ಥಿತಿಗೆ ಬಂದಿದೆ ಎಂದು ಸರ್ಕಾರ, ಸೇನೆ, ಭದ್ರತಾ ಪಡೆಗಳು ನಿರ್ಲಕ್ಷ್ಯ ವಹಿಸಿದವೇ?
- ಕಡಿದಾದ ಪ್ರವಾಸಿ ತಾಣದಲ್ಲಿ ಹೆಚ್ಚಿನ ಭದ್ರತಾ ಸಿಬ್ಬಂದಿ ನಿಯೋಜಿಸಿರಲಿಲ್ಲವೇ?
- ಭದ್ರತೆಗೆ ಸೇನಾ ಸಿಬ್ಬಂದಿ ಕೊರತೆ ಕಾಡಿತೇ?

ಬೈಸರನ್ ಕಣಿವೆ ಮನಮೋಹಕ, ಆದರೆ...

ಪಹಲ್ಗಾಮ್‌ನಿಂದ ಆರು ಕಿ.ಮೀ ದೂರದಲ್ಲಿರುವ ಬೈಸರನ್ ಕಣಿವೆ 'ಮಿನಿ ಸ್ವಿಟ್ಜರ್ಲೆಂಡ್' ಎಂದೇ ಖ್ಯಾತಿ. ಪೈನ್ ಮರಗಳಿಂದ ಸುತ್ತುವರಿದ ದಟ್ಟ ಕಾಡಿನ ಮಧ್ಯದಲ್ಲಿರುವ ಹುಲ್ಲುಗಾವಲು, ಸುತ್ತಲೂ ಕಾಣುವ ಹಿಮಚ್ಛಾದಿತ ಬೆಟ್ಟಗಳ ಸಾಲು ದೃಶ್ಯಕಾವ್ಯವನ್ನೇ ಸೃಷ್ಟಿಸುತ್ತವೆ. ತಾಣ ಮನಮೋಹಕವಾಗಿದ್ದರೂ ಅಲ್ಲಿಗೆ ನೇರ ರಸ್ತೆ ಸಂಪರ್ಕ ಇಲ್ಲ. ಕಡಿದಾದ ದಾರಿಯಲ್ಲಿ ನಡೆದು ಅಥವಾ ಕುದುರೆಯ ಮೇಲೆ ಕುಳಿತು ಸಾಗಬೇಕು. ಅಲ್ಲಿನ ಸೌಂದರ್ಯ ಸವಿಯುವ ಉದ್ದೇಶದಿಂದ ಪ್ರತಿ ದಿನ ಸಾವಿರಾರು ಪ್ರವಾಸಿಗರು ಎಷ್ಟೇ ಕಷ್ಟವಾದರೂ ಈ ಕಣಿವೆಗೆ ದಾಂಗುಡಿ ಇಡುತ್ತಿದ್ದರು.

ಉಗ್ರರು ಅಟ್ಟಹಾಸ ಮೆರೆಯಲು ಅದೇ ತಾಣವನ್ನು ಆಯ್ಕೆ ಮಾಡಿಕೊಂಡಿದ್ದರು. ಸುತ್ತಲೂ ದಟ್ಟ ಕಾಡು ಇರುವುದು, ರಸ್ತೆ ಸಂಪರ್ಕ ಇಲ್ಲದಿರುವುದು, ಸೇನೆ ಅಥವಾ ಭದ್ರತಾ ಸಿಬ್ಬಂದಿಗೆ ತಕ್ಷಣಕ್ಕೆ ಸ್ಥಳಕ್ಕೆ ಬರಲು ಸಾಧ್ಯವಾಗದಿರುವುದು ಮತ್ತು ದಾಳಿಯಿಂದ ತಪ್ಪಿಸಿಕೊಳ್ಳಲು ಪ್ರವಾಸಿಗರಿಗೆ ಅವಿತು ಕುಳಿತುಕೊಳ್ಳುವ ಸ್ಥಳ ಅಲ್ಲಿ ಇಲ್ಲದಿರುವುದನ್ನೇ ಉಗ್ರರು ತಮ್ಮ ಅನುಕೂಲಕ್ಕೆ ಬಳಸಿಕೊಂಡಿದ್ದಾರೆ.

ಟಿಆರ್‌ಎಫ್: ಏನು, ಎತ್ತ

ಲಷ್ಕರ್ ಎ ತಯಬಾ ಉಗ್ರ ಸಂಘಟನೆಗೆ ನಿಷ್ಠವಾಗಿರುವ 'ದಿ ರೆಸಿಸ್ಟೆನ್ಸ್ ಫ್ರಂಟ್' (ಟಿಆರ್‌ಎಫ್) ಪಹಲ್ಗಾಮ್ ದಾಳಿಯ ಹೊಣೆ ಹೊತ್ತುಕೊಂಡಿದೆ. ಕೇಂದ್ರವು ಜಮ್ಮು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿದ ಕೆಲವೇ ತಿಂಗಳಲ್ಲಿ (2019ರ ಅಕ್ಟೋಬರ್) ಹುಟ್ಟಿಕೊಂಡ ಸಂಘಟನೆ ಇದು.

'ಸುಮಾರು 85 ಸಾವಿರ ಹೊರಗಿನವರಿಗೆ ಪ್ರಾದೇಶಿಕ ಪ್ರಮಾಣ ಪತ್ರ ವಿತರಿಸಲಾಗಿದ್ದು, ಅವರಿಂದ ಇಲ್ಲಿನ ಜನಸಂಖ್ಯೆಯ ಸ್ವರೂಪ ಬದಲಾಗುತ್ತಿದೆ. ಅಂತಹ ಅಕ್ರಮ ನಿವಾಸಿಗಳನ್ನು ಗುರಿಯಾಗಿಸಿಕೊಂಡು ಹಿಂಸಾಚಾರ ನಡೆಸಲಾಗುತ್ತದೆ' ಎಂದು ಟಿಆರ್‌ಎಫ್ ಹೇಳಿದೆ.

ಭಯೋತ್ಪಾದನಾ ಕೃತ್ಯಗಳನ್ನು ನಡೆಸುವ ಈ ಸಂಘಟನೆ ನಾಗರಿಕರು ಮತ್ತು ಸೈನಿಕರ ಹತ್ಯೆ ಮಾಡುತ್ತಿದೆ. ಶಸ್ತ್ರಾಸ್ತ್ರ, ಮಾದಕ ದ್ರವ್ಯ ಸಾಗಣೆಯಲ್ಲಿಯೂ ತೊಡಗಿದೆ. ಜತೆಗೆ, ಉಗ್ರ ಸಂಘಟನೆಗೆ ಯುವಕರನ್ನು ಸೆಳೆಯುತ್ತಿದೆ ಎಂದು ಕೇಂದ್ರ ಸರ್ಕಾರವು ಹೇಳಿದೆ. ಈ ಕಾರಣಕ್ಕೆ ಕೇಂದ್ರ ಗೃಹ ಇಲಾಖೆಯು ಅಕ್ರಮ ಚಟುವಟಿಕೆಗಳ ತಡೆ ಕಾಯ್ದೆ ಅನ್ವಯ 2023ರಲ್ಲಿ ಇದನ್ನು ನಿಷೇಧಿಸಿದೆ.

ಪ್ರವಾಸಕ್ಕೆ ಬಂದವರು, ಹೊರಗಿನವರು, ಕಾಶ್ಮೀರಿ ಪಂಡಿತರು ಸೇರಿದಂತೆ ಅಲ್ಲಿನ ಧಾರ್ಮಿಕ ಅಲ್ಪಸಂಖ್ಯಾತರೇ ಇದರ ಗುರಿ. 2021ರಲ್ಲಿ ನಡೆದಿದ್ದ ವಿಜ್ಞಾನಿ ಮಾಖನ್ ಲಾಲ್ ಬಿಂದ್ರೂ ಮತ್ತು ಶಾಲಾ ಪ್ರಾಂಶುಪಾಲರಾದ ಸುಪಿಂದರ್ ಕೌರ್ ಅವರ ಹತ್ಯೆ; 2023ರ ಅನಂತನಾಗ್ ಎನ್‌ಕೌಂಟರ್; ಗಂದೆರ್‌ಬಲ್‌ನಲ್ಲಿ 2024ರಲ್ಲಿ ನಡೆದಿದ್ದ ಕಟ್ಟಡ ಕಾರ್ಮಿಕರ ಹತ್ಯೆ; ರಿಯಾಸಿಯಲ್ಲಿ ನಡೆದಿದ್ದ ಪ್ರವಾಸಿಗಳ ಹತ್ಯಾ ಪ್ರಕರಣಗಳ ಹಿಂದೆ ಟಿಆರ್‌ಎಫ್ ಕೈವಾಡ ಇದೆ. ಭಯೋತ್ಪಾದನೆ, ಕಾಶ್ಮೀರದ ಪ್ರತ್ಯೇಕತೆಯ ಬಗ್ಗೆ ವಿಭಿನ್ನ ಅಭಿಪ್ರಾಯ ಹೊಂದಿದ್ದ ಬಾಬರ್ ಖಾದ್ರಿ ಎನ್ನುವವರನ್ನೂ ಟಿಆರ್‌ಎಫ್ 2020ರಲ್ಲಿ ಕೊಂದಿತ್ತು.

ಬಾಡಿ ಕ್ಯಾಮರಾಗಳನ್ನು ಧರಿಸಿಕೊಂಡು, ಸೇನಾ ಸಿಬ್ಬಂದಿಯ ಮೇಲೆ ದಾಳಿ ನಡೆಸುವುದು, ನಂತರ ಆ ದೃಶ್ಯಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ಹರಿಬಿಡುವುದು, ಯುವಕರನ್ನು ಸಂಘಟನೆಯತ್ತ ಸೆಳೆಯುವುದು ಇದರ ಕಾರ್ಯತಂತ್ರ; ಟಿಆರ್‌ಎಫ್ ಕೇಡರ್‌ಗಳಿಗೆ ಪಾಕಿಸ್ತಾನದಲ್ಲಿ ತರಬೇತಿ ನೀಡಲಾಗುತ್ತಿದೆ ಎಂದು ವರದಿಯಾಗಿದೆ. 2021ರ ಆಗಸ್ಟ್‌ನಲ್ಲಿ ಕುಲ್ಗಾಮ್‌ನಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಸೇನಾ ಪಡೆಗಳು ಟಿಆರ್‌ಎಫ್ ಕಮಾಂಡರ್ ಅಬ್ಬಾಸ್ ಶೇಖ್‌ನನ್ನು ಹತ್ಯೆ ಮಾಡಿದ್ದವು. ಸಂಘಟನೆಯ ಪ್ರಮುಖ ಮುಖಂಡನಾಗಿದ್ದ ಬಾಸಿತ್ ಧರ್ ಎನ್ನುವವನನ್ನು 2024ರ ಮೇನಲ್ಲಿ ಸೇನೆ ಹೊಡೆದುರುಳಿಸಿತ್ತು.

ಜಮ್ಮು ಮತ್ತು ಕಾಶ್ಮೀರ: ಯಾವ ವರ್ಷ, ಎಷ್ಟು ಪ್ರವಾಸಿಗರು?



* ಅಮರನಾಥ ಯಾತ್ರಿಗಳು, ವೈಷ್ಣೋದೇವಿ ದೇವಾಲಯಕ್ಕೆ ಭೇಟಿ ನೀಡಿದ ಭಕ್ತರು ಸೇರಿ

ಪ್ರವಾಸೋದ್ಯಮಕ್ಕೆ ಭಾರಿ ಹೊಡೆತ

ಜಮ್ಮು ಮತ್ತು ಕಾಶ್ಮೀರದಲ್ಲಿ, ಅದರಲ್ಲೂ ವಿಶೇಷವಾಗಿ ಕಾಶ್ಮೀರದಲ್ಲಿ ಈಗ ಪ್ರವಾಸೋದ್ಯಮದ ಋತು. ದೇಶ, ವಿದೇಶದ ಲಕ್ಷಾಂತರ ಜನರು ಭಾರತದ ಭೂಶಿರದ ಸೌಂದರ್ಯ ಸವಿಯಲು ತಂಡೋಪತಂಡವಾಗಿ ಬರುವ ಸಮಯ. ಕೆಲವು ವಾರಗಳಿಂದೀಚೆಗೆ ಶ್ರೀನಗರ, ಪಹಲ್ಗಾಮ್ ಸೇರಿದಂತೆ ಕಾಶ್ಮೀರದ ಪ್ರವಾಸಿ ತಾಣಗಳಲ್ಲಿ ಜನವೋ ಜನ. ಮಾಧ್ಯಮಗಳ ವರದಿ ಪ್ರಕಾರ, ಮಾರ್ಚ್ 26ರಂದು ಶ್ರೀನಗರದ ಟ್ಯುಲಿಪ್ ಉದ್ಯಾನ ಪ್ರವಾಸಿಗರಿಗೆ ಮುಕ್ತವಾದ ನಂತರ ಈವರೆಗೆ 8.14 ಲಕ್ಷ ಪ್ರವಾಸಿಗರು ಉದ್ಯಾನಕ್ಕೆ ಭೇಟಿ ನೀಡಿದ್ದಾರೆ. 3000ಕ್ಕೂ ಹೆಚ್ಚು ವಿದೇಶಿ ಪ್ರವಾಸಿಗರೂ ಈ ಉದ್ಯಾನವನ್ನು ಕಣ್ತುಂಬಿಕೊಂಡಿದ್ದಾರೆ.

ಪ್ರವಾಸೋದ್ಯಮವು ಜಮ್ಮು ಮತ್ತು ಕಾಶ್ಮೀರದ ಆರ್ಥಿಕತೆಯ ಬೆನ್ನೆಲುಬು. ಅಲ್ಲಿನ ಜಿಎಸ್‌ಡಿಪಿಗೆ ಪ್ರವಾಸೋದ್ಯಮ ಶೇ 8.47ರಷ್ಟು ಕೊಡುಗೆ ನೀಡುತ್ತದೆ.

ಭಯೋತ್ಪಾದನೆಯಿಂದಾಗಿ ಜಮ್ಮು ಮತ್ತು ಕಾಶ್ಮೀರದ ಪ್ರವಾಸೋದ್ಯಮ ಕುಸಿದಿತ್ತು. 2021ರಿಂದ ಕಣಿವೆ ಪ್ರದೇಶದಲ್ಲಿ ಪರಿಸ್ಥಿತಿ ಸಹಜ ಸ್ಥಿತಿಗೆ ಬಂದಂತೆ ಕಾಣಿಸಿಕೊಂಡಿದ್ದರಿಂದ ಪ್ರವಾಸಿಗರ ಸಂಖ್ಯೆಯಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚಳ ಕಂಡುಬಂದಿತ್ತು. ಕಳೆದ ವರ್ಷ 2.36 ಕೋಟಿಯಷ್ಟು ಪ್ರವಾಸಿಗರು ಭೇಟಿ ನೀಡಿದ್ದರು.

ಪಹಲ್ಗಾಮ್‌ನಲ್ಲಿ ಉಗ್ರರು ಕ್ರೌರ್ಯ ಮೆರೆದ ತಕ್ಷಣವೇ ಸಾವಿರಾರು ಸಂಖ್ಯೆಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ತೆರಳಿದ್ದ ಪ್ರವಾಸಿಗರು ಅಲ್ಲಿಂದ ಊರಿಗೆ ವಾಪಸ್ ಆಗಿದ್ದಾರೆ. ಅಂದಾಜಿನ ಪ್ರಕಾರ ಮುಂದಿನ ಮೂರು ತಿಂಗಳಿಗೆ ಕೊಠಡಿಗಳನ್ನು ಕಾಯ್ದಿರಿಸಿದ್ದ ಶೇ 90ರಷ್ಟು ಪ್ರವಾಸಿಗರು, ತಮ್ಮ ಬುಕ್ಕಿಂಗ್ ರದ್ದು ಮಾಡಿದ್ದಾರೆ. ಇದು ದಾಳಿಯಿಂದಾಗಿ ಆದ ತಕ್ಷಣದ ಪರಿಣಾಮ. ಆದರೆ, ಈ ಪರಿಣಾಮ ಸುದೀರ್ಘ ಕಾಲ ಇರಲಿದ್ದು, ಜನರ ಬದುಕಿಗೆ ಬರೆ ಎಳೆಯಲಿದೆ.

ಜೀವನೋಪಾಯ, ಉದ್ಯಮಕ್ಕೆ ಪೆಟ್ಟು

2019ರ ಬಳಿಕ ಜಮ್ಮು ಮತ್ತು ಕಾಶ್ಮೀರದಲ್ಲಿ ಕೈಗಾರಿಕೆಗಳಿಗೆ ಉತ್ತೇಜನ ನೀಡಲು ಕೇಂದ್ರ ಸರ್ಕಾರ ಮತ್ತು ಸ್ಥಳೀಯ ಆಡಳಿತ ಶ್ರಮ ವಹಿಸಿತ್ತು. ಜತೆಗೆ, ಕೆಲವು ವರ್ಷಗಳಿಂದೀಚೆಗೆ ಅಲ್ಲಿನ ಅರ್ಥವ್ಯವಸ್ಥೆ ಸುಧಾರಿಸಿತ್ತು. ಜನರ ತಲಾ ಆದಾಯ ಏರುಮುಖವಾಗಿತ್ತು. 2023ರಲ್ಲಿ ಭಾರತವು ಜಿ20 ರಾಷ್ಟ್ರಗಳ ಅಧ್ಯಕ್ಷತೆ ವಹಿಸಿದ್ದಾಗ, ಜಮ್ಮು ಮತ್ತು ಕಾಶ್ಮೀರದಲ್ಲಿ ಶೃಂಗಸಭೆಯನ್ನು ಏರ್ಪಡಿಸಿ, ಹಿಂಸಾಚಾರ ಪೀಡಿತ ನೆಲದಲ್ಲಿ ಈಗ ಸಹಜತೆ ಮರಳಿದೆ ಎಂದು ಜಾಗತಿಕ ಮಟ್ಟದಲ್ಲಿ ಬಿಂಬಿಸಿತ್ತು. ಈ ಶೃಂಗಸಭೆಯು ಪ್ರವಾಸೋದ್ಯಮ, ಕೈಗಾರಿಕಾ ವಲಯಗಳಲ್ಲಿ ಬಂಡವಾಳ ಹೂಡಿಕೆಗೆ ವೇದಿಕೆಯನ್ನೂ ಸೃಷ್ಟಿಸಿತ್ತು. 2024–25ನೇ ಸಾಲಿನ ಆರ್ಥಿಕ ಸಮೀಕ್ಷೆ ಪ್ರಕಾರ, 2024ರ ಡಿಸೆಂಬರ್‌ವರೆಗೆ ₹1.63 ಲಕ್ಷ ಕೋಟಿ ಮೊತ್ತದ ಹೂಡಿಕೆ ಪ್ರಸ್ತಾವನೆಗಳು ಬಂದಿದ್ದವು. 5.90 ಲಕ್ಷಕ್ಕೂ ಹೆಚ್ಚು ಮಂದಿಗೆ ಉದ್ಯೋಗ ಸಿಗಲಿದೆ ಎನ್ನಲಾಗಿತ್ತು. ಈ ದಾಳಿಯು ಈ ಎಲ್ಲ ಪ್ರಯತ್ನಗಳಿಗೂ ಹಿನ್ನಡೆ ಉಂಟುಮಾಡಲಿದೆ ಎಂದು ಹೇಳಲಾಗಿದೆ.

ಆಧಾರ: ಪಿಟಿಐ, ಜಮ್ಮು ಮತ್ತು ಕಾಶ್ಮೀರ ಆರ್ಥಿಕ ಸಮೀಕ್ಷೆ 2024–25, ಬಿಬಿಸಿ, ರಾಯಿಟರ್ಸ್



* ಆರಂಭಿಕ ಅಂದಾಜು

ರಾಷ್ಟ್ರೀಯ

ಭಾರತ ಪ್ರವಾಸದಲ್ಲಿರುವ ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರು ತಮ್ಮ ಪತ್ನಿ ಉಷಾ, ಪುತ್ರರಾದ ಇವಾನ್, ವಿವೇಕ್ ಮತ್ತು ಪುತ್ರಿ ಮಿರಾಬೆಲ್ ಅವರೊಂದಿಗೆ ಆಗ್ರಾಕ್ಕೆ ಬುಧವಾರ ಭೇಟಿ ನೀಡಿ ತಾಜ್ ಮಹಲ್ ವೀಕ್ಷಿಸಿದ ಬಳಿಕ ಫೋಟೊ ತೆಗೆಸಿಕೊಂಡರು. 'ತಾಜ್ ಮಹಲ್ ಅದ್ಭುತವಾಗಿದೆ. ಇದು ನಿಜವಾದ ಪ್ರೀತಿ, ಮಾನವನ ಚಾತುರ್ಯ ಮತ್ತು ಮಹಾನ್ ದೇಶವಾದ ಭಾರತದ ಗೌರವಕ್ಕೆ ಸಾಕ್ಷಿಯಾಗಿದೆ' ಎಂದು ವ್ಯಾನ್ಸ್ ಸಂದರ್ಶಕರ ಡೈರಿಯಲ್ಲಿ ಬರೆದಿದ್ದಾರೆ.

—ಪಿಟಿಐ ಚಿತ್ರ

ತಮಿಳುನಾಡು ಸಚಿವ ಬಾಲಾಜಿಗೆ ಪ್ರಶ್ನೆ

ಹುದ್ದೆ, ಸ್ವಾತಂತ್ರ್ಯದ ನಡುವೆ ಯಾವುದು ಬೇಕು: 'ಸುಪ್ರೀಂ'

ನವದೆಹಲಿ (ಪಿಟಿಐ): 'ಹುದ್ದೆ ಮತ್ತು ಸ್ವಾತಂತ್ರ್ಯದ ನಡುವೆ ನಿಮ್ಮ ಆಯ್ಕೆ ಯಾವುದು ಎಂಬುದನ್ನು ತೀರ್ಮಾನಿಸಿ' ಎಂದು ತಮಿಳುನಾಡಿನ ಸಚಿವ ವಿ. ಸೆಂಥಿಲ್ ಬಾಲಾಜಿ ಅವರಿಗೆ ಸುಪ್ರೀಂ ಕೋರ್ಟ್ ಬುಧವಾರ ಸೂಚಿಸಿದೆ.

ತಮಿಳುನಾಡಿನ ಸಚಿವ ಸ್ಥಾನದಿಂದ ಕೆಳಗಿಳಿಯದೆ ಇದ್ದರೆ ಜಾಮೀನು ರದ್ದು ಮಾಡುವುದಾಗಿ ಅದು ಬಾಲಾಜಿ ಅವರಿಗೆ ಎಚ್ಚರಿಕೆ ನೀಡಿದೆ.

'ಉದ್ಯೋಗಕ್ಕೆ ಹಣ' ಹಗರಣಕ್ಕೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾಮೀನು ಪಡೆದ ಕೆಲವೇ ದಿನಗಳಲ್ಲಿ ಬಾಲಾಜಿ ಅವರನ್ನು ಸಚಿವರನ್ನಾಗಿ ಪುನಃ ನೇಮಕ ಮಾಡಿದ್ದಕ್ಕೆ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠವು ಅಸಮಾಧಾನ ವ್ಯಕ್ತಪಡಿಸಿತು.

'ನೀವು ಸಾಕ್ಷಿಗಳ ಮೇಲೆ ಪ್ರಭಾವ ಬೀರುತ್ತೀರಿ, ಹಸ್ತಕ್ಷೇಪ ನಡೆಸುತ್ತೀರಿ ಎಂಬ ಗಂಭೀರ ಆತಂಕ ಇದೆ. ಸಚಿವ ಸ್ಥಾನ ಹಾಗೂ ಸ್ವಾತಂತ್ರ್ಯದ ಪೈಕಿ ನಿಮ್ಮ ಆಯ್ಕೆ ಯಾವುದು ಎಂಬುದನ್ನು ತೀರ್ಮಾನಿಸಬೇಕು. ಆಯ್ಕೆ ಯಾವುದು ಎಂಬುದನ್ನು ನೀವು ನಮಗೆ ತಿಳಿಸಬೇಕು' ಎಂದು ಪೀಠವು ಹೇಳಿತು.

ಬಾಲಾಜಿ ಅವರು ತಮ್ಮ ವಿರುದ್ಧ ದೂರು ನೀಡಿದ್ದವರು ಅದನ್ನು ಹಿಂಪಡೆಯುವಂತೆ ಬಲವಂತ ಮಾಡಿದ್ದರು ಎಂಬುದನ್ನು ದಾಖಲಿಸಿಕೊಂಡಿರುವ ಹಿಂದಿನ ಆದೇಶವೊಂದನ್ನು ಪೀಠವು ಉಲ್ಲೇಖಿಸಿತು. ಜಾಮೀನು ಕೊಡಲಾಗಿದೆ ಎಂದಮಾತ್ರಕ್ಕೆ ಸಾಕ್ಷಿಗಳ ಮೇಲೆ ಪ್ರಭಾವ ಬೀರಲು ಅಧಿಕಾರ ನೀಡಲಾಗಿದೆ ಎಂದಲ್ಲ ಎಂಬುದನ್ನು ಪೀಠವು ಹೇಳಿತು.

ಪ್ರಕರಣದ ಸಾಕ್ಷಿಗಳ ಮೇಲೆ ಬಾಲಾಜಿ ಅವರು ಪ್ರಭಾವ ಬೀರಿದ್ದಾರೆ, ಅವರ ಜಾಮೀನು ರದ್ದುಪಡಿಸಬೇಕು ಎಂಬ ಅರ್ಜಿಯ ವಿಚಾರಣೆಯನ್ನು ಪೀಠವು ನಡೆಸುತ್ತಿದೆ. ಬಾಲಾಜಿ ಅವರ ಹಿಂದಿನ ವರ್ತನೆಗಳು ಅವರು 'ಪ್ರಭಾವ ಬೀರಿದ್ದನ್ನು, ಹಸ್ತಕ್ಷೇಪ ನಡೆಸಿದ್ದನ್ನು' ತೋರಿಸಿವೆ. ಅವರ ವಿರುದ್ಧದ ಆರೋಪಗಳಲ್ಲಿ ಮೇಲ್ನೋಟಕ್ಕೆ ಹುರುಳಿದೆ ಎಂದು ಪೀಠವು ಹೇಳಿತು.

'ನೀವು ಈಗ ಮೊದಲಿನ ಸ್ಥಾನಕ್ಕೆ ಬಂದಿದ್ದೀರಿ, ಸಚಿವರಾಗಿ ನೀವು ಪ್ರಭಾವ ಬೀರಬಹುದು. ನಿಮಗೆ ಜಾಮೀನು ನೀಡಿದ್ದು ಸಂಪೂರ್ಣವಾಗಿ ಭಿನ್ನವಾದ ನೆಲೆಯಲ್ಲಿ... ಪ್ರಕರಣದ ಸತ್ಯಾಸತ್ಯತೆ ಆಧರಿಸಿ ಜಾಮೀನು ಕೊಟ್ಟಿದ್ದಲ್ಲ...' ಎಂದು ಪೀಠವು ಹೇಳಿತು.

'ನಿಮ್ಮ ವಿರುದ್ಧದ ಆದೇಶಗಳನ್ನು ನಿರ್ಲಕ್ಷಿಸುವ ಮೂಲಕ ನಾವು ತಪ್ಪು ಮಾಡಿದೆವು ಎಂಬುದನ್ನು ನಾವು ಆದೇಶದಲ್ಲಿ ಉಲ್ಲೇಖಿಸುತ್ತೇವೆ. ಏಕೆಂದರೆ, ನೀವು ಸಚಿವರಾಗಿ ಇಲ್ಲ ಎಂಬ ನೆಲೆಯಲ್ಲಿ ಇಡೀ ವಿಚಾರಣೆ ಮುಂದುವರೆದಿತ್ತು. ನಾವು ನಮ್ಮ ತಪ್ಪು ಒಪ್ಪಿಕೊಳ್ಳುತ್ತೇವೆ' ಎಂದು ನ್ಯಾಯಮೂರ್ತಿ ಓಕ ಹೇಳಿದರು.

ಗುಂಡಣ್ಣ

ಕಾಲ ಕೆಟ್ಟಿಲ್ಲ, ಮನಸ್ಸು ಕೆಟ್ಟಿದೆ!

ಗವಿಸಿದ್ದೇಶ್ವರ ಸ್ವಾಮೀಜಿ,
ಗವಿಮಠ, ಕೊಪ್ಪಳ
180

ಈ ಜಗತ್ತು ಸಂಪದ್ಭರಿತ. ನಾವು ಕಟ್ಟೆ ಮೇಲೆ ಕುಳಿತು 'ಎಲ್ಲಾ ಕೆಟ್ಟೋಗಿದೆ' ಎಂದು ಮಾತನಾಡುತ್ತೀವಿ. ಏನು ಕೆಟ್ಟಿದೆ; ಗಾಳಿ ಕೆಟ್ಟಿದೆಯಾ, ನೀರು ಕೆಟ್ಟಿದೆಯಾ, ಬೆಳಕು ಕೆಟ್ಟಿದೆಯಾ? ಇಲ್ಲ, ಯಾವುದೂ ಕೆಟ್ಟಿಲ್ಲ. ಎಲ್ಲವೂ ಸರಿಯಾಗಿಯೇ ಇದೆ. ಎಲ್ಲವೂ ಸರಿಯಾಗಿರಬೇಕು ಎಂದು ಹೇಳುವ ಮನುಷ್ಯನ ಮನಸ್ಸು ಮಾತ್ರ ಕೆಟ್ಟಿದೆ. ಉಳಿದವೆಲ್ಲಾ ಸರಿಯಾಗಿವೆ. ಮನುಷ್ಯ ಸ್ವಲ್ಪ ಈ ಪರಿಸರದ ಬಗ್ಗೆ, ಭೂಮಿಯ ಬಗ್ಗೆ ಆಲೋಚಿಸಬೇಕು. ಯಾವುದು ಸಂಪತ್ತು, ಯಾವುದು ನಮ್ಮನ್ನು ಬದುಕಿಸುತ್ತದೆ ಎನ್ನುವ ಪರಿಕಲ್ಪನೆ ಮನುಷ್ಯನಿಗೆ ಬೇಕು. ಒಬ್ಬ ಸಾಮಾನ್ಯ ಈ ಜಗತ್ತನ್ನು ನೋಡುವುದಕ್ಕೂ ಒಬ್ಬ ದಾರ್ಶನಿಕ ಜಗತ್ತನ್ನು ನೋಡುವುದಕ್ಕೂ ಬಹಳ ವ್ಯತ್ಯಾಸ ಇದೆ. ಬಂಗಾರ, ಬೆಳ್ಳಿ, ವಜ್ರ ವೈಢೂರ್ಯ ನಮಗೆ ಸಂಪತ್ತು. ಆದರೆ ದಾರ್ಶನಿಕ ಅನ್ನುತ್ತಾನೆ 'ಮನುಷ್ಯನೇ ಇವೆಲ್ಲ ನಿಜವಾದ ಸಂಪತ್ತುಗಳಲ್ಲ. ಇವೆಲ್ಲ ಕಲ್ಲಿನ ತುಣುಕುಗಳು ಅಷ್ಟೆ'. ನೀನು ತಿಳಿದ ಸಂಪತ್ತು ಒಂದೇ ರೊಟ್ಟಿ ತಿಂದು ಒಂದೇ ತಾಯಿಯ ಹಾಲು ಕುಡಿದ ಮಕ್ಕಳನ್ನೇ ದೂರ ಮಾಡಿದೆ, ನಿಮಗೆ, ಮನೆ ಮಗ್ಗಲದವರಿಗೆ, ಸಂಬಂಧಿಕರಿಗೆ ಹೊಡೆದಾಟ ಹಚ್ಚಿದೆ; ಕೋರ್ಟ್ ಕಚೇರಿಗೆ ಕರೆದುಕೊಂಡು ಹೋಗಿದೆ, ಸಾಮ್ರಾಜ್ಯಗಳು ಉರುಳಿವೆ, ಎಷ್ಟೋ ಮಂದಿಯ ಪ್ರಾಣ ತೆಗೆದಿದೆ. ಪ್ರಾಣ ತೆಗೆಯುವ ಬಂಗಾರ ಬೆಳ್ಳಿ ಅದು ಸಂಪತ್ತಲ್ಲ; ಮನುಷ್ಯನನ್ನು ಬದುಕಿಸುವ ಅನ್ನ, ನೀರು, ಒಳ್ಳೆಯ ಮಾತುಗಳು ನಿಜವಾದ ಸಂಪತ್ತು.

ಒಬ್ಬ ಮಹಾರಾಜ ಮರಳುಗಾಡಿನಲ್ಲಿ ಹೋಗುತ್ತಿದ್ದ. ಅವನ ಸಹಚರರು ದೂರವಾದರು. ಅವನಿಗೆ ಬಾಯಾರಿಕೆಯಾಯಿತು. ಇನ್ನೇನು ಒಂದು ಕ್ಷಣ ನೀರು ಸಿಗದೇ ಇದ್ದರೆ ಸತ್ತು ಹೋಗುತ್ತಿದ್ದ. ಅಷ್ಟು ಬಾಯಾರಿಕೆಯಾಗಿತ್ತು. ಅಲ್ಲೊಬ್ಬ ಮನುಷ್ಯ ಕುಳಿತಿದ್ದ. ಅವನ ಹತ್ತಿರ ಹೋಗಿ 'ನನಗೆ ಬಾಯಾರಿಕೆಯಾಗಿ ಪ್ರಾಣ ಹೋಗುತ್ತಿದೆ. ಒಂದು ಲೋಟ ನೀರು ಕೊಡು' ಎಂದ. ಆಗ ಆತ 'ನಾನು ನೀರು ಕೊಟ್ಟರೆ ನೀನು ನನಗೆ ಏನು ಕೊಡ್ತಿ' ಎಂದು ಕೇಳಿದ. 'ನಾನು ಮಹಾರಾಜ ಇದ್ದೇನೆ. ನನ್ನ ಅರ್ಧ ಸಂಪತ್ತು ನಿನಗೆ ಕೊಡುತ್ತೇನೆ' ಎಂದ. 'ಅರ್ಧ ಸಾಮ್ರಾಜ್ಯಕ್ಕೆ ನಾನು ನೀರು ಕೊಡಲ್ಲ' ಎಂದ ಅವನು. ಅದಕ್ಕೆ ಮಹಾರಾಜ 'ನೀರಿಲ್ಲದಿದ್ದರೆ ನಾನು ಸತ್ತೇ ಹೋಗುತ್ತೀನಿ. ಅದಕ್ಕಾಗಿ ಆ ಒಂದು ಲೋಟ ನೀರಿಗಾಗಿ ನಾನು ಈವರೆಗೆ ಕಷ್ಟಪಟ್ಟು ಗಳಿಸಿದ ಎಲ್ಲ ಸಾಮ್ರಾಜ್ಯವನ್ನೂ ಎಲ್ಲ ಸಂಪತ್ತನ್ನೂ ನಿನಗೆ ಕೊಡುತ್ತೇನೆ' ಎಂದ ಮಹಾರಾಜ. ಅದಕ್ಕೆ ಆತ 'ಒಂದು ವಿಷಯ ತಿಳಿದುಕೊ, ನೀನು ಇಷ್ಟು ವರ್ಷ ಅವರಿವರನ್ನು ಹೊಡೆದು ಬಡಿದು ಗಳಿಸಿದ ಸಂಪತ್ತು ಬರೇ ಒಂದು ಲೋಟ ನೀರಿಗೆ ಸಮ. ಅಂದರೆ ನೀನು ಗಳಿಸಿದ ಸಂಪತ್ತು ಸಂಪತ್ತಲ್ಲ. ನೀರೇ ಸಂಪತ್ತು' ಎಂದ.

ಯಾರಾದರೂ ಸಾಯುತ್ತಾ ಇರುವಾಗ ಒಂದು ತೊಲ ಬಂಗಾರ ಕೊಡ್ರಿ ಅಂತಾರೇನು? ಒಂದು ಗುಟುಕು ನೀರು ಕೊಡಿ ಎನ್ನುತ್ತಾರೆ. ಇಲ್ಲಾ ಕಿವಿಯಲ್ಲಿ ಶಿವನಾಮ ಹೇಳಿ ಅಂತಾರೆ. ಅಂದರೆ ಮಾತು ಸಂಪತ್ತು. ಈ ಭೂಮಿ ಇದು ಸ್ವರ್ಗ ಆಗಬೇಕು. ಶರಣರು ಹೇಳಿದರು, ಋಷಿಗಳು ಹೇಳಿದರು; ಈ ಭೂಮಿ ಹೇಗೆ ಸ್ವರ್ಗ ಆಗಬೇಕು ಅಂತ ಅವರೆಲ್ಲಾ ಹೇಳಿದರು. ನಾವು ಅದನ್ನು ಪಾಲಿಸಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಗುರುವಾರ ಏಪ್ರಿಲ್ 24, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಏಕಾದಶಿ ಗಂ. 14-33 ನಕ್ಷತ್ರ: ಶತಭಿಷ ಗಂ. 10-49 ಯೋಗ: ಬ್ರಹ್ಮ ಗಂ. 15-56 ಕರಣ: ಬಲವ ಗಂ. 14-33, ಮೇಷ ಮಾಸದ 11 ನೇ ದಿನ.
ರಾಹುಕಾಲ: ಮಧ್ಯಾಹ್ನ 01-30 – 03-00
ಸೂರ್ಯೋದಯ: 06-16 ಸೂರ್ಯಾಸ್ತ : 06-41, ಮುಸ್ಲಿಂ ದಿನಾಂಕ : 25 ಶವ್ವಾಲ್
ದಿನ ವಿಶೇಷ: ಶ್ರೀ ವಲ್ಲಭಾಚಾರ್ಯ ಜಯಂತಿ, ವರೂಥಿನೀ ಏಕಾದಶಿ
ಅದೃಷ್ಟ ಸಂಖ್ಯೆ: 5

ಮೇಷ: ದೇವರ ಕೃಪೆಯಿಂದ ಭಾಗ್ಯದ ಬಾಗಿಲು ತೆರೆಯುವುದು. ಸಹಭಾಗಿಗೆ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ನಿಮಗೆ ಹೆಚ್ಚು ಆನಂದ ಸಿಗಬಹುದು. ಪುಸ್ತಕ ವ್ಯಾಪಾರಿಗಳಿಗೆ ಒಳ್ಳೆಯ ಲಾಭವಾಗುವ ಸಂಭವವಿದೆ.

ವೃಷಭ: ಬಂಧುಗಳ ಆಗಮನ ಮನಸ್ಸಿಗೆ ಸಂತೋಷ ಕೊಡಲಿದೆ, ಆದರೆ ಇಂದಿನ ನಿಮ್ಮ ಯೋಜಿತ ಪೂರ್ವತಯಾರಿ ಕೆಲಸಗಳು ವಿಘ್ನಕ್ಕೆ ಬಲಿಯಾಗಬಹುದು. ಬಟ್ಟೆ ಹೊಲಿಯುವವರಿಗೆ ಬೇಡಿಕೆ ಹೆಚ್ಚಾಗುತ್ತದೆ.

ಮಿಥುನ: ಕುಟುಂಬದಲ್ಲಿ ಹಿತಕರ ವಾತಾವರಣ ಸೃಷ್ಟಿಯಾಗಲಿದೆ. ಧನಾಗಮನದಿಂದ ನಿಮ್ಮ ಮನಸ್ಸಿಗೆ ಸಂತೋಷವಾಗುವುದು. ಖರ್ಚು ವೆಚ್ಚಗಳು ಸಮನಾಗಿರುತ್ತದೆ. ತಾಯಿಯಿಂದ ಉಡುಗೊರೆ ದೊರೆಯುವ ಸಾಧ್ಯತೆಗಳಿದೆ.

ಕರ್ಕಾಟಕ: ನಿಮ್ಮ ಮನೋಭಾವವನ್ನು ಬದಲಿಸಿಕೊಳ್ಳುವಂತೆ ಆಗಲಿದೆ. ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕೆಂಬುದು ತಿಳಿಯಲಿದೆ. ಪ್ರಗತಿಯ ಹಾದಿಯನ್ನು ಸ್ಪರ್ಶಿಸಲಿದ್ದೀರಿ. ನಿಮ್ಮ ಪ್ರತಿಭೆ ಸಾಮರ್ಥ್ಯ ಬೆಳಕಿಗೆ ಬರಲಿದೆ.

ಸಿಂಹ: ನಿಮ್ಮ ಸಮಯೋಚಿತ ನಡೆಯಿಂದ ಶತ್ರುಗಳು ನಿಮ್ಮನ್ನು ಭಯದಿಂದ ಕಾಣುತ್ತಾರೆ. ಸಂತಾನ ಅಪೇಕ್ಷಿಗಳಿಗೆ ಶುಭ ಸುದ್ದಿ ಪ್ರಾಪ್ತಿಯಾಗಿ ಮನಸ್ಸಿಗೆ ಉಲ್ಲಾಸ ದೊರೆಯಲಿದೆ. ವಕೀಲರು ಖ್ಯಾತಿಯನ್ನು ಹೊಂದುವರು.

ಕನ್ಯಾ: ಗೃಹ ನಿರ್ಮಾಣದಂತಹ ಕಾರ್ಯಗಳು ಪೂರ್ಣವಾಗುತ್ತವೆ. ಕುಟುಂಬ ಸಮೇತ ತೀರ್ಥಯಾತ್ರೆಗೆ ತೆರಳುವ ಅವಕಾಶವಿದೆ. ಆರ್ಥಿಕ ವಿಷಯದ ಬರವಣಿಗೆಯ ವೃತ್ತಿಯವರು ಹೆಚ್ಚಿನ ಗಮನವಹಿಸುವುದು ಅಗತ್ಯ.

ತುಲಾ: ನಿಮ್ಮ ನಿಸ್ವಾರ್ಥ ಸೇವೆಯಿಂದಾಗಿ ಕಚೇರಿಯಲ್ಲಿ ನಿಮಗೆ ವಿಶೇಷ ಗೌರವ ದೊರೆಯಲಿದೆ. ಇಲಾಖೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಡ್ತಿ ದೊರೆಯುವ ಸಂಭವವಿದೆ. ವನಸ್ಪತಿ ಉದ್ಯಮಗಳಿಂದ ಹೆಚ್ಚಿನ ಲಾಭವಿರುವುದು.

ವೃಶ್ಚಿಕ: ಮನೆಯವರ ಸಹಾಯದಿಂದ ಹಿಂದಿನ ಹಣಕಾಸಿನ ತೊಂದರೆಗಳು ದೂರಾಗಿ ಈ ದಿನ ಹೊಸ ಯೋಜನೆಗೆ ಚಾಲನೆ ದೊರೆಯಲಿದೆ. ಮಗಳ ಮದುವೆಯ ವಿಚಾರದಲ್ಲಿ ನೀವು ಇಡುವ ಹೆಜ್ಜೆ ಬಹಳ ಪ್ರಮುಖವಾದುದು.

ಧನು: ಬಹಳ ದಿನಗಳಿಂದ ನೀವು ಅಂದುಕೊಂಡಂತೆ ಕೆಲಸದಲ್ಲಿ ಹೊಸ ಪರಿವರ್ತನೆ ಮಾಡಲು ಸಾಧ್ಯವಾಗುತ್ತದೆ. ಈಶ್ವರನ ಕೃಪೆಯಿಂದ ಆರ್ಥಿಕ ಸ್ಥಿತಿಗತಿ ಇನ್ನಷ್ಟು ಉತ್ತಮಗೊಳ್ಳಲಿದೆ. ವಾಹನದ ಮೇಲೆ ಆಸೆಯಾಗುವುದು.

ಮಕರ: ಖಾಸಗಿ ಸಂಸ್ಥೆಗಳಲ್ಲಿ ಅಧಿಕ ಜವಾಬ್ದಾರಿಯು ನಿಮ್ಮ ಹೊಣೆಗಾರಿಕೆ ಯಾದ್ದರಿಂದ ಒತ್ತಡವೂ ಸಹ ಅಧಿಕವಾಗಿರುವುದು. ವಿದ್ಯಾ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಕೆಲಸದಲ್ಲಿ ಉತ್ಸಾಹ ವೃದ್ಧಿಯಾಗಲಿದೆ.

ಕುಂಭ: ಮುಂದಾಲೋಚನೆ ಇಲ್ಲದೆ ನಡೆಸಿದ ಕಾರ್ಯಗಳಿಂದ ನಷ್ಟ ಅನುಭವಿಸುವಂತಾಗಲಿದೆ. ಷೇರು ವ್ಯವಹಾರದಲ್ಲಿ ಲಾಭ ಇರುವುದು. ಈ ದಿನ ಎಲ್ಲಾ ಕೆಲಸಗಳಲ್ಲಿ ಯಶಸ್ಸು ಪಡೆಯುವೆ ಎಂಬ ಆತ್ಮವಿಶ್ವಾಸ ನಿಮ್ಮಲ್ಲಿರಲಿ.

ಮೀನ: ಉದ್ಯೋಗರಂಗದಲ್ಲಿ ಅನಿರೀಕ್ಷಿತ ಬೆಳವಣಿಗೆ ಕಂಡುಬರುವುದು. ಹೆಚ್ಚಿನ ಅಧ್ಯಯನಕ್ಕೆ ಇದು ಸಕಾಲ. ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶಗಳು ದೊರೆಯಲಿದೆ. ಶಾರದೆಯ ಆರಾಧನೆಯಿಂದ ಜ್ಞಾನ ವೃದ್ಧಿಯಾಗುವುದು.

ಪದಬಂಧ 6021

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಪತಿ ಕೊನೆಗಿದ್ದಾಗಲೇ ಈ ಸಲ್ಲದ ವ್ಯವಹಾರ! (4)
5.ಮಾನವಿರುವ ಹುಟ್ಟು ಗುಣ (4)
6.ಕಣ್ಣಿನ ಕೊನೆಯ ನೋಟ (4)
8.ಮಡಿ ಮಡಿ ಎನ್ನುತ್ತಿರುವ ಅಗಸ (4)
12.ಮನಸನು ಸೆಳೆದ ಕಾಡು ಹೂ (4)
14.ಯಾವುದೇ ಆಯುಧವಿಲ್ಲದಿರುವಿಕೆ (4)
15.ಅಂತರಾತ್ಮನ ಧ್ವನಿಯಿದು (4)
16.ನರಕಾಧಿಪತಿ ಹೆಗಲೇರಿದ ಅಧಿಕ ಒಜ್ಜೆ! (4)

ಮೇಲಿಂದ ಕೆಳಕ್ಕೆ
1.ಶತ್ರುವೇ ಹುಟ್ಟಿಲ್ಲದವನು (5)
2.ಮಗ ಕೊನೆಗೆ ತಿರುಗಿದಾಗಲೇ ಸೇರುವಿಕೆ (4)
3.ಒತ್ತು ಕಳೆದುಕೊಂಡ ಕುಳ್ಳ ಕೊನೆಗಿದ್ದು ಕೊಟ್ಟ ತೊಂದರೆ (4)
4.ಆಟದಲ್ಲಿ ಮುಕ್ತಾಯಗೊಂಡಿರುವ ಘರ್ಷಣೆ (3)
7.ನಲಿವಿನ ವಿರುದ್ಧದ ಪದ (2)
9.ಮನದ ಕೊನೆಯಲ್ಲಿ ನೆಲೆಸಿಹ ಕುಳ್ಳ (3)
10.ಲಗ್ನವಾಗುತ್ತಿರುವ ಗಂಡು (5)
11.ರಾಜನ ಹೆಂಡತಿ ತಿರುಗಿದ್ದಾಳಲ್ಲಾ! (2)
12.ಅಪರಾಧಿಗಳನ್ನು ಕೊಲ್ಲಲು ನಿಯುಕ್ತನಾದವನು (4)
13.ಮನದೊಳಗಿರುವ ಕುಲ (4)
14.ನಿರ್ಣಯವನ್ನು ಹೀಗೆ ಹೇಳಿ (3)

6020ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆರಂಭ 4.ಸಂದೇಹ
6.ಲಾಭಬಡುಕ 7.ದಮ 9.ತಡ
10.ಸರ 11.ಗುರಿ 16.ನಯವಂಚಕ
17.ನಡುಕ 18.ವಿನಂತಿ

ಮೇಲಿಂದ ಕೆಳಕ್ಕೆ:
1.ಆಯುರ್ವೇದ 2.ಬಲಾಢ್ಯ
3.ಕಂಬಳ 4.ಸಂಕಟ
5.ಹತ್ಯಾಕಾಂಡ 8.ಮಯೂರ
9.ತರಗು 10.ಸಮಾಧಾನ
12.ರಿಯಾಯಿತಿ 3.ಜನಕ
14.ಧಾವಂತ 15.ಕುಕವಿ

ಸುಡೊಕು 6406

		7	1		2		6	
				3				9
2		4				1		
	6	8		5			4	1
						7	9	
9	4			2				
3	7			8		9		5
		6					8	
	8		3		5	6		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6405 ಸುಡೊಕು

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

ಪ್ರವಾಸೋದ್ಯಮಕ್ಕೆ ಪೆಟ್ಟು • ಶೇ 80ರಷ್ಟು ಬುಕಿಂಗ್ ರದ್ದು • ತವರಿಗೆ ಮರಳಲು ಪರದಾಟ

ಕಾಶ್ಮೀರ ತೊರೆಯುತ್ತಿರುವ ಪ್ರವಾಸಿಗರು

ಶ್ರೀನಗರ (ಪಿಟಿಐ): ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ಭೀಕರ ದಾಳಿಯ ಬಳಿಕ ಸಾವಿರಾರು ಪ್ರವಾಸಿಗರು ಕಾಶ್ಮೀರ ತೊರೆದು, ತಮ್ಮ ಊರುಗಳಿಗೆ ತೆರಳುತ್ತಿದ್ದಾರೆ. ಪ್ರವಾಸಿಗರು ತಮ್ಮ ರಾಜ್ಯಗಳಿಗೆ ಸುರಕ್ಷಿತವಾಗಿ ಮರಳುವಂತೆ ಮಾಡಲು ಅಧಿಕಾರಿಗಳು ಎಲ್ಲ ಪ್ರಯತ್ನ ಮಾಡುತ್ತಿದ್ದಾರೆ.

'ಅತಿಥಿಗಳು ವಲಸೆ ಹೋಗುವುದನ್ನು ನೋಡಲು ಆಗದು. ತೀವ್ರ ದುಃಖ ತರಿಸುತ್ತದೆ. ಆದರೆ, ಅವರೇಕೆ ಹಿಂತಿರುಗಲು ಬಯಸುತ್ತಿದ್ದಾರೆ ಎಂಬುದನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ' ಎಂದು ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಹೇಳಿದ್ದಾರೆ.

ಪ್ರವಾಸಿಗರ ಪರದಾಟ: ವಿಮಾನಯಾನ ದರ ಹೆಚ್ಚಿರುವುದರಿಂದ ತವರಿಗೆ ಮರಳಲು ಪ್ರವಾಸಿಗರು ಪರದಾಡುವಂತಾಗಿದೆ.

'ಶ್ರೀನಗರದಿಂದ ದೆಹಲಿಗೆ ವಿಮಾನ ದರವನ್ನು ಒಬ್ಬರಿಗೆ ₹18,000ಕ್ಕೆ ಏರಿಸಲಾಗಿದೆ. ಹೀಗಾದರೆ ನಾವೆಲ್ಲ ಮನೆಗೆ ಹೇಗೆ ಹೋಗುವುದು' ಎಂದು ದೆಹಲಿಯ ಪ್ರವಾಸಿಗ ಅಂಚಲ್ ಮೆಹ್ತಾ ಪ್ರಶ್ನಿಸಿದರು.

ಬುಕಿಂಗ್ ರದ್ದು: 'ದಾಳಿಯ ಬಳಿಕ ಆತಂಕಗೊಂಡಿರುವ ಜನರು, ಕಾಶ್ಮೀರ ಪ್ರವಾಸದ ಬುಕಿಂಗ್‌ಗಳನ್ನು ರದ್ದುಗೊಳಿಸುತ್ತಿದ್ದಾರೆ. ಈಗಾಗಲೇ ಶೇ 80ರಷ್ಟು ಬುಕಿಂಗ್ ರದ್ದಾಗಿವೆ. ಅಲ್ಲದೆ ಮುಂದಿನ ತಿಂಗಳ ಪ್ಯಾಕೇಜ್‌ಗಳೂ ರದ್ದಾಗುತ್ತಿವೆ' ಎಂದು ಶ್ರೀನಗರದ ಪ್ರವಾಸ ನಿರ್ವಾಹಕ ಇಜಾಜ್ ಅಲಿ ಪ್ರತಿಕ್ರಿಯಿಸಿದ್ದಾರೆ.

ಶ್ರೀನಗರದಿಂದ ತಮ್ಮ ರಾಜ್ಯಗಳಿಗೆ ಹಿಂದಿರುಗುತ್ತಿರುವ ಪ್ರವಾಸಿಗರು – ಪಿಟಿಐ ಚಿತ್ರ

ಪ್ರವಾಸಿಗರ ಉತ್ಸಾಹ ಕುಂದಿಲ್ಲ

ಮುಂಬೈ: 'ಪಹಲ್ಗಾಮ್‌ನಲ್ಲಿ ನಡೆದ ಪ್ರವಾಸಿಗರ ಸಾಮೂಹಿಕ ಹತ್ಯೆಯು, ಜಮ್ಮು ಮತ್ತು ಕಾಶ್ಮೀರಕ್ಕೆ ಪ್ರವಾಸ ಬೆಳೆಸುವವರ ಉತ್ಸಾಹವನ್ನು ಕುಂದಿಸಿಲ್ಲ' ಎಂದು ಮುಂಬೈನ ಪ್ರತಿಷ್ಠಿತ ಟ್ರಾವೆಲ್ ಕಂಪನಿಗಳಲ್ಲಿ ಒಂದಾದ ರಾಜಾ ರಾಣಿ ಟ್ರಾವೆಲ್ಸ್ ಲಿಮಿಟೆಡ್‌ನ ಮುಖ್ಯಸ್ಥ ಅಭಿಜೀತ್ ಪಾಟೀಲ್ ತಿಳಿಸಿದ್ದಾರೆ.

'ಈಗ ಪರಿಸ್ಥಿತಿ ಹಿಂದಿನಂತಿಲ್ಲ, ಸಂಪೂರ್ಣ ಬದಲಾಗಿದೆ. ಜನರು ತಮ್ಮ ಪ್ರವಾಸವನ್ನು ಮುಂದುವರಿಸಲು ಬಯಸಿದ್ದಾರೆ ಮತ್ತು ಇಲ್ಲಿಯವರೆಗೆ ಯಾವುದೇ ಪ್ರವಾಸ ರದ್ದಾಗಿಲ್ಲ' ಎಂದು ಶ್ರೀನಗರದಿಂದ ದೂರವಾಣಿ ಮೂಲಕ 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರಸ್ತುತ ಜಮ್ಮು ಮತ್ತು ಕಾಶ್ಮೀರದಲ್ಲಿ ಮಹಾರಾಷ್ಟ್ರ ಮತ್ತು ಗುಜರಾತಿನ ಸುಮಾರು 20,000ದಿಂದ 25,000 ಪ್ರವಾಸಿಗರು ಇದ್ದಾರೆ' ಎಂದರು.

'ರಾಜಾ ರಾಣಿ ಟ್ರಾವೆಲ್ಸ್‌ನಿಂದ ಸುಮಾರು 200ರಿಂದ 250 ಜನರು ನೇರವಾಗಿ ಬುಕಿಂಗ್ ಮಾಡಿದ್ದಾರೆ. ಅಲ್ಲದೆ ಇತರ ಟೂರ್ ಏಜೆನ್ಸಿ ಮತ್ತು ಕಂಪನಿಗಳಿಂದ ಬುಕಿಂಗ್‌ಗಳನ್ನು ನಾವು ನಿರ್ವಹಿಸುತ್ತೇವೆ' ಎಂದು ತಿಳಿಸಿದರು.

₹50 ಸಾವಿರ ದಾಟಿದ ವಿಮಾನ ಟಿಕೆಟ್ ದರ

ಪರಿಸ್ಥಿತಿಯ ಲಾಭ ಪಡೆಯಲು ಪೈಪೋಟಿಗೆ ಬಿದ್ದಿರುವ ವಿಮಾನಯಾನ ಕಂಪನಿಗಳು, ಶ್ರೀನಗರಕ್ಕೆ ತೆರಳುವ ಮತ್ತು ಅಲ್ಲಿಂದ ಆಗಮನದ ಟಿಕೆಟ್ ದರವನ್ನು ಹೆಚ್ಚಿಸಿವೆ ಎಂದು ನೆಟ್ಟಿಗರು ಆರೋಪಿಸಿದ್ದಾರೆ.

ಕೆಲವು ವೆಬ್‌ಸೈಟ್‌ಗಳಲ್ಲಿ ಶ್ರೀನಗರಕ್ಕೆ ಏಕ ಮಾರ್ಗದ ಟಿಕೆಟ್ ದರವನ್ನು ₹50 ಸಾವಿರಕ್ಕೂ ಹೆಚ್ಚು ನಮೂದಿಸಲಾಗಿದೆ ಎಂದು ದೂರಿದ್ದಾರೆ.

ಕಂಪನಿ ಪ್ರತಿನಿಧಿಗಳ ತುರ್ತು ಸಭೆಯ ಬಳಿಕ ಮಾತನಾಡಿದ ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ. ರಾಮಮೋಹನ್ ನಾಯ್ಡು, 'ಟಿಕೆಟ್ ದರದ ಮೇಲ್ವಿಚಾರಣೆ ನಡೆಸಲಾಗುತ್ತಿದೆ. ಪ್ರಯಾಣಿಕರಿಗೆ ಅನುಕೂಲವಾಗುವಂತೆ ನ್ಯಾಯಸಮ್ಮತ ದರ ಕಾಯ್ದುಕೊಳ್ಳುವಂತೆ ಸೂಚಿಸಲಾಗಿದೆ' ಎಂದರು.

'ವಿಮಾನ ನಿಲ್ದಾಣದ ಹೊರಭಾಗದಲ್ಲಿ ಹೆಚ್ಚುವರಿ ಶಿಬಿರಗಳನ್ನು ತೆರೆಯಲಾಗಿದೆ. ಅಲ್ಲಿ ವಾಸ್ತವ್ಯ ಹೂಡಿರುವ ಪ್ರಯಾಣಿಕರಿಗೆ ಆಹಾರ ಮತ್ತು ನೀರು ಪೂರೈಸಲಾಗುತ್ತಿದೆ. ನಾನು ಖುದ್ದಾಗಿ ಪರಿಸ್ಥಿತಿಯ ಮೇಲೆ ನಿಗಾವಹಿಸಿದ್ದೇನೆ. ಗೃಹ ಸಚಿವಾಲಯ ಮತ್ತು ವಿಮಾನಯಾನ ಕಂಪನಿಗಳ ಜೊತೆಗೂ ಸಂಪರ್ಕದಲ್ಲಿದ್ದೇನೆ' ಎಂದರು.

ದರ ಹೆಚ್ಚಿಸದಂತೆ ಕೇಂದ್ರ ಸರ್ಕಾರ ಸೂಚನೆ

ನವದೆಹಲಿ: ಪ್ರವಾಸಿಗರನ್ನು ಸ್ಥಳಾಂತರಿಸಲು ಅನುಕೂಲವಾಗುವಂತೆ ಶ್ರೀನಗರದಿಂದ ವಿಮಾನಗಳ ಸಂಖ್ಯೆ ಹೆಚ್ಚಿಸುವಂತೆ ದೇಶೀಯ ವಿಮಾನಯಾನ ಕಂಪನಿಗಳಿಗೆ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ (ಡಿಜಿಸಿಎ) ನಿರ್ದೇಶನ ನೀಡಿದೆ.

ಉಗ್ರರ ಅಟ್ಟಹಾಸದ ಬಳಿಕ ಭಯಭೀತರಾದ ಪ್ರವಾಸಿಗರು ತಮ್ಮ ರಾಜ್ಯಗಳಿಗೆ ಮರಳಲು ಪ್ರಯತ್ನಿಸುತ್ತಿದ್ದಾರೆ. ಆದರೆ, ವಿಮಾನ ಪ್ರಯಾಣ ದರ ದುಪ್ಪಟ್ಟು ಆಗಿದೆ. ಈ ಬಗ್ಗೆ ಹಲವು ಪ್ರಯಾಣಿಕರು ವಿಮಾನಯಾನ ಸಚಿವಾಲಯಕ್ಕೆ ದೂರು ನೀಡಿದ್ದಾರೆ.

ಪ್ರಯಾಣ ದರ ಹೆಚ್ಚಳ ಮಾಡದಂತೆ ಸಚಿವಾಲಯವು ವಿಮಾನಯಾನ ಕಂಪನಿಗಳಿಗೆ ಸೂಚಿಸಿದೆ. ಜತೆಗೆ, ಟಿಕೆಟ್ ರದ್ದತಿ ಹಾಗೂ ಮರು ಹೊಂದಿಸುವಿಕೆ ಶುಲ್ಕ ಮನ್ನಾ ಮಾಡಲು ಕ್ರಮ ಕೈಗೊಳ್ಳುವಂತೆಯೂ ತಿಳಿಸಿದೆ.

ಸುದ್ದಿಗಾರರ ಜತೆಗೆ ಮಾತನಾಡಿದ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, 'ವಿಮಾನಗಳ ಪ್ರಯಾಣ ದರ ಭಾರಿ ಹೆಚ್ಚಳವಾಗಿರುವ ಬಗ್ಗೆ ದೂರುಗಳು ಬಂದಿವೆ. ಈ ಹಿನ್ನೆಲೆಯಲ್ಲಿ ಹೆಚ್ಚಿನ ಟಿಕೆಟ್ ದರ ವಿಧಿಸದಂತೆ ವಿಮಾನಯಾನ ಸಂಸ್ಥೆಗಳಿಗೆ ನಿರ್ದೇಶನ ನೀಡಲಾಗಿದೆ. ಮಂಗಳವಾರ ರಾತ್ರಿಯೇ ಸಚಿವ ರಾಮಮೋಹನ್ ನಾಯ್ಡು ಅವರೊಂದಿಗೂ ಈ ಬಗ್ಗೆ ಮಾತುಕತೆ ನಡೆಸಿದ್ದೇನೆ' ಎಂದರು.

ಶ್ರೀನಗರಕ್ಕೆ ಹೆಚ್ಚುವರಿ ವಿಮಾನ ಸೇವೆ

3,337 ಮಂದಿ ಸ್ಥಳಾಂತರ

ನವದೆಹಲಿ (ಪಿಟಿಐ): ಕಾಶ್ಮೀರದಲ್ಲಿ ಸಿಲುಕಿರುವ ಪ್ರವಾಸಿಗರನ್ನು ಸುರಕ್ಷಿತವಾಗಿ ಸ್ಥಳಾಂತರಿಸುವ ಕಾರ್ಯಾಚರಣೆ ನಡೆಯುತ್ತಿದೆ. ಶ್ರೀನಗರಕ್ಕೆ ಹೆಚ್ಚುವರಿ ವಿಮಾನಗಳ ಹಾರಾಟವೂ ಆರಂಭಗೊಂಡಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಬುಧವಾರ ಬೆಳಿಗ್ಗೆ 6ರಿಂದ ಮಧ್ಯಾಹ್ನ 12 ಗಂಟೆವರೆಗೆ 20 ವಿಮಾನಗಳಲ್ಲಿ 3,337 ಪ್ರವಾಸಿಗರನ್ನು ಸ್ಥಳಾಂತರಿಸಲಾಗಿದೆ ಎಂದು ಹೇಳಿದೆ.

ಇಂಡಿಗೊ, ಏರ್ ಇಂಡಿಯಾ ಮತ್ತು ಸ್ಪೈಸ್‌ಜೆಟ್‌ಗೆ ಸೇರಿದ ವಿಮಾನಗಳು ಪ್ರತಿದಿನ ಶ್ರೀನಗರಕ್ಕೆ ಹಾರಾಟ ನಡೆಸುತ್ತವೆ. ಇವುಗಳನ್ನು ಹೊರತುಪಡಿಸಿ ಈ ಕಂಪನಿಗಳಿಂದ ಹೆಚ್ಚುವರಿಯಾಗಿ ಏಳು ವಿಮಾನಗಳು ಕಾರ್ಯಾಚರಣೆ ನಡೆಸಿವೆ ಎಂದು ತಿಳಿಸಿದೆ.

ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಲು ರದ್ದತಿ ಶುಲ್ಕಗಳಿಗೆ ವಿನಾಯಿತಿ ಅಥವಾ ಶುಲ್ಕಗಳನ್ನು ಮರುಹೊಂದಾಣಿಕೆ ಮಾಡಲಾಗುವುದು. ಟಿಕೆಟ್ ಬುಕಿಂಗ್ ರದ್ದುಪಡಿಸುವ ಪ್ರಯಾಣಿಕರಿಗೆ ಪೂರ್ಣವಾಗಿ ಹಣ ಹಿಂದಿರುಗಿಸಲಾಗುವುದು ಎಂದು ಇಂಡಿಗೊ, ಏರ್ ಇಂಡಿಯಾ, ಆಕಾಶಾ ಏರ್, ಸ್ಪೈಸ್‌ಜೆಟ್, ಏರ್ ಇಂಡಿಯಾ ಎಕ್ಸ್‌ಪ್ರೆಸ್ ಕಂಪನಿ ತಿಳಿಸಿವೆ.

'ಇಂತಹ ತುರ್ತು ಸಂದರ್ಭದಲ್ಲಿ ಟಿಕೆಟ್ ದರ ಏರಿಕೆ ಮಾಡುವುದಿಲ್ಲ. ದರವನ್ನು ಕಡಿಮೆ ಮಾಡಲಾಗಿದೆ. ಪ್ರತಿದಿನ ಕಂಪನಿಗೆ ಸೇರಿದ 20 ವಿಮಾನಗಳು ದೇಶದ ವಿವಿಧ ನಗರಗಳಿಂದ ಶ್ರೀನಗರಕ್ಕೆ ಹಾರಾಟ ನಡೆಸುತ್ತವೆ. ದೆಹಲಿ ಮತ್ತು ಮುಂಬೈನಿಂದ ಹೆಚ್ಚುವರಿ ವಿಮಾನಗಳ ಹಾರಾಟಕ್ಕೆ ಕ್ರಮವಹಿಸಲಾಗಿದೆ' ಎಂದು ಇಂಡಿಗೊ ತಿಳಿಸಿದೆ.

ಏರ್ ಇಂಡಿಯಾದಿಂದ ಪ್ರತಿದಿನ ದೆಹಲಿ ಮತ್ತು ಮುಂಬೈನಿಂದ ಐದು ವಿಮಾನಗಳು ಶ್ರೀನಗರಕ್ಕೆ ಹಾರಾಟ ನಡೆಸುತ್ತವೆ. ಸದ್ಯ ಈ ಎರಡು ನಿಲ್ದಾಣಗಳಿಂದ ಹೆಚ್ಚುವರಿಯಾಗಿ ತಲಾ ಒಂದು ವಿಮಾನವು ಕಾರ್ಯಾಚರಣೆ ಆರಂಭಿಸಿದೆ ಎಂದು ಏರ್ ಇಂಡಿಯಾ ತಿಳಿಸಿದೆ.

'ಕಾಶ್ಮೀರದಲ್ಲಿ ಪ್ರವಾಸಿಗರ ಮೇಲೆ ನಡೆದಿರುವ ಉಗ್ರರ ದಾಳಿಯು ಅಲ್ಲಿನ ಪ್ರವಾಸೋದ್ಯಮದ ಮೇಲೆ ಅಲ್ಪಾವಧಿವರೆಗಷ್ಟೇ ಪರಿಣಾಮ ಬೀರಲಿದೆ. ಜಮ್ಮು ಮತ್ತು ಕಾಶ್ಮೀರದ ಪ್ರವಾಸೋದ್ಯಮ ಅಭಿವೃದ್ಧಿಗೆ ಎಲ್ಲಾ ಸಹಕಾರ ನೀಡಲಾಗುವುದು' ಎಂದು ಭಾರತೀಯ ಪ್ರಯಾಣ ಏಜೆಂಟ್‌ಗಳ ಒಕ್ಕೂಟದ ಅಧ್ಯಕ್ಷ ಅಜಯ್ ಪ್ರಕಾಶ್ ಹೇಳಿದ್ದಾರೆ.

ಕನ್ನಡಿಗರನ್ನು ಸುರಕ್ಷಿತವಾಗಿ ಮರಳಿ ಕರೆತರಲು ವಿಶೇಷ ವಿಮಾನದ ವ್ಯವಸ್ಥೆ ಮಾಡಲಾಗಿದೆ. ಸದ್ಯಕ್ಕೆ ಮುಂಬೈ ಮತ್ತು ದೆಹಲಿಗೆ ಪ್ರವಾಸಿಗರನ್ನು ಕರೆತರಲಾಗುತ್ತಿದೆ. ಇನ್ನೆರಡು ದಿನಗಳಲ್ಲಿ ಎಲ್ಲ ಪ್ರವಾಸಿಗರನ್ನು ಅವರ ಊರುಗಳಿಗೆ ಕಳುಹಿಸಲಾಗುವುದು

ಪ್ರಲ್ಹಾದ ಜೋಶಿ, ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1315 (1330)
ಸೋಯಾ (ರಿಫೈನ್ಡ್)	₹1285 (1280)
ಸೂರ್ಯಕಾಂತಿ (ರಿಫೈನ್ಡ್)	₹1385 (1385)
ಪಾಮೋಲಿನ್	₹1265 (1270)

ವಿನಿಮಯ ದರ

$ ಡಾಲರ್	85.45
£ ಪೌಂಡ್	113.78
€ ಯುರೊ	97.52
¥ ಯೆನ್ (100ಕ್ಕೆ)	60

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1,200-1,600
ಮಧ್ಯಮ	₹800-1,200
ಸಣ್ಣ	₹400-800

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,167
ಇಂದಿನ ಅಂತ್ಯ	24,328
▲	161
ದಿನದ ಗರಿಷ್ಠ	24,359

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹435

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹355-578
ದ್ವಿತಳಿ (ಬಿ.ವಿ)	₹426-688

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹194
ಆರ್‌ಎಸ್‌ಎಸ್-5	₹189
ಗುಡ್ ಲಾಟ್	₹180

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Hotel

ಪುರುಷ ಸಹಾಯಕರು (ಕುಟುಂಬ ಇರುವವರು) ತಕ್ಷಣ ಬೇಕಾಗಿದ್ದಾರೆ. ಸಕಲೇಶಪುರದ ಬಳಿಯಿರುವ ರೆಸಾರ್ಟ್‌ಗೆ, ಸಂಬಳ, ಊಟ, ವಸತಿಯಿರುತ್ತದೆ. ಸಂಪರ್ಕಿಸಿ: 9663497356/ 9632395661

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Engg/ Production Technical

ASTRO YATRA

11 ಗಂಟೆಯಲ್ಲಿ ಪರಿಹಾರ

ಮಹಾಗಣಪತಿ ಜ್ಯೋತಿಷ್ಯಂ
ಕೊಳ್ಳೇಗಾಲದ ಪ್ರಖ್ಯಾತ ಜ್ಯೋತಿಷ್ಯರು
ನಿಮ್ಮ ಜೀವನದ ಯಾವುದೇ ಸಮಸ್ಯೆಗಳಿಗೆ 11 ಗಂಟೆಯಲ್ಲಿ 100% ಶಾಶ್ವತ ಪರಿಹಾರ
ಇವರು ಕೇರಳ, ಕೊಳ್ಳೇಗಾಲ, ಕಾಶಿ ಅಘೋರಿ ನಾಗಾ ಸಾಧುಗಳ ವಿದ್ಯೆಯನ್ನು ಸತತ 21 ವರ್ಷ ಅಧ್ಯಯನ ಮಾಡಿ ಲಕ್ಷಾಂತರ ಜನರ ಸಮಸ್ಯೆಗಳ ಪರಿಹಾರಕ್ಕೆ ಇಂದಿಗೂ ಕಾರಣಕರ್ತರಾಗಿದ್ದಾರೆ.
ಸ್ತ್ರೀ ಪುರುಷ ವಶೀಕರಣ 2 ಗಂಟೆಯಲ್ಲಿ ಮಾಡುತ್ತಾರೆ
ವಿದ್ಯೆ, ಉದ್ಯೋಗ, ವ್ಯಾಪಾರ, ಶತ್ರುಕಾಟ, ಲೈಂಗಿಕ ಸಮಸ್ಯೆ ಮತ್ತು ನೀವು ಯಾವುದೇ ಸಮಸ್ಯೆಗಳಿಂದ ನೊಂದಿದ್ದರೆ ಗುರೂಜಿಯವರನ್ನು ಸಂಪರ್ಕಿಸಿ
ಇಂದಿಗೂ ಸಾವಿರಾರು ಕುಟುಂಬಗಳು ಗುರೂಜಿಯವರಿಂದ ಪರಿಹಾರ ಪಡೆದುಕೊಂಡು ನೆಮ್ಮದಿಯಿಂದ ಜೀವನ ನಡೆಸುತ್ತಿದ್ದಾರೆ.
ವಶೀಕರಣ ಸ್ಪೆಷಲಿಸ್ಟ್
ಪಂಡಿತ ಶ್ರೀ ಸೂರ್ಯನಾರಾಯಣ ಭಟ್ಟರು (ಗುರೂಜಿ)
ಮೊ : 9035405012

ಬೇಕಾಗಿದ್ದಾರೆ
ಲ್ಯಾಬೊರೇಟರಿ ಫರ್ನಿಚರ್ ಮತ್ತು ಕ್ಲೀನ್ ರೂಮ್ ಇಕ್ವಿಪ್ ಮೆಂಟ್ ಕಂಪನಿಗೆ ಬೇಕಾಗಿದ್ದಾರೆ.
1. ಇರೆಕ್ಷನ್ ಟೆಕ್ನಿಷಿಯನ್ (ಐಟಿಐ-ಫಿಟ್ಟರ್)
2. ಸೈಟ್ ಇಂಜಿನಿಯರ್ (ಡಿಎಂಇ/ಐಟಿಐ)
ಉದ್ಯೋಗ ಸ್ಥಳ: ಬೆಂಗಳೂರು-ಹೊಸಕೋಟೆ
ಮೊಬೈಲ್: 9099914830
ಇಮೇಲ್: career@citizenindia.com

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಭವಿಷ್ಯ

Astrology

★॥ನಂ.1.ವಶೀಕರಣ ಸ್ಪೆಷಲಿಸ್ಟ್॥★ ಸ್ತ್ರೀ ವಶೀಕರಣ ಸಂಭೋಗ ವಶೀಕರಣ ನೋಡುವ ಮೂಲಕ ಹೆಸರಿನ ಮೂಲಕ ಹನ್ನೊಂದು ಗಂಟೆಯಲ್ಲಿ ಶಾಶ್ವತ ಪರಿಹಾರ. ಪಂಡಿತ್. ಸಾಯಿಭಟ್. 9900222591

ವ್ಯಾಪಾರ

Business Offers

General

ಮಾರುಕಟ್ಟೆ ಸ್ಥಿತಿಯನ್ನು ಅವಲೋಕಿಸದೆ ಪ್ರತಿ ತಿಂಗಳು 8% ಸ್ಥಿರ ಆದಾಯವನ್ನು ನೀಲ್ಕಾಂತ್ ನಿಮಗೆ ನೀಡುತ್ತದೆ. ಕನಿಷ್ಠ ಹೂಡಿಕೆ ಹಣ ರೂ.25,000/-. ಆಸಕ್ತರು - 9433383338 ಗೆ ಕರೆ ಮಾಡಿ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಕ್ಕಾಗಿ
BOOK YOUR JOB ADS IN PRAJAVANI ALL KARNATAKA ON WEDNESDAY + SUNDAY
@ 750/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9886213331 | +91 9731810277

ಐಷಾರಾಮಿ ಉತ್ಪನ್ನಕ್ಕೆ ಹೆಚ್ಚುವರಿ ತೆರಿಗೆ

ನವದೆಹಲಿ (ಪಿಟಿಐ): ₹10 ಲಕ್ಷಕ್ಕೂ ಹೆಚ್ಚು ಮೌಲ್ಯದ ಐಷಾರಾಮಿ ಉತ್ಪನ್ನಗಳ ಖರೀದಿಗೆ ಇನ್ನು ಮುಂದೆ ಗ್ರಾಹಕರು ಹೆಚ್ಚುವರಿಯಾಗಿ ಶೇ 1ರಷ್ಟು ತೆರಿಗೆ ಪಾವತಿಸಬೇಕಿದೆ. ಈ ಉತ್ಪನ್ನಗಳ ಮಾರಾಟದ ವೇಳೆಯೇ ಖರೀದಿದಾರರಿಂದ ಈ ತೆರಿಗೆ ಮೊತ್ತವನ್ನು ಆದಾಯ ತೆರಿಗೆ ಇಲಾಖೆಯು ಸಂಗ್ರಹಿಸಲಿದೆ.

ಮೂಲದಲ್ಲೇ ತೆರಿಗೆ ಸಂಗ್ರಹದ (ಟಿಸಿಎಸ್) ಈ ನಿಯಮವು ಏಪ್ರಿಲ್ 22ರಿಂದಲೇ ಜಾರಿಗೆ ಬಂದಿದೆ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ.

ಕೈಗಡಿಯಾರ, ವರ್ಣಚಿತ್ರಗಳು, ಶಿಲ್ಪಗಳು, ಪ್ರಾಚೀನ ವಸ್ತುಗಳು, ನಾಣ್ಯ, ಅಂಚೆಚೀಟಿಗಳು, ವಿಹಾರ ನೌಕೆ, ಹೆಲಿಕಾಪ್ಟರ್, ಹ್ಯಾಂಡ್‌ಬ್ಯಾಗ್, ಸನ್‌ಗ್ಲಾಸ್, ಕ್ರೀಡಾ ಉಡುಪು ಮತ್ತು ಪರಿಕರಗಳು, ರೇಸ್ ಅಥವಾ ಪೋಲೊ ಕ್ರೀಡೆಗಾಗಿ ಖರೀದಿಸುವ ಕುದುರೆ, ಹೋಮ್ ಥಿಯೇಟರ್ ಪರಿಕರಗಳಿಗೆ ಈ ತೆರಿಗೆ ಅನ್ವಯಿಸಲಿದೆ ಎಂದು ಇಲಾಖೆ ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

1ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಗಿರಿಜಮ್ಮರವರು
ಕಡೂರು ತಾಲ್ಲೂಕು, ಹೋಚಿಹಳ್ಳಿ
ಮರಣ : 24-04-2024
ಇಂತಿ ದುಃಖತಪ್ತರು : ಗಿಡ್ನಾರ ಮನೆ, ಕುಟುಂಬದವರು ಹಾಗೂ ಬಂಧು ಮಿತ್ರರು
ದೂರವಾಣಿ : 9945534077

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಕೆ. ಕೇಶವಲು ನಾಯ್ಡು
ಗೌ॥ ಹಾಲಿ ನಿರ್ದೇಶಕರು
ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಇಲ್ಲಿ ವ್ಯವಸ್ಥಾಪಕರಾಗಿ ಮತ್ತು ನಿರ್ದೇಶಕರಾಗಿ ಸುದೀರ್ಘವಾಗಿ ಸೇವೆ ಸಲ್ಲಿಸಿದ್ದು, ಇವರು ದಿನಾಂಕ: 22.04.2025 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಇವರ ಕುಟುಂಬದವರಿಗೆ ಈ ದುಃಖವನ್ನು ಭರಿಸುವ ಶಕ್ತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗ
ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

8ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಜಿ.ಅಶ್ವಥಯ್ಯನವರು
ಮಾಜಿ ಪುರಸಭಾ ಉಪಾಧ್ಯಕ್ಷರು
ಯಲಹಂಕ, ಬೆಂ-64
ನೀವು ನಮ್ಮನ್ನಗಲಿ ಕಳೆಯಿತು 8 ವರ್ಷ. ಆದರೆ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಅಮರ. ನಿಮ್ಮ ಆದರ್ಶಗಳು ನಮಗೆ ದಾರಿದೀಪ.
ಇಂತಿ ಶ್ರೀ ವೈ.ಎ.ಶ್ರೀನಿವಾಸಮೂರ್ತಿ ಮತ್ತು ಸಹೋದರರು.
ಮೊ.9845278780, 9845538678.

For Online Classified Booking
Name Change / Education / Property / Job / Services & many more
Log on to :
dhclassifieds.com

4ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಎಂ. ಜಯಮ್ಮನವರು
ಲೇಟ್ ಎಂ. ಪುಟ್ಟಪ್ಪನವರ ಧರ್ಮಪತ್ನಿ, ತಾತಗುಣಿ
ಜನನ : 12-01-1949
ಮರಣ : 24-04-2021
ನಿಮ್ಮ ಪ್ರೀತಿ ವಾತ್ಸಲ್ಯ, ಕರುಣೆ, ನಿರಂತರ

ತಗ್ಗಿದ ಚಿನ್ನದ ಧಾರಣೆ

10 ಗ್ರಾಂಗೆ ₹2,400 ಇಳಿಕೆ: ಬೆಳ್ಳಿ ದರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ 10 ಗ್ರಾಂಗೆ ₹1 ಲಕ್ಷ ದಾಟಿ ಚಾರಿತ್ರಿಕ ದಾಖಲೆ ಬರೆದಿದ್ದ ಚಿನ್ನದ ದರವು, ಬುಧವಾರದ ವಹಿವಾಟಿನಲ್ಲಿ ದಿಢೀರ್ ಇಳಿಕೆ ಕಂಡಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಹಳದಿ ಲೋಹದ ದರ ಇಳಿಕೆಯಾಗಿದೆ. ಹಾಗಾಗಿ, ದೇಶೀಯ ಮಾರುಕಟ್ಟೆಯಲ್ಲೂ ಬೆಲೆ ಇಳಿದಿದೆ ಎಂದು ತಜ್ಞರು ಹೇಳಿದ್ದಾರೆ.



10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹2,400 ಇಳಿಕೆಯಾಗಿ, ₹99,200ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ₹3,400 ಕಡಿಮೆಯಾಗಿದ್ದು, ₹98,700 ಆಗಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹700 ಏರಿಕೆಯಾಗಿ, ₹99,200 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'ಚೀನಾದ ಸರಕುಗಳ ಮೇಲೆ ಅಮೆರಿಕವು ಅತಿಹೆಚ್ಚು ಸುಂಕ ವಿಧಿಸಿದ ಸಂದರ್ಭದಲ್ಲಿ ಚಿನ್ನದ ಬೆಲೆಯು ಏರಿಕೆ ಕಂಡಿತ್ತು. ಇದರಿಂದ ಜಾಗತಿಕ ವ್ಯಾಪಾರ ಸಮರ ಶುರುವಾಗಿತ್ತು. ಟ್ರಂಪ್ ಆಡಳಿತವು ಚೀನಾ ಮೇಲೆ ಹೇರಿದ್ದ ಸುಂಕದ ಪ್ರಮಾಣವನ್ನು ತಗ್ಗಿಸುವ ಬಗ್ಗೆ ಸುಳಿವು ನೀಡಿದೆ. ಇದರಿಂದ ಹಳದಿ ಲೋಹದ ಬೆಲೆ ಇಳಿಕೆಯಾಗಿದೆ' ಎಂದು ಅಬಾನ್ಸ್ ಫೈನಾನ್ಶಿಯಲ್ ಸರ್ವಿಸಸ್‌ನ ಸಿಇಒ ಚೇತನ್ ಮೆಹ್ತಾ ಹೇಳಿದ್ದಾರೆ.

ಜಾಗತಿಕ ಮಟ್ಟದಲ್ಲೂ ಬೆಲೆ ಇಳಿಕೆ

ಜಾಗತಿಕ ಮಾರುಕಟ್ಟೆಯಲ್ಲಿಯೂ ಹಳದಿ ಲೋಹದ ಬೆಲೆ ಇಳಿಕೆಯಾಗಿದೆ.

ಮಂಗಳವಾರದ ವಹಿವಾಟಿನಲ್ಲಿ ಪ್ರತಿ ಔನ್ಸ್ (28.34 ಗ್ರಾಂ) ಚಿನ್ನದ ದರ 3,500 ಡಾಲರ್‌ಗೆ (₹2.98 ಲಕ್ಷ) ತಲುಪಿ ಸಾರ್ವಕಾಲಿಕ ದಾಖಲೆ ಬರೆದಿತ್ತು. ಬುಧವಾರದ ವಹಿವಾಟಿನ ಅಂತ್ಯಕ್ಕೆ 3,316 ಡಾಲರ್‌ಗೆ (₹2.83 ಲಕ್ಷ) ಇಳಿದಿದೆ.

ಪ್ರತಿ ಸುಂಕ ನೀತಿಯು ಹಣದುಬ್ಬರ ಏರಿಕೆಗೆ ಕಾರಣವಾಗಲಿದೆ. ಜೊತೆಗೆ, ಅಮೆರಿಕದ ಆರ್ಥಿಕತೆ ಬೆಳವಣಿಗೆ ಮೇಲೆ ಪರಿಣಾಮ ಬೀರಲಿದೆ ಎಂದು ಅಲ್ಲಿನ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್‌ನ ಗವರ್ನರ್ ಜೆರೋಮ್ ಪೊವೆಲ್ ಹೇಳಿದ್ದರು.

ಈ ನಡುವೆ ಟ್ರಂಪ್ ಆಡಳಿತವು ಪೊವೆಲ್ ಅವರನ್ನು ಗವರ್ನರ್ ಹುದ್ದೆಯಿಂದ ಕೆಳಗಿಳಿಸಲಿದೆ ಎಂದು ಹೇಳಲಾಗಿತ್ತು. ಆದರೆ, ಅಂತಹ ಯಾವುದೇ ನಿರ್ಧಾರ ಕೈಗೊಳ್ಳುವುದಿಲ್ಲ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಹಾಗಾಗಿ, ಜಾಗತಿಕ ಮಟ್ಟದಲ್ಲಿ ಚಿನ್ನದ ಧಾರಣೆ ಇಳಿಮುಖವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಚೀನಾ ಮೇಲಿನ ಸುಂಕ ಕಡಿತ?

ಬೀಜಿಂಗ್/ವಾಷಿಂಗ್ಟನ್ (ಎಎಫ್‌ಪಿ): ಟ್ರಂಪ್ ಅವರು ಚೀನಾದ ಉತ್ಪನ್ನಗಳ ಮೇಲಿನ ಸುಂಕವನ್ನು ಗಣನೀಯವಾಗಿ ತಗ್ಗಿಸುವ ಸುಳಿವು ನೀಡಿದ ಮರುದಿನವೇ ಅಮೆರಿಕ ಜತೆಗೆ ವ್ಯಾಪಾರ ಮಾತುಕತೆಗೆ ಬಾಗಿಲು ತೆರೆದಿದೆ ಎಂದು ಚೀನಾ ಬುಧವಾರ ಹೇಳಿದೆ.

ಟ್ರಂಪ್ ಅವರು ಚೀನಾದ ಅನೇಕ ಉತ್ಪನ್ನಗಳ ಮೇಲೆ ಶೇ 145ರಷ್ಟು ಸುಂಕ ವಿಧಿಸಿದ್ದಾರೆ. ಈ ಸುಂಕದಲ್ಲಿ ಶೇ 50ರಿಂದ ಶೇ 65ರಷ್ಟು ಕಡಿತವಾಗಬಹುದೆಂದು 'ವಾಲ್‌ಸ್ಟ್ರೀಟ್ ಜರ್ನಲ್' ವರದಿ ಮಾಡಿದೆ.

ಚೀನಾ ಕೂಡ ಅಮೆರಿಕದ ಉತ್ಪನ್ನಗಳ ಮೇಲೆ ಶೇ 125ರಷ್ಟು ಪ್ರತಿ ಸುಂಕ ವಿಧಿಸುವ ಮೂಲಕ ಪತ್ರೀಕಾರ ಕ್ರಮ ತೆಗೆದುಕೊಂಡಿತ್ತು. ಆದರೆ, ಟ್ರಂಪ್ ಅವರ ಸುಂಕ ಕಡಿತದ ಹೇಳಿಕೆಯ ಬೆನ್ನಲ್ಲೇ ವ್ಯಾಪಾರ ಮಾತುಕತೆಗಳಲ್ಲಿ ತೊಡಗಿಸಿಕೊಳ್ಳಲು ಸಿದ್ಧವಿರುವುದಾಗಿ ಚೀನಾ ಪುನರುಚ್ಚರಿಸಿದೆ.

ಚೀನಾದ ಉತ್ಪನ್ನಗಳ ಮೇಲೆ ಹೇರಿರುವ ಶೇ 145ರಷ್ಟು ಸುಂಕ ಹೆಚ್ಚಿನ ಮಟ್ಟದ್ದಾಗಿದೆ ಎಂದು ಒಪ್ಪಿಕೊಂಡಿರುವ ಟ್ರಂಪ್, 'ಇದು ಮುಂದೆ ಗಣನೀಯ ಪ್ರಮಾಣದಲ್ಲಿ ತಗ್ಗಲಿದೆ. ಆದರೆ, ಅದು ಶೂನ್ಯಕ್ಕೆ ಇಳಿಯುವುದಿಲ್ಲ. ಅಂತಿಮವಾಗಿ, ಚೀನಾ ಒಪ್ಪಂದಕ್ಕೆ ಬರಬೇಕಾಗುತ್ತದೆ ಎಂದು ಮಂಗಳವಾರವಷ್ಟೇ ಹೇಳಿದ್ದರು.

ಸಂಕ್ಷಿಪ್ತ ಸುದ್ದಿ

ಎಂಇಐಎಲ್‌ಗೆ ಟೆಂಡರ್ ಆದೇಶ ಹಸ್ತಾಂತರ

ಬೆಂಗಳೂರು: ರಾಜ್ಯದ ಕೈಗಾ ಸ್ಥಾವರದಲ್ಲಿ ಪರಮಾಣು ವಿದ್ಯುತ್ ಉತ್ಪಾದಿಸುವ ಯೋಜನೆಗೆ ಸಂಬಂಧಿಸಿದ ₹12,800 ಕೋಟಿ ಮೊತ್ತದ ಟೆಂಡರ್ ಆದೇಶವನ್ನು ಮೇಘಾ ಎಂಜಿನಿಯರಿಂಗ್ ಮತ್ತು ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್‌ಗೆ (ಎಂಇಐಎಲ್) ಹಸ್ತಾಂತರಿಸಲಾಗಿದೆ.

NPCIL

ಕೈಗಾದ 5 ಮತ್ತು 6ನೇ ಘಟಕದಲ್ಲಿ ತಲಾ 700 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಯೋಜನೆ ಇದಾಗಿದೆ. ನ್ಯೂಕ್ಲಿಯರ್ ಪವರ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ (ಎನ್‌ಪಿಸಿಐಎಲ್) ಈ ಟೆಂಡರ್ ನೀಡಿದೆ ಎಂದು ಎಂಇಐಎಲ್ ತಿಳಿಸಿದೆ.

ಎನ್‌ಪಿಸಿಐಎಲ್‌ನ ಮುಂಬೈ ಪ್ರಧಾನ ಕಚೇರಿಯಲ್ಲಿ ಎಂಇಐಎಲ್ ನಿರ್ದೇಶಕ (ಯೋಜನೆಗಳು) ಸುಬ್ಬಯ್ಯ ಮತ್ತು ಅವರ ತಂಡಕ್ಕೆ ಔಪಚಾರಿಕವಾಗಿ ಟೆಂಡರ್ ಆದೇಶವನ್ನು ಹಸ್ತಾಂತರಿಸಲಾಯಿತು ಎಂದು ತಿಳಿಸಿದೆ.

ಇದು ಎನ್‌ಪಿಸಿಐಎಲ್ ಈವರೆಗಿನ ಅತಿದೊಡ್ಡ ಟೆಂಡರ್ ಆಗಿದೆ. ದೇಶದ ಇಂಧನ ಭವಿಷ್ಯ ರೂಪಿಸಲು ಸಹಾಯ ಮಾಡುವ ಕ್ಷೇತ್ರವಾದ ಪರಮಾಣು ಇಂಧನ ವಲಯಕ್ಕೆ ಎಂಇಐಎಲ್‌ನ ಚೊಚ್ಚಲ ಹೆಜ್ಜೆಯಾಗಿದೆ ಎಂದು ಹೇಳಿದೆ.

ಗೂಳಿ ಓಟ ಅಬಾಧಿತ

ಮುಂಬೈ (ಪಿಟಿಐ): ವಿದೇಶಿ ಬಂಡವಾಳದ ಒಳಹರಿವು ಏರಿಕೆ ಮತ್ತು ಐ.ಟಿ, ಆಟೊ ಷೇರುಗಳ ಖರೀದಿ ಹೆಚ್ಚಳದಿಂದಾಗಿ ಬುಧವಾರ ನಡೆದ ವಹಿವಾಟಿನಲ್ಲಿ ದೇಶೀಯ ಷೇರುಪೇಟೆಯು ಏರಿಕೆ ದಾಖಲಿಸಿದೆ.

ಸತತ ಏಳು ವಹಿವಾಟುಗಳಲ್ಲಿ ಗೂಳಿ ಓಟ ಮುಂದುವರಿದಿದ್ದು, ಹೂಡಿಕೆದಾರರ ಸಂಪತ್ತು ₹36.65 ಲಕ್ಷ ಕೋಟಿ ಹೆಚ್ಚಳವಾಗಿದೆ. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ನಾಲ್ಕು ತಿಂಗಳ ಬಳಿಕ ಮತ್ತೆ 80 ಸಾವಿರ ಅಂಶದ ಗಡಿ ದಾಟಿದೆ.

ಸೆನ್ಸೆಕ್ಸ್ 520 ಅಂಶ ಏರಿಕೆ ಕಂಡು, 80,116 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 161 ಅಂಶ ಹೆಚ್ಚಳ ಕಂಡು, 24,254 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ	
ಚಾಲಿ	39199-43999
ಚಿಪ್ಪು	25111-32609
ಕೋಕ	8089-25899
ಫ್ಯಾಕ್ಟರಿ	3379-25700
ಹೊಸಚಾಲಿ	35169-42129
ಪುತ್ತೂರು	
ಕೋಕ	22000-30000
ಹೊಸತು	26000-44000
ಹಳತು	35500-51000
ಶಿವಮೊಗ್ಗ	
ಬೆಟ್ಟೆ	53009-61069
ಗೊರಬಲು	18089-35189
ರಾಶಿ	48099-60899
ಸರಕು	63210-91009
ಸಿದ್ದಾಪುರ	
ಬಿಳಿಗೋಟು	26809-32119
ಚಾಲಿ	34669-41299
ಕೋಕ	17369-24119
ಹಳೆಚಾಲಿ	39099-39099
ಕೆಂಪುಗೋಟು	21909-22909
ರಾಶಿ	43689-51299
ತಟ್ಟಿಬೆಟ್ಟೆ	28619-30099

'ಈ ನ್ಯಾಯಾಧೀಶರ ಮೇಲೆ ನಮಗೆ ನಂಬಿಕೆ ಇಲ್ಲ...'

ಒಂದನೇ ಪುಟದಿಂದ...

ಬೆಳಿಗ್ಗೆ ಪ್ರಕರಣವನ್ನು ವಿಚಾರಣೆಗೆ ಕೂಗಿದಾಗ ಅರುಣ್ ಈ ಕುರಿತ ಆರು ಪುಟಗಳ ಮೆಮೊ (ಜ್ಞಾಪನಾ ಪತ್ರ) ಅನ್ನು ನ್ಯಾಯಾಧೀಶರಿಗೆ ಸಲ್ಲಿಸಿದರು. ಆದರೆ, ಇದಕ್ಕೆ ಪ್ರಾಸಿಕ್ಯೂಷನ್ ಪರ ಹಾಜರಿದ್ದ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್ ಮತ್ತು ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ಎನ್.ನಾಯಕ್, 'ಅರ್ಜಿದಾರರು, ಪ್ರಸಕ್ತ ವರ್ಷದ ಜನವರಿ 16ರಿಂದ ಒಂದಲ್ಲಾ ಒಂದು ಕಾರಣಕ್ಕೆ ವಿಚಾರಣೆಯನ್ನು ವಿಳಂಬಗೊಳಿಸುವ ಪ್ರಯತ್ನ ಮಾಡುತ್ತಿದ್ದಾರೆ' ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಏತನ್ಮಧ್ಯೆ, ಆರೋಪಿ ಪರ ವಕೀಲರ ಕೋರಿಕೆಯಂತೆ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು ಮೆಮೊ ಅನ್ನು ಪ್ರಧಾನ ಜಿಲ್ಲಾ ನ್ಯಾಯಾಧೀಶರ ಅವಗಾಹನೆಗೆ ಕಳುಹಿಸಿ ವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದೂಡಿದರು. ಪ್ರಧಾನ ಜಿಲ್ಲಾ ನ್ಯಾಯಾಧೀಶರು ಅರ್ಜಿ ಪುರಸ್ಕರಿಸಲು ನಿರಾಕರಿಸಿದ್ದರಿಂದಾಗಿ, ಅರ್ಜಿದಾರರ ಪರ ವಕಾಲತ್ತಿನಿಂದ ತಾವು ನಿವೃತ್ತಿ ಆಗುತ್ತಿರುವುದಾಗಿ ಘೋಷಿಸಿದ ಅರುಣ್, ನ್ಯಾಯಾಧೀಶರಿಗೆ ಮೆಮೊ ಸಲ್ಲಿಸಿದರು. ಇದರಿಂದಾಗಿ ನ್ಯಾಯಾಧೀಶ ಸಂತೋಷ ಗಜಾನನ ಭಟ್ ವಿಚಾರಣೆಯನ್ನು ಗುರುವಾರಕ್ಕೆ (ಏ.24) ಮುಂದೂಡಿ ಆದೇಶಿಸಿದರು.

ಆರೋಪಗಳೇನು?: 'ನ್ಯಾಯಾಧೀಶ ಸಂತೋಷ ಭಟ್ ಅವರು ವಿಚಾರಣೆಯ ವೇಳೆ ಪ್ರಜ್ವಲ್ ಅವರನ್ನು, ಈತ ಮಹಾತ್ಮ, ಫಿಲಂ ಹೀರೊ, ವಿಡಿಯೊ ನೋಡೋಲ್ವಾ, ಹೋಗಪ್ಪಾ ನಿನ್ನ ವಿಡಿಯೊ ನೋಡು... ಎಂದೆಲ್ಲಾ ಸಂಬೋಧಿಸಿದ್ದಾರೆ. ತರಾತುರಿಯಲ್ಲಿ ದೋಷಾರೋಪ ನಿಗದಿಪಡಿಸಿ ವಿಚಾರಣೆಗೆ ಮುಂದಾಗಿದ್ದಾರೆ. ಇದು ಅವರು ಈ ಪ್ರಕರಣದಲ್ಲಿ ಹೊಂದಿರುವ ಪೂರ್ವಗ್ರಹ ಭಾವನೆಯನ್ನು ವ್ಯಕ್ತಪಡಿಸುತ್ತದೆ. ಆದ್ದರಿಂದ, ಈ ಪ್ರಕರಣದ ವಿಚಾರಣೆಯನ್ನು ಬೇರೊಂದು ನ್ಯಾಯಾಲಯಕ್ಕೆ ವರ್ಗಾವಣೆ ಮಾಡಲು ಜಿಲ್ಲಾ ಪ್ರಧಾನ ಸೆಷನ್ಸ್ ನ್ಯಾಯಾಧೀಶರು ಆದೇಶಿಸಬೇಕು' ಎಂದು ಕೋರಿದ್ದರು.



ಅಮಿತ್ ಜೊತೆ ಪಂಕಜ್ ಹೊಸ ಸಿನಿಮಾ

2023ರಲ್ಲಿ ತೆರೆಕಂಡಿದ್ದ ‘ಒಎಂಜಿ 2’ ಚಿತ್ರದ ಬಳಿಕ ನಿರ್ದೇಶಕ ಅಮಿತ್ ರೈ ಜೊತೆ ನಟ ಪಂಕಜ್ ತ್ರಿಪಾಠಿ ಮತ್ತೆ ಕೈಜೋಡಿಸಿದ್ದಾರೆ. ಇನ್ನಷ್ಟೇ ಶೀರ್ಷಿಕೆ ಇಡಬೇಕಾದ ಈ ಸಿನಿಮಾದ ಚಿತ್ರೀಕರಣ ಆರಂಭವಾಗಿದ್ದು, ಬಿಹಾರದ ಸಂಸ್ಕೃತಿ ಹಾಗೂ ಕಥೆಯನ್ನು ಸಿನಿಮಾ ಹೊಂದಿದೆ.

ಸಿಂಪಲ್ ಸುನಿ ಬುಟ್ಟಿಯಲ್ಲಿನ ಚಿತ್ರಗಳು

ತಮ್ಮ ಸಿನಿಮಾಗಳ ಮೂಲಕ ಚಂದನವನಕ್ಕೆ ಹೊಸಮುಖಗಳನ್ನು ಪರಿಚಯಿಸುತ್ತಾ ಬಂದವರು ನಿರ್ದೇಶಕ ಸಿಂಪಲ್ ಸುನಿ. ಅವರ ಮುಂದಿನ ಮೂರು ಸಿನಿಮಾಗಳಲ್ಲಿ ಮೂವರು ಹೊಸ ನಾಯಕರು ಬೆಳ್ಳಿತೆರೆ ಪ್ರವೇಶಿಸುತ್ತಿದ್ದಾರೆ. ಸದ್ಯ ನಾಲ್ಕು ಪ್ರಾಜೆಕ್ಟ್‌ಗಳು ಸುನಿ ಅವರ ಕೈಯಲ್ಲಿದ್ದು, ಅವುಗಳ ಅಪ್‌ಡೇಟ್ ಇಲ್ಲಿದೆ.

ಸಿಂಪಲ್ ಸುನಿ

ಆಶಿಕಾ, ದುಷ್ಯಂತ್

ಅಭಿಲಾಷ್ ಪಿ.ಎಸ್.

1 ಗತವೈಭವ

ದುಷ್ಯಂತ್ ಹಾಗೂ ಆಶಿಕಾ ರಂಗನಾಥ್ ನಟಿಸಿರುವ ಈ ಸಿನಿಮಾದ ಚಿತ್ರೀಕರಣ 2022ರಲ್ಲಿ ಆರಂಭವಾಗಿತ್ತು. ಕೆಲವು ತಿಂಗಳ ಹಿಂದೆ ಪೋರ್ಚುಗಲ್‌ನಲ್ಲಿ ಈ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಸದ್ಯ ವಿಎಫ್‌ಎಕ್ಸ್ ಕೆಲಸ ನಡೆಯುತ್ತಿದೆ. ದುಷ್ಯಂತ್‌ಗೆ ಇದು ಚೊಚ್ಚಲ ಸಿನಿಮಾ. ಪ್ರೇಮಕಥೆಯೊಂದನ್ನು ಸೈಂಟಿಫಿಕ್ ಥ್ರಿಲ್ಲರ್ ಮಾದರಿಯಲ್ಲಿ ಸುನಿ ತೆರೆಗೆ ತರುತ್ತಿದ್ದು, ವಿಎಫ್‌ಎಕ್ಸ್ ಕಲಾವಿದನ ಪಾತ್ರದಲ್ಲಿ ದುಷ್ಯಂತ್ ಕಾಣಿಸಿಕೊಳ್ಳುತ್ತಿದ್ದಾರೆ. ನಾಯಕ ಕಲ್ಪನೆ ಮಾಡುವ ಅವತಾರಕ್ಕೆ ಪೂರಕವಾಗಿ ಆಶಿಕಾ ಕೂಡಾ ದೇವಕನ್ಯೆ, ಪೋರ್ಚುಗೀಸ್ ಮರ್ಚೆಂಟ್ ಹೀಗೆ ಹಲವು ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ.

‘ದೇವಲೋಕ, ವಾಸ್ಕೋ ಡ ಗಾಮನ ಸಮುದ್ರಯಾನ ಹೀಗೆ ಹಲವು ಅಂಶಗಳು ಸಿನಿಮಾದಲ್ಲಿದ್ದು, ಇವುಗಳಲ್ಲಿ ವಿಎಫ್‌ಎಕ್ಸ್ ಬಹಳಷ್ಟಿದೆ. ನಾವು ಇಲ್ಲೇ ಹಡಗಿನ ದೃಶ್ಯಾವಳಿಗಳನ್ನು ಚಿತ್ರೀಕರಣ ಮಾಡಲು ಸೆಟ್ ಹಾಕುವ ಯೋಜನೆ ಹಾಕಿಕೊಂಡಿದ್ದೆವು. ಆದರೆ ಅಲ್ಲಿಗೇ ಹೋಗಿ ಚಿತ್ರೀಕರಣ ನಡೆಸುವುದು ಅಗ್ಗವಾಗಿತ್ತು. ಅಲ್ಲಿ ಅದೇ ಮಾದರಿಯ ಹಡಗು ಇತ್ತು. ‘ಮದಿರ’ ಎಂಬ ದ್ವೀಪದಲ್ಲಿ ಶೂಟಿಂಗ್ ನಡೆಸಿದೆವು. ಅಲ್ಲಿಯೂ ‘ಮದಿರ’ ಎಂದರೆ ಹಳೇ ವೈನ್ ಎಂದು ತಿಳಿದು ಆಶ್ಚರ್ಯವಾಯಿತು. ಹಲವು ಕಾರಣಗಳಿಂದ ಸಿನಿಮಾ ವಿಳಂಬವಾಯಿತು. ಚಿತ್ರವು ಜೂನ್ ಅಥವಾ ಜುಲೈನಲ್ಲಿ ತೆರೆಕಾಣುವ ಸಾಧ್ಯತೆ ಇದೆ’ ಎಂದಿದ್ದಾರೆ ಸುನಿ.

2 ಮೋಡ ಕವಿದ ವಾತಾವರಣ

‘ಒಂದು ಸರಳ ಪ್ರೇಮಕತೆ’ ಚಿತ್ರದ ನಿರ್ಮಾಪಕರಾದ ಮೈಸೂರು ರಮೇಶ್ ನಿರ್ಮಾಣ ಮಾಡುತ್ತಿರುವ ಚಿತ್ರ ಇದಾಗಿದೆ. ಚಿತ್ರತಂಡವು ತಾರಾಬಳಗವನ್ನು ಇನ್ನಷ್ಟೇ ಘೋಷಿಸಬೇಕಿದೆ. ‘ಈ ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದೆ. ಒಂದು ಹಾಡಿನ ಚಿತ್ರೀಕರಣವಷ್ಟೇ ಬಾಕಿ ಇದೆ. ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿ ಈ ಸಿನಿಮಾವಿದೆ. ಗತವೈಭವ ಬಿಡುಗಡೆ ಬೆನ್ನಲ್ಲೇ ಈ ಸಿನಿಮಾ ತೆರೆಕಾಣಲಿದೆ. ಸಿನಿಮಾದ ಮೊದಲ ಪೋಸ್ಟರ್ ಬಿಡುಗಡೆ ಮಾಡುವ ಸಂದರ್ಭದಲ್ಲೇ ರಿಲೀಸ್ ದಿನಾಂಕ ಘೋಷಣೆ ಮಾಡುತ್ತೇವೆ. ಇದರಲ್ಲೂ ಹೊಸಮುಖಗಳೇ. ಇದೂ ಸೈಂಟಿಫಿಕ್ ಫಿಕ್ಷನ್ ಪ್ರೇಮಕಥೆಯಾಗಿದೆ’ ಎಂದರು ಸುನಿ.

3 ದೇವರು ರುಜು ಮಾಡಿದನು

ವೀರಾಜ್, ದಿವಿತಾ ರೈ ಹಾಗೂ ಕೀರ್ತಿಕೃಷ್ಣ ನಟಿಸುತ್ತಿರುವ ಈ ಸಿನಿಮಾದ ಚಿತ್ರೀಕರಣ ಪ್ರಗತಿಯಲ್ಲಿದೆ. ಚಿತ್ರವನ್ನು ಗೋವಿಂದ್ ರಾಜ್ ಸಿ.ಟಿ. ನಿರ್ಮಾಣ ಮಾಡುತ್ತಿದ್ದು, ಸಂತೋಷ್ ರೈ ಪಾತಾಜೆ ಛಾಯಾಚಿತ್ರಗ್ರಹಣವಿದೆ.

4 ರಿಚಿ ರಿಚ್

ಈ ಸಿನಿಮಾ ಸದ್ಯ ಪ್ರಿಪ್ರೊಡಕ್ಷನ್ ಹಂತದಲ್ಲಿದೆ. ‘ಬಿಗ್‌ಬಾಸ್’ ಹತ್ತನೇ ಆವೃತ್ತಿಯ ವಿಜೇತ ನಟ ಕಾರ್ತಿಕ್ ಮಹೇಶ್ ಚಿತ್ರದ ನಾಯಕ. ಅರವಿಂದ್ ವೆಂಕಟೇಶ್ ರೆಡ್ಡಿ ತಮ್ಮದೇ ಎವಿಆರ್ ಎಂಟರ್‌ಟೈನ್ಮೆಂಟ್ಸ್ ಎಂಬ ಬ್ಯಾನರ್‌ನಡಿ ಈ ಸಿನಿಮಾವನ್ನು ನಿರ್ಮಾಣ ಮಾಡಲಿದ್ದಾರೆ. ರಿದ್ದೇಶ್ ಚಿನ್ನಯ್ಯ ಎಂಬ ಪಾತ್ರದಲ್ಲಿ ಕಾರ್ತಿಕ್ ನಟಿಸುತ್ತಿದ್ದಾರೆ.

“ಇದೊಂದು ಪರೀಕ್ಷೆಯ ಸಮಯ. ಮೊದಲು ಒಂದು ಅವರೇಜ್ ಸಿನಿಮಾಗೂ ಗಳಿಕೆ ಇತ್ತು. ಹಕ್ಕುಗಳ ಮಾರಾಟದಿಂದ ವಹಿವಾಟು ಆಗಿಬಿಡುತ್ತಿತ್ತು. ಈಗ ಬಿಡುಗಡೆ ಮೊದಲು ಯಾವ ವಹಿವಾಟು ಆಗುತ್ತಿಲ್ಲ. ಒಳ್ಳೆಯ ಸಿನಿಮಾಗಳು ಬಂದಾಗ ಜನರು ಖಂಡಿತವಾಗಿಯೂ ನೋಡುತ್ತಾರೆ. ಇತ್ತೀಚೆಗೆ ಸೆಲಿಬ್ರಿಟಿ ಶೋಗಳಷ್ಟೇ ಹೌಸ್‌ಫುಲ್ ಆಗುತ್ತಿದೆ! ಮುಂದೆ ‘45’, ‘ಕೆಡಿ’ಯಂಥ ಹಲವು ನಿರೀಕ್ಷಿತ ಸಿನಿಮಾಗಳು ಬಿಡುಗಡೆಗೆ ಸಜ್ಜಾಗಿವೆ. ಮತ್ತೆ ಚಿತ್ರಮಂದಿರಗಳು ತುಂಬಿಕೊಳ್ಳಬಹುದು ಎನ್ನುವ ನಿರೀಕ್ಷೆ ಇದೆ

ಸುನಿ, ನಿರ್ದೇಶಕ

ಇಂದು ರಾಜ್‌ಕುಮಾರ್ ಜನ್ಮದಿನ

ರಾಜ್‌ಕುಮಾರ್

ಇಂದು (ಏ.24) ವರನಟ ರಾಜ್‌ಕುಮಾರ್ ಅವರ 96ನೇ ಜನ್ಮದಿನ. ಅವರು ನಮ್ಮನ್ನು ಅಗಲಿ 19 ವರ್ಷ ಉರುಳಿದ್ದರೂ, ಅವರ ನೆನಪು ಇನ್ನೂ ಹಸಿರಾಗಿದೆ. ಜನ್ಮದಿನದ ಅಂಗವಾಗಿ ಕುಟುಂಬದ ಸದಸ್ಯರು ಕಂಠೀರವ ಸ್ಟುಡಿಯೊದಲ್ಲಿರುವ ರಾಜ್ ಅವರ ಸಮಾಧಿಗೆ ಬೆಳಗ್ಗೆ ಪೂಜೆ ಸಲ್ಲಿಸಲಿದ್ದು, ಸಾವಿರಾರು ಅಭಿಮಾನಿಗಳು ಭೇಟಿ ನೀಡಲಿದ್ದಾರೆ.

ತಾತನ (ರಾಜ್‌ಕುಮಾರ್) ಜನ್ಮದಿನದಂದೇ ತಮ್ಮ ನಿರ್ಮಾಣದ ಚೊಚ್ಚಲ ಚಿತ್ರ ‘ಫೈರ್‌ಫ್ಲೈ’ ಅನ್ನು ಮೊಮ್ಮಗಳು ನಿವೇದಿತಾ ಶಿವರಾಜ್‌ಕುಮಾರ್ ಬಿಡುಗಡೆಗೊಳಿಸುತ್ತಿದ್ದಾರೆ. ಜೊತೆಗೆ ಶಿವರಾಜ್‌ಕುಮಾರ್ ಅವರು ನಟಿಸಲಿರುವ ಹೊಸ ಚಿತ್ರದ ಘೋಷಣೆಯೂ ಇದೇ ಸಂದರ್ಭದಲ್ಲಿ ಆಗಿದೆ. ಶ್ರೀತಿಕ್ ಮೋಷನ್ ಪಿಕ್ಚರ್ಸ್ ಸಂಸ್ಥೆ ಲಾಂಛನದಲ್ಲಿ ಸಾಗರ್, ಕೃಷ್ಣಕುಮಾರ್ ಹಾಗೂ ಸೂರಜ್ ಶರ್ಮ ಈ ನೂತನ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಬಾಲಾಜಿ ಮಾಧವನ್ ನಿರ್ದೇಶನ ಮಾಡಲಿದ್ದಾರೆ. ಕನ್ನಡದಲ್ಲಿ ಮೊದಲ ಚಿತ್ರವನ್ನು ನಿರ್ದೇಶಿಸುತ್ತಿರುವ ಬಾಲಾಜಿ ಮಾಧವನ್, ನಿರ್ದೇಶಕ ಪಿ.ವಾಸು ಅವರ ಸಹೋದರಿಯ ಪುತ್ರ.

ರಾಜ್ ನೃತ್ಯ ವೈಭವ

ರಾಜ್‌ಕುಮಾರ್ ಜನ್ಮದಿನದ ಅಂಗವಾಗಿ ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಸೇವಾ ಸದನದಲ್ಲಿ ಏ.24ರ ಸಂಜೆ 5ರಿಂದ ಇಂಟರ್‌ನ್ಯಾಷನಲ್ ಆರ್ಟ್ಸ್ ಆ್ಯಂಡ್ ಕಲ್ಚರಲ್ ಫೌಂಡೇಶನ್ ಸಂಸ್ಥೆಯು ‘ರಾಜ್ ನೃತ್ಯ ವೈಭವ’ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಿದೆ. ರಾಜ್‌ಕುಮಾರ್ ನಟಿಸಿರುವ ಚಲನಚಿತ್ರ ಗೀತೆಗಳಿಗೆ ಅದರಲ್ಲೂ ಶಾಸ್ತ್ರೀಯ ಸಂಗೀತ ಹಿನ್ನೆಲೆ ಇರುವ ಹಾಡುಗಳಿಗೆ ಹೆಸರಾಂತ ನೃತ್ಯಗಾರರು ಹೆಜ್ಜೆ ಹಾಕಲಿದ್ದಾರೆ.

‘ನಿಧಾನಕ್ಕೆ ಜನಮನ್ನಣೆ ಸಿಗುತ್ತಿದೆ’

ಅಜಯ್ ರಾವ್ ನಟಿಸಿ, ನಿರ್ಮಿಸಿರುವ ‘ಯುದ್ಧಕಾಂಡ’ ಚಿತ್ರ ನಿಧಾನಕ್ಕೆ ಜನರನ್ನು ಚಿತ್ರಮಂದಿರದತ್ತ ಸೆಳೆಯುತ್ತಿದೆ. ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರ ಮತ್ತು ಮಕ್ಕಳ ದುರ್ಬಳಕೆ ಕುರಿತಾದ ಕಥೆಯನ್ನು ಹೊಂದಿರುವ ಈ ಸಿನಿಮಾ ಏ.18 ರಂದು ತೆರೆಕಂಡಿದೆ.

‘ಗಂಭೀರವಾದ ಕಂಟೆಂಟ್ ಹೊಂದಿರುವ ಚಿತ್ರ. ಇಂಥ ಸಿನಿಮಾಗಳಿಗೆ ವೀಕೆಂಡ್‌ನಲ್ಲಿ ಜನ ಬರುತ್ತಾರೆ. ಸಾಮಾನ್ಯವಾಗಿ ವಾರದ ದಿನಗಳಲ್ಲಿ ಚಿತ್ರಮಂದಿರದಲ್ಲಿ ಪ್ರೇಕ್ಷಕರ ಸಂಖ್ಯೆ ಕುಸಿಯುತ್ತದೆ. ಹೀಗಾಗಿ ಭಯವಿತ್ತು. ಆದರೆ ಚಿತ್ರ ನಿಧಾನಕ್ಕೆ ಜನರನ್ನು ಸೆಳೆಯುತ್ತಿದೆ. ಸೋಮವಾರ, ಮಂಗಳವಾರ ಬೆಂಗಳೂರಿನಲ್ಲಿ ನಾಲ್ಕೈದು ಚಿತ್ರಮಂದಿರಗಳು ಹೌಸ್‌ಫುಲ್ ಆಗಿವೆ. ಸಾಕಷ್ಟು ಚಿತ್ರಮಂದಿರಗಳಲ್ಲಿ ಶೇ 80ರಷ್ಟು ಜನರಿದ್ದರು. ಎಲ್ಲ ಕಡೆಯಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ’ ಎಂದು ಸಂತಸ ವ್ಯಕ್ತಪಡಿಸುತ್ತಾರೆ ಚಿತ್ರದ ನಿರ್ದೇಶಕ ಪವನ್ ಭಟ್.

ಪವನ್ ಭಟ್

‘ನಾನು ಪ್ರಚಲಿತ ವಿದ್ಯಮಾನಗಳನ್ನು ಹೆಚ್ಚು ಗಮನಿಸುತ್ತೇನೆ. ಆಗೆಲ್ಲ ಅತ್ಯಾಚಾರದಂಥ ಪ್ರಕರಣಗಳಲ್ಲಿ ತೀರ್ಪು ಏನಾಯಿತು ಎಂದಷ್ಟೇ ನೋಡುತ್ತಿದ್ದೆ. ಆದರೆ ಒಂದು ಪ್ರಕರಣದ ತೀರ್ಪು ಬರಲು ಎಷ್ಟು ಕಾಲ ಬೇಕಾಯಿತು ಎಂಬುದರ ಕುರಿತು ಗಮನ ಹರಿಸುವ ಅಗತ್ಯವಿದೆ. ಎಷ್ಟೋ ವರ್ಷದಿಂದ ನ್ಯಾಯಕ್ಕಾಗಿ ಕಾಯುತ್ತಿರುವವರ, ಕೋರ್ಟ್‌ಗೆ ಅಲೆಯುತ್ತಿರುವವರ ಕಥೆ ಏನು ಎನ್ನಿಸಿತು. ಹೀಗಾಗಿ ಆ ವಿಷಯವನ್ನು ಅಧ್ಯಯನ ಮಾಡಿ ಕಥೆ ಸಿದ್ಧಪಡಿಸಿದೆ. ಸಿನಿಮಾ ಎಂದರೆ ಮನರಂಜನೆ ನಿಜ. ಇಂಥ ಪ್ರಕರಣಗಳನ್ನು ಸಿನಿಮಾ ಮಾಡಿದರೆ ವ್ಯವಸ್ಥೆ ಸರಿ ಹೋಗುತ್ತದೆಯಾ ಎಂದು ಬಹಳಷ್ಟು ಜನ ಪ್ರಶ್ನಿಸುತ್ತಾರೆ. ಹಾಗಂತ ಪ್ರಶ್ನೆ ಮಾಡದೆ ಕುಳಿತರೆ ಸಮಸ್ಯೆ ತಾನಾಗಿಯೇ ಪರಿಹಾರವಾಗುತ್ತದೆಯಾ?’ ಎನ್ನುತ್ತಾರೆ ಅವರು.

ಅರ್ಚನಾ ಜೋಯ್ಸ್ ಚಿತ್ರದ ನಾಯಕಿ. ಪ್ರಕಾಶ್ ಬೆಳವಾಡಿ, ಟಿ.ಎಸ್. ನಾಗಾಭರಣ ಮುಖ್ಯ ಪಾತ್ರದಲ್ಲಿದ್ದಾರೆ. ವೃತ್ತಿಯಿಂದ ರಸಾಯನಶಾಸ್ತ್ರ ಪ್ರಾಧ್ಯಾಪಕರಾಗಿರುವ ಪವನ್ ಭಟ್‌ಗೆ ಎರಡನೇ ಸಿನಿಮಾವಿದು. ಈ ಹಿಂದೆ ಸಿನಿಮಾ ಸಂಕಲನಕಾರನ ಕುರಿತಾದ ಕಥೆ ಹೊಂದಿರುವ ‘ಕಟಿಂಗ್ ಶಾಪ್’ ಎಂಬ ಚಿತ್ರವನ್ನು ನಿರ್ದೇಶಿಸಿದ್ದರು.

ಇಂಟರ್ ಕಾಶಿಗೆ ಮಣಿದ ಬಿಎಫ್‌ಸಿ

ಭುವನೇಶ್ವರ (ಪಿಟಿಐ): ಇಂಟರ್ ಕಾಶಿ ತಂಡ ಪೆನಾಲ್ಟಿ ಶೂಟೌಟ್‌ವರೆಗೆ ಬೆಳೆದ ಕಳಿಂಗ ಸೂಪರ್ ಕಪ್ ಫುಟ್‌ಬಾಲ್ ಪಂದ್ಯದಲ್ಲಿ ಬುಧವಾರ ಐಎಸ್‌ಎಲ್ ತಂಡವಾದ ಬೆಂಗಳೂರು ಎಫ್‌ಸಿ ಮೇಲೆ 5–3 ರಿಂದ ಅನಿರೀಕ್ಷಿತ ಜಯಗಳಿಸಿ ಕ್ವಾರ್ಟರ್‌ಫೈನಲ್‌ಗೆ ಮುನ್ನಡೆಯಿತು.

ಈ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದ ನಿಗದಿ ಅವಧಿಯ ಆಟ ಮುಗಿದಾಗ ಸ್ಕೋರ್ 1–1 ರಲ್ಲಿ ಸಮನಾಗಿತ್ತು.

ಕಾಶಿ ತಂಡದ ಗೋಲ್‌ಕೀಪರ್ ಶುಭಂ ದಾಸ್ ಅವರ ರಕ್ಷಣಾ ಲೋಪದ ಲಾಭ ಪಡೆದ ರಯಾನ್ ವಿಲಿಯಮ್ಸ್ ಅವರು 62ನೇ ನಿಮಿಷ ಬೆಂಗಳೂರು ಎಫ್‌ಸಿ ತಂಡಕ್ಕೆ ಮುನ್ನಡೆ ಒದಗಿಸಿದರು. ಆದರೆ ಪಂದ್ಯ ಮುಗಿಯಲು ಕೇವಲ ಎರಡು ನಿಮಿಷಗಳಿದ್ದಾಗ ಮತಿಯಾ ಬೊಬೊವಿಕ್ ಗೋಲು ಗಳಿಸಿದರು. ಇದರಿಂದ ಸ್ಕೋರ್ ಸಮನಾಗಿ ಅಂತಿಮವಾಗಿ ಪಂದ್ಯ ಡ್ರಾ ಆಯಿತು.

ಹೆಚ್ಚುವರಿ ಅವಧಿಯ ಆಟವಿಲ್ಲದ ಕಾರಣ ಪಂದ್ಯ ಪೆನಾಲ್ಟಿ ಶೂಟೌಟ್ ಮೂಲಕ ನಿರ್ಧಾರವಾಯಿತು. ಶೂಟೌಟ್‌ನಲ್ಲಿ ಇಂಟರ್ ಕಾಶಿ ತಂಡದ ಬೊಬೊವಿಚ್, ಬಿಜೊಯ್, ಡೇವಿಡ್ ಹುಮಾನೆಝ್, ಅರಿತ್ರಾ ದಾಸ್, ನಿಕೊಲಾ ಸ್ಟೊಜನೊವಿಕ್ ಅವರು ಗೋಲು ಗಳಿಸಿದರು. ಬಿಎಫ್‌ಸಿ ಪರ ಜಾರ್ಜ್ ಪೆರೀರಾ ಡಯಾಝ್, ರಯಾನ್ ವಿಲಿಯಮ್ಸ್ ಮತ್ತು ಸುನೀಲ್ ಚೆಟ್ರಿ ಚೆಂಡನ್ನು ಗುರಿಮುಟ್ಟಿಸಿದರು. ಮೂರನೇ ಯತ್ನ ತೆಗೆದುಕೊಂಡ ಆಲ್ಬರ್ಟೊ ನೊಗೇರಾ ಅವರು ಗುರಿತಪ್ಪಿದರು.

ಸಂತಾಪ: ಪಹಲ್ಗಾಮ್‌ನಲ್ಲಿ ಮಂಗಳವಾರ ಉಗ್ರರ ಅಮಾನುಷ ದಾಳಿ ಖಂಡಿಸಿ ಶೋಕ ಸೂಚಕವಾಗಿ ಎರಡೂ ತಂಡಗಳ ಆಟಗಾರರು ತೋಳಿಗೆ ಕಪ್ಪುಪಟ್ಟಿ ಧರಿಸಿ ಆಡಿದರು.

ರಾಷ್ಟ್ರೀಯ ಫೆಡರೇಷನ್ ಕಪ್ ಅಥ್ಲೆಟಿಕ್ಸ್ : 400 ಮೀ. ಹರ್ಡಲ್ಸ್ ಓಟ
ಕೂಟ ದಾಖಲೆ ಸ್ಥಾಪಿಸಿದ ವಿದ್ಯಾ ರಾಮರಾಜ್

ಕೊಚ್ಚಿ (ಪಿಟಿಐ): ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತೆ ವಿದ್ಯಾ ರಾಮರಾಜ್ ಅವರು ರಾಷ್ಟ್ರೀಯ ಫೆಡರೇಷನ್ ಕಪ್ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮೂರನೇ ದಿನವಾದ ಬುಧವಾರ 400 ಮೀ. ಹರ್ಡಲ್ಸ್ ಓಟದಲ್ಲಿ ನಿರೀಕ್ಷೆಯಂತೆ ಚಿನ್ನ ಗೆದ್ದರು; ಮಾತ್ರವಲ್ಲ ಆ ಹಾದಿಯಲ್ಲಿ ಕೂಟ ದಾಖಲೆಯನ್ನೂ ಸುಧಾರಿಸಿದರು.

ತಮಿಳುನಾಡಿನ 26 ವರ್ಷ ವಯಸ್ಸಿನ ವಿದ್ಯಾ 56.04 ಸೆಕೆಂಡುಗಳಲ್ಲಿ ನಿಗದಿತ ದೂರವನ್ನು ಕ್ರಮಿಸಿದರು. ಹಳೆಯ ದಾಖಲೆ (2019ರಲ್ಲಿ, 57.21 ಸೆ.) ಗುಜರಾತ್‌ನ ಸರಿತಾಬೆನ್ ಗಾಯಕವಾಡ್ ಹೆಸರಿನಲ್ಲಿತ್ತು. ಅವರು ತನ್ಮೂಲಕ ಏಷ್ಯನ್ ಚಾಂಪಿಯನ್‌ಷಿಪ್‌ಗೆ ಭಾರತ ಅಥ್ಲೆಟಿಕ್ ಫೆಡರೇಷನ್ ನಿಗದಿಪಡಿಸಿದ 57.80 ಸೆ.ಗಳ ಅರ್ಹತಾ ಮಟ್ಟವನ್ನೂ ದಾಟಿದರು.

ಅನುಭವಿ ವಿದ್ಯಾ ಅವರಿಗೆ ಎರಡನೇ ಸ್ಥಾನ ಗಳಿಸಿದ ಕೇರಳದ ಅನು ಆರ್. (58.26 ಸೆಕೆಂಡು) ಮತ್ತು ಮೂರನೇ ಸ್ಥಾನ ಪಡೆದ ಆರ್.ಅಶ್ವಿನಿ (1:02.41) ಅವರಿಂದ ಹೆಚ್ಚಿನ ಸವಾಲು ಎದುರಾಗಲಿಲ್ಲ.

ಮಂಗಳವಾರ ನಡೆದ 400 ಮೀ. ಓಟದಲ್ಲಿ ವಿದ್ಯಾ ಬೆಳ್ಳಿ ಪದಕ ಗೆದ್ದಿದ್ದರು.ಅಂತರರಾಷ್ಟ್ರೀಯ ಸ್ಪರ್ಧಿ ಅವಿನಾಶ ಸಾಬ್ಳೆ ಅನುಪಸ್ಥಿತಿಯಲ್ಲಿ ನಡೆದ ಪುರುಷರ 3000 ಮೀ. ಸ್ಟೀಪಲ್‌ಚೇಸ್ ಓಟದಲ್ಲಿ ಗುಜರಾತ್‌ನ ಸುನೀಲ್ ಜೋಲಿಯಾ ಜಿನಾಭಾಯ್ (8ನಿ.43.82 ಸೆ.) ಚಿನ್ನ ಗೆದ್ದರು. ಮಹಿಳೆಯರ ವಿಭಾಗದಲ್ಲಿ ಮಧ್ಯ ಪ್ರದೇಶದ ಮಂಜು ಅಜಯ್ ಯಾದವ್ 10ನಿ.34.08 ಸೆ.ಗಳಲ್ಲಿ ದೂರ ಕ್ರಮಿಸಿ ಮೊದಲ ಸ್ಥಾನ ಪಡೆದರು.

ಮಹಿಳೆಯರ ವಿಭಾಗದ ಶಾಟ್‌ಪಟ್‌ನಲ್ಲಿ ಉತ್ತರ ಪ್ರದೇಶದ ವಿಧಿ (16.10 ಮೀ.) ಮೊದಲಿಗರಾದರೂ, ಏಷ್ಯನ್ ಚಾಂಪಿಯನ್‌ಷಿಪ್ ಅರ್ಹತಾ ಮಟ್ಟ (16.89 ಮೀ.) ತಲುಪಲಾಗಲಿಲ್ಲ.

ವಿದ್ಯಾ ರಾಮರಾಜ್ ಪಿಟಿಐ ಸಂಗ್ರಹ ಚಿತ್ರ

ರಾಜ್ಯದ ಯಶಸ್‌ಗೆ ಚಿನ್ನ, ತಪ್ಪಿದ ಏಷ್ಯನ್ ಟಿಕೆಟ್

ಕರ್ನಾಟಕದ ಯಶಸ್ ಪಿ. ಅವರು ಪುರುಷರ 400 ಮೀ. ಹರ್ಡಲ್ಸ್ ಓಟವನ್ನು 49.32 ಸೆಕೆಂಡುಗಳಲ್ಲಿ ಕ್ರಮಿಸಿ ಚಿನ್ನದ ಪದಕ ಗೆದ್ದುಕೊಂಡರು. ಅವರು ಏಷ್ಯನ್ ಚಾಂಪಿಯನ್‌ಷಿಪ್‌ಗೆ ನಿಗದಿಪಡಿಸಿದ್ದ ಅರ್ಹತಾ ಮಟ್ಟವನ್ನು (49.19 ಸೆ.) ಸ್ವಲ್ಪದರಲ್ಲೇ ತಪ್ಪಿಸಿಕೊಂಡರು.

ಜೆಎಸ್‌ಡಬ್ಲ್ಯು ತಂಡದ ಸುಬಾಷ್ ದಾಸ್ 50.11 ಸೆ.ಗಳೊಡನೆ ರಜತ ಮತ್ತು ಗುಜರಾತ್‌ನ ಸುಚಿತ್ ಮೋರಿ 51.08 ಸೆ.ಗಳೊಡನೆ ಕಂಚಿನ ಪದಕ ಗೆದ್ದುಕೊಂಡರು.

‘ನನಗೆ ತೀವ್ರ ಪೈಪೋಟಿ ಎದುರಾಗಲಿಲ್ಲ. ಹೀಗಾಗಿ ನನಗೆ ಏಷ್ಯನ್ ಚಾಂಪಿಯನ್‌ಷಿಪ್‌ಗೆ ನಿಗದಿಪಡಿಸಿದ ಸಮಯದ ಒಳಗೆ ಗುರಿಮುಟ್ಟಲಾಗಲಿಲ್ಲ’ ಎಂದು ಯಶಸ್ ಸ್ಪರ್ಧೆಯ ಬಳಿಕ ಪ್ರತಿಕ್ರಿಯಿಸಿದರು.

ನೀರಜ್ ಆಹ್ವಾನ ಅರ್ಷದ್ ನಕಾರ

ಲಾಹೋರ್ (ಪಿಟಿಐ): ಮೇ 24ರಂದು ಬೆಂಗಳೂರಿನಲ್ಲಿ ನಡೆಯಲಿರುವ ಎನ್‌ಸಿ ಕ್ಲಾಸಿಕ್ ಜಾವೆಲಿನ್ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವಂತೆ ಆಯೋಜಕ, ಭಾರತದ ಜಾವೆಲಿನ್ ತಾರೆ ನೀರಜ್ ಚೋಪ್ರಾ ನೀಡಿದ ಆಹ್ವಾನವನ್ನು ನಿರಾಕರಿಸಿರುವುದಾಗಿ ಒಲಿಂಪಿಕ್ ಚಾಂಪಿಯನ್, ಪಾಕಿಸ್ತಾನದ ಅರ್ಷದ್ ನದೀಮ್ ಬುಧವಾರ ತಿಳಿಸಿದ್ದಾರೆ.

ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗಾಗಿ ನಡೆಸಲು ಉದ್ದೇಶಿಸಿರುವ ಸಿದ್ಧತೆಯ ವೇಳೆಯೇ ಈ ಕೂಟ ನಡೆಯುತ್ತಿರುವುದರಿಂದ ತಮಗೆ ಭಾಗವಹಿಸಲು ಆಗುತ್ತಿಲ್ಲ ಎಂದು ಅವರು ಹೇಳಿದ್ದಾರೆ. ಆದರೆ ತಮ್ಮನ್ನು ತಮ್ಮನ್ನು ಆಹ್ವಾನಿಸಿರುವುದಕ್ಕೆ ನೀರಜ್ ಅವರಿಗೆ ಕೃತಜ್ಞರಾಗಿರುವುದಾಗಿ ಒಲಿಂಪಿಕ್ ಚಾಂಪಿಯನ್ ನದೀಮ್ ತಿಳಿಸಿದ್ದಾರೆ.

ಬೆಂಗಳೂರು ಡ್ರೀಮ್ ತಂಡಕ್ಕೆ ಭರ್ಜರಿ ಜಯ

ಬೆಂಗಳೂರು: ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ಬಿಡಿಎಫ್‌ಎ ಎ ಡಿವಿಷನ್ ಲೀಗ್ ಪಂದ್ಯದಲ್ಲಿ ಬುಧವಾರ ಬೆಂಗಳೂರು ಸಿಟಿ ಎಫ್‌ಸಿ ವಿರುದ್ಧ 4–0 ಗೋಲುಗಳಿಂದ ಗೆಲುವು ಸಾಧಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ಡ್ರೀಮ್ ತಂಡದ ಪರ ಜೈ ಹರಿಬರ್ಮನ್ (11ನೇ ನಿ., 52ನೇ ನಿ., 70ನೇ ನಿ.) ಮತ್ತು ಕೆ. ಲಾಲ್‌ರಿನ್‌ಫೆಲಾ (20ನೇ ನಿ.) ಗೋಲು ಗಳಿಸಿದರು.

ಡಿವೈಇಎಸ್ ಎಫ್‌ಸಿ ತಂಡ 10–0 ಗೋಲುಗಳಿಂದ ಯಂಗ್ ಚಾಲೆಂಜರ್ಸ್ ಎಫ್‌ಸಿ ವಿರುದ್ಧ ಭರ್ಜರಿ ಜಯಗಳಿಸಿತು. ಡಿವೈಇಎಸ್ ಪರ ಭರತ್ ಗೌಡ (15ನೇ, 25ನೇ, 54ನೇ, 84ನೇ ನಿ.), ಹಿಮಾದೀಪ್ (29ನೇ ನಿ.), ಮಧನ್ (19ನೇ, 65ನೇ ನಿ.), ವಿಕಾಸ್ ಡಿ.ಕೆ. (52ನೇ ನಿ.), ಸಚಿನ್ (72ನೇ ನಿ.) ಮತ್ತು ಸಿರಿಲ್ ಜಾನ್ಸ್ (75ನೇ ನಿ.) ಗೋಲು ಗಳಿಸಿದರು.

ಸಿ ಡಿವಿಷನ್ ಡಿ ಗುಂಪಿನ ಪಂದ್ಯದಲ್ಲಿ ವಿನಾಯಕ ಎಫ್‌ಸಿ ತಂಡ 2–1 ಗೋಲುಗಳಿಂದ ಸ್ಪೋರ್ಟಿಂಗ್ ಯೂತ್ಸ್ ಎಫ್‌ಸಿ ವಿರುದ್ಧ ಜಯಿಸಿತು. ಇನ್ನೊಂದು ಪಂದ್ಯದಲ್ಲಿ ಈಸ್ಟ್ ವೆಸ್ಟ್ ಎಫ್‌ಸಿ 10–0 ಗೋಲುಗಳಿಂದ ಎದುರಾಳಿ ಜೆಪಿ ಸ್ಪೋರ್ಟ್ಸ್ ಎಫ್‌ಸಿ ವಿರುದ್ಧ ಗೆಲುವು ಸಾಧಿಸಿತು.

ಬೆಂಗಳೂರಿನಲ್ಲಿ ಬುಧವಾರ ಮುಕ್ತಾಯಗೊಂಡ ರಾಜ್ಯ ಸಬ್ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬಾಲಕರ ವಿಭಾಗದ ಪ್ರಶಸ್ತಿ ಗೆದ್ದುಕೊಂಡ ವಿಮಾನಪುರ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡ.

ಟೆಸ್ಟ್: ಜಿಂಬಾಬ್ವೆಗೆ ಮಣಿದ ಬಾಂಗ್ಲಾ

ಸಿಲ್ಹೆಟ್ (ಬಾಂಗ್ಲಾದೇಶ), (ಎಎಫ್‌ಪಿ): ಜಿಂಬಾಬ್ವೆ ತಂಡ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದ ನಾಲ್ಕನೇ ದಿನವಾದ ಬುಧವಾರ ಬಾಂಗ್ಲಾದೇಶ ತಂಡವನ್ನು ಮೂರು ವಿಕೆಟ್‌ಗಳಿಂದ ಸೋಲಿಸಿತು. ಜಿಂಬಾಬ್ವೆಯ ವೇಗದ ಬೌಲರ್ ಬ್ಲೆಸಿಂಗ್ ಮುಝರಬಾನಿ ಈ ಪಂದ್ಯದಲ್ಲಿ 9 ವಿಕೆಟ್ ಪಡೆದು ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

ಎರಡು ಟೆಸ್ಟ್‌ಗಳ ಸರಣಿಯಲ್ಲಿ ಜಿಂಬಾಬ್ವೆ 1–0 ಮುನ್ನಡೆ ಪಡೆಯಿತು. ಮಂಗಳವಾರ ಎರಡನೇ ಇನಿಂಗ್ಸ್‌ನಲ್ಲಿ 4 ವಿಕೆಟ್‌ಗೆ 194 ರನ್ ಗಳಿಸಿದ್ದ ಬಾಂಗ್ಲಾದೇಶ ಬುಧವಾರ 255 ರನ್‌ಗಳಿಗೆ ಆಲೌಟ್ ಆಯಿತು. ಗೆಲುವಿಗೆ 174 ರನ್ ಗುರಿ ಎದುರಿಸಿದ ಜಿಂಬಾಬ್ವೆ 7 ವಿಕೆಟ್ ನಷ್ಟದಲ್ಲಿ ಗುರಿತಲುಪಿತು.

ಸ್ಕೋರುಗಳು: ಬಾಂಗ್ಲಾದೇಶ: 191 ಮತ್ತು 79.2 ಓವರುಗಳಲ್ಲಿ 255 (ಮೊಮಿನುಲ್ ಹಕ್ 47, ನಜ್ಮುಲ್ ಹುಸೇನ್ ಶಾಂತೊ 60, ಜೇಕರ್ ಅಲಿ 58; ಬ್ಲೆಸಿಂಗ್ ಮುಝರಬಾನಿ 72ಕ್ಕೆ6, ವೆಲಿಂಗ್ಟನ್ ಮಸಕದ್ಜ 20ಕ್ಕೆ2); ಜಿಂಬಾಬ್ವೆ: 273 ಮತ್ತು 50.1 ಓವರುಗಳಲ್ಲಿ 7 ವಿಕೆಟ್‌ಗೆ 174 (ಬ್ರಿಯಾನ್ ಬೆನೆಟ್ 54, ಬೆನ್ ಕರನ್ 44, ವೆಸ್ಲಿ ಮದೆವೆರೆ ಔಟಾಗದೇ 19; ಮಹಿದಿ ಮಿರಾಜ್ 50ಕ್ಕೆ5).

ವಿಮಾನಪುರ, ಬೀಗಲ್ಸ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಮಾನಪುರ ಬ್ಯಾಸ್ಕೆಟ್ ಬಾಲ್ ಕ್ಲಬ್, ಬಿ.ಎಸ್. ನಾರಾಯಣ್ ಸ್ಮರಣಾರ್ಥ ಸಬ್ ಜೂನಿಯರ್ ಬ್ಯಾಸ್ಕೆಟ್‌ಬಾಲ್ (13 ವರ್ಷದೊಳಗಿನವರ) ಚಾಂಪಿಯನ್‌ಷಿಪ್‌ನಲ್ಲಿ ಬಾಲಕರ ವಿಭಾಗದಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿತು. ಬೀಗಲ್ಸ್ ಬಿ.ಸಿ ತಂಡ ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಕಿರೀಟ ಧರಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಆಶ್ರಯದಲ್ಲಿ ಬುಧವಾರ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ವಿಮಾನಪುರ ತಂಡ 58–42 ಅಂಕಗಳಿಂದ ಎಂಸಿಎಚ್‌ಎಸ್ ತಂಡವನ್ನು ಮಣಿಸಿತು.

ವಿಜೇತ ತಂಡದ ಅವಿನಾಶ್ ಕೆ. (20), ಸಿದ್ದೇಶ್ (12) ಅವರು ಮಿಂಚಿದರು. ಎಂಸಿಎಚ್‌ಎಸ್ ತಂಡದ ಪರ ಅನವ್ ಸಿಂಗ್ (12), ಯುವೀರ್ (10) ಗಮನ ಸೆಳೆದರು.

ಮೈಸೂರು ಜಿಲ್ಲಾ ತಂಡ 63–26 ಅಂಕಗಳಿಂದ ಸದರ್ನ್ ಬ್ಲೂಸ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿ ಮೂರನೇ ಸ್ಥಾನ ಪಡೆಯಿತು.

ಬಾಲಕಿಯರ ಫೈನಲ್‌ನಲ್ಲಿ ಬೀಗಲ್ಸ್ ತಂಡ ಫೈನಲ್‌ನಲ್ಲಿ 44–42 ಅಂಕಗಳಿಂದ ಮಂಡ್ಯ ಜಿಲ್ಲಾ ತಂಡದ ವಿರುದ್ಧ ರೋಚಕ ಜಯ ಪಡೆಯಿತು.

ಬೀಗಲ್ಸ್ ಪರ ಸಾನ್ವಿ ಜಿ.ಎಸ್. (19), ಒಜಾಸ್ವಿ ಎಲ್. (8), ಸಯ್ಯದ್ ಅಪ್ರಾ (8) ಉತ್ತಮವಾಗಿ ಆಡಿದರು. ಮಂಡ್ಯ ತಂಡದ ಪರ ಅಕ್ಷರಾ (15), ಹರ್ಷಿತಾ ಸಿ.ಎ. (8) ಮತ್ತು ಸಾಧನಾ (7) ಗಮನ ಸೆಳೆದರು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಎಂಸಿಎಚ್‌ಎಸ್ ತಂಡ 39–31 ಅಂಕಗಳಿಂದ ಯಂಗ್ ಒರಿಯನ್ಸ್ ಬಿ.ಸಿ ತಂಡವನ್ನು ಸೋಲಿಸಿತು.

ಭಯೋತ್ಪಾದಕ ದಾಳಿ: ಮೃತರಿಗೆ ಶ್ರದ್ಧಾಂಜಲಿ

ಹೈದರಾಬಾದ್ (ಪಿಟಿಐ): ಕಾಶ್ಮೀರದ ಪೆಹಲ್‌ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿಯಲ್ಲಿ ಮೃತರಾದವರಿಗೆ ಮುಂಬೈ ಇಂಡಿಯನ್ಸ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡದ ಆಟಗಾರರು ಶ್ರದ್ಧಾಂಜಲಿ ಸಲ್ಲಿಸಿದರು.

ಉಪ್ಪಳದ ರಾಜೀವಗಾಂಧಿ ಕ್ರೀಡಾಂಗಣದಲ್ಲಿ ಬುಧವಾರ ಐಪಿಎಲ್ ಪಂದ್ಯದ ಆರಂಭಕ್ಕೂ ಮುನ್ನ ಉಭಯ ತಂಡಗಳ ಆಟಗಾರರು ಸಾಲಾಗಿ ನಿಂತು ಒಂದು ನಿಮಿಷ ಮೌನಾಚರಣೆ ಮಾಡಿ ಗೌರವ ಸಲ್ಲಿಸಿದರು. ನಾಯಕ ಹಾರ್ದಿಕ್ ಪಾಂಡ್ಯ, ಸನ್‌ರೈಸರ್ಸ್ ನಾಯಕ ಪ್ಯಾಟ್ ಕಮಿನ್ಸ್ ಅವರು ಭಯೋತ್ಪಾದಕರ ದಾಳಿ ಅಮಾನವೀಯ ಎಂದು ಖಂಡಿಸಿದರು.

ಹಂಪಿಗೆ ಫಿಡೆ ಗ್ರ್ಯಾನ್‌ಪ್ರಿ ಕಿರೀಟ

ಪುಣೆ (ಪಿಟಿಐ): ಭಾರತದ ಕೋನೇರು ಹಂಪಿ ಅವರು ಫಿಡೆ ಮಹಿಳಾ ಗ್ರ್ಯಾನ್‌ಪ್ರಿ ಚೆಸ್ (ಪುಣೆ ಲೆಗ್) ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಗ್ರ್ಯಾಂಡ್‌ಮಾಸ್ಟರ್‌ಗಳಾದ ಹಂಪಿ ಮತ್ತು ಚೀನಾದ ಝು ಜಿನೆರ್ ಅವರು ತಲಾ ಏಳು ಪಾಯಿಂಟ್ಸ್ ಗಳಿಸಿದರೂ, ಉತ್ತಮ ಟೈಬ್ರೇಕ್ ಸ್ಕೋರ್ ಆಧಾರದಲ್ಲಿ ಹಂಪಿ ಚಾಂಪಿಯನ್ ಆದರು.

ಐದು ತಿಂಗಳ ಹಿಂದೆ ವಿಶ್ವ ಮಹಿಳಾ ರ್‍ಯಾಪಿಡ್ ಚಾಂಪಿಯನ್ ಪಟ್ಟಕ್ಕೇರಿದ್ದ ಹಂಪಿ ಬುಧವಾರ ನಡೆದ ಒಂಬತ್ತನೇ ಹಾಗೂ ಅಂತಿಮ ಸುತ್ತಿನಲ್ಲಿ ಬಲ್ಗೇರಿಯಾದ ನುರ್ಗ್ಯುಲ್ ಸಲಿಮೋವಾ (3.5) ಅವರನ್ನು ಮಣಿಸಿ ಒಟ್ಟು ಏಳು ಪಾಯಿಂಟ್ಸ್ ಕಲೆಹಾಕಿದರು. ಇನ್ನೊಂದು ಪಂದ್ಯದಲ್ಲಿ ರಷ್ಯಾದ ಪೊಲಿನಾ ಶುವಲೋವಾ (4.5) ಅವರನ್ನು ಸೋಲಿಸಿದ ಜಿನೆರ್ ಸಹ ಅಷ್ಟೇ ಪಾಯಿಂಟ್ಸ್ ಸಂಗ್ರಹಿಸಿದ್ದರು.

ಮಂಗಳವಾರ ಎಂಟನೇ ಸುತ್ತಿನ ನಂತರ ಇಬ್ಬರೂ ತಲಾ ಏಳು ಆರು ಪಾಯಿಂಟ್ಸ್ ಗಳಿಸಿದ್ದರಿಂದ ಅಂತಿಮ ಸುತ್ತು ಕುತೂಹಲ ಕೆರಳಿಸಿತ್ತು.

ದಿನದ ಇತರ ಪಂದ್ಯಗಳಲ್ಲಿ ಭಾರತದ ಆರ್.ವೈಶಾಲಿ (4) ಅವರು ಜಾರ್ಜಿಯಾದ ಸಲೋಮೆ ಮೆಲಿಯಾ (3) ಜೊತೆ ಡ್ರಾ ಮಾಡಿಕೊಂಡರೆ, ಐಎಂ ದಿವ್ಯಾ ದೇಶಮುಖ್ (5.5), ಪೋಲೆಂಡ್‌ನ ಅಗ್ರ ಆಟಗಾರ್ತಿ ಅಲಿನಾ ಕಶ್ಲಿನ್‌ಕಾಯಾ (3) ಜೊತೆ ಪಾಯಿಂಟ್ ಹಂಚಿಕೊಂಡರು. ದಿವ್ಯಾ ಮೂರನೇ ಸ್ಥಾನ ಪಡೆದರು.ದ್ರೋಣವಲ್ಲಿ ಹಾರಿಕಾ (4.5) ಸಹ ಮಂಗೋಲಿಯಾದ ಮುಂಗುನ್ತುಲ್ ಭಟ್ಖುಯಾಗ್ (3) ಜೊತೆ ಡ್ರಾ ಮಾಡಿಕೊಂಡರು.

ರಜತ್ ಬಳಗಕ್ಕೆ ಇಂದು ರಾಜಸ್ಥಾನ ಸವಾಲು; ಪರಾಗ್ ಬಳಗಕ್ಕೆ ದ್ರಾವಿಡ್ ಮಾರ್ಗದರ್ಶನದ ಬಲ

ಆರ್‌ಸಿಬಿಗೆ ತವರಿನಲ್ಲಿ ಜಯದ ಆಸೆ

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ದೇವದತ್ತ ಪಡಿಕ್ಕಲ್ ಅಭ್ಯಾಸ ನಡೆಸಿದರು —ಪ್ರಜಾವಾಣಿ ಚಿತ್ರ/ರಂಜು ಪಿ

• ಗಿರೀಶ ದೊಡ್ಡಮನಿ

ಬೆಂಗಳೂರು: ಕೆ.ಎಲ್. ರಾಹುಲ್, ಮೊಹಮ್ಮದ್ ಸಿರಾಜ್ ಮತ್ತು ಯಜುವೇಂದ್ರ ಚಾಹಲ್ ಅವರು ಕೆಲ ವರ್ಷಗಳ ಹಿಂದೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಆಡಿದ್ದವರು. ಈ ವರ್ಷ ಇವರೆಲ್ಲರೂ ಬೇರೆ ಬೇರೆ ತಂಡಗಳನ್ನು ಪ್ರತಿನಿಧಿಸುತ್ತಿದ್ದಾರೆ. ಈಚೆಗೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿಗೆ 'ತಿರುಮಂತ್ರ' ಹಾಕಿ ಹೋಗಿದ್ದಾರೆ. ಈಗ ರಾಹುಲ್ ದ್ರಾವಿಡ್ ಸರದಿಯೇ?

ಹೌದು; ಕ್ರಿಕೆಟ್‌ಪ್ರಿಯರಲ್ಲಿ ಈಗ ಇಂತಹದೊಂದು ಚರ್ಚೆ ಗರಿಗೆದರಿದೆ. ಆರ್‌ಸಿಬಿ ತಂಡದ ಮೊದಲ ನಾಯಕರಾಗಿದ್ದ ದ್ರಾವಿಡ್ ಈಗ ರಾಜಸ್ಥಾನ ರಾಯಲ್ಸ್‌ಗೆ ಮುಖ್ಯ ಕೋಚ್ ಆಗಿದ್ದಾರೆ. ಅವರ ತಂಡವು ಗುರುವಾರ ಇಲ್ಲಿ ಆರ್‌ಸಿಬಿ ವಿರುದ್ಧ ಕಣಕ್ಕಿಳಿಯಲಿದೆ. ತಾವು ಬಾಲ್ಯದಿಂದಲೂ ಆಡಿ ಬೆಳೆದ ಕ್ರೀಡಾಂಗಣವನ್ನು ದ್ರಾವಿಡ್ ಚೆನ್ನಾಗಿಬಲ್ಲರು. ಗಾಯಗೊಂಡಿರುವ ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ಅವರ ಅನುಪಸ್ಥಿತಿಯಲ್ಲಿ ರಿಯಾನ್ ಪರಾಗ್ ಅವರು ರಾಯಲ್ಸ್ ತಂಡವನ್ನು ಮುನ್ನಡೆಸುವರು. ಈ ಬಳಗದಲ್ಲಿ ಯುವ ಆಟಗಾರರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಕೋಚ್ ದ್ರಾವಿಡ್ ಅವರ ಮಾರ್ಗದರ್ಶನ ಪ್ರಮುಖ ಪಾತ್ರ ವಹಿಸಲಿದೆ.

ಈ ಬಾರಿಯ ಟೂರ್ನಿಯಲ್ಲಿ ರಜತ್ ಪಾಟೀದಾರ್ ನಾಯಕತ್ವದ ಆರ್‌ಸಿಬಿ ತಂಡವು ತವರಿನಂಗಳದಲ್ಲಿ ಆಡಿರುವ ಮೂರು ಪಂದ್ಯಗಳಲ್ಲಿಯೂ ಸೋತಿದೆ. ಹೊರಗಿನ ತಾಣಗಳಲ್ಲಿ ಆಡಿರುವ ಐದು ಪಂದ್ಯಗಳಲ್ಲಿ ಗೆದ್ದು ಅಂಕಪಟ್ಟಿಯಲ್ಲಿ ಅಗ್ರ ನಾಲ್ಕರಲ್ಲಿದೆ. ಹೋದವಾರ ಇಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ನಡೆದಿದ್ದ ಪಂದ್ಯಕ್ಕೆ ಮಳೆ ಅಡ್ಡಿಯಾಗಿತ್ತು. ಅದರಿಂದಾಗಿ 14–14 ಓವರ್‌ಗಳ ಪಂದ್ಯ ನಡೆದು, ಪಂಜಾಬ್ ಗೆದ್ದಿತ್ತು. ಆ ತಂಡದಲ್ಲಿದ್ದ ಸ್ಪಿನ್ನರ್ ಯಜುವೇಂದ್ರ ಚಾಹಲ್ ಪರಿಣಾಮಕಾರಿ ಬೌಲಿಂಗ್ ಮಾಡಿದ್ದರು. ಆರ್‌ಸಿಬಿ ಬ್ಯಾಟರ್‌ಗಳು ಕುಸಿದಿದ್ದರು. ಟಿಮ್ ಡೇವಿಡ್ ಮಾತ್ರ ಮಿಂಚಿನ ಅರ್ಧಶತಕ ಹೊಡೆದು ಬೆಂಗಳೂರು ತಂಡವು ಅಲ್ಪಮೊತ್ತಕ್ಕೆ ಕುಸಿಯುವುದನ್ನು ತಪ್ಪಿಸಿದ್ದರು. ಆದರೆ ತಂಡಕ್ಕೆ ಜಯ ಸಾಧ್ಯವಾಗಿರಲಿಲ್ಲ. ನಂತರ ಪಂಜಾಬ್ ತಂಡವನ್ನು ಅವರದ್ದೇ ತವರಿನಲ್ಲಿ ಬೆಂಗಳೂರು ಸೋಲಿಸಿತ್ತು.

ಆ ಪಂದ್ಯದಲ್ಲಿ ಮಿಂಚಿದ್ದ ವಿರಾಟ್ ಕೊಹ್ಲಿ ಇಲ್ಲಿಯೂ ತಮ್ಮ ಬ್ಯಾಟ್ ಝಳಪಿಸುವ ವಿಶ್ವಾಸದಲ್ಲಿದ್ದಾರೆ. ನೆಟ್ಸ್ ಅಭ್ಯಾಸದಲ್ಲಿ ಒಂದರ ಹಿಂದೆ ಒಂದು ಸಿಕ್ಸರ್ ಬಾರಿಸಿದ ಅವರ ಏಕಾಗ್ರತೆ, ಪಾದಚಲನೆ ಮತ್ತು ಟೈಮಿಂಗ್ ನಿಖರವಾಗಿದ್ದವು. ಟೂರ್ನಿಯಲ್ಲಿ ಅವರು ಈಗಾಗಲೇ 4 ಅರ್ಧಶತಕಗಳನ್ನು ದಾಖಲಿಸಿದ್ದಾರೆ. ಅವರು ಫಿಲ್ ಸಾಲ್ಟ್ ಜೊತೆಗೆ ಉತ್ತಮ ಆರಂಭ ನೀಡುವ ನಿರೀಕ್ಷೆ ಇದೆ. 'ಸ್ಥಳೀಯ ಹೀರೊ' ದೇವದತ್ತ ಪಡಿಕ್ಕಲ್ ಕೂಡ ಉತ್ತಮ ಲಯದಲ್ಲಿದ್ದಾರೆ. ಜೋಶ್ ಹೇಜಲ್‌ವುಡ್, ಭುವನೇಶ್ವರ್ ಕುಮಾರ್, ಯಶ್ ದಯಾಳ್, ಸ್ಪಿನ್ನರ್ ಕೃಣಾಲ್ ಪಾಂಡ್ಯ ಹಾಗೂ ಸುಯಶ್ ಶರ್ಮಾ ಅವರು ಪರಿಣಾಮಕಾರಿ ದಾಳಿ ನಡೆಸಬಲ್ಲ ಬೌಲರ್‌ಗಳಾಗಿದ್ದಾರೆ. ರಾಯಲ್ಸ್ ತಂಡದಲ್ಲಿ ಜೈಸ್ವಾಲ್, 14ರ ಪೋರ ವೈಭವ್ ಸೂರ್ಯವಂಶಿ, ನಿತೀಶ್ ರಾಣಾ ಹಾಗೂ ಧ್ರುವ ಜುರೇಲ್ ಅವರಂತಹ ಉತ್ತಮ ಬ್ಯಾಟರ್‌ಗಳು ಇದ್ದಾರೆ. ವೇಗಿ ಜೋಫ್ರಾ ಆರ್ಚರ್ ಕೂಡ ಇದ್ದಾರೆ. ಆದರೆ ಸ್ಥಿರ ಪ್ರದರ್ಶನ ನೀಡುವಲ್ಲಿ ವಿಫಲರಾಗಿದ್ದಾರೆ.

'ಶೀಘ್ರ ಚೇತರಿಸಿಕೊಳ್ಳುವೆ'

'ಇನ್ನು ಮೂರು ವಾರಗಳಲ್ಲಿ ನಾನು ಸಂಪೂರ್ಣವಾಗಿ ಚೇತರಿಸಿಕೊಳ್ಳುವೆ. ಹಂತಹಂತವಾಗಿ ನನ್ನ ಗಾಯ ವಾಸಿಯಾಗುತ್ತಿದೆ' ಎಂದು ರಾಜಸ್ಥಾನ ರಾಯಲ್ಸ್ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹೇಳಿದರು.

ಅವರು ಕಳೆದ ಮಾರ್ಚ್‌ನಲ್ಲಿ ಬೆಂಗಳೂರಿನಲ್ಲಿ ನಡೆದಿದ್ದ ಡಿವಿಷನ್ ಕ್ರಿಕೆಟ್‌ನಲ್ಲಿ ಆಡುವಾಗ ಬಿದ್ದು ಗಾಯಗೊಂಡಿದ್ದ ದ್ರಾವಿಡ್ ಅವರ ಕಾಲಿನ ಮೂಳೆ ಮುರಿದಿತ್ತು. ಅದರಿಂದಾಗಿ ಐಪಿಎಲ್ ಆರಂಭದಿಂದಲೂ ಗಾಲಿಕುರ್ಚಿಯ ಮೇಲೆ ಕುಳಿತುಕೊಂಡೇ ರಾಯಲ್ಸ್ ತಂಡಕ್ಕೆ ಮಾರ್ಗದರ್ಶನ ನೀಡುತ್ತಿದ್ದಾರೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಈ ಸ್ಥಿತಿಯಲ್ಲಿ ಕೋಚ್ ಆಗಿ ಕಾರ್ಯನಿರ್ವಹಿಸುವುದು ಕಠಿಣ ಸವಾಲೇನಲ್ಲ. ಏಕೆಂದರೆ; ನಾನು ಕ್ಯಾಚ್ ಪಡೆಯಬೇಕಿಲ್ಲ. ರನ್ ಗಳಿಸಬೇಕಿಲ್ಲ. ಕೋಚ್ ಆಗಿ ಮಾರ್ಗದರ್ಶನ ನೀಡಲು ಚುರುಕಾಗಿ ಯೋಚಿಸುವ ಮಿದುಳು ಮತ್ತು ಸೂಚನೆಗಳನ್ನು ನೀಡಲು ಬಾಯಿ ಚೆನ್ನಾಗಿರಬೇಕು. ಅವೆರಡೂ ಉತ್ತಮ ಸ್ಥಿತಿಯಲ್ಲಿವೆ' ಎಂದು ಲಘುಹಾಸ್ಯದ ಧಾಟಿಯಲ್ಲಿ ಹೇಳಿದರು.

ಬೌಲ್ಟ್‌ಗೆ 4 ವಿಕೆಟ್; ರೋಹಿತ್ ಅಬ್ಬರದ ಬ್ಯಾಟಿಂಗ್

ಮುಂಬೈ ತಂಡದ ಜಯದ ಓಟ

ಮುಂಬೈ ಇಂಡಿಯನ್ಸ್ ತಂಡದ ವೇಗಿ ಟ್ರೆಂಟ್ ಬೌಲ್ಟ್ —ಎಎಫ್‌ಪಿ ಚಿತ್ರ

ಹೈದರಾಬಾದ್ (ಪಿಟಿಐ): ಟ್ರೆಂಟ್ ಬೌಲ್ಟ್ ಅವರ ಚುರುಕಿನ ದಾಳಿ ಮತ್ತು 'ಹಿಟ್‌ಮ್ಯಾನ್' ರೋಹಿತ್ ಶರ್ಮಾ ಅವರ ಅಬ್ಬರದ ಅರ್ಧಶತಕದ ಬಲದಿಂದ ಮುಂಬೈ ಇಂಡಿಯನ್ಸ್ ಜಯಿಸಿತು. ತಂಡಕ್ಕೆ ಇದು ಸತತ ನಾಲ್ಕನೇ ಗೆಲುವು.

ಉಪ್ಪಳದ ರಾಜೀವಗಾಂಧಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಮುಂಬೈ ತಂಡವು 7 ವಿಕೆಟ್‌ಗಳಿಂದ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಗೆದ್ದಿತು.

ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಟ್ರೆಂಟ್ (26ಕ್ಕೆ4) ಪರಿಣಾಮಕಾರಿ ದಾಳಿಯಿಂದಾಗಿ ಆತಿಥೇಯ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 143 ರನ್ ಗಳಿಸಿತು. ದೀಪಕ್ ಚಾಹರ್ (12ಕ್ಕೆ2) ಕೂಡ ಬೌಲ್ಟ್‌ಗೆ ಉತ್ತಮ ಜೊತೆ ನೀಡಿದರು. ಮುಂಬೈ ತಂಡವು 15.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 146 ರನ್ ಗಳಿಸಿತು.

ವೇಗದ ಬೌಲರ್‌ಗಳ ದಾಳಿಯಿಂದಾಗಿ ಸನ್‌ರೈಸರ್ಸ್ ತಂಡವು 35 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತ್ತು. ಈ ಹಂತದಲ್ಲಿ ಹೆನ್ರಿಚ್ ಕ್ಲಾಸನ್ (71; 44ಎ, 4X9, 6X2) ಮತ್ತು ಅಭಿನವ್ ಮನೋಹರ್ (43; 37ಎ, 4X2, 6X3) ಅವರು ಆರನೇ ವಿಕೆಟ್ ಜೊತೆಯಾಟದಲ್ಲಿ 99 ರನ್ ಸೇರಿಸಿದರು. ಕ್ಲಾಸನ್ ವಿಕೆಟ್ ಅನ್ನು 19ನೇ ಓವರ್‌ನಲ್ಲಿ ಗಳಿಸಿದ ಜಸ್‌ಪ್ರೀತ್ ಬೂಮ್ರಾ ಸಂಭ್ರಮಿಸಿದರು. ಟಿ20 ಕ್ರಿಕೆಟ್‌ನಲ್ಲಿ ಬೂಮ್ರಾ ಒಟ್ಟು 300 ವಿಕೆಟ್ ಪಡೆದ ಸಾಧನೆ ಮಾಡಿದರು. ಕೊನೆಯ ಓವರ್‌ನಲ್ಲಿ ಅಭಿನವ್ ಮನೋಹರ್ ಅವರು ಹಿಟ್ ವಿಕೆಟ್ ಆದರು.

ಗುರಿ ಬೆನ್ನಟ್ಟಿದ ಮುಂಬೈ ತಂಡದ ಆರಂಭಿಕ ಆಟಗಾರ ರಿಯಾನ್ ರಿಕೆಲ್ಟನ್ (11 ರನ್) ಅವರ ವಿಕೆಟ್ ಅನ್ನು ಜಯದೇವ್ ಉನದ್ಕತ್ ಗಳಿಸಿದರು. ಇನಿಂಗ್ಸ್ ಹೊಣೆ ಹೊತ್ತ ರೋಹಿತ್ (70; 46ಎ, 4X8, 6X3) ಮತ್ತು ವಿಲ್ ಜಾಕ್ಸ್ (22; 19ಎ) ಎರಡನೇ ವಿಕೆಟ್ ಜೊತೆಯಾಟದಲ್ಲಿ 64 ರನ್ ಸೇರಿಸಿದರು. 10ನೇ ಓವರ್‌ನಲ್ಲಿ ವಿಲ್ ಔಟಾದ ನಂತರ ಸೂರ್ಯಕುಮಾರ್ ಯಾದವ್ ಕೂಡ 19 ಎಸೆತಗಳಲ್ಲಿ 40 ರನ್ ಗಳಿಸಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.

ಸಂಕ್ಷಿಪ್ತ ಸ್ಕೋರು: ಸನ್‌ರೈಸರ್ಸ್ ಹೈದರಾಬಾದ್: 20 ಓವರ್‌ಗಳಲ್ಲಿ 8ಕ್ಕೆ143 (ಹೆನ್ರಿಚ್ ಕ್ಲಾಸನ್ 71, ಅಭಿನವ್ ಮನೋಹರ್ 43, ಟ್ರೆಂಟ್ ಬೌಲ್ಟ್ 26ಕ್ಕೆ4, ದೀಪಕ್ ಚಾಹರ್ 12ಕ್ಕೆ2, ಜಸ್‌ಪ್ರೀತ್ ಬೂಮ್ರಾ 39ಕ್ಕೆ1) ಮುಂಬೈ ಇಂಡಿಯನ್ಸ್: 15.4 ಓವರ್‌ಗಳಲ್ಲಿ 3ಕ್ಕೆ146 (ರೋಹಿತ್ ಶರ್ಮಾ 70, ವಿಲ್ ಜ್ಯಾಕ್ಸ್ 22, ಸೂರ್ಯಕುಮಾರ್ ಯಾದವ್ ಔಟಾಗದೇ 40, ಜಯದೇವ್ ಉನದ್ಕತ್ 25ಕ್ಕೆ1, ಇಶಾನ್ ಮಾಲಿಂಗ 33ಕ್ಕೆ1) ಪಂದ್ಯದ ಆಟಗಾರ :ಟ್ರೆಂಟ್ ಬೌಲ್ಟ್.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ಗುಜರಾತ್ ಟೈಟನ್ಸ್	8	6	2	12	1.104
ಡೆಲ್ಲಿ ಕ್ಯಾಪಿಟಲ್ಸ್	8	6	2	12	0.657
ಮುಂಬೈ ಇಂಡಿಯನ್ಸ್	9	5	4	10	0.673
ರಾಯಲ್ ಚಾಲೆಂಜರ್ಸ್ ಬೆಂಗಳೂರು	8	5	3	10	0.472
ಪಂಜಾಬ್ ಕಿಂಗ್ಸ್	8	5	3	10	0.177
ಲಖನೌ ಸೂಪರ್ ಜೈಂಟ್ಸ್	9	5	4	10	-0.054
ಕೋಲ್ಕತ್ತ ನೈಟ್ ರೈಡರ್ಸ್	8	3	5	6	0.212
ರಾಜಸ್ಥಾನ ರಾಯಲ್ಸ್	8	2	6	4	-0.633
ಸನ್‌ರೈಸರ್ಸ್ ಹೈದರಾಬಾದ್	8	2	6	4	-1.361
ಚೆನ್ನೈ ಸೂಪರ್ ಕಿಂಗ್ಸ್	8	2	6	4	-1.392

ಆರೇಂಜ್ ಕ್ಯಾಪ್
ಸಾಯಿ ಸುದರ್ಶನ್ (ಜಿಟಿ) 417 ರನ್

ಪರ್ಪಲ್ ಕ್ಯಾಪ್
ಪ್ರಸಿದ್ಧಕೃಷ್ಣ (ಜಿಟಿ) 16 ವಿಕೆಟ್

ಉಗ್ರರ ದಾಳಿ: ಕ್ರೀಡಾಪಟುಗಳ ಖಂಡನೆ

ನವದೆಹಲಿ (ಪಿಟಿಐ): ಪಹಲ್ಗಾಮ್‌ನಲ್ಲಿ ಉಗ್ರರ ದುಷ್ಕೃತ್ಯವನ್ನು ದೇಶದ ಕ್ರೀಡಾಕ್ಷೇತ್ರದ ದಿಗ್ಗಜರು ಒಕ್ಕೊರಲಿನಿಂದ ಖಂಡಿಸಿದ್ದಾರೆ.

ಕ್ರಿಕೆಟ್ ತಾರೆಯರಾದ ಸಚಿನ್ ತೆಂಡೂಲ್ಕರ್, ವಿರಾಟ್ ಕೊಹ್ಲಿ, ಜಸ್‌ಪ್ರೀತ್ ಬೂಮ್ರಾ, ಸೂರ್ಯಕುಮಾರ್ ಯಾದವ್, ಕೆ.ಎಲ್‌ರಾಹುಲ್, ಮೊಹಮ್ಮದ್ ಸಿರಾಜ್ ಮೊದಲಾದವರು ಭಯೋತ್ಪಾದಕರ ಮೃಗೀಯ ದಾಳಿ ಖಂಡಿಸಿದ್ದಾರೆ. ಮೃತರ ಕುಟುಂಬಕ್ಕೆ ಸಂತಾಪ ಸೂಚಿಸಿದ್ದಾರೆ.

* ಜನವರಿ–ಮಾರ್ಚ್ ವಾಹನ ಮಾರಾಟದ ಅಂಕಿಅಂಶಗಳ ಪ್ರಕಾರ ಚೇತಕ್ ಭಾರತದ #1 ಮಾರಾಟವಾಗುವ ಎಲೆಕ್ಟ್ರಿಕ್ ಸ್ಕೂಟರ್ ಆಗಿದೆ. # PM E-ಡ್ರೈವ್ ಸಬ್ಸಿಡಿ ಸೇರಿದಂತೆ ಕರ್ನಾಟಕನಲ್ಲಿ ಪರಿಣಾಮಕಾರಿ ಎಕ್ಸ್-ಶೋರೂಂ ಬೆಲೆ. ಜಾಹೀರಾತಿನಲ್ಲಿರುವ ಆರಂಭಿಕ ಬೆಲೆ ಚೇತಕ್ 2903 ಗಾಗಿ. ಚೇತಕ್ ಈಗ 3 ವೇರಿಯೆಂಟ್‌ಗಳಲ್ಲಿ ಲಭ್ಯವಿದೆ. ವೈಶಿಷ್ಟ್ಯಗಳನ್ನು ಚೇತಕ್ ವೇರಿಯೆಂಟ್‌ಗಳು ಮತ್ತು TecPacನೊಂದಿಗಿನ ಲಭ್ಯತೆಯಿಂದ ಪ್ರತ್ಯೇಕಿಸಲಾಗಿದೆ. ಇಲ್ಲಿ www.chetak.com ಈಗಲೇ ಬುಕ್ ಮಾಡಿ. ಚೇತಕ್ ಇಮೇಜನ್ನು ಜಾಹೀರಾತಿನ ಉದ್ದೇಶಕ್ಕಾಗಿ ಮಾತ್ರ ಕಂಪ್ಯೂಟರ್ ಗ್ರಾಫಿಕ್ಸ್ ಸಹಾಯದಿಂದ ವಿವರಿಸಲಾಗಿದೆ. ತೋರಿಸಿರುವಂತೆ ವೈಶಿಷ್ಟ್ಯಗಳು, ವಿಶೇಷಣಗಳು ಮತ್ತು ಪರಿಕರಗಳು ಪ್ರಮಾಣಿತ ಫಿಟ್‌ಮೆಂಟ್‌ನ ಭಾಗವಾಗಿರದೆ ಇರಬಹುದು ಮತ್ತು ಬದಲಾಗಬಹುದು. ನಿಜವಾದ ಕಲರ್‌ಗಳು ಮತ್ತು ಉಪಕರಣಗಳು ಭಿನ್ನವಾಗಿರಬಹುದು. ಸವಾರಿ ಮಾಡುವಾಗ ದಯವಿಟ್ಟು RTO ಮಾರ್ಗಸೂಚಿಗಳನ್ನು ಅನುಸರಿಸಿ.

CHETAK EXPERIENCE CENTRES AT: INDIRANAGAR 6366817934 | RAJAJI NAGAR 6366817932 | HRBR LAYOUT 6366817933 | BANASHANKARI 6366535421 | CHANDRA LAYOUT 9886026943 | MEKRI CIRCLE 7406688896 | ELECTRONIC CITY 7406688897 | MYSORE 6366948829|MANGALORE 7411760570 | UDUPI 7204391777 | HUBLI 9901698932 | SIRSI 7975180604 | BELGAUM 7349773954 | BELLARY 6364890041 | GULBARGA 7090777001 | DAVANAGERE 7259137999 | CHITRADURGA 7349247171 | HASSAN 9535500535 | BIJAPUR 8150008231 | SHIMOGA 8971356799 | TUMKUR 9108071555. **Authorised Dealers for Bajaj Auto Ltd.:** Bangalore • Bommanahalli AMBA BAJAJ: 9535411100 • HSR Layout AMBA BAJAJ: 8884333732 • Sarjapur AMBA BAJAJ: 7406688884• BTM Layout AMBA BAJAJ: 9513926221• Madiwala AMBA BAJAJ: 9945000048• Electronic City AMBA BAJAJ: 8971711118• Nayandahalli Mysore Rd RV BAJAJ: 6360308373 • Chandra Layout Moodalapalya RV BAJAJ: 9740444545 • Kengeri RV BAJAJ: 7353763305 • Giri Nagar RV BAJAJ: 7353763302• Vijaynagar RV BAJAJ: 7353763307• Banashankari POPULAR BAJAJ: 9945111874 • Rajajinagar POPULAR BAJAJ : 6366554001 • Koramangala POPULAR BAJAJ: 9845589079 • Konankunte POPULAR BAJAJ: 7760967834 • Ramnagara POPULAR BAJAJ: 7760967832 • Kanakpura POPULAR BAJAJ: 9972533890 • POPULAR BAJAJ Channapatna 9901947666 • POPULAR BAJAJ Uttarahalli 9972095890 • POPULAR BAJAJ Gottigere 7760996891 • Marathahalli KHIVRAJ BAJAJ: 9036091986 • Kasturba Rd KHIVRAJ BAJAJ: 9035060140 • Indiranagar KHIVRAJ BAJAJ: 9035060139 • Hennur KHIVRAJ BAJAJ: 9742155225 • Banaswadi KHIVRAJ BAJAJ: 9035060147 • Yeshwanthpur : KHIVRAJ BAJAJ: - 9148752305 • Peenya - 9148022250 • Hesargatta KHIVRAJ BAJAJ: 9035060148 • Whitefield KHIVRAJ BAJAJ: 8618840097 • Hoskote KHIVRAJ BAJAJ: 9035005075 • Magadi Rd ANANT BAJAJ: 9902934455 • Laggere ANANT BAJAJ: 6366568277 • Hubli CHANNAMMA BAJAJ: 9620614106 • Arvind Nagar branch 8884771881 Gadag CHANNAMMA BAJAJ: 7090665850 • Sirsi CHANNAMMA BAJAJ: 8884645609 • Haveri CHANNAMMA BAJAJ: 8151884422 • Belgaum JAGAJAMPI BAJAJ: 988690116, JAGASHREE BAJAJ: 7349773962. • Chikodi JAGAJAMPI BAJAJ: 9449736406 • Gokak JAGAJAMPI BAJAJ: 7022425616 • Bellary AADI BAJAJ: 9606050246• Raichur SHREE BALAJI AUTOMOBILES: 9964626515• Koppal I A BAJAJ: 8123712938• Hospet AADI BAJAJ:9731361414 • Hagaribommanahalli AADI BAJAJ: 9900363010• SIRUGUPPA AADI BAJAJ: 9110217558 • Bijapur BIJJARGI BAJAJ (BLDE Road): 6362877793 •(Bus Stand Road) 8884000970 • Bagalkot BIJJARGI BIKES: 9148448324 • Sindagi BIJJARGI BAJAJ 8861946802• Bidar SINDOL BAJAJ 9513226555 • Chitradurga BTV BAJAJ: Ph: 8310553554 • Hiriyur BTV BAJAJ: Ph: 8310553554 • Challakere BTV BAJAJ 8310553554 • Davangere JAIN BAJAJ: Ph: 9343636805 • Harihara JAIN BAJAJ: Ph: 9632300444 • Gulbarga VKG BAJAJ: 9632018700 • Yadgir VKG BAJAJ: 8867776567 • Humnabad VKG BAJAJ 8050889160 • Shimoga SUPREME BAJAJ: 8105000999 • Sagar SUPREME BAJAJ: 9008339799 • Bhadravathi SUPREME BAJAJ: 9008352799 • Chikkamagalur SUPREME BAJAJ: 9008379799 • Tarikere SUPREME BAJAJ: 9008569799 • Hosanagar SUPREME BAJAJ 9731767799 • Anandpura SUPREME BAJAJ 9663501499 • Hassan ARPITA BAJAJ: 9902439255, Arsikere ARPITA BAJAJ: 9964094535 • Kolar KHIVRAJ 9611768292 • KGF KHIVRAJ BAJAJ: 8197013783 • Tumkur AKSHAYA BAJAJ: 7259040212• Tiptur AKSHAYA BAJAJ: 7259040226 • Sira AKSHAYA BAJAJ: 7259040328 • Kunigal AKSHAYA BAJAJ: 7338662706 • Madhugiri AKSHAYA BAJAJ: 7259040340 • BH Road: 7338662687 • Mysore Saraswathipuram POPULAR BAJAJ: 9148101113 • Chamarajapuram POPULAR BAJAJ: 7259786271 • Vontikoppal STAR BAJAJ: 9886959722 • Mandya POPULAR BAJAJ: 7760967900 • Chamarajanagara PATEL BAJAJ: 9480494888 • Hunsur STAR BAJAJ: 8884374777 • Kushalnagar POPULAR BAJAJ: 7259786276 • Nanjangud STAR BAJAJ: 9742100252 • NR Mohalla STAR BAJAJ: 8095777706 • Balmatta SUPREME BAJAJ: 9606973192 • Kuloor SUPREME BAJAJ: 9606237547 • Surathkal SUPREME BAJAJ: 9606973193 • Thokottu 9606702429 • B C Road 7618715273 • Bidar SINDOL BAJAJ 9513226555 • UDUPI SAANVI BAJAJ 8861135225.